
ಜಿ.ಪಿ. ರಾಜರತ್ನಂ

ಎಮ್. ರಾಮಚಂದ್ರ

ಭಾರತೀಯ
ಸಾಹಿತ್ಯ
ನಿರ್ಮಾಪಕರು







ಜಿ. ಪಿ. ರಾಜರತ್ನಂ

ಒಳಬದಿಯ ರಕ್ಷಾಪುಟಗಳಲ್ಲಿ ಕಾಣಿಸಿರುವ ಶಿಲ್ಪಕಲೆಯಲ್ಲಿ ಮೂವರು ಭವಿಷ್ಯವಾದಿಗಳು ಭಗವಾನ್ ಬುದ್ಧನ ತಾಯಿ ರಾಣಿ ಮಾಯಾಳ ಕನಸನ್ನು ರಾಜ ಶುದ್ಧೋದನನಿಗೆ ವಿವರಿಸುವ ದೃಶ್ಯವಿದೆ. ಅವುಗಳ ಕೆಳಗೆ ಆ ವಿವರಣೆಯನ್ನು ಬರೆದುಕೊಳ್ಳುತ್ತಿರುವ ಬರಹಗಾರ ಕುಳಿತಿದ್ದಾನೆ. ಬರವಣಿಗೆಯನ್ನು ಚಿತ್ರಿಸುವ ಮೊದಲ ಭಾರತೀಯ ಶಿಲ್ಪ ಬಹುಶಃ ಇದೇ ಆಗಿರಬಹುದು.

ನಾಗಾರ್ಜುನ ಬೆಟ್ಟದ ಶಿಲ್ಪಗಳು ಕ್ರಿ. ಶ. ಎರಡನೆಯ ಶತಮಾನ

ಕೃಪೆ : ರಾಷ್ಟ್ರೀಯ ವಸ್ತು ಸಂಗ್ರಹಾಲಯ ನವದೆಹಲಿ.

ಭಾರತೀಯ ಸಾಹಿತ್ಯ ನಿರ್ಮಾಪಕರು

ಜಿ. ಪಿ. ರಾಜರತ್ನಂ

ಎಮ್. ರಾಮಚಂದ್ರ

ಸಾಹಿತ್ಯ ಅಕಾದೆಮಿ

G. P. RAJARATHNAM : A monograph in Kannada by M. Ramachandra, Sahitya Akademi, 2006 Rs. 25/-

ISBN : 81-260-2228-0

ಪ್ರಥಮ ಮುದ್ರಣ : 2006

ಸಾಹಿತ್ಯ ಅಕಾದೆಮಿ
ರವೀಂದ್ರ ಭವನ, 35, ಫಿರೋಜಶಾಹ ರಸ್ತೆ, ನವದೆಹಲಿ-111001
'ಸ್ವಾತಿ' ಮಂದಿರ್ ಮಾರ್ಗ, ನವದೆಹಲಿ - 111001
ಸೆಂಟ್ರಲ್ ಕಾಲೇಜ್ ಆವರಣ, ಡಾ. ಬಿ. ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು - 560001
ಸಿ. ಐ. ಟಿ. ಆವರಣ, ಟಿಟಿಟಿ ಅಂಚೆ, ತರಮಣಿ, ಚೆನ್ನೈ - 600 113
ಜೀವರ್ನ ತಾರಾ ಭವನ್, 23ಎ-44 ಎಕ್ಸ್, ಡೈಮಂಡ್ ಹಾರ್ಬರ್ ರಸ್ತೆ,
ಕಲ್ಕತ್ತಾ-700 053
172, ಮುಂಬೈ ಮರಾಠಿ ಗ್ರಂಥ ಸಂಗ್ರಹಾಲಯ ಮಾರ್ಗ, ದಾದರ್,
ಮುಂಬೈ-400014

ಬೆಲೆ : ಇಪ್ಪತ್ತೈದು ರೂಪಾಯಿಗಳು

ಅಕ್ಷರಸಂಯೋಜನೆ: 'ನವದುರ್ಗಾ ಲೇಸರ್‌ಟೆಕ್', ಉಡುಪಿ. [Ph.0820-2531159]

ಮುದ್ರಣ : ವಾಗರ್ಥ, ಬೆಂಗಳೂರು.

ವಿಜ್ಞಾಪನೆ

ಅಲ್ಲಮಪ್ರಭುವಿನ 'ಎತ್ತಣ ಮಾಮರ, ಎತ್ತಣ ಕೋಗಿಲೆ' ಎಂಬ ವಚನವನ್ನಾಗಲೀ,, ಜಿ. ಎಸ್. ಶಿವರುದ್ರಪ್ಪನವರ 'ಎನಿತು ಜನ್ಮದಲಿ ಎನಿತು ಜೀವರಿಗೆ..' ಎಂಬ ಕವನಪಂಕ್ತಿಯನ್ನಾಗಲೀ ಅನೇಕರು ಅನೇಕ ಸಂದರ್ಭಗಳಲ್ಲಿ ಉದ್ಧರಿಸುವುದುಂಟು. ಜಿ. ಪಿ. ರಾಜರತ್ನಂ ಅವರನ್ನು ಸ್ಮರಿಸಿದಾಗಲೆಲ್ಲ ಪ್ರಭುದೇವರ ವಚನವೂ ಶಿವರುದ್ರಪ್ಪನವರ ಕವನವೂ ಅಪ್ರಯತ್ನವಾಗಿ ನನ್ನ ನೆನಪಿಗೆ ಬಂದೇ ಬರುತ್ತವೆ. ಅರುವತ್ತು ವರ್ಷಗಳ ಹಿಂದೆ ನನ್ನ ಹಳ್ಳಿಯೂರಿನ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಶಿವರಾಮ ಕಾರಂತರ 'ಸಿರಿಗನ್ನಡ ಪಾಠಮಾಲೆ'ಯಲ್ಲಿ ರಾಜರತ್ನಂ ಅವರ ಹೆಸರನ್ನು ನಾನು ಮೊದಲ ಸಲ ಓದಿದ್ದೆ. ಹತ್ತು ವರ್ಷಗಳ ಅನಂತರ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗ ರಾಜರತ್ನಂ ಅವರನ್ನು ನಾನು ಮೊದಲ ಸಲ ಕಣ್ಣಾರೆ ಕಂಡೆ. ಅದು (೧೯೫೮) ಮೊದಲಾಗಿ ೧೯೭೯ರ ಮಾರ್ಚ್ ೧೩ರಂದು ಅವರ ದೇಹಾಂತವಾಗುವ ತನಕ, ಎಂದರೆ ಇಪ್ಪತ್ತು ವರ್ಷಕ್ಕಿಂತ ಹೆಚ್ಚಿನ ಅವಧಿಯಲ್ಲಿ ನಾನು ಎಷ್ಟು ಸಲ ಅವರ ಮುಖದರ್ಶನ ಮಾಡಿದೆ, ಎಷ್ಟು ಬಾರಿ ಅವರೊಂದಿಗೆ ಪತ್ರ ವ್ಯವಹಾರ ನಡೆಯಿಸಿದೆ, ಎಷ್ಟು ಸಭೆಸಮಾರಂಭಗಳಿಗೆ ಅವರನ್ನು ಆಮಂತ್ರಿಸಿದೆ –ಎಂಬುದನ್ನೆಲ್ಲ ನಾನು ಹೇಳಲಾರೆ. ಅವೆಲ್ಲ ನನ್ನ ಭಾಗ್ಯವಿಶೇಷ. ರಾಜರತ್ನಂ ಅವರ ನಿಧನಾನಂತರವೂ ಅವರನ್ನು ಕುರಿತು ಯಥಾಶಕ್ತಿಯಾಗಿ ಬರೆಯುವ, ಅವರ ಕುರಿತು ಮಾತುಗಳನ್ನು ಆಡುವ ಧನ್ಯತೆ ನನ್ನದಾಗಿದೆ. ಅವರ ಶುಚಿಜೀವನವನ್ನೂ ಅವರ ಸಮೃದ್ಧ ಸಾಹಿತ್ಯವನ್ನೂ ಪರಿಭಾವಿಸಿ ಪರಿಗ್ರಹಿಸಿದಾಗಲೆಲ್ಲ ಅವರ ಕುರಿತಾದ ಆಸಕ್ತಿ, ಆಕರ್ಷಣೆ, ಆದರಗಳೆಲ್ಲ ಬೆಳೆಯುತ್ತಲೇ ಹೋಗಿ 'ರಾಜರತ್ನಂ ನನ್ನ ಪರೋಕ್ಷ ಗುರು'ವೆಂಬ ಪೂಜ್ಯಭಾವದಲ್ಲಿ ಅವು ನನ್ನನ್ನು ಗಟ್ಟಿಯಾಗಿ ನೆಲೆನಿಲ್ಲಿಸಿದುವು. ರಾಜರತ್ನಂ ಅವರಾದರೂ ಅಷ್ಟೆ: ೧೯೫೫ರ ಜನವರಿಯಲ್ಲಿ, 'ಕವಿ ಗೋವಿಂದ ಪೈ' ಎಂಬ ತಮ್ಮದೊಂದು ಅಮೂಲ್ಯ–ಅಲಭ್ಯ ಪುಸ್ತಕವನ್ನು 'ಚಿ| ....ಗೆ ಶುಭಾಶೀರ್ವಾದಪೂರ್ವಕ' ಎಂದು ಬರೆದು ನನಗೆ ಕಳುಹಿಸಿಕೊಡುವಲ್ಲಿಂದ ತೊಡಗಿ, ೧೯೭೯ರ ಜನವರಿಯಲ್ಲಿ ತಮ್ಮ ಕೊನೆಯ ಪ್ರಕಟನೆಯಾದ 'ಕಂದನ ಕಾವ್ಯಮಾಲೆ'ಯ ಒಂದು ಪ್ರತಿಯಲ್ಲಿ ಅದೇ ಬಗೆಯ ಹರಕೆನುಡಿಗಳನ್ನು ಬರೆದು ನನ್ನ ಚಿರಂಜೀವಿಗೆ ಕಳುಹಿಸುವ ತನಕ ನನ್ನಲ್ಲಿ ಏಕಪ್ರಕಾರವಾದ ಪ್ರೀತಿ–ವಿಶ್ವಾಸ–ವಾತ್ಸಲ್ಯಗಳನ್ನು ತೋರಿದರು. ಅವ್ಯಾಜವೂ ಉದಾರವೂ ಆಗಿದ್ದ ಅವರ ಪ್ರೀತಿ–ವಾತ್ಸಲ್ಯ ಎಷ್ಟು ಎತ್ತರದ್ದೂ, ಎಷ್ಟು ಬಿತ್ತರದ್ದೂ ಆಗಿದ್ದುವೆಂದರೆ ೧೯೭೩ರ ಮಾರ್ಚ್ ತಿಂಗಳಲ್ಲಿ ತಮ್ಮ ಕೃತಿರತ್ನಗಳಲ್ಲಿ ಒಂದಾಗಿದ್ದ 'ವಿಚಾರರಶ್ಮಿ'ಯ ಪ್ರಥಮ ಸಂಪುಟವನ್ನು ಅನಾವರಣಗೊಳಿಸುವ, ನನ್ನ ಪಾಲಿಗೆ ಅನೂಹ್ಯವೇ ಆಗಿದ್ದ ಸೌಭಾಗ್ಯವನ್ನೂ ಅವರು ನನಗೆ ಅನುಗ್ರಹಿಸಿದರು! – ಅದೆಲ್ಲವನ್ನೂ ನಾನು ಬೇರೆ ಕಡೆಗಳಲ್ಲಿ ಹೇಳಿದ್ದೇನೆ, ಬರೆದಿದ್ದೇನೆ. ಆದುದರಿಂದ ಇಲ್ಲಿ ವಿಸ್ತರಿಸುವುದಿಲ್ಲ.

'ಭಾರತೀಯ ಸಾಹಿತ್ಯ ನಿರ್ಮಾಪಕರು' ಮಾಲಿಕೆಗಾಗಿ ರಾಜರತ್ನಂ ಅವರನ್ನು ಕುರಿತಾದ ಏಕವ್ಯಕ್ತಿ ಪ್ರಬಂಧ(Monograph)ವನ್ನು ಬರೆಯುವ ಅವಕಾಶವನ್ನು ಸಾಹಿತ್ಯ ಅಕಾದೆಮಿ ನನಗೆ ಒದಗಿಸಿದ್ದು ನನ್ನ ಪಾಲಿಗೊಂದು ಪುಣ್ಯಲಾಭ. ರಾಜರತ್ನಂ ಅವರು ಪುಸ್ತಕವನ್ನು ಸಾಕ್ಷಾತ್ ಸರಸ್ವತಿಯೆಂದೇ ಭಾವಿಸಿ ಪ್ರತಿನಿತ್ಯ ಪುಸ್ತಕಪೂಜೆ ಮಾಡುತ್ತ ಇದ್ದವರು. ಅಂತಹ ಪುಸ್ತಕಪ್ರೇಮಿ ರಾಜರತ್ನಂ ಅವರನ್ನೇ ಕುರಿತಾಗಿರುವ ಈ ಪುಸ್ತಕವನ್ನು ವಾಗ್ದೇವಿ ಸರಸ್ವತಿಯ ಚರಣತಲಕ್ಕೊಂದು ಕುಸುಮದಳವೆಂಬ ಶ್ರದ್ಧೆಯಿಂದ ಸಮರ್ಪಿಸುತ್ತಿದ್ದೇನೆ.

ಈ ನಿಬಂಧ ಲೇಖನಕ್ಕೆ ಅವಕಾಶ ಮಾಡಿಕೊಟ್ಟ ಕೇಂದ್ರ ಸಾಹಿತ್ಯ ಅಕಾದೆಮಿಯ ಪ್ರಾದೇಶಿಕ ಕಾರ್ಯದರ್ಶಿ ಶ್ರೀ ಅಗ್ರಹಾರ ಕೃಷ್ಣಮೂರ್ತಿಯವರಿಗೂ ಅವರ ಸಹಯೋಗಿಗಳಿಗೂ ನಾನು ಕತಜ್ಞನಾಗಿದ್ದೇನೆ.

ಕಾರ್ಕಳ, (ಉಡುಪಿ ಜಿಲ್ಲೆ) ಎಮ್. ರಾಮಚಂದ್ರ

ಪರಿವಿಡಿ

ಜಿ. ಪಿ. ರಾಜರತ್ನಂ

I. ಉದ್ಘಾತ

ಸುಮಾರು ನಲ್ವತ್ತೈದು ವರ್ಷಗಳ ಹಿಂದೆ, ಜಿ. ಪಿ. ರಾಜರತ್ನಂ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾಗ ಅವರ ವಿದ್ಯಾರ್ಥಿಗಳೆಲ್ಲ ಸೇರಿ, ಅವರನ್ನು ಕುರಿತು ಒಂದು ಪುಸ್ತಕವನ್ನು ಪ್ರಕಟಿಸಿದರು. ಪುಸ್ತಕಕ್ಕೆ ಅವರದೇ ಹೆಸರು– "ರಾಜರತ್ನಂ". ಪುಸ್ತಕದ ಆರಂಭದಲ್ಲಿ, 'ರತ್ನ'ನದೇ ಭಾಷೆಯಲ್ಲಿ, ಶಿಷ್ಯನೊಬ್ಬ ರಚಿಸಿದ ಈಯೊಂದು ದ್ವಿಪದಿಯಿದೆ:

ಕೋಟಿ ವರಹದ ಕಲ್ಲು ಕೊಹಿನೂರ್ ರತ್ನ,
ಅದಕಿಂತ ಮೋಟೆ ನಮ್ ಜಿ. ಪಿ. ಜೀವ್ರತ್ನ.

ರಾಜರತ್ನಂ ಅವರ ಜೀವಿತಾವಧಿಯಲ್ಲೂ ನಿಧನಾನಂತರವೂ ಅವರ ಬದುಕು–ಬರೆಹಗಳನ್ನು ಕುರಿತು ನಾಲ್ಕಾರು ಪುಸ್ತಿಕೆ–ಪುಸ್ತಕಗಳು ಪ್ರಕಟವಾಗಿವೆ. ಆದರೆ ಅವುಗಳಲ್ಲಿ ಕಾಣಲಾಗದ ಒಂದು ಅನನ್ಯತೆ, ಆತ್ಮೀಯತೆ ಮೇಲೆ ಹೆಸರಿಸಿದ ಪುಸ್ತಕದಲ್ಲೂ ಉದ್ಧರಿಸಿದ ದ್ವಿಪದಿಯಲ್ಲೂ ಇವೆ. ಏಕೆಂದರೆ, ಒಬ್ಬ ಅಧ್ಯಾಪಕನ ವ್ಯಕ್ತಿತ್ವದ ನಿಜವಾದ ಒರೆಗಲ್ಲು ಆತನ ಶಿಷ್ಯಸಮುದಾಯ. ಶಿಷ್ಯಸಮೂಹ ಒಬ್ಬ ಗುರುವನ್ನು, ಆತನ ಪರೋಕ್ಷದಲ್ಲಿ, ಲಿಖಿತರೂಪದಲ್ಲಿ ಮನಬಿಚ್ಚಿ, ಮನಮೆಚ್ಚಿ ಕೊಂಡಾಡುವುದೇ ಆತನಿಗೆ ಅಸಾಮಾನ್ಯ ಪ್ರಶಸ್ತಿ. ರಾಜರತ್ನಂ ಅವರು ತಮ್ಮ ಅಸಂಖ್ಯ ಶಿಷ್ಯರ ಪ್ರೀತಿ–ವಿಶ್ವಾಸ–ಗೌರವಗಳನ್ನು ಗಳಿಸಿದವರು; 'ಜೀವರತ್ನ' ಎಂಬ ಮಿಗಿಲಾದ ಕೊಂಡಾಟದ ಮನ್ನಣೆಯನ್ನು ಗಳಿಸಿದವರು. ಈ ಪರಿಚಯಾತ್ಮಕ ಪುಸ್ತಕಕ್ಕೆ ಆ ದ್ವಿಪದಿಯೇ ಆಧಾರಶ್ರುತಿ.

* * *

ರಾಜರತ್ನಂ ಆದರ್ಶ ಅಧ್ಯಾಪಕ ಮಾತ್ರವಲ್ಲ, ಶ್ರೇಷ್ಠಕವಿ, ಸಾಹಿತಿ, ವಿದ್ವಾಂಸ. ಅವರದು ಒಂದು ಅಖಂಡ, ಅನನ್ಯ ವ್ಯಕ್ತಿತ್ವ. ಹಳಗನ್ನಡ ಕಾವ್ಯಾರಣ್ಯದಲ್ಲಿ ಸಂಚರಿಸಿ, ಹೊಸಗನ್ನಡ ಸಾಹಿತ್ಯಾರಾಮದಲ್ಲಿ ವಿಹರಿಸಿ, ಸಂಸ್ಕೃತಾರ್ಣವದಲ್ಲಿ ಜಲಕೇಳಿಯಾಡಿ ದೇಶವಿದೇಶಗಳ ವಿವಿಧ ಭಾಷಾಸಾಹಿತ್ಯದುರ್ಗಗಳನ್ನು ಹೊಕ್ಕು ಹೊರಟು ಕನ್ನಡದ ಆದಿಕವಿ ಪಂಪನಂತೆ ಧರ್ಮವನ್ನೂ ಕಾವ್ಯಧರ್ಮವನ್ನೂ ತಮ್ಮ ಜೀವನದಲ್ಲೂ ಮೇಳವಿಸಿ, ಕನ್ನಡದ ಅಣ್ಣಂದಿರಿಗೂ ಚಿಣ್ಣರಿಗೂ ಪ್ರಿಯನಾಗಿ ಬಾಳಿ, ನುಡಿದಂತೆ ಬರೆದು, ಬರೆದಂತೆ ಬಾಳಿ, ಇಂದಿಗೆ ಸುಮಾರು ಇಪ್ಪತ್ತೇಳು ವರ್ಷಗಳ ಹಿಂದೆ, ತಮ್ಮ ಎಂಬತ್ತೊಂದನೆಯ ವಯಸ್ಸಿನಲ್ಲಿ ಕಣ್ಮರೆಯಾದವರು ಜಿ. ಪಿ. ರಾಜರತ್ನಂ! ಕನ್ನಡ ಕುಲರಸಿಕರ ಅಗ್ರಪಂಕ್ತಿಯಲ್ಲಿ ಅವರಿಗೆ ಪ್ರತ್ಯೇಕವಾದ ಸ್ಥಾನ, ವಿಶಿಷ್ಟವಾದ ಮಾನ.

ಯಾವುದು ಮುಖ್ಯ? – ಒಬ್ಬ ಸಾಹಿತಿಯ ಜೀವನವೋ ಅಥವಾ ಆತ ರಚಿಸಿದ ವಾಙ್ಮಯವಿಶೇಷವೋ ಎಂಬ ಪ್ರಶ್ನೆಯನ್ನು ಹಲವರು ಎತ್ತಿದ್ದಾರೆ; ಹಲಬಗೆಯಲ್ಲಿ ಉತ್ತರಿಸಿದ್ದಾರೆ. ಆ ಪ್ರಶ್ನೆ-ಉತ್ತರಗಳನ್ನು ಹೆಚ್ಚು ವಿಶ್ಲೇಷಿಸದೆ, ಇಷ್ಟನ್ನು ಹೇಳ ಬಹುದು: ಒಬ್ಬ ಸಾಹಿತಿಯ ಕೃತಿಗಳು ಆತನ ಜೀವನದಿಂದ ಪ್ರೇರಿತವೂ ಪ್ರಭಾವಿತವೂ ಆಗುವುದೆಂಬುದು ನಿಜ. ಕೃತಿಗಳ ಆಳದಲ್ಲಿ ಆತನ ಜೀವಚ್ಛಾಯೆ ಅಲ್ಲಲ್ಲಿ ಸುಳಿಯಬಹುದೆಂಬುದೂ ಸತ್ಯವೇ. ಸಮಕಾಲೀನರು ಆ ಸಾಹಿತಿಶ್ರೇಷ್ಠನ ಬದುಕನ್ನು ಎತ್ತಿ ಹೇಳಬಹುದು, ಮೆಚ್ಚಿ ಬರೆಯಲೂಬಹುದು. ಆತನ ಜೀವನ ಶುಭ್ರ ಸುಂದರವಾಗಿದ್ದರೆ ಅದೊಂದು ಹೆದ್ದಾರಿಯಂತೆ, ಅವನ ಕಾಲಾನಂತರವೂ ಮಿಕ್ಕವರ ಬಾಳಬಟ್ಟೆಯೆನಿಸಬಹುದು. ಆದರೆ ಕಾಲಧರ್ಮದಂತೆ ವ್ಯಕ್ತಿಜೀವನ ಕ್ರಮೇಣ ಮಸುಕಾಗುತ್ತದೆ, ಮರೆಗೆ ಸರಿಯುತ್ತದೆ. ಅದರಲ್ಲಿ ಅಸಹಜವಾದದ್ದೇನೂ ಇಲ್ಲ. ಲೋಕಜೀವನದ ಗತಿ-ರೀತಿಗಳೇ ಹಾಗೆ. ಆದರೆ ಆತನ ಕೃತಿಗಳು ಮಾತ್ರ- ಅವುಗಳಲ್ಲಿ ಮೌಲಿಕ-ಸಾರ್ವತ್ರಿಕ ಅಂಶಗಳಿದ್ದರೆ- ಉಳಿದೇ ಉಳಿಯುತ್ತವೆ. ಅದನ್ನೇ ಒಂದು ಆಂಗ್ಲ ಸೂಕ್ತಿ 'Life is short, but art is long' ಎಂದು ಹೇಳುತ್ತದೆ. ಕೃತಿರೂಪದಲ್ಲಿ ಸಾಹಿತಿಯೂ ಅಕ್ಷರನೆನಿಸಿ, ಜನಮಾನಸದಲ್ಲಿ ಉಳಿಯುತ್ತಾನೆ, ಚಿರಂಜೀವಿಯಾಗು ತ್ತಾನೆ. ರಾಜರತ್ನಂ ಸಮೀಪಪೂರ್ವ ವ್ಯಕ್ತಿ, ಸಾಹಿತಿ. ಕನ್ನಡದ ನಾಲ್ಕಕ್ಷರವನ್ನು ಓದಬಲ್ಲವರ ಮನಸ್ಸಿನಲ್ಲಿ ಅವರ ನೆನಪು ಈಗ ದಟ್ಟವಾಗಿಯೇ ಇದೆ; ಈಗ ಮಾತ್ರವಲ್ಲ, ಇನ್ನು ಮುಂದೆಯೂ ವ್ಯಕ್ತಿಯಾಗಿ ಬಹುಕಾಲ, ಅಕ್ಷರದೇಹಿಯಾಗಿ ಚಿರಕಾಲ ನೆನಪಿನಲ್ಲಿ ಉಳಿಯುವಂತೆ ಬರೆದವರು, ಬಾಳಿದವರು ರಾಜರತ್ನಂ. ಅವರ ಬದುಕಿನ ಬಯಲ ಮೇಲೊಂದು ಹಕ್ಕಿನೋಟವನ್ನು ಹಾಯಿಸುವ, ಅವರ ಬರೆವಣಿ ಗೆಯ ತೋಟವನ್ನು ಹೊಕ್ಕು ಅಲ್ಲಿರುವ ಹೂಹಣ್ಣುಗಳ ಸೊಗಸನ್ನೂ ಸವಿಯನ್ನೂ ಮನಗಾಣಿಸುವ ಪ್ರಯತ್ನವನ್ನು ಈ ಮುಂದೆ ಮಾಡಲಾಗಿದೆ.

●

II. ಜೀವರತ್ನ

೧. ನಾಮಸ್ವಾರಸ್ಯ:

ಈಗ ರಾಮನಗರವೆಂದು ಹೆಸರಾಗಿರುವ ಹಿಂದಿನ ಕ್ಲೋಸ್ ಪೇಟೆಯಲ್ಲಿ, ೧೯೦೮ರ ದಶಂಬರ ೫ರಂದು ರಾಜರತ್ನಂ ಜನಿಸಿದರು. ಅವರ ತಾಯಿ ಕೊಳ್ಳೆಗಾಲ ದವರು; ತಂದೆ ಆ ಕಾಲದಲ್ಲಿ ಮೈಸೂರು ಪ್ರಾಂತ್ಯದಲ್ಲೇ ಜನಮಾನ್ಯರಾಗಿದ್ದ ಅಧ್ಯಾಪಕ ಜಿ. ಪಿ. ಗೋಪಾಲಕೃಷ್ಣ ಅಯ್ಯಂಗಾರ್ಯರು. 'ಜಿ. ಪಿ.' ಎಂಬುದು 'ಗುಂಡ್ಲು ಪಂಡಿತ' ಎಂಬುದರ ಸಂಕ್ಷಿಪ್ತರೂಪ. ಅವರ ಹಿರಿಯರು ಮಂಡ್ಯಜಿಲ್ಲೆಯ ಗುಂಡ್ಲುಪೇಟೆಯವ ರಾಗಿದ್ದರು; ಮುಂದೆ ಮೈಸೂರಲ್ಲಿ ನೆಲೆನಿಂತರು.

ರಾಜರತ್ನಂ ಪೂರ್ವಿಕರು ತಮಿಳುನಾಡಿನ ನಾಗಪಟ್ಟಣದ ತಿರುಕಣ್ಣಾಪುರ ಎಂಬ ಅಗ್ರಹಾರನಿವಾಸಿಗಳಾಗಿದ್ದರು. ಅವರೆಲ್ಲರೂ ವೇದೋಪನಿಷತ್ತುಗಳಲ್ಲೂ ವ್ಯಾಕರಣಾದಿ ಶಾಸ್ತ್ರಗಳಲ್ಲೂ ಪಾರಂಗತರಾಗಿದ್ದವರು. ಸುಮಾರು ಐನೂರು ವರ್ಷಗಳ ಹಿಂದೆ ಅವರಲ್ಲೊಬ್ಬರು – ವೀರ ರಾಘವಾಚಾರ್ಯರು – ಮೈಸೂರಿಗೆ ಬಂದು, ಆಗಿನ ಅರಸರಾಗಿದ್ದ ಬೆಟ್ಟದ ಚಾಮರಾಜ ಒಡೆಯರಲ್ಲಿ ಆಶ್ರಯ ಪಡೆದರು. ಅದೇ ಪಂಡಿತವಂಶದ ಗೋಪಾಲ ದೇಶಿಕಾಚಾರ್ಯ ಎಂಬವರು ಮೇಲೆ ತಿಳಿಸಿದ ಗುಂಡ್ಲು ಗ್ರಾಮದಲ್ಲಿ ನೆಲಸಿದರು. ಅವರು ಆಯುರ್ವೇದ ವಿಶಾರದರೂ ಆಗಿದ್ದರು. ಕ್ರಮೇಣ ಅವರ ಮನೆತನಕ್ಕೆ 'ಗುಂಡ್ಲು ಪಂಡಿತ' ಎಂಬ ಹೆಸರು ಬಂತು, ಅದು ಗಟ್ಟಿಯಾಯಿತು. ಆ ವಂಶದ ಲಕ್ಷ್ಮಣಾಚಾರ್ಯ ಎಂಬವರು ಇತರ ವಿದ್ಯೆಗಳೊಂದಿಗೆ ಚಿತ್ರ, ಶಿಲ್ಪ, ಜ್ಯೋತಿಷಾದಿಗಳಲ್ಲೂ ಪರಿಣತರಾಗಿದ್ದರು. ಮೈಸೂರಲ್ಲಿ ಆಯುರ್ವೇದ ಪಾಠಶಾಲೆ ಯೊಂದನ್ನು ಪ್ರಾರಂಭಿಸಲು ಕಾರಣರಾದ ಅವರನ್ನು ನಾಲ್ಮಡಿ ಕೃಷ್ಣರಾಜ ಒಡೆಯರು 'ವೈದ್ಯರತ್ನ' ಎಂಬ ಬಿರುದಿನಿಂದ ಪುರಸ್ಕರಿಸಿ, ರತ್ನಕಂಕಣದಿಂದ ಅಲಂಕರಿಸಿದರು. "ವೈದ್ಯರತ್ನಂ ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಆಯುರ್ವೇದ ಮತ್ತು ಯುನಾನಿ ಮಹಾಪಾಠಶಾಲೆ" ಎಂಬ ನಾಮಫಲಕವನ್ನು ಧರಿಸಿದ ಕಟ್ಟಡವನ್ನು ಈವೊತ್ತೂ ಮೈಸೂರು ನಗರದ ಸಯ್ಯಾಜಿರಾವ್ ರಸ್ತೆಯ ಉತ್ತರದಿಕ್ಕಿನಲ್ಲಿ ಕಾಣಬಹುದಾಗಿದೆ.

ರಾಜರತ್ನಂ ಜನಿಸಿದ ದಿನ ಕಾರ್ತಿಕ ಪೂರ್ಣಿಮೆಯಾಗಿತ್ತು. ವೈಷ್ಣವರು ಆ ದಿನ ವನ್ನು 'ಆನೆಯ ಹಬ್ಬ'ವೆಂದು ವಿಶಿಷ್ಟ ವಿಧಿಗಳೊಂದಿಗೆ ಆಚರಿಸುವುದು ಸಂಪ್ರದಾಯ. ಭವಿಷ್ಯತ್ತಿನಲ್ಲಿ ರಾಜರತ್ನಂ ನಡೆದದ್ದು ಒಂದು ಆನೆದಾರಿ ಎಂಬುದರ ಮುಂಗಾಣ್ಕೆ ಯಾಗಿತ್ತು ಅವರ ಜನ್ಮದಿನ.

ರಾಜರತ್ನಂ ಎಂಬುದು ಜನ್ಮನಾಮವಾಗಿರಲಿಲ್ಲ. ಮನೆಮಂದಿಗೆಲ್ಲ ಅವರು ಮುದ್ದಿನ 'ರಾಜ'ನಾಗಿದ್ದರು. ಶಾಲೆಗೆ ಸೇರುವಾಗ ಹುಡುಗನ ಹೆಸರು ಜಿ. ಪಿ. ರಾಜಯ್ಯಂಗಾರ್ ಎಂದು ದಾಖಲಾಯಿತು. ಆ ಹೆಸರು 'ರಾಜರತ್ನಂ' ಎಂದು ಪರಿವರ್ತನೆಗೊಂಡದ್ದೇ ಒಂದು ಕಥೆ:

ರಾಜಯ್ಯಂಗಾರ್ ತುಂಬ ಚುರುಕಾಗಿದ್ದ ಹುಡುಗ, ಓದಿನಲ್ಲಿ ಜಾಣ. ಇಂಗ್ಲಿಷಿನಲ್ಲಿ ಆತನೇ ತರಗತಿಗೆಲ್ಲ ಮೊದಲನೆಯವ. ಒಂದು ದಿನ ಇಂಗ್ಲಿಷ್ ಪಾಠದಲ್ಲಿ ಅಧ್ಯಾಪಕರು ಕೇಳಿದ ಯಾವುದೋ ಒಂದು ಪ್ರಶ್ನೆಗೆ ಆತ ಉತ್ತರಿಸಿದ್ದು ಸರಿಯಾಗಿಯೇ ಇತ್ತಾದರೂ ಅಧ್ಯಾಪಕರು ಅದನ್ನು ತಪ್ಪು ಎಂದು ಹೊಡೆದು ಹಾಕಿದರು. ಹುಡುಗ ರೆಲ್ಲ ಒಂದಾಗಿ ಮುಖ್ಯೋಪಾಧ್ಯಾಯರಲ್ಲಿ ದೂರಿದರು. ಅಧ್ಯಾಪಕರ ವಿಚಾರಣೆ ಆಯಿತು. ಅವರು ಮುಖ ಉಳಿಸಿಕೊಳ್ಳುವುದಕ್ಕಾಗಿ ತನ್ನದೇ ಸರಿ ಎಂದು ಪಟ್ಟು ಹಿಡಿದು, ಆಧಾರವನ್ನು ತಂದು ತೋರಿಸುವುದಾಗಿ ಮನೆಗೆ ಹೋದರು; ಮತ್ತೆ ಶಾಲೆಗೇ ಬರಲಿಲ್ಲ! ಅವರ ಸ್ಥಾನಕ್ಕೆ ಬಂದ ಇನ್ನೊಬ್ಬರು, ಹಿಂದಿನ ಕಥೆಯನ್ನೆಲ್ಲ ಕೇಳಿ ತರಗತಿಯ ಹುಡುಗರೆಲ್ಲ ಉಡಾಫೆಯವರೆಂದೇ ತಿಳಿದು, ಆಗಾಗ, "ಅಹಾ! ರತ್ನಗಳು, ಮುಂಡೇವು" ಎಂದು ಮೊದಲಾಗಿ ಅವರನ್ನು ಹಂಗಿಸತೊಡಗಿದರು. 'ಈ ಮೇಷ್ಟ ರಿಗೂ ಚಳ್ಳೆ ಹಣ್ಣು ತಿನ್ನಿಸ'ಬೇಕೆಂದು ರಾಜಯ್ಯಂಗಾರಿಗೆ ತೋರಿತು. ಆರೋಗ್ಯಶಾಸ್ತ್ರದ ಅಧ್ಯಾಪಕರಿಗೆ ರಾಜನೆಂದರೆ ಪ್ರೀತಿ. ಅವರು ಶಾಲೆಯ ಗುಮಾಸ್ತೆಯೂ ಆಗಿದ್ದರು. ಒಂದು ದಿನ ರಾಜ ಅವರ ಹತ್ತಿರ ಹೋಗಿ ತನ್ನ ಹೆಸರನ್ನು 'ಜಿ. ಪಿ. ರಾಜರತ್ನಂ ಅಯ್ಯಂಗಾರ್' ಎಂದು ಬದಲಿಸುವಂತೆ ಕೇಳಿಕೊಂಡ. ಈಗಿನಂತೆ ಆ ಕಾಲದಲ್ಲಿ ಹೆಸರು ಬದಲಾಯಿಸುವುದೇನೂ ಕಷ್ಟಕರವಾಗಿರಲಿಲ್ಲ. ಅದರಂತೆ ಕಡತದಲ್ಲೂ ಹಾಜರಿಪಟ್ಟಿ ಯಲ್ಲೂ ರಾಜನ ಹೆಸರು ಬದಲಾಯಿತು.– ಮೊದಲಿಗಿಂತ ದೊಡ್ಡದಾಯಿತು. ಮರುದಿನ ಹೊಸ ಇಂಗ್ಲಿಷ್ ಮೇಷ್ಟ್ರು ಹಾಜರಿ ತೆಗೆಯುತ್ತ, ಜಿ. ಪಿ. ರಾಜಯ್ಯಂಗಾರ್ ಎಂದು ಕರೆದರು. ರಾಜ ಮುಂದಿನ ಸಾಲಿನಲ್ಲೇ ಕುಳಿತಿದ್ದರೂ ಉತ್ತರಿಸಲೇ ಇಲ್ಲ. ಮೇಷ್ಟ್ರು 'Why don't yu answer?' ಎಂದು ಗದ್ದರಿಸಿದರು. ರಾಜ ಅಷ್ಟೇ ತಣ್ಣಗೆ, "ನನ್ನ ಹೆಸರು ಕರೆದಿಲ್ಲಾ ಸಾರ್" ಎಂದ. ಮೇಷ್ಟ್ರು ಮತ್ತೊಮ್ಮೆ ಹಾಜರಿ ಪುಸ್ತಕ ನೋಡಿದರು– "ಜಿ. ಪಿ. ರಾಜರತ್ನಂ ಅಯ್ಯಂಗಾರ್" ಎಂದಾಗಿಬಿಟ್ಟಿದೆ! ಆ ಹೆಸರನ್ನೇ ಕರೆದರು, ತರಗತಿಯೆಲ್ಲ ಗೊಳ್ಳನೆ ನಕ್ಕಿತು. ಮೇಷ್ಟ್ರ ಮುಖ ಕೆಂಪಾಯಿತು, ಹೆಡ್ಮಾಷ್ಟರರಿಗೆ ದೂರು ಹೋಯಿತು. ಅವರು ರಾಜನನ್ನು ಕರೆದು ನಾಲ್ಕೇಟು ಬಿಗಿದರು, ತಂದೆಗೂ ತಿಳಿಸಿದರು. ಅಷ್ಟಾದರೂ ಹೆಸರು ಮಾತ್ರ 'ಜಿ. ಪಿ. ರಾಜರತ್ನಂ ಅಯ್ಯಂಗಾರ್' ಎಂದೇ ಉಳಿಯಿತು. ರಾಜ ಮುಂದೆ ಕಾಲೇಜ್ ಸೇರಿ ಬಿ. ಎ. ಓದುತ್ತಿದ್ದಾಗ, ಅಧ್ಯಾಪಕರೊಬ್ಬರಿಗೆ ಆ ಹೆಸರು ಉದ್ದವಾಗಿ ಕಂಡು ಅವರು ಜಿ. ಪಿ. ರಾಜರತ್ನಂ ಎಂದು ಮಾತ್ರ ಕರೆಯತೊಡಗಿದರು. ದಾಖಲೆಯಲ್ಲಿ ಪೂರ್ವರೂಪವೇ ಉಳಿಯಿತಾದರೂ ಆ ಮುಂದೆ ಜಿ. ಪಿ. ರಾಜರತ್ನಂ ಎಂಬ ಹ್ರಸ್ವರೂಪವೇ ಪ್ರಚುರ ವಾಯಿತು. ಬರವಣಿಗೆಯಲ್ಲೂ, ಮಂದಿಯ ಬಾಯಲ್ಲೂ ಜಿ. ಪಿ. ರಾಜರತ್ನಂ ಎಂಬ ಹೆಸರೇ ನೆಲೆಗೊಂಡು, 'ರಾಜರತ್ನ! ಎಂಥಾ ಹೆಸರು!' ಎಂದು ಕರೆದು ಕೊಂಡಾಡು ವಂತೆ ಆಯಿತು.

ಹೀಗೆ, ರಾಜರತ್ನಂ ಅವರ ಹೆಸರಿನದೇ ಒಂದು ಕತೆಯಾದರೆ ಅವರ ಬದುಕೆಲ್ಲ ಇಂತಹದೇ ಹಲವು ಕತೆಗಳ ಒಂದು ಹೊತ್ತಗೆ.

*　　*　　*

ವಿದ್ಯಾಭ್ಯಾಸ–ಗೃಹಸ್ಥಾಶ್ರಮ:

ರಾಜರತ್ನಂ ಅವರ ಪ್ರಾಥಮಿಕ, ಮಾಧ್ಯಮಿಕ, ಎಂಟ್ರೆನ್ಸ್, ಇಂಟರ್ ಮೀಡಿಯೆಟ್ ಶಿಕ್ಷಣಗಳೆಲ್ಲ ಮೈಸೂರಿನ ವಿವಿಧ ವಿದ್ಯಾಸಂಸ್ಥೆಗಳಲ್ಲಿ ನಡೆದುವು. ಎಳ ಹರೆಯದಲ್ಲೇ ಅವರಿಗೆ ಹಳಗನ್ನಡದ ಹಲವು ಕಾವ್ಯಗಳ ಪಾಠವಾಯಿತು. ಅದರಿಂದಾಗಿ ಅವರ ಉಚ್ಚಾರ ಶುದ್ಧವಾಯಿತು, ಭಾಷೆ ನಿರ್ದುಷ್ಟವಾಯಿತು. ರಾಜರತ್ನಂ ಅವರ ಕಂಠವೂ ಮಧುರವಾಗಿದ್ದುದರಿಂದ ಸ್ವಲ್ಪಕಾಲ ಮೈಸೂರು ವಾಸುದೇವಾಚಾರ್ಯರಲ್ಲಿ ಸಂಗೀತಪಾಠವೂ ಆಯಿತು. ನಟನಕುಶಲಿಯೂ ಆಗಿದ್ದುದರಿಂದ ಎ. ವಿ. ವರದಾಚಾರ್ಯರು ರಾಜರತ್ನಂರನ್ನು ತಮ್ಮ ರತ್ನಾವಳಿ ಥಿಯೇಟ್ರಿಕಲ್ಸ್‌ನಲ್ಲಿ ಸೇರಿಸಲೂ ಮುಂದಾಗಿದ್ದರು. ಆದರೆ ರಾಜರತ್ನಂ ನಾಟಕ ಮಂಡಲಿಯನ್ನು ಸೇರುವುದು ಅವರ ತಂದೆಗೆ ಒಪ್ಪಿಗೆಯಾಗಲಿಲ್ಲ, ಆದುದರಿಂದ ರಾಜರತ್ನಂ ರಂಗಮಂಟಪವನ್ನು ಏರಲಿಲ್ಲ.೧

ಅವರ ಶೈಕ್ಷಣಿಕ ಜೀವನ ಸುಗಮವೇನೂ ಆಗಿರಲಿಲ್ಲ. ತಾಯಿ ಬದುಕಿದ್ದಾಗ ತಂದೆ ಮಗನನ್ನು ತುಂಬ ಅಕ್ಕರೆಯಿಂದ ನೋಡಿಕೊಂಡಿದ್ದರು. ಆಕೆ ತೀರಿಕೊಂಡು, ತಂದೆ ಎರಡನೆಯ ಮದುವೆಯಾದ ಮೇಲೆ ವಾತ್ಸಲ್ಯದ ಒರತೆ ಬತ್ತತೊಡಗಿತು. ರಾಜರತ್ನಂ ಮನೆ ಬಿಟ್ಟು ಹೋದರು, ಮುಂಬಯಿ, ಕಲ್ಕತ್ತ ಸುತ್ತಿ ಕೊನೆಗೆ ಮದರಾಸಿನಲ್ಲಿ ಏನೋ ಚಾಕರಿ ಹಿಡಿದರು. ಆ ಕಾಲಕ್ಕೆ ಮೈಸೂರಲ್ಲಿ ಶಾಲಾಧ್ಯಾಪಕರಾಗಿದ್ದ ಅವರ ಅಣ್ಣ ಗೋವಿಂದರಾಜ ಅಯ್ಯಂಗಾರರು ಸುದ್ದಿ ತಿಳಿದು ಮದರಾಸಿಗೆ ಹೋಗಿ ತಮ್ಮನನ್ನು ಹುಡುಕಿ ಹಿಡಿದು, ಮೈಸೂರಿಗೆ ಕರೆತಂದರು. ರಾಜರತ್ನಂ ಹಾಗೂ ಹೀಗೂ ಎಂಟ್ರೆನ್ಸ್ ಪರೀಕ್ಷೆ ಮುಗಿಸಿದರು. ಮುಂದೆ ಬಿ. ಎ. ಓದುವುದಕ್ಕಾಗಿ ಬೆಂಗಳೂರಿಗೆ ಹೋದರು. ಅಲ್ಲಿ ನೆಲೆ ಯಾವುದು? – ಒಂದು ಛತ್ರದಲ್ಲಿ ರೂಮು ಹಿಡಿದರು. ಅಣ್ಣನ ಪರಿಚಯಸ್ಥರೊಬ್ಬರು ಊಟ ಹಾಕಲು ಮುಂದಾದರು. ಆದರೆ ಅವರದೊಂದು ಆಸೆ: ಈ ತರುಣ ತಮ್ಮ ಮನೆಹೆಣ್ಣಿಗೆ ಗಂಡಾಗಬಹುದೇ ಎಂಬುದು! ರಾಜರತ್ನಂ ಒಪ್ಪಲಿಲ್ಲ. ಅದರ ಪರಿಣಾಮವೆಂದರೆ ಹಾಕುವ ಒಂದು ತುತ್ತು ಅನ್ನಕ್ಕೆ ಪ್ರತಿಯಾಗಿ ಆ ಮನೆ ಮಂದಿ ರಾಜರತ್ನಂ ಅವರನ್ನು ನಾಲ್ಕು ಪಟ್ಟು ದುಡಿಸಿದರು. ಮೊದಮೊದಲು ತುಟಿ ಬಿಗಿದು ಕೆಲಸ ಮಾಡಿದ ರಾಜರತ್ನಂ ಮೂರು ಮನೆಯಾಚೆಯಿಂದ ನೀರು ಹೊತ್ತು ತರಬೇಕಾದಾಗ "ಇದು limit" ಎಂದು ಆ ಮನೆಯನ್ನು ಬಿಟ್ಟರು. ಅದೇ ಕಾಲಕ್ಕೆ ತಮ್ಮನಿಗೆ ಆಸರೆಯಾಗಿದ್ದ ಅಣ್ಣ ಗೋವಿಂದರಾಜ ಅಯ್ಯಂಗಾರರೂ ಕಾಲವಶರಾದರು. 'ತಂದೆ ಈಗಾಗಲೇ ಎರಡನೆಯ ಮದುವೆಯಾಗಿ ಸಂಸಾರದ ಭಾರ ಹೆಚ್ಚಾಗಿದೆ; ಅಣ್ಣನೂ ತೀತಿಕೊಂಡ. ಇನ್ನೇನು 'ತನ್ನ ಬಾಳ ದೋಣಿ ಮುಳುಗಿದಂತೆಯೇ' ಎಂದು ರಾಜರತ್ನಂ ಕೈಚೆಲ್ಲುವ ಹೊತ್ತಿಗೆ ಉದಾರಿ ಸದ್ಗೃಹಸ್ಥರೊಬ್ಬರು ನೆರವುಗೈ ಚಾಚಿದರು, ತಮ್ಮ ಮಗಳ ಕೈಯನ್ನೂ ಅವರ ಕೈಯಲ್ಲಿ

೧. ಹಾಗಿದ್ದರೂ ಕಾಲಾಂತರದಲ್ಲಿ ಅವರು ಹಲವು ಸಲ ಬಣ್ಣ ಬಳಿದು ನಟಿಸಿ, ತಮ್ಮ ನಟನಕುಶಲತೆಯನ್ನು ಪ್ರದರ್ಶಿಸಿದ್ದೂ ಇದೆ!

ರಿಸಿದರು. ಅವರೇ ಚಾಮರಾಜನಗರದ ಕೆ. ವಿ. ನರಸಿಂಹಯ್ಯಂಗಾರ್ಯರು. ಅವರ ಸುಪುತ್ರಿ ಸೌ। ಲಲಿತಮ್ಮನನ್ನು ರಾಜರತ್ನಂ ಮದುವೆಯಾದರು. ಅದು ೧೯೨೮ನೆಯ ಇಸವಿ. ಆಗ ಅವರಿಗೆ ಇಪ್ಪತ್ತರ ಪ್ರಾಯ. ಎಳೆ ಹರೆಯದ ಮದುವೆಗಳು ಆ ಕಾಲದಲ್ಲಿ ಸಾಮಾನ್ಯವಾಗಿತ್ತಾದುದರಿಂದ ಗುಲ್ಲುಗದ್ದಲವೇನೂ ಏಳಲಿಲ್ಲ. ಆದರೆ ರಾಜರತ್ನಂ ಆಗಿನ್ನೂ ಬಿ. ಎ. ವಿದ್ಯಾರ್ಥಿ. ವಿದ್ಯಾರ್ಜನೆ ಮಾಡುತ್ತಿದ್ದರೇ ವಿನಾ ಧನಾರ್ಜನೆ ಯೇನೂ ಇರಲಿಲ್ಲ.

ರಾಜರತ್ನಂ ಅವರ ಸುಖದುಃಖಗಳಲ್ಲಿ ಸಮಭಾಗಿನಿಯಾಗಿದ್ದ ಶ್ರೀಮತಿ ಲಲಿತಮ್ಮ ಬಹುಕಾಲ ಮನೆ ಬೆಳಗಲಿಲ್ಲ. ಕ್ಷಯರೋಗಪೀಡಿತೆಯಾದ ಮಡದಿಯ ಆರೈಕೆಯೊಂದಿಗೆ ಇಳಿ ವಯಸ್ಸಿನ ತಂದೆಯನ್ನೂ ನೋಡಿಕೊಳ್ಳುವುದು ರಾಜರತ್ನಂ ಕರ್ತವ್ಯವಾಯಿತು. ಈ ಎರಡನ್ನೂ ಹೇಗೋ ಹೊಂದಿಸಿಕೊಂಡು ಮೈಸೂರಲ್ಲಿ ಓದುತ್ತಿದ್ದ ಅವರು ೧೯೩೧ರಲ್ಲಿ ಎಂ. ಎ. ಪರೀಕ್ಷೆಯಲ್ಲಿ ತೇರ್ಗಡೆಯೇನೋ ಆದರು. ಆದರೆ ಅದು ತೃತೀಯ ಶ್ರೇಣಿಯದಾಗಿತ್ತು. ಎಲ್ಲಿ ಎಷ್ಟೇ ಹುಡುಕಿದರೂ ಯಾವು ದೊಂದು ಕೆಲಸವೂ ಸಿಕ್ಕಲಿಲ್ಲ. ಕೈಯಲ್ಲಿ ಬಿಡಿಗಾಸೂ ಇಲ್ಲ. ಎಲ್ಲದಕ್ಕೂ ಮಾವನನ್ನು ಎಷ್ಟೆಂದು ಕೇಳುವುದು? ದೂರದ ಹೈದರಾಬಾದಿನ ಯಾವುದೋ ಒಂದು ಶಿಕ್ಷಣ ಸಂಸ್ಥೆಯಲ್ಲಿ ಕನ್ನಡ ಅಧ್ಯಾಪಕನೊಬ್ಬನ ಆವಶ್ಯಕತೆಯಿದೆ ಎಂಬುದನ್ನು ಮಾನ್ಯರೊಬ್ಬ ರಿಂದ ಕೇಳಿ ತಿಳಿದ ರಾಜರತ್ನಂ ಅವರದೇ ಶಿಫಾರಸ್ಸಿನೊಂದಿಗೆ ಹೈದರಾಬಾದಿಗೆ ಹೋದರು. ಅದಾಗಲೇ ಸ್ವದೇಶೀ ಭಾವನೆಯನ್ನು ಬಲವಾಗಿ ಬೆಳೆಸಿಕೊಂಡಿದ್ದ ರಾಜ ರತ್ನಂ ಖದ್ದರ್ ಬಿಟ್ಟು ಬೇರೆ ಬಟ್ಟೆ ಹಾಕುತ್ತಿರಲಿಲ್ಲ. ಅವರ ಖಾದೀ ಪ್ರೀತಿಯಿಂದಾಗಿ ಹೈದರಾಬಾದಿನಲ್ಲಿ ಪೋಲೀಸರ ಕೆಂಗಣ್ಣಿಗೆ ಬಿದ್ದರು. ಅವರಿಗೆ ಆಸರೆ ನೀಡಿದ್ದವರೂ 'ನಿಮ್ಮಿಂದ ನಮಗೆ ತೊಂದರೆ'ಯೆಂಬುದನ್ನು ಸೂಚ್ಯವಾಗಿ ತಿಳಿಸಿದರು. ಇಂಗಿತಜ್ಞ ರಾಜರತ್ನಂರಿಗೆ ಅದು ಅರ್ಥವಾಯಿತು. ಹೋದ ದಾರಿಯಲ್ಲೇ ಹಿಂದಕ್ಕೆ ಬಂದರು.

ಸಾಹಿತ್ಯ – ರಂಗನಿರ್ಮಾಣ :

ಆ ಕಾಲಕ್ಕೇ ರಾಜರತ್ನಂ ಸಾಹಿತ್ಯಕ್ಷೇತ್ರದಲ್ಲಿ ಪರಿಚಿತರಾಗಿದ್ದರು; ಗಣ್ಯಸಾಹಿತಿಗಳ ಪ್ರೀತಿ–ವಿಶ್ವಾಸಗಳಿಗೂ ಪಾತ್ರವಾಗಿದ್ದರು. ಆದರೆ ಬರಿಯ ಸಾಹಿತ್ಯ ವ್ಯವಸಾಯ ದಿಂದಲೇ ಅವರು ಕುಟುಂಬ ಪೋಷಣೆ ಮಾಡುವಂತಿರಲಿಲ್ಲ. ಅನ್ನ ಸಂಪಾದನೆ ಹೇಗೆ ಎಂಬ ಯೋಚನೆ ದೊಡ್ಡದಾಯಿತು. ಅದೇ ಸಂದರ್ಭದಲ್ಲಿ ಮೈಸೂರು ಸರಕಾರದ ಜನಗಣತಿ ಇಲಾಖೆಯವರು 'ಸಾರ್ಟರ್' ಕೆಲಸಕ್ಕೆ ಅರ್ಜಿಗಳನ್ನು ಕರೆದಿದ್ದಾರೆ ಎಂಬುದು ರಾಜರತ್ನಂರಿಗೆ ತಿಳಿಯಿತು. 'ಅದೃಷ್ಟಪರೀಕ್ಷೆ ಮಾಡಿಯೇ ಬಿಡೋಣ' ಎಂದು ಅವರೂ ಸಹ ಒಂದು ಅರ್ಜಿಯನ್ನು ಗುಜರಾಯಿಸಿದರು. ಅದು ಸಾಲದೆಂದು ಸೆನ್ಸಸ್ ಕಮೀಶನರನ್ನು ಕಂಡು ಮಾತಾಡಿದರೆ ಪ್ರಯೋಜನವಾದೀತೇ ಎಂಬ ಸಣ್ಣ ಆಸೆಯಿಂದ ಬೆಂಗಳೂರಿಗೂ ಹೋದರು. ಹೋಗಿ ನೋಡುತ್ತಾರೆ– ಆ ಕಮೀಶನರ್ ಮತ್ತಾರೂ ಅಲ್ಲ– ಸುವಿಖ್ಯಾತ ಸಾಹಿತಿ, ಸಜ್ಜನ, ಸಹೃದಯಿ ಮಾಸ್ತಿ ವೆಂಕಟೇಶ ಅಯ್ಯಂಗಾರ್! – ಅವರು ರಾಜರತ್ನಂ ಕಥೆಯನ್ನೆಲ್ಲ ಕೇಳಿ ತಿಳಿದು, 'ಅಪ್ಪಾ

ರಾಜರತ್ನಂ, ಸಾರ್ಟರ್ ಕೆಲಸಕ್ಕೆ ಇಪ್ಪತ್ತೈದು ರೂಪಾಯಿ ಸಂಬಳ, ಅದು ಆರು ತಿಂಗಳ ಕೆಲಸ. ನಿಮಗೆ ಆ ಕೆಲಸ ಬೇಡ. ನಾನೇ ಆರು ತಿಂಗಳ ಕಾಲ ಇಪ್ಪತ್ತೈದು ರೂಪಾಯಿ ಕೊಡುತ್ತೇನೆ, ಬರವಣಿಗೆ ಕೆಲಸ ಮಾಡು' ಎಂದರು. ರಾಜರತ್ನಂ ಸಂತೋಷದಿಂದ ಒಪ್ಪಿದರು. ಒಂದು ತಿಂಗಳ ಸಂಬಳ ಮುಂದಾಗಿಯೇ ಸಿಕ್ಕಿತು. ಹೀಗೆ, ರಾಜರತ್ನಂ ಅವರ ಸಾಹಿತ್ಯಾಸಕ್ತಿಗೆ ನೀರು ಹೊಯ್ದು, ಊರೆಯಾಗಿ ನಿಂತು, ಅದು ಹುಲುಸಾಗಿ ಬೆಳೆಯುವಂತೆ ನೆರವಾದ ಮಹನೀಯರು ಮಾಸ್ತಿಯವರು.

ಕುಟುಂಬಜೀವನ:

ರಾಜರತ್ನಂ ಅವರ ಬರವಣಿಗೆಯ ಕಾಯಕ ಭರದಿಂದಲೇ ಸಾಗಿತು. ಆದರೆ ಜೀವನ ಮಾತ್ರ ದಿನದಿಂದ ದಿನಕ್ಕೆ ದುರ್ಭರವಾಯಿತು. ಪತ್ನಿಯ ಅನಾರೋಗ್ಯ ದಿನೇ ದಿನೇ ಉಲ್ಬಣಿಸಿತು. ಮುದಿ ತಂದೆ ೧೯೩೩ರಲ್ಲಿ ಕಣ್ಮುಚ್ಚಿದರು. ಪರಿಸ್ಥಿತಿ ಎಷ್ಟೊಂದು ವಿಷಮವಾಯಿತೆಂದರೆ ತಂದೆಯ ಅಂತ್ಯಸಂಸ್ಕಾರಕ್ಕಾಗಿ ರಾಜರತ್ನಂ ಪಟ್ಟ ಪಾಡನ್ನು ಹೇಳಲಾಗದು. ಅವರ ಬಂಧು ಜನರಲ್ಲಿ ಒಬ್ಬರೂ ಕಳೇಬರಕ್ಕೆ ಹೆಗಲೊಡ್ಡಲಿಲ್ಲ. ರಾಜರತ್ನಂ ಜಟಕಾ ಬಂಡಿಯಲ್ಲಿ ಮೃತದೇಹವನ್ನು ಶ್ಮಶಾನಕ್ಕೆ ಸಾಗಿಸಿದರು; ಒಂಟಿಯಾಗಿಯೇ ಚಿತೆಯನ್ನು ಸಿದ್ಧಗೊಳಿಸಿದರು. ಸುದ್ದಿ ತಿಳಿದು ತಂದೆಯ ಸಹ ಉಪಾಧ್ಯಾಯರಾಗಿದ್ದ ಒಬ್ಬ ಮಹನೀಯರು ಓಡೋಡಿಬಂದು ಅಂತ್ಯಕ್ರಿಯೆಯಲ್ಲಿ ಸಹಕರಿಸಿದರು.

"ದುಃಖ ಒಂಟಿಯಾಗಿ, ಗುಟ್ಟಾಗಿ ಬರುವುದಿಲ್ಲ, ದಂಡುಕಟ್ಟಿ ಬಂದು ದಾಳಿಯಿಡುತ್ತದೆ" ಎನ್ನುವುದುಂಟು. ತಂದೆ ತೀರಿಕೊಂಡು ಇನ್ನೂ ವರ್ಷ ಸಂದಿರಲಿಲ್ಲ; ರೋಗಪೀಡಿತೆ ಪತ್ನಿ ಲಲಿತಮ್ಮ ೧೯೩೪ರಲ್ಲಿ ಕೊನೆಯುಸಿರೆಳೆದರು. ಅವರ ನಿಧನ ಕಾಲಕ್ಕೆ ರಾಜರತ್ನಂ ಊರಲ್ಲಿರಲಿಲ್ಲ. ತಮ್ಮದೊಂದು ಪುಸ್ತಕ ಮುದ್ರಣ ಮತ್ತು ಆಗಲೇ ಪ್ರಕಟಗೊಂಡು ಪ್ರಸಿದ್ಧವಾಗಿದ್ದ 'ರತ್ನನ ಪದಗಳ' ವಾಚನಕ್ಕಾಗಿ ಬೆಂಗಳೂರಿಗೆ ಹೋಗಿದ್ದರು. ಅಲ್ಲಿಗೆ ಸುದ್ದಿ ಬೆನ್ನಟ್ಟಿ ಬಂತು. ಮೈಸೂರಿಗೆ ಓಡಿ ಬಂದರು. ಎದೆಯನ್ನು ಹಿಂಡುತ್ತಿದ್ದ ದುಃಖವನ್ನು ಅದುಮಿ, ಕೋಡಿ ಹರಿಯುತ್ತಿದ್ದ ಕಂಬನಿಯನ್ನು ಒರಸಿ, ಪತ್ನಿಯ ಪಾರ್ಥಿವ ಶರೀರದ ಕರ್ಮಾಂತರವನ್ನು ಪೂರೈಸಿದರು. ರತ್ನನಿಗೆ ನಂಜಿಯಾಗಿ, ಬಾಳಿನ ಒಳಪೊರಗುಗಳನ್ನು ತುಂಬಿದ್ದ ಪತ್ನೀವಿಯೋಗದಿಂದ ರಾಜರತ್ನಂ ಕರ್ತವ್ಯ ಮೂಢರಾದರು, ನಿಷ್ಕ್ರಿಯರಾದರು. ಅಂತಹ ಆಪತ್ ಸ್ಥಿತಿಯಲ್ಲಿ, ಅವರು ಆ ಮೊದಲೇ ಓದಿ ಅರಗಿಸಿಕೊಂಡಿದ್ದ ಬುದ್ಧೋಪದೇಶ ಕತ್ತಲಿನ ಮನಸ್ಸಿಗೆ ಮಣಿದೀಪವಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎನ್. ಎಸ್. ಸುಬ್ಬರಾಯರ ಅಕ್ಕರೆಯ ಆಲಂಬನ ತಲೆಯ ಮೇಲೆ ತಂಪೆರೆಯಿತು, ಬದುಕುವ ಆಸೆಗೆ ನೀರೂಡಿತು.

ಪತ್ನೀವಿಯೋಗದ ದುಃಖ ಕಾಲಕ್ರಮೇಣ ಕಡಮೆಯಾಗುತ್ತಾ ಬಂತು. ಶ್ರೀಮತಿ ಲಲಿತಮ್ಮ ವಿಧಿವಶರಾದ ವರ್ಷವೇ– ೧೯೩೪ರಲ್ಲಿ ರಾಜರತ್ನಂ ಅವರು ಮೈಸೂರು ಸರಕಾರದ ನ್ಯಾಯಾಂಗ ಇಲಾಖೆಯಲ್ಲಿ ನ್ಯಾಯಾಧೀಶರಾಗಿ ಧರ್ಮಬುದ್ಧಿ, ನೀತಿನಿಷ್ಠೆ, ನ್ಯಾಯಪರತೆಗಳಿಂದ ಸಂಮಾನ್ಯರೆನಿಸಿದ್ದ ಎನ್. ಜಿ. ಲಕ್ಷ್ಮೀನರಸಿಂಹಯ್ಯಂಗಾರ್ ಎಂಬ

ಮಹನೀಯರ ಸುಪುತ್ರಿ, ಶೀಲವತಿ ಸೀತಮ್ಮನವರ ಕೈಹಿಡಿದರು; ಬರಿದಾಗಿದ್ದ ತಮ್ಮ ಮನೆಮನಗಳನ್ನು ತುಂಬಿಕೊಂಡರು. ಅಳಲ ಕಡಲಿನಲ್ಲಿ ಹಾಯಿಯಿಲ್ಲದೆ ಅಲೆಯುತ್ತಿದ್ದ ರಾಜರತ್ನಂ ಅವರ ಬಾಳ ದೋಣಿ ಇದೀಗ ಒಂದು ದಡ ಸೇರಿತು.

ರಾಜರತ್ನಂ – ಸೀತಮ್ಮ ದಾಂಪತ್ಯ ಜೀವನದಲ್ಲಿ ಕ್ರಮೇಣ ತೆಂಗಿನಕಾಯಿಯ ಮೂರು ಕಣ್ಣುಗಳಂತೆ ಮೂವರು ಮಕ್ಕಳಾದರು– ಶ್ರೀಧರ, ಶ್ರೀಮತಿ ಮತ್ತು ಶ್ರೀಲತಾ. ಹಿರಿಯ ಮಗ ಶ್ರೀಧರ ಮೇಧಾವಿ– ಇಂಜಿನಿಯರಿಂಗ್ ಓದಿ, ದೂರದ ಅಸ್ಸಾಮಿನಲ್ಲಿ ಉನ್ನತ ಶ್ರೇಣಿಯ ಅಧಿಕಾರಿಯಾದರು. ಮಗಳು ಶ್ರೀಮತಿಯನ್ನು ಸಂಪತ್ಕುಮಾರನ್ ಎಂಬ ಇಂಜಿನಿಯರಿಂಗ್ ಪದವೀಧರನಿಗೆ ಮದುವೆ ಮಾಡಿ ಕೊಟ್ಟರು. ಸುಮಾರು ಮೂವತ್ತಮೂರು ವರ್ಷ ರಾಜರತ್ನಂ ಅವರ ಮನೆಮನಗಳ ಬೆಳಕಾಗಿದ್ದು ಸೀತಮ್ಮನವರು ೧೯೬೭ರಲ್ಲಿ ತೀರಿಕೊಂಡ ಬಳಿಕ ಅಕ್ಕರೆಯ ಕಿರಿ ಮಗಳು ಲತಾ ಅವರೇ ತಾಯಿಯ ನೆಲೆಯಲ್ಲಿ ನಿಂತು ಮನೆವಾರ್ತೆಯನ್ನು ನೋಡಿ ಕೊಂಡರು. ಇಂಗ್ಲಿಷ್ ಬಿ. ಎ. ಪದವೀಧರೆಯಾದ ಶ್ರೀಲತಾ ಲೇಖನ – ಕಾವ್ಯರಚನೆ ಗಳಲ್ಲೂ ಆಸಕ್ತೆಯಾಗಿದ್ದರು.೨

ರಾಜರತ್ನಂ ೧೯೩೧ರಲ್ಲೇ ಎಂ. ಎ. ಪದವೀಧರರಾಗಿದ್ದರೂ ಉದ್ಯೋಗಜೀವನ ದಲ್ಲಿ ಅವರೊಂದು ಗಟ್ಟಿ ನೆಲೆ ಕಾಣಬೇಕಾದರೆ ಏಳು ವರ್ಷ ಕಾಯಬೇಕಾಯಿತು. ೧೯೩೮ರಲ್ಲಿ, ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅವರು ಕನ್ನಡ ಉಪನ್ಯಾಸಕರಾಗಿ ನಿಯುಕ್ತರಾದರು. ಆ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕೆಲವು ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸಿ, ೧೯೫೨ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ನೇಮಕಗೊಂಡರು. ಹನ್ನೆರಡು ವರ್ಷ ಆ ಕಾಲೇಜಿನಲ್ಲಿ ಅಧ್ಯಾಪನ, ಪುಸ್ತಕ ಪ್ರಕಾಶನ, ವಿದ್ಯಾರ್ಥಿ ಮಾರ್ಗದರ್ಶನ ಮಾಡಿ, ಕಾಲೇಜಿನ ಅವಿಭಾಜ್ಯ ಅಂಗವೆನಿಸಿ, ೧೯೬೪ರಲ್ಲಿ ನಿವೃತ್ತರಾದರು. ಆ ಮೇಲೆ ಕೆಲಕಾಲ ಯುಜಿಸಿ ಪ್ರಾಧ್ಯಾಪಕರಾಗಿಯೂ ಕರ್ತವ್ಯ ನಿರ್ವಹಿಸಿದರು.

●

೨. ರಾಜರತ್ನಂ ವಿಧಿವಶರಾದ ಆರೇಳು ತಿಂಗಳಲ್ಲೇ ಅವರಿಗೆ ವಿಜಯಕುಮಾರ್ ಎಂಬವರೊಂದಗೆ ಮಾಂಗಲ್ಯಯೋಗ ಸಿದ್ಧಿಸಿತು.

II. ಸಾಹಿತಿ ರತ್ನ

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ರಾಜರತ್ನಂರಂತೆ ಗೆಯ್ದುವರೂ ಬೆಳೆ ಕೊಯ್ದುವರೂ ಹೆಚ್ಚು ಜನರಿಲ್ಲ. ಪ್ರಾಯಃ ಕಾದಂಬರಿಯೊಂದನ್ನು ಬಿಟ್ಟು ಮಿಕ್ಕೆಲ್ಲ ಪ್ರಕಾರಗಳಲ್ಲೂ ಅವರು ಕೈಯಾಡಿಸಿದ್ದಾರೆ. ಅವರು ರಚಿಸಿದ, ಅನುವಾದಿಸಿದ, ವ್ಯಾಖ್ಯಾನಿಸಿದ, ಸಂಪಾದಿಸಿದ ಪುಸ್ತಕಗಳ ಒಟ್ಟು ಸಂಖ್ಯೆ ಇನ್ನೂರಕ್ಕೂ ಹೆಚ್ಚು. ಅವುಗಳಲ್ಲಿ ಕಿರುಪುಸ್ತಕಗಳಿವೆ, ಕೈಪಿಡಿಗಳಿವೆ, ಹೆಬ್ಬೊತ್ತಿಗೆಗಳೂ ಇವೆ. ಗುಣಪ್ರಮಾಣ–ಪರಿಮಾಣಗಳು ಎಲ್ಲದರಲ್ಲೂ ಒಂದೇ ರೀತಿಯಲ್ಲಿ ಇಲ್ಲ. ಇರುವುದೂ ಸಾಧ್ಯವಿಲ್ಲ. ವಿಶ್ವವಾಙ್ಮಯರಂಗದ ಯಾವನೇ ಸಾಹಿತಿಯ ಎಲ್ಲ ಕೃತಿಗಳೂ ಒಂದೇ ಮಟ್ಟದಲ್ಲಿ ಇಲ್ಲ, ತಾರತಮ್ಯ ಇದ್ದೇ ಇರುತ್ತದೆ. ರಾಜರತ್ನಂ ರಚಿಸಿದ ವಿಪುಲ ವಾಙ್ಮಯದಲ್ಲಿ ಕೆಲವು ಕಾಲಾತೀತ, ಕೆಲವು ಸಮಸಾಮಯಿಕ. ಆದರೆ ಅವರ ಬರವಣಿಗೆಯಲ್ಲಿ ಬರಿಯ ಜಳ್ಳು, ಪೊಳ್ಳು ಎಂದು ಕಡೆಗಣಿಸಬಹುದಾದದ್ದು ಯಾವುದೂ ಇಲ್ಲ. ರಾಜರತ್ನಂ ವಾಙ್ಮಯದ ಸಮೃದ್ಧಿ, ವೈವಿಧ್ಯ, ವೈಶಿಷ್ಟ್ಯಗಳನ್ನು ಕುರಿತು ಕೆಲವು ಮಾತುಗಳನ್ನು ಈ ಮುಂದೆ ಬರೆಯಲಾಗಿದೆ.

*   *   *

ರಂಗಪ್ರವೇಶ:

ರಾಜರತ್ನಂ ವಿದ್ಯಾರ್ಥಿಯಾಗಿದ್ದಾಗ ಇಂಗ್ಲಿಶಿನಲ್ಲಿ ಸಹಪಾಠಿಗಳಿಗಿಂತ ಮುಂದಾಗಿದ್ದರು. ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೇ ಅವರು ಶುದ್ಧವಾದ ಇಂಗ್ಲಿಶಿನಲ್ಲಿ ಸ್ವತಂತ್ರ ಲೇಖನಗಳನ್ನು ಬರೆಯಬಲ್ಲವರಾಗಿದ್ದರು. ಇಂಗ್ಲಿಶ್ ನಾಟಕಗಳಲ್ಲೂ ಪಾತ್ರವಹಿಸುವಷ್ಟು ಭಾಷಾಪ್ರಭುತ್ವವಿತ್ತು. ಹತ್ತನೆಯ ತರಗತಿಯಲ್ಲಿದ್ದಾಗ ಕೇಳಿದ ಒಂದು ಪಾಠವನ್ನೇ – ಅದು ಜಲೋತ್ಪತ್ತಿಯನ್ನು ಕುರಿತದ್ದು– ವಸ್ತುವಾಗಿ ಮಾಡಿ The war of Elements ಎಂಬ ಕತೆಯನ್ನು ಹೆಣೆದರು. ಆ ಮುಂದಿನ ವರ್ಷ ಸ್ವಾನುಭವವನ್ನೇ ಆಧರಿಸಿ Mr. Ventilated Shirt ಎಂಬ ಮತ್ತೊಂದು ಕತೆಯನ್ನು ಹೊಸೆದರು. ಕ್ರಮೇಣ ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣ ಶಾಸ್ತ್ರಿ ಮೊದಲಾದ ಗುರುಜನರಿಂದ ಪ್ರಭಾವಿತರಾದರು, ಮತ್ತು ಕಾಲಧರ್ಮವೆನಿಸಿ ಸಾರ್ವತ್ರಿಕವಾಗಿದ್ದ ಕನ್ನಡ ಪ್ರೇಮದಿಂದ ಪ್ರೇರಿತರಾದರು. ಕನ್ನಡವನ್ನು ಕುರಿತಂತೆ ಒಂದು ನವೋತ್ಸಾಹ ಅವರ ಧಮನಿಗಳಲ್ಲಿ ಹರಿದಾಡಿತು; ಇಂಗ್ಲಿಶ್ ಮೋಹ ಹಿಂದಕ್ಕೆ ಸರಿಯಿತು; ಕನ್ನಡವೇ ಕಣ್ಣ ಮುಂದೆ ದೊಡ್ಡದಾಗಿ ನಿಂತು, ಮನಸ್ಸನ್ನು ತುಂಬಿತು.

ರಾಜರತ್ನಂ ಅವರು ಬೆಂಗಳೂರಲ್ಲಿ ಇಂಟರ್‌ಮೀಡಿಯೆಟ್ ವಿದ್ಯಾರ್ಥಿಯಾಗಿದ್ದ ಕಾಲ. ಆಗಲೇ ವಿ. ಸೀತಾರಾಮಯ್ಯನವರು ಕವಿಯಾಗಿ ಖ್ಯಾತನಾಮರಾಗಿದ್ದರು. ರಾಜರತ್ನಂ ಅವರ ಹತ್ತಿರ ಹೋಗಿ ಹೊಸ ಕವಿತೆಗಳನ್ನು ಓದಿ ಅರ್ಥ ಮಾಡುವುದು ಹೇಗೆಂಬುದನ್ನು ಅರಿತುಕೊಂಡರು, ಮಾತ್ರವಲ್ಲ ಪದ್ಯಲಕ್ಷಣ ಮತ್ತು ಛಂದಸ್ಸತ್ವ

ಗಳನ್ನೂ ಹೃದ್ಗತ ಮಾಡಿಕೊಂಡರು. ಅದರಿಂದಾಗಿ ಅವರಿಗೆ ನವಕಾವ್ಯದಲ್ಲಿ ಆಸಕ್ತಿ ಹೆಚ್ಚಿತು, ಅಂತಹ ಕವಿತೆಗಳನ್ನು ಬರೆಯಬೇಕೆಂಬ ಆಸೆ ಹುಟ್ಟಿತು. 'ಶ್ರೀನಿವಾಸ' (ಮಾಸ್ತಿ ವೆಂಕಟೇಶ ಅಯ್ಯಂಗಾರ್)ರ 'ಸ್ಥಳಗಳ ಹೆಸರ'ನ್ನು ಅನುಸರಿಸಿ, 'ಊರ ಹೆಸರು' ಎಂಬೊಂದು ಪದ್ಯವನ್ನೂ ಬರೆದರು. 'ಕನ್ನಡದ ಕುಲಪುರೋಹಿತ' ಆಲೂರ ವೆಂಕಟರಾಯರು ಸಂಪಾದಿಸುತ್ತಿದ್ದ, ಆ ಕಾಲದ ಪ್ರಸಿದ್ಧ ಪತ್ರಿಕೆಯೆನಿಸಿದ್ದ 'ಜಯ ಕರ್ನಾಟಕ'ದಲ್ಲಿ ರಾಜರತ್ನಂ ಅವರ 'ಹೀಗಾಯಿತು' ಎಂಬ ಕವಿತೆ ಪ್ರಕಟವಾಯಿತು. ಅದು ಬಿ. ಎಂ. ಶ್ರೀಕಂಠಯ್ಯನವರೇ ಮೊದಲಾದ ಗಣ್ಯರ ಕಣ್ಣಿಗೂ ಬಿದ್ದು ರಾಜರತ್ನಂ ತೂಕ ಹೆಚ್ಚುವಂತಾಯಿತು. ಬೆಂಗಳೂರಲ್ಲಿ ಓದು ಮುಗಿಸಿ, ಎಂ. ಎ. ತರಗತಿಗೆ ಸೇರುವುದಕ್ಕೆಂದು ರಾಜರತ್ನಂ ಮೈಸೂರಿಗೆ ಬರುವ ಹೊತ್ತಿಗಾಗಲೇ ಕವಿಯಾಗಿ ಅವರ ಹೆಸರು ಹಲವರಿಗೆ ಪರಿಚಿತವಾಗಿತ್ತು. ಎಂ. ಎ. ವಿದ್ಯಾರ್ಥಿಗಳಂತೂ ತಮಗೊಬ್ಬ ಕವಿಮಿತ್ರ ಜತೆಯಾದನೆಂಬ ಸಂತೋಷ-ಉತ್ಸಾಹಗಳಿಂದ ಕೂಡಿದ್ದರು.

ಮೈಸೂರಲ್ಲಿ ಓದುತ್ತಿದ್ದಾಗ ರಾಜರತ್ನಂ ಅವರ ಕಾವ್ಯಪ್ರತಿಭೆ ವಿಕಸನಗೊಂಡು ಅದು ಪ್ರಕಟವಾಗುವುದಕ್ಕೆ ತಕ್ಕುದಾದ ಅನೇಕ ಹಿತಕರ ಪ್ರಸಂಗಗಳು ಒದಗಿಬಂದುವು. ಮಹಾರಾಜಾ ಕಾಲೇಜಿನ 'ಕರ್ಣಾಟಕ ಸಂಘ' ಏರ್ಪಡಿಸಿದ ಒಂದು ವಿದ್ಯಾರ್ಥಿ ಕವಿ ಸಮ್ಮೇಳನದಲ್ಲಿ ಅವರೂ ಭಾಗವಹಿಸಿದರು. ಆ ಸಮ್ಮೇಳನದ ಪರಿಣಾಮವಾಗಿ ಪ್ರಕಟಗೊಂಡ 'ತಳಿರು' ಎಂಬ ಕವನ ಸಂಗ್ರಹದಲ್ಲಿ ರಾಜರತ್ನಂ ಅವರ ಮೂರು ಕವಿತೆಗಳು ಸೇರಿಕೊಂಡುವು. ಮುಂದೆ, ಮೈಸೂರಲ್ಲಿ ಹದಿನಾರನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರಗಿದಾಗ ದತ್ತಾತ್ರೇಯ ಬೇಂದ್ರೆ, ರಂಗನಾಥ ಮುಗಳಿ ಮೊದಲಾದವರ ಪರಿಚಯಲಾಭವಾಯಿತು, ಮಾತ್ರವಲ್ಲ, ಸಮ್ಮೇಳನಾಧ್ಯಕ್ಷರಾಗಿದ್ದ ಆಲೂರರ ಆಶೀರ್ವಾದಪ್ರಾಪ್ತಿಯೂ ಆಯಿತು.

'ಶೋಕವೇ ಶ್ಲೋಕವಾಗುತ್ತದೆ' ಎಂಬ ಮಾತನ್ನು ನಾವು ರಾಮಾಯಣದ ಕಾಲದಿಂದೀಚೆಗೆ ಕೇಳುತ್ತ ಬಂದಿದ್ದೇವೆ. 'ಅಳಲಿನ ಅಲೆಗಳೇ ಮಡುಗಟ್ಟಿ ಸವಿ ಹಾಡುಗಳೆನಿಸುತ್ತವೆ' ಎನ್ನುತ್ತಾನೆ ಒಬ್ಬ ಆಂಗ್ಲಕವಿ. ರಾಜರತ್ನಂ ಅವರಿಗೂ ಅಂತಹ ದೊಂದು ಅನುಭವವಾಯಿತು. ಎಂ. ಎ. ವಿದ್ಯಾರ್ಥಿಯಾಗಿದ್ದಾಗ ಅವರು ಕಾಲೇಜ್ ಹಾಸ್ಟೆಲಿನಲ್ಲಿ ವಾಸಿಸುತ್ತಿದ್ದರು. ಹಾಸ್ಟೆಲ್ ಕಟ್ಟಡದ ಹಂಚಿನ ಸೂರಿನಲ್ಲಿ ಒಂದು ಅಳಿಲು ಮರಿ ಇಟ್ಟಿತ್ತು. ಒಂದು ದಿನ ಒಂದು ಮರಿ ಆಯತಪ್ಪಿ ರಾಜರತ್ನಂರ ಕೋಣೆಯೊಳಗೆ ಬಿತ್ತು. ಅವರು ಅದನ್ನು ಎರಡು ದಿನ ಪ್ರೀತಿಯಿಂದ ಆರೈಕೆ ಮಾಡಿದರು. ಮೂರನೆಯ ದಿನ ಅದನ್ನು ಹೊರಗೆ ಬಿಟ್ಟರು. ಎಲ್ಲಿಯೋ ಇದ್ದ ಹಾಸ್ಟೆಲಿನ ನಾಯಿ ಓಡಿ ಬಂದು ಆ ಮರಿಯನ್ನು ಗಬಕ್ಕನೆ ಕಚ್ಚಿ ಕೊಂದೇ ಬಿಟ್ಟಿತು. ಆ ಘಟನೆ ರಾಜರತ್ನಂರ ಕರುಳು ಹಿಂಡಿತು; 'ಕುಂತ್ರೆ ನಿಂತ್ರೆ ಅದೇ ಧ್ಯಾನ, ಜೀವಕಿಲ್ಲ ಸಮಾಧಾನ' ಎಂದಾಯಿತು. ಒಬ್ಬ ಸಹವಾಸಿ ವಿದ್ಯಾರ್ಥಿ ತನಗೂ ಅಂತಹದೇ ಅನುಭವವಾದದ್ದನ್ನು ಹೇಳಿದ. ರಾಜರತ್ನಂರ ಪಾಡೆಲ್ಲ ಹಾಡಾಗಿ ಹೊಮ್ಮಿಯೇ ಬಿಟ್ಟಿತು; ಕಣ್ಣ ಹನಿಗಳೆಲ್ಲ ಒಗ್ಗೂಡಿ ಕಾಮನಬಿಲ್ಲಾಯಿತು: 'ತಾರೆ'ಯೆಂಬ ಕವಿತೆ

ಮೆಯ್ದಾಳಿತು; ಅದು ಮೈಸೂರು ವಿಶ್ವವಿದ್ಯಾನಿಲಯದ ಬಿ. ಎಂ. ಶ್ರೀ. ಸ್ವರ್ಣಪದಕವನ್ನೂ ಗೆದ್ದುಕೊಂಡಿತು! ರಾಜರತ್ನಂ ಆ ಕವಿತೆಯನ್ನು ಗ್ರಂಥಸ್ಥ ಶೈಲಿಯಲ್ಲಿ ಬರೆದಿದ್ದರು. ಅಂತಹದೆ ಇತರ ಕೆಲವು ಕವಿತೆಗಳನ್ನೂ ಸೇರಿಸಿ ಮುಂದೆ, ೧೯೩೪ರಲ್ಲಿ 'ಶಾಂತಿ'ಯೆಂಬ ಶೀರ್ಷಿಕೆಯಲ್ಲಿ ಒಂದು ಗುಚ್ಛವಾಗಿ ಪ್ರಕಟಿಸಿದರು.

ರಾಜರತ್ನಂ ಅವರ ಬಗೆಬಗೆಯ ಬರವಣಿಗೆಗಳು ೧೯೨೮ರಿಂದಲೇ ನಾಡಿನ ಹಲವು ಪತ್ರಿಕೆಗಳಲ್ಲಿ ಅಚ್ಚಾಗತೊಡಗಿದ್ದುವು. ಅವರ ಮೊತ್ತ ಮೊದಲನೆಯ ಪುಸ್ತಕವೆನ್ನಿಸಿದ 'ಸೋಲಿಗರ ಸಿದ್ಧ ಮತ್ತು ನೆನಪು' ೧೯೩೧ರಲ್ಲಿ ಪ್ರಕಾಶನಗೊಂಡಿತು. ಫ್ರೆಂಚ್ ಮೂಲದ ಎರಡು ಕತೆಗಳನ್ನು ಆಧರಿಸಿದ ಒಂದು ಗದ್ಯ ಮತ್ತೊಂದು ಪದ್ಯರೂಪಕ ಆ ಪುಸ್ತಕದಲ್ಲಿವೆ. ಅವೆರಡೂ ರಾಜರತ್ನಂ ಓದುತ್ತಿದ್ದ ಮಹಾರಾಜಾ ಕಾಲೇಜಿನ 'ಯೂನಿಯನ್' ಪತ್ರಿಕೆಯಲ್ಲಿ ಪ್ರಕಟವಾಗಿದ್ದುವು. ರಾಜರತ್ನಂ ಅವರು ಹತ್ತು ರೂಪಾಯಿ ಕೊಟ್ಟು ಆ ಏಕಾಂಕ ದೃಶ್ಯಗಳ ಅತಿರಿಕ್ತ (Offprints) ಪ್ರತಿಗಳನ್ನು ಪಡೆದು ಒಂದು ಪುಟ್ಟ ಪುಸ್ತಕ ಮಾಡಿ ತಮ್ಮ ಗೆಳೆಯರೊಂದಿಗೆ ಸೇರಿ ಕಟ್ಟಿದ್ದ 'ತರುಣರ ದಂಡು' ಎಂಬ ಕೂಟದ ಮುಖೇನ ಹೊರ ತಂದರು. ಪ್ರತಿಗಳು ಮಾರಿ ಹೋದಾಗ, ಖರ್ಚು ಕಳೆದು ಹತ್ತು ರೂಪಾಯಿ ನಿವ್ವಳ ಲಾಭವಾಯಿತು. ಆ ಮೇಲಿನ ನಲ್ವತ್ತೇಳು ವರ್ಷಗಳಲ್ಲಿ ರಾಜರತ್ನಂ ಅವರ ಪುಸ್ತಕ ರಚನೆ ಮತ್ತು ವ್ಯವಹಾರವೆಲ್ಲ ಇದೇ ಬಗೆಯದು ಎಂಬುದಕ್ಕೆ 'ಸೋಲಿಗರ ಸಿದ್ಧ'ನೇ ನಿದರ್ಶನ.

ಹೀಗೆ, ೧೯೩೧ರಲ್ಲಿ ಪ್ರಕಟವಾದ 'ಸೋಲಿಗರ ಸಿದ್ಧ' ರಾಜರತ್ನಂ ಅವರ 'ಮೊದಲ ಪುಸ್ತಕ'ವಾದರೆ ೧೯೭೮ರ ದಶಂಬರದಲ್ಲಿ ಮುದ್ರಣಗೊಂಡ 'ಕಂದನ ಕಾವ್ಯಮಾಲೆ'ಯೇ ಕೊನೆಯದು. ಅದು ಆ ಮೊದಲು ಬಿಡಿಬಿಡಿಯಾಗಿ ಅಚ್ಚಾಗಿದ್ದ, ರಾಜರತ್ನಂ ಅವರ ಅತಿಜನಪ್ರಿಯ ಶಿಶುಗೀತೆಗಳನ್ನೆಲ್ಲ ಪೋಣಿಸಿ ಕಟ್ಟಿದ ಒಂದು ತೋರದಂಡೆ. ಆ ನಡುವಿನ ನಲ್ವತ್ತೇಳು ವರ್ಷಗಳಲ್ಲಿ ರಾಜರತ್ನಂ ಬರೆದು ಪ್ರಕಟಿಸಿದ ಒಂದೊಂದು ಪುಸ್ತಕದ ಹಿಂದೆಯೂ ಒಂದೊಂದು ಕತೆಯಿದೆ. ಅವನ್ನೆಲ್ಲ ಸವಿಸ್ತಾರವಾಗಿ ಬಿತ್ತರಿಸಿ ಹೇಳುವುದು ಕಷ್ಟ. ಕೆಲವು ಪ್ರಮುಖ ಪ್ರಕಟನೆಗಳ ಹಿನ್ನೆಲೆಯನ್ನು ತಿಳಿಸಿ 'ಖಂಡುಗವನ್ನು ಬಳ್ಳದಲ್ಲಿ ಅಳೆ'ಯುವಂತೆ ಅವುಗಳ ಸಾರ-ಸ್ವಾರಸ್ಯಗಳನ್ನಷ್ಟೇ ಹೇಳಬಹುದಾಗಿದೆ.

ರಾಜರತ್ನಂ ಎಂ. ಎ. ಪದವೀಧರನಾದರೂ ಯೋಗ್ಯವಾದ ಉದ್ಯೋಗ ಲಭಿಸದೆ ಇದ್ದುದರಿಂದ ಅದರ ಬೇಟೆಯಾಡುತ್ತ ಅಲ್ಲಿ-ಇಲ್ಲಿ ಅಲೆಯುತ್ತಿದ್ದುದನ್ನೂ, ಸೆನ್ಸಸ್ ಕಚೇರಿಯಲ್ಲಿ ಸಾರ್ಟರ್ ಕೆಲಸಕ್ಕೆ ಅರ್ಜಿ ಸಲ್ಲಿಸಿದುದನ್ನೂ ಮಾಸ್ತಿಯವರ ಆಶ್ರಯ ಪ್ರಾಪ್ತಿಯಾದುದನ್ನೂ ಹಿಂದೆ ಹೇಳಿದೆ. ಹಾಗೆ ಮಾಸ್ತಿಯವರ ಆಶ್ರಯ ಮತ್ತು ಅವರ ಪ್ರೇರಣೆಯಿಂದ, ರಾಜರತ್ನಂ ಚೀನಾದೇಶದ ಪ್ರವಾಸಿ ಫಾಹಿಯಾನನ ಭಾರತಯಾತ್ರಾ ಕಥನವನ್ನು ಕನ್ನಡಕ್ಕೆ ಅನುವಾದಿಸಿದರು. ಎ. ಆರ್. ಕೃಷ್ಣಶಾಸ್ತ್ರಿಯವರು ಅದನ್ನು 'ಪ್ರಬುದ್ಧ ಕರ್ಣಾಟಕ'ದಲ್ಲಿ ಪ್ರಕಟಿಸಿದರಲ್ಲದೆ, ಚೀನಾದೇಶದ ಇತರ ಬೌದ್ಧ ಯಾತ್ರಿಕರಾದ ಹ್ಯುಯೆನ್‌ತ್ಸಂಗ್, ಇತ್ಸಿಂಗ್ ಮೊದಲಾದವರ ಅನುಭವಗಳನ್ನೂ ಸಂಗ್ರಹಿಸಿ

ಅನುವಾದಿಸುವಂತೆ ಹೇಳಿದರು. ರಾಜರತ್ನಂ ಅದಕ್ಕೊಪ್ಪಿ, ಶ್ರದ್ಧೆಯಿಂದ ಆ ಕಾರ್ಯವನ್ನು ಮಾಡಿದರಲ್ಲದೆ, ಬೌದ್ಧಧರ್ಮವನ್ನು ಕುರಿತಾದ ಒಂದು ಅನುಬಂಧವನ್ನೂ ಬರೆದು ಸೇರಿಸಿ, ಅಚ್ಚುಕಟ್ಟಾಗಿ ಆ ಕೆಲಸವನ್ನು ಮಾಡಿ ಮುಗಿಸಿದರು. ಎಲ್ಲವೂ ಸೇರಿ, 'ಚೀನಾದೇಶದ ಬೌದ್ಧ ಯಾತ್ರಿಕರು' ಎಂಬ ಹೆಸರಲ್ಲಿ ೧೯೩೨ರಲ್ಲಿ ಸೆಂಟ್ರಲ್ ಕಾಲೇಜಿನ 'ಕರ್ಣಾಟಕ ಸಂಘ'ದ ಮುಖೇನ ಪ್ರಕಟವಾಯಿತು. 'ಸೋಲಿಗರ ಸಿದ್ಧ' ೧೯೩೧ರಲ್ಲೇ ಪ್ರಕಟವಾಗಿದ್ದರೂ 'ಚೀನಾದೇಶದ ಬೌದ್ಧ ಯಾತ್ರಿಕರೇ' ನಿಜವಾದ ಅರ್ಥದಲ್ಲಿ ತಮ್ಮ ಮೊದಲ ಪುಸ್ತಕವೆಂದು ರಾಜರತ್ನಂ ಹೇಳಿದ್ದಾರೆ. ಆ ಕೆಲಸದ ಜತೆಯಲ್ಲೇ ಮಾಸ್ತಿಯವರ ಸೂಚನೆಯಂತೆ ಫ್ರೆಂಚ್ ಸಾಹಿತಿ ವಾಲ್ಟೇರನ 'ಕ್ಯಾಂಡಿಡ್' ಎಂಬ ಕೃತಿಯನ್ನೂ ರಾಜರತ್ನಂ ಕನ್ನಡಕ್ಕೆ ಅನುವಾದಿಸಿದ್ದರು. ಅದೂ ಕಾಲಾಂತರದಲ್ಲಿ ಪ್ರಕಟವಾಯಿತು.

ಉತ್ಸಾಹೀ ಉದಯೋನ್ಮುಖ ಲೇಖಕನೊಬ್ಬನಿಗೆ ತನ್ನದೊಂದು ಪುಸ್ತಕವನ್ನು ಮುದ್ರಣರೂಪದಲ್ಲಿ ನೋಡುವುದಕ್ಕಿಂತ ಸಂತೋಷಕರ ಸನ್ನಿವೇಶ ಮತ್ತೊಂದಿಲ್ಲ. ಈಗ ಪುಸ್ತಕ ಪ್ರಕಾಶನ ಸಂಸ್ಥೆಗಳೂ, ಅವಕಾಶಗಳೂ ಧಾರಾಳವಾಗಿವೆ. ನಾಲ್ಕೈದು ದಶಕಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಪತ್ರಿಕೆಗಳು ಕಡಮೆ,. ಪ್ರಕಟನ ಸಂಸ್ಥೆಗಳು ವಿರಳ, ಲೇಖಕರದೂ ಮಿತಸಂಖ್ಯೆ. ಅಂತಹ ಕಾಲದಲ್ಲಿ ಒಬ್ಬ ಲೇಖಕನ ಕತೆಯೋ ಕವಿತೆಯೋ ಯಾವುದಾದರೊಂದು ಪತ್ರಿಕೆಯ ಒಂದು ಮೂಲೆಯಲ್ಲಿ ಮುದ್ರಣವಾದರೂ ಸಾಕು, – ಅದೊಂದು ಅಸಾಮಾನ್ಯ ಸೌಭಾಗ್ಯ! ಹಾಗೆ ಪ್ರಕಟವಾದ ಕೃತಿಗೆ ಆ ಕಾಲದಲ್ಲಿ ಸಂಭಾವನೆಯೆಂಬುದು ಇರಲಿಲ್ಲ. ಇದ್ದರೂ ಕಡಮೆ. ಬದಲು ಲೇಖಕನಿಗೆ ಅವನ ಕೃತಿಯ ಅತಿರಿಕ್ತ ಪ್ರತಿಗಳನ್ನು ನೀಡಲಾಗುತ್ತಿತ್ತು.[೩] ಅಂತಹ ಕಾಲದಲ್ಲಿ ಹಿರಿಯ ಸಾಹಿತಿಗಳು ಕಿರಿಯ ಲೇಖಕರ ಬೆನ್ನು ತಟ್ಟಿ, ಅವರ ಪುಸ್ತಕಗಳಿಗೆ ಮುನ್ನುಡಿ ಬರೆದು ಮುನ್ನಡೆಯಿಸುವುದು ಸಾಮಾನ್ಯವಾಗಿತ್ತು. ಯೋಗ್ಯತೆಯಲ್ಲಿ ಸ್ವಲ್ಪ ಕಡಮೆಯದೇ ಆಗಿರುತ್ತಿದ್ದರೂ ಪ್ರೋತ್ಸಾಹದೃಷ್ಟಿಯಿಂದ ಪತ್ರಿಕೆಗಳು ಅಂತಹವನ್ನು ಪ್ರಕಟಿಸುತ್ತಿದ್ದುವು, ಹಿರಿಯರು ಪ್ರಕಟಿಸುವಂತೆ ಶಿಫಾರಸ್ಸು ಮಾಡುತ್ತಿದ್ದರು; ಮಾಸ್ತಿಯವರು ತಮ್ಮದೊಂದು ಕವಿತೆ–'ಮದಲಿಂಗನ ಕಣಿವೆ'–ಯಲ್ಲಿ ಹೇಳಿದಂತೆ 'ಬೆಳೆಯುವ ಪಯಿರು ಭಾದ್ರಪದದೊಳೆ ಒಣಗಿ ಹೋಗ'ದಂತೆ ಅದಕ್ಕೆ ನೀರೆರೆಯುತ್ತಿದ್ದರು. ರಾಜರತ್ನಂ ಆ ವಿಷಯದಲ್ಲಿ ಸುದೈವಿ ಎನ್ನಬಹುದು. ಆಲೂರ, ಬಿ. ಎಂ. ಶ್ರೀ., ಟಿ. ಎಸ್. ವಿ., ಎ. ಆರ್. ಕೃ. ಮಾಸ್ತಿ, ಬೇಂದ್ರೆ ಮೊದಲಾದ ಗುರುಜನರು ತಮ್ಮ ಆಶೀರ್ವಾದಹಸ್ತವನ್ನು ರಾಜರತ್ನಂರ ತಲೆಯ ಮೇಲಿರಿಸಿದರು. ಅದರಿಂದ ಅವರಿಗೆ ತಮ್ಮ ಗುರಿ ಕಂಡಿತು, ದಾರಿ ತೋರಿತು, ನಡೆ ದಿಟ್ಟವಾಯಿತು.

ಒಂದೋ ಎರಡೋ ಪುಸ್ತಕ ಪ್ರಕಟವಾಗುವುದೇ ತಡ, ಮತ್ತೆ ಲೇಖಕನ ಉತ್ಸಾಹ ಗರಿಗೆದರುತ್ತದೆ; ಇನ್ನಷ್ಟು ಮತ್ತಷ್ಟು ಬರೆಯಬೇಕೆಂಬ ಸಂಕಲ್ಪ ದೃಢ

---

೩. ಈಗ ಪರಿಸ್ಥಿತಿ ಸುಧಾರಿಸಿದೆ. ಪ್ರಕಟಿತ ಸಾಹಿತ್ಯಕ್ಕೆ ಯಥೋಚಿತ ಗೌರವಧನ ಸಂದಾಯವಾಗುತ್ತದೆ.

ವಾಗುತ್ತದೆ. ರಾಜರತ್ನಂರಿಗೂ ಹಾಗೆಯೇ ಆಯಿತು. ಸೋಲಿಗರ ಸಿದ್ಧ, ಚೀನಾದೇಶದ ಬೌದ್ಧ ಯಾತ್ರಿಕರ ಅಚ್ಚಿನೊಂದಿಗೆ ಮೊದಲ ಹತ್ತು ವರ್ಷಗಳಲ್ಲೇ ರಾಜರತ್ನಂ ಸುಮಾರು ಮೂವತ್ತೈದು ಪುಸ್ತಕಗಳನ್ನು ಬರೆದು ಬೆಳಕು ಕಾಣಿಸಿದರು. 'ಗಂಡು ಗೊಡಲಿ'ಯೆಂಬ ಗಂಡುನಾಟಕ, ಇಂದಿಗೂ ಮಕ್ಕಳು ಓದಿ ನಲಿಯುತ್ತಿರುವ 'ತುತ್ತೂರಿ', ರಾಜರತ್ನಂರ ಕೃತಿಮಾಲೆಯಲ್ಲಿ ನಾಯಕರತ್ನವೆನಿಸಿದ 'ರತ್ನನ ಪದಗಳೆ'ಲ್ಲ 'ಚೀನಾದೇಶದ ಬೌದ್ಧಯಾತ್ರಿಕರಿ'ಗಿಂತ ಮೊದಲೇ ರಚಿತವಾಗಿದ್ದವು. ಆದರೆ ಅಚ್ಚಾಗು ವಾಗ ತಡವಾಯಿತು, ಅಷ್ಟೆ. ಈಗ ಅವು ಮತ್ತು ಅಂತಹ ಇನ್ನೂ ಕೆಲವು ಪುಸ್ತಕಗಳ ಹತ್ತಿರ ಹೋಗೋಣ:

'ಚೀನಾದೇಶದ ಬೌದ್ಧ ಯಾತ್ರಿಕರ'ಂತಹ ಪುಸ್ತಕಗಳನ್ನು ಬರೆದುಕೊಟ್ಟರೆ ಪ್ರಕಟಿಸುವುದಾಗಿಯೂ ಯುಕ್ತ ಸಂಭಾವನೆ ಸಲ್ಲಿಸುವುದಾಗಿಯೂ ಬೆಂಗಳೂರಿನ 'ರಾಮಮೋಹನ ಕಂಪೆನಿ'ಯವರು ರಾಜರತ್ನಂರಿಗೆ ಆಶ್ವಾಸನೆ ನೀಡಿದರು. ರೋಗಿ ಬಯಸಿದ ಹಾಲನ್ನವನ್ನೇ ಸೇವಿಸಲು ವೈದ್ಯನೂ ಹೇಳಿದಂತೆ ರಾಜರತ್ನಂರ ಮುಂದೆ ಸಂಪಾದನೆಯ ಮಾರ್ಗವೊಂದು ತೆರೆದುಕೊಂಡಿತು. ಉದ್ದೇಶಿತ ಪುಸ್ತಕಗಳಿಗೆ ವಿಷಯ ಸಂಗ್ರಹಿಸುವುದಕ್ಕಾಗಿ ರಾಜರತ್ನಂ ಬೆಂಗಳೂರಿಂದ ಮೈಸೂರಿಗೆ ಬಂದರು. ಅದೇ ಕಾಲಕ್ಕೆ ಅವರ ತಂದೆ ವೃದ್ಧಾಪ್ಯ-ಅನಾರೋಗ್ಯಗಳಿಂದ ಹಾಸಿಗೆ ಹಿಡಿದದ್ದನ್ನೂ ಅಣ್ಣ ತೀರಿಕೊಂಡದ್ದನ್ನೂ ಈ ಮೊದಲೇ ಪ್ರಸ್ತಾವಿಸಿದೆ. ಕುಟುಂಬ ಪೋಷಣೆಯ ದೊಡ್ಡ ಹೊರೆ ರಾಜರತ್ನಂ ಅವರ ಹೆಗಲೇರಿದುದರಿಂದ ತಾವು ಏನೇನು ಬರೆಯಬೇಕೆಂದು ಯೋಚಿಸಿದ್ದರೋ ಅವೆಲ್ಲ ಅರೆಯಲ್ಲೇ ಉಳಿದುಕೊಂಡುವು.

ಶಿಶುವಶೀಕರಣ:

ರಾಜರತ್ನಂ ತಮ್ಮ ತಂದೆ ಪಾಠ ಹೇಳುತ್ತಿದ್ದ ಮೈಸೂರಿನ ಒಂದು ಮಾಧ್ಯಮಿಕ ಶಾಲೆಯಲ್ಲೇ ಮಾಸ್ತರಿಕೆ ಮಾಡಿದರು. ಮಾಡಬೇಕಾದ ಪಾಠಗಳಿಗಾಗಿ ಅವರು ಪುಸ್ತಕ ತೆರೆದಾಗ ಕಂಡದ್ದೇನು? –"ಎಂಟು ಗೇಣಿನ ದೇಹ, ರೋಮಗಳೆಂಟು ಕೋಟಿಯು, ಮೂಳೆಯರುವತ್ತೆಂಟು...." ಇತ್ಯಾದಿಯಾದ ವೈರಾಗ್ಯಬೋಧಕ ಪದ್ಯಕಾವ್ಯ! ಹಾಲು ಗಲ್ಲದ ಎಳೆಯ ಮಕ್ಕಳಿಗೆ ಇಳಿಹರೆಯದವರ ವೈರಾಗ್ಯಬೋಧನೆಯೇ? – ಪಾಠ ಹೇಳಿದರೂ ಅದು ಮಕ್ಕಳ ತಲೆಗೆ ಹತ್ತುತ್ತದೆಯೇ? ಪದ್ಯ ಬೇಡವೆಂದು ಗದ್ಯಪುಸ್ತಕ ತೆರೆದರೂ ಅದೇ ಪಾಡು:– "ದೇವರು ಎಂಬ ವ್ಯಕ್ತಿ ಇರುವುದೇ?" ಮತ್ತೊಂದು ತರಗತಿಗೆ ಹೋದಾಗ ಅಲ್ಲಿ ಮಾಡಬೇಕಾಗಿದ್ದ ಪಾಠ: "ಸೌವರ್ಣ ಮಧ್ಯಸ್ಥಿತಿ" (The golden mean) ಇದು ಕವಿ ಮುದ್ದಣನ ಮಡದಿ ಮನೋರಮೆ ಉದ್ಗರಿಸಿದಂತೆ "ನೀರಿಳಿಯದ ಗಂಟಲೊಳ್ ಕಡುಬಂ ತುರುಕು"ವ ರೂಕ್ಷತೆಯಲ್ಲದೆ ಮತ್ತೊಂದಲ್ಲ ವೆಂದು ರಾಜರತ್ನಂರಿಗೆ ತೋರಿತು. ಮಕ್ಕಳು ನೋಡಿ ಕಲಿಯಬೇಕು, ಹಾಡಿ ಕಲಿಯ ಬೇಕು, ಆಡಿ ಕಲಿಯಬೇಕು; ನಲಿನಲಿಯುತ್ತ ಓದಬೇಕು. ಆ ಮೊದಲೇ ಮಕ್ಕಳ ಬಾಯನ್ನು ತುಂಬಿ, ಗಂಟಲಲ್ಲಿ ಇಳಿಯಬಹುದಾದಂತಹ ಕತೆ-ಕವಿತೆಗಳನ್ನು ಬರೆದಿದ್ದ ಪಂಜೆಯವರನ್ನು (ಮಂಗೇಶರಾಯರು), ಹೊಯ್ಸಳ(ಅರಗಂ ಲಕ್ಷ್ಮಣ ರಾಯರು)ರನ್ನೂ

ರಾಜರತ್ನಂ ನೆನಪಿಸಿಕೊಂಡರು. ಅವರ 'ನಾಗರಹಾವು' 'ಮಗುವಿನ ಕೂಗು' ಮೊದಲಾದ ಹಾಡುಗಳು ಅವರ ಕಿವಿದೆರೆಗೆ ಬಡಿದು, ಮನಸ್ಸನ್ನು ಹೊಕ್ಕು ಕೆಣಕಿದುವು. ಮಕ್ಕಳಲ್ಲಿ ಗೆಲವನ್ನು ಉಂಟುಮಾಡಿ, ತಿಳಿವನ್ನು ಮೂಡಿಸಬಲ್ಲ ಪದ್ಯಗಳನ್ನು ತನ್ನಿಂದ ಬರೆಯಲಾಗದೇ? – ಮಕ್ಕಳು ಅನಾಯಾಸವಾಗಿ ಅರ್ಥ ಮಾಡಬಹುದಾದಂತಹ ಪದಪ್ರಯೋಗ, ಅವರ ಕಿವಿಗಳಿಗೆ ಇಂಪಾಗುವ ಪ್ರಾಸಾನುಪ್ರಾಸ, ನೆನಪಿಡಲು ತಕ್ಕುದಾದ ಛಂದೋಬಂಧಗಳಿಂದ ಹಾಡು ಕಟ್ಟಿ, ಕತೆ ಹೆಣೆದು ಮಕ್ಕಳಿಗೆ ಓದಿ ಹೇಳ ಬೇಕು, ಅವರು ಕೇಳಿ, ಓದಿ ನಲಿಯುವಂತೆ ಮಾಡಬೇಕು ಎಂದು ರಾಜರತ್ನಂ ಸಂಕಲ್ಪಿ ಸಿದರು. ಅವರ ಈ ಸಂಕಲ್ಪದ ಫಲವಾಗಿ ಕೇಳಿಬಂತು–

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ

ರಾಜರತ್ನಂರ ಕಸ್ತೂರಿ ಹೀಗೆ ತುತ್ತೂರಿ ಊದಿದ್ದೇ ತಡ, ಮಕ್ಕಳ ಮುಂದೆ ಬೊಮ್ಮನ ಹಳ್ಳಿಯ ಜೋಗಿ ಕಿಂದರಿ ಬಾರಿಸಿದಂತಾಯಿತು. ತುತ್ತೂರಿ ಮತ್ತು ತುತ್ತೂರಿಯಂತಹ ಇತರ ಪದ್ಯಗಳೂ ದಿನ ಬೆಳಗಾಗುವುದರಲ್ಲಿ ನಾಡಿನ ಉದ್ದಗಲ ಗಳಲ್ಲಿ ಹರಡಿದುವು, ಚಿಣ್ಣರ ಬಾಯಲ್ಲಿ ಕುಣಿದುವು. ಪ್ರಥಮ ಸಂಗ್ರಹದಿಂದಲೇ ರಾಜರತ್ನಂ ಕನ್ನಡದ ಶ್ರೇಷ್ಠ ಶಿಶುಸಾಹಿತ್ಯಕಾರರಲ್ಲಿ ಒಬ್ಬರೆನಿಸಿದರು; ಪಂಜೆ ಹೊಯಿಸಳರ ಸಾಲಿನಲ್ಲಿ ಮನ್ನಣೆಯ ಮಣೆಯೇರಿದರು.

'ತುತ್ತೂರಿ'ಯ ಬೆನ್ನಲ್ಲೇ ಬಂತು, 'ಕಡಲೆಪುರಿ':

ಪುರಿ! ಪುರಿ! ಕಡಲೆಪುರಿ
ಗರಂ ಗರಂ ಕಡಲೆಪುರಿ!
ಎಲ್ಲ ಬನ್ನಿ
ತೆಗೆದು ತಿನ್ನಿ
ಗರಂ ಗರಂ ಕಡಲೆಪುರಿ
ಕಾಸಿಗೊಂದು ಸೇರುಪುರಿ!

* * *

ಕಡಲೆಪುರಿಯೊಂದಿಗೆ 'ಕೂಸುಮರಿ':

ಕೂಸುಮರಿ! ಕೂಸುಮರಿ!
ಕೂಸುಮರಿ ಬೇಕೇ ಕೂಸುಮರಿ!
ಅಣ್ಣನ ಬೆನ್ನಿಗೆ ಮೈಯನು ಬೆಸೆದು
ಕತ್ತಿನ ಸುತ್ತಲು ಕೈಗಳನೆಸೆದು
ಸೊಂಟದ ಸುತ್ತಲು ಕಾಲನು ಬಿಗಿದು
ಅಣ್ಣನು ನೆಗೆದರೆ ತಾನೂ ನೆಗೆದು
ಮುದ್ದಾಗಿರುವುದು ಕೂಸುಮರಿ
ಕನ್ನಡನಾಡಿನ ಕೂಸುಮರಿ!

ಕನ್ನಡನಾಡಿನ ಮಕ್ಕಳು ರಾಜರತ್ನಂ ತುಂಬಿಕೊಟ್ಟ ಹಾಡುಗಳ ಬುಟ್ಟಿಗೆ ಕೈಹಾಕಿ ಕಡಲೆಪುರಿಯನ್ನು ಬಾಯಲ್ಲಿ ತುಂಬಿ ಕೂಸುಮರಿಯನ್ನು ಬೆನ್ನಲ್ಲಿ ಹೊತ್ತು ನಲಿಯುತ್ತಿರುವ ಹೊತ್ತಿಗೇ ಮತ್ತೊಂದು ಪಟಾಕಿ ಸಿಡಿಯಿತು, ಮಕ್ಕಳ ಕಿವಿ ನಿಗುರಿತು! – ಕನ್ನಡಕ್ಕೆ ತೀರ ತೀರ ಹೊಸತಾದ 'ಚುಟುಕ'ಗಳ ಕಟ್ಟನ್ನು ರಾಜರತ್ನಂ ಮಕ್ಕಳ ಕೈಯಲ್ಲಿರಿಸಿದರು.

ಚುಟುಕ ಚುಟುಕ
ಚೋಟಾರಿ!
ಪದ್ಯ ನಿನಗಿದು
ವೋಟಾರಿ!
ಚುಟುಕ ಚುಟುಕ
ಚೋಟಾರಿ!

ಹೀಗೆ ರಾಜರತ್ನಂ ಒಪ್ಪಿಸಿದ ಚುಟುಕಗಳನ್ನು ಕನ್ನಡದ ಕಂದಮ್ಮಗಳು ತಮ್ಮ ಪುಟ್ಟ ಪುಟ್ಟ ಕೈಗಳನ್ನು ಚಾಚಿ ಚಾಚಿ ಬಾಚಿಕೊಂಡವು! ರಾಜರತ್ನಂ ಚುಟುಕ ಸರ್ವವ್ಯಾಪಿಯಾಯಿತು. ಆ ಮೇಲಿನ ವರ್ಷಗಳಲ್ಲಿ ಅದೇ ರೀತಿಯನ್ನು ಅನುಸರಿಸಿ, ಹಲವರು ಬರೆಯಲು ಪ್ರಯತ್ನಿಸಿದುದೇ ರಾಜರತ್ನಂ ರಚನೆಗಳ ಸಫಲತೆಗೆ ಬಲವಾದ ಪ್ರಮಾಣ.

ಝಣ! ಝಣ! ಝಣ!
ಜೇಬು ತುಂಬ ಹಣ!
ಮೇಲಕೆತ್ತಿ
ಬಿಡಲು ಸದ್ದು
ಠಣ್! ಠಣ! ಠಣ!

ಬೇಂದ್ರೆಯವರ ಉಕ್ತಿಯನ್ನು ಸ್ವಲ್ಪ ಬದಲಿಸಿ ಹೇಳಬಹುದಾದಂತೆ, ಇಂತಹ ರಚನೆಗಳಲ್ಲಿ ಸಾಮಾನ್ಯವಾಗಿ "ಅರ್ಥವಿಲ್ಲ, ಸ್ವಾರ್ಥವಿಲ್ಲ, ಬರಿಯ ಸಹಜಪ್ರಾಸಾ" – ಅವುಗಳಲ್ಲಿ ಮಕ್ಕಳ ಮನಸ್ಸನ್ನು ಮುಟ್ಟಬಹುದಾದ ಯಾವುದಾದರೊಂದು ಸಣ್ಣ ವಿಷಯ ಇರುತ್ತದೆ. ನಾಲ್ಕು ಅಥವಾ ಐದು ಪಂಕ್ತಿಗಳಲ್ಲಿ ಅದರ ಬಣ್ಣನೆಯಿರುತ್ತದೆ. ಪ್ರತಿ ಪಾದಾಂತ್ಯದಲ್ಲಿ ಅಥವಾ ಪರ್ಯಾಯವಾಗಿ ಪ್ರಾಸವಿರುತ್ತದೆ. ಆ ಪದಬಂಧಗಳೂ, ಪ್ರಾಸಾನುಪ್ರಾಸಗಳೂ ಎಳೆಯರ ಕಿವಿ ತುಂಬುತ್ತವೆ. 'ಒಂದು ಪದವೆಂದರೆ ಒಂದು ಚಿತ್ರ'ವೆಂಬುದು ಶಿಶುಸಾಹಿತ್ಯಪಿತಾಮಹ ಪಂಜೆಯವರ ಮಾತು. ಚುಟುಕಗಳ ಪದಗಳೂ ಪ್ರಾಸಗಳೂ ಕಿವಿ ತುಂಬುವುದಷ್ಟೇ ಅಲ್ಲ, ಕಣ್ಣಿಗೂ ಕಟ್ಟುತ್ತವೆ. ಆ ಕಾರಣವಾಗಿ ಅವು ಮಕ್ಕಳಿಗೆ ಪ್ರಿಯವಾಗುತ್ತವೆ, ಅನಾಯಾಸವಾಗಿ ಅವರಿಗೆ ಕಂಠಪಾಠವಾಗುತ್ತವೆ; ತರಗತಿಯ ಪಾಠದಲ್ಲಿ ಪ್ರೀತಿ ಬೆಳೆಯುತ್ತದೆ. ಇದೇ ಸಾರ್ಥಕ ಶಿಕ್ಷಣದ ಮೂಲೋದ್ದೇಶ. ರಾಜರತ್ನಂ ತಮ್ಮ ಚುಟುಕಗಳ ಮೂಲಕ ಒಂದು "ಶಿಶುವಶೀಕರಣ ಮಂತ್ರ"ವನ್ನೇ ಹಾಕಿಬಿಟ್ಟರು! ಆ ಮೊದಲೇ ತುತ್ತೂರಿ ಊದಿ, ಕಡಲೆಪುರಿ ಹಂಚಿ ತಮ್ಮ ಹೆಸರು ಹರಡಿದ್ದ ರಾಜರತ್ನಂ 'ಚುಟುಕ'ಗಳಿಂದ ಮನೆಮಾತಾಗಿಬಿಟ್ಟರು.

ಈ 'ಚುಟುಕ'ಗಳ ಹುಟ್ಟಿಗೂ ಒಂದು ಹಿನ್ನೆಲೆಯಿದೆ: ಶಿವರಾಮ ಕಾರಂತರು ೧೯೩೦ರ ದಶಕದಲ್ಲಿ ಪುತ್ತೂರಲ್ಲಿ ಶಿಕ್ಷಣ ಸಪ್ತಾಹವನ್ನು ಆಚರಿಸುತ್ತಿದ್ದರು. ಅಂತಹ ದೊಂದು ಸಪ್ತಾಹಕ್ಕೆ ರಾಜರತ್ನಂರನ್ನು ಅವರು ಆಮಂತ್ರಿಸಿದರು. ಏಕೆಂದರೆ ಆ ಹೊತ್ತಿಗಾಗಲೇ ರಾಜರತ್ನಂ "ಶಿಶುಗೀತಗಳ ಟ್ರಜರಿ"ಯೆನಿಸಿದ್ದರು! ಆದರೂ ಅವರು ಅಂಜುತ್ತಲೇ ಪುತ್ತೂರಿಗೆ ಹೋದರಂತೆ! ಅವರೇ ಹೇಳಿದಂತೆ, ಶಿಶುಸಾಹಿತ್ಯದ ಮೇಲೆ ಅವರು 'ಓದಿದ ಭಾಷಣ' ಉಪಾಧ್ಯಾಯರಿಗೆ ಒಪ್ಪಿಗೆಯಾಗದಿದ್ದರೂ ಅವರ 'ಟ್ರಂಪ್ ಕಾರ್ಡ್' ಮಾತ್ರ ಮಕ್ಕಳ ಮೇಲೆ ಯಾವುದೋ ಒಂದು ಮಾಯದ ಬಲೆ ಬೀಸಿತು. ಅದು ಯಾವುದು ಎಂದರೆ 'ಚುಟುಕ'! ಅದು ಪಾಶ್ಚಾತ್ಯ ಬಾಲಜಗತ್ತಿನಲ್ಲಿ ಬಹು ಪ್ರಚುರವಾಗಿರುವ 'Nursery Rhymes'ನಂತಹ ರಚನೆ. ಆದರೆ ಅದು ಇಂಗ್ಲಿಶ್ Rhymeಗೆ ಕನ್ನಡದ ಸೀರೆಯುಡಿಸಿದ್ದೋ ಅಂಗಿ ಹಾಕಿದ್ದೋ ಅಲ್ಲ– ಕನ್ನಡದ ಮಣ್ಣು ಮತ್ತು ಹವೆಗೆ ತಕ್ಕಂತೆ ಮಾಡಿದ 'ಬೀಜಸಂಸ್ಕಾರ'. ಹಾಗೆ ಮಾಡಿದ ಹಿರಿಮೆ ಮತ್ತು ಮೊದಲತನ ರಾಜರತ್ನಂರಿಗೇ ಸಲ್ಲುತ್ತದೆ. ಪುತ್ತೂರಿನ ಶಿಕ್ಷಣ ಸಪ್ತಾಹದಲ್ಲಿ ತಮ್ಮ ಅಭಿಪ್ರಾಯ ಸಮರ್ಥನೆಗಾಗಿ ರಾಜರತ್ನಂ ಮೊದಲ ಬಾರಿಗೆ ಕೆಲವು ಚುಟುಕಗಳನ್ನು ಹೇಳಿ, ಅವುಗಳ ಸ್ಥೂಲ ಲಕ್ಷಣಗಳನ್ನು ತಿಳಿಸಿದಲ್ಲಿಂದ ಅವುಗಳಿಗೆ ಸಾರ್ವತ್ರಿಕತೆ ಬಂತು. ಕಾರಂತರೇ ನಡೆಯಿಸುತ್ತಿದ್ದ ಮಕ್ಕಳ ಕೂಟಕ್ಕಾಗಿ ರಾಜರತ್ನಂ ಮತ್ತೊಮ್ಮೆ ಪುತ್ತೂರಿಗೆ ಹೋದಾಗ, ಸೇರಿದ್ದ ಮಕ್ಕಳೂ ನೂರಾರು ಚುಟುಕಗಳನ್ನು ಹೆಣೆದು, ಚುಟುಕಗಳ ಆ ಬ್ರಹ್ಮನ ಮೇಲೆಯೇ ಅವುಗಳ ಮಳೆಗರೆದರಂತೆ![೪]

ಆ ಮುಂದಿನ ವರ್ಷಗಳಲ್ಲಿ ರಾಜರತ್ನಂ ಮಕ್ಕಳಿಗಾಗಿ ಇನ್ನೂ ಕೆಲವು ಪುಸ್ತಕಗಳನ್ನು ಪ್ರಕಟಿಸಿದರು. ಅವುಗಳಲ್ಲಿ ಪದ್ಯಗದ್ಯಗಳೆರಡೂ ಸೇರಿವೆ. ಕಲ್ಲುಸಕ್ಕರೆ, ಕೆನೆಹಾಲು, ಕೋಳಿಕಳ್ಳ, ಗೋಳೂರಿನ ಗಾಯಕರು, ಬಾ ಕರೂ ಬಾ – ಅಂತಹ ಕೆಲವು ರಚನೆಗಳು. ರಾಜರತ್ನಂ ಅವರ ವಾಙ್ಮಯಕ್ಷೇತ್ರ ವಿಸ್ತರಿಸಿ, ಅಲ್ಲಿ ಅವರು ಗಟ್ಟಿಕಾಳುಗಳನ್ನು ಬೆಳೆಯತೊಡಗಿದರೂ ಮಕ್ಕಳ ಮೇಲಿನ ಅವರ ಅಕ್ಕರೆ ಕೊನೆತನಕವೂ ಒಂದೇ ಬಗೆಯ ಬತ್ತದ ತೊರೆಯಾಗಿತ್ತು, ಒಳಗೊಳಗೆ ಹರಿಯುತ್ತಿತ್ತು. ೧೯೭೯ರ ಮಾರ್ಚ್ ತಿಂಗಳಲ್ಲಿ ಧರ್ಮಸ್ಥಳದಲ್ಲಿ ಜರಗಿದ ಐವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಶಿಶುಸಾಹಿತ್ಯಗೋಷ್ಠಿಯಲ್ಲಿ ಅತ್ಯಂತ ವಿಚಾರಕ್ಷಮವಾದ ಭಾಷಣ ಮಾಡುತ್ತ –ಅದು ಅವರ ಜೀವಿತಾವಧಿಯ ಅಂತಿಮ ಸಾರ್ವಜನಿಕ ಭಾಷಣವೂ ಆಗಿತ್ತು– ರಾಜರತ್ನಂ ಹೇಳಿದ್ದರು: "ದೊಡ್ಡವರಿಗೆ ಒಂದು ತುತ್ತು ಅನ್ನ ಕಡಮೆಯಾದರೂ ಪರವಾ ಇಲ್ಲ. ಆದರೆ ಮಕ್ಕಳಿಗೆ ಒಂದು ಮಿಳ್ಳೆ ಹಾಲು ಕುಡಿ ಸೋಣ!" ಎಳವೆಯಲ್ಲಿ ಒಬ್ಬಾತನಿಗೆ ಸುಯೋಗ್ಯ ಶಿಕ್ಷಣ ಪ್ರಾಪ್ತಿಯಾದರೆ ಮಾತ್ರ ಆತ ಒಂದು ದೇಶದ ಸಭ್ಯ–ಸುಸಂಸ್ಕೃತ ಪ್ರಜೆಯಾಗುವುದು ಸಾಧ್ಯ. ರಾಜರತ್ನಂ ಇದನ್ನು

---

೪. ಕಾಲಾನಂತರ ಅನೇಕರು ಚುಟುಕಗಳನ್ನೇ ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಮಾಡಿಕೊಂಡರು. ದಿನಕರ ದೇಸಾಯಿಯವರದು ಅವರಲ್ಲಿ ದೊಡ್ಡ ಹೆಸರು. ಈಗ ನಾವು ಹನಿಗವನ ಅಥವಾ ಮಿನಿಗವನವೆಂದು ಕರೆಯುವ ಬಂಧಗಳೂ ಒಂದು ವಿಧದಲ್ಲಿ ಚುಟುಕಗಳೇ ಆಗಿವೆ. ಅಥವಾ ಅವುಗಳ ಮೂಲ ರೂಪವನ್ನೇ ಚುಟುಕವೆನ್ನಬಹುದು.

ಚೆನ್ನಾಗಿ ತಿಳಿದವರಾಗಿದ್ದರು. ರಾಜರತ್ನಂ ರಚಿಸಿದ ಶಿಶುಗೀತ/ಬಾಲಸಾಹಿತ್ಯಗಳೆಲ್ಲ ಅಂತಹ ಉದ್ದೇಶದಿಂದಲೇ ಕೂಡಿವೆ.

* * *

ಬೌದ್ಧವಾಙ್ಮಯ:

ಮಾಸ್ತಿಯವರ ಪ್ರೇರಣೆ ಮತ್ತು ಪ್ರೋತ್ಸಾಹಗಳಿಂದ ರಾಜರತ್ನಂ 'ಚೀನಾದೇಶದ ಬೌದ್ಧ ಯಾತ್ರಿಕರು' ಎಂಬ ಪುಸ್ತಕವನ್ನು ಬರೆದರಷ್ಟೆ. ಆ ನಿಮಿತ್ತವಾಗಿ ಅವರು ಬೌದ್ಧವಾಙ್ಮಯವನ್ನು ಗಾಢವಾಗಿ ಅಧ್ಯಯನ ಮಾಡಬೇಕಾಯಿತು. ಅದಕ್ಕೆ ಪಾಲೀಭಾಷೆಯ ಪರಿಜ್ಞಾನವೂ ಅವಶ್ಯವಾಯಿತು. ಆ ಅಧ್ಯಯನದ ಪರಿಣಾಮವಾಗಿ ಮತ್ತು 'ಚೀನಾದೇಶದ ಬೌದ್ಧ ಯಾತ್ರಿಕರು' ಗ್ರಂಥರಚನೆಯ ಉಪ ಉತ್ಪತ್ತಿ(Bi-product)ಯಾಗಿ ಧರ್ಮದಾನಿ ಬುದ್ಧ, ಗೌತಮಬುದ್ಧ, ಮೂರು ಪಾಲೀ ಸೂತ್ರಗಳು, ಅಶೋಕ ಮೌರ್ಯ, ಬುದ್ಧವಚನ ಪರಿಚಯವೇ ಮೊದಲಾದ ಹತ್ತಾರು ಪುಸ್ತಕಗಳನ್ನು ರಾಜರತ್ನಂ ಬರೆದರು. ಹೀಗೆ ಗೌತಮಬುದ್ಧ, ಬೌದ್ಧಮತ ಮತ್ತು ವಾಙ್ಮಯಗಳನ್ನು ಕುರಿತು ಕನ್ನಡದಲ್ಲಿ ಬರೆದು ಪ್ರಚುರಪಡಿಸಿದವರಲ್ಲಿ ರಾಜರತ್ನಂ ಅವರದು ಹಿರಿಯ ಹೆಸರು, ಅವರಿಗೆ ಮನ್ನಣೆಯ ಮಣೆ. ಅದರಲ್ಲೂ 'ಚೀನಾದೇಶದ ಬೌದ್ಧ ಯಾತ್ರಿಕರ'ಂತಹ ಪುಸ್ತಕ ಆ ವರೆಗೆ ಇಂಗ್ಲಿಶಿನಲ್ಲೂ ಪ್ರಕಟವಾಗಿರಲಿಲ್ಲ ಎಂಬ ಅಭಿಪ್ರಾಯವಿದೆ. 'ಬೌದ್ಧಾವತಾರ' ಎಂಬ ಕಿರು ಪುಸ್ತಕವನ್ನು ಬರೆದ ಬಿದಿರೆ ಅಶ್ವತ್ಥ ನಾರಾಯಣ ಶಾಸ್ತ್ರಿಯವರನ್ನು ಬಿಟ್ಟರೆ ಆ ಕಾಲಕ್ಕೆ ಕನ್ನಡದಲ್ಲಿ ಬುದ್ಧನನ್ನು ಕುರಿತು ಸಮೃದ್ಧ ಸಾಹಿತ್ಯವನ್ನು ರಚಿಸಿದವರಲ್ಲಿ ರಾಜರತ್ನಂ ಅವರೇ ಮೊದಲಿಗರು ಎಂಬುದೂ ನಿರ್ವಿವಾದ. ಆ ಮೇಲಿನ ವರ್ಷಗಳಲ್ಲಿ ರಾಜರತ್ನಂ ಅವರ ಬೌದ್ಧವಾಙ್ಮಯದ ಪ್ರಕಾಶನಕ್ಕಾಗಿಯೇ 'ಶಾಕ್ಯ ಸಾಹಿತ್ಯ ಮಂಟಪ'ವನ್ನೂ ಕಟ್ಟಿದರು.೫

ಜೈನತೀರ್ಥಸ್ನಾನ:

ರಾಜರತ್ನಂ ಒಂದು ಕಡೆ ತಮ್ಮ ಸಾಹಿತ್ಯರಚನೆಯ ಮೂಲಪ್ರೇರಣೆಯನ್ನು "My works are more the products of irritation than inspiration" ಎಂದು ವರ್ಣಿಸಿದ್ದಿದೆ. ಅವರು ಹೀಗೆ ಹೇಳುವ ಮೊದಲು, ಹೇಳಿದ ಕಾಲಕ್ಕೆ, ಹೇಳಿದ ಮೇಲೂ ಅವರ ಕೆಲವು ಪುಸ್ತಕಗಳು ಹುಟ್ಟಬಂದದ್ದು ಅಂತಹ Irritationಗಳಿಂದಲೇ ಎಂಬುದು ಒಂದು ವೈಚಿತ್ರ್ಯ.

ಕಳೆದ ಶತಮಾನದ ಮೂವತ್ತರ ದಶಕದಲ್ಲಿ ರಾಜರತ್ನಂ ಅವರು ಬೌದ್ಧಸಾಹಿತ್ಯವನ್ನು ಪ್ರಕಟಿಸುತ್ತಿರುವಾಗಲೇ ಅನುದ್ದೇಶಿತವಾಗಿ – ದುರುದ್ದೇಶವಂತೂ ಲವಲೇಶವೂ ಇಲ್ಲದೆ– ತಮ್ಮದೊಂದು ಲೇಖನದಲ್ಲಿ ಪ್ರಯೋಗಿಸಿದ ಒಂದು ಶಬ್ದ ಅವರ ಮನೋಭೂಮಿಕೆಯಲ್ಲೂ ಕನ್ನಡವಾಙ್ಮಯರಂಗದಲ್ಲೂ ಸಾಕಷ್ಟು ಕಾವು ಮೂಡಿಸಿ ವಾದ ಪ್ರತಿವಾದಗಳ ಬಿರುಗಾಳಿಯನ್ನೇ ಎಬ್ಬಿಸಲು ಕಾರಣವಾಯಿತು– ಅದೇ 'ಶೀರ್ಷಿಕೆ'

---

೫. ಕ್ರಮೇಣ ಇತರ ಸಾಹಿತ್ಯಕೃತಿಗಳನ್ನೂ ಆ ಮಂಟಪದ ಮೂಲಕ ಪ್ರಕಟಿಸಿದರು.

ಎಂಬ ಶಬ್ದ. ಬೌದ್ಧವಾಙ್ಮಯಕ್ಕೆ ಸಂಬಂಧಿಸಿದಂತೆ ಅನ್ಯಾನ್ಯ ಭಾಷೆಗಳಲ್ಲಿ ಪ್ರಕಟವಾಗಿದ್ದ ಅನೇಕ ಲೇಖನಗಳನ್ನೂ ಗ್ರಂಥಗಳನ್ನೂ ರಾಜರತ್ನಂ ಶ್ರದ್ಧೆಯಿಂದ ಓದಿದ್ದರು. ಹಾಗೆ ಓದುತ್ತಿರುವಾಗ ಎದುರಾದದ್ದು ಈ ಶಬ್ದವಿಶೇಷ. ಅದೇ ಆಧಾರ ಮತ್ತು ಆ ಆಧಾರಗಳ ಮೇಲಿನ ಧೈರ್ಯದಿಂದ "ಬುದ್ಧನನ್ನು ಪೀಡಿಸಿದ 'ತೀರ್ಥಕ'ರೆಂಬ ಅನ್ಯಮತದವರು" ಎಂದು ರಾಜರತ್ನಂ ತಮ್ಮ 'ಗೌತಮಬುದ್ಧ' ಪುಸ್ತಕದಲ್ಲಿ ಬರೆದರು. ಅದನ್ನು ಓದಿದ ಕೆಲ ಮಂದಿ ಜೈನಮತೀಯ ಬಂಧುಗಳು ಆ ಪ್ರಯೋಗದ ಸಾಧುತ್ವವನ್ನು ಪ್ರಶ್ನಿಸಿದರು, ಇನ್ನೂ ಕೆಲವರು ಅನ್ಯಾರ್ಥವನ್ನೂ ಮತ್ತು ಕೆಲವರು ಅಪಾರ್ಥವನ್ನೂ ಮಾಡಿದರು. ರಾಜರತ್ನಂ ಉದ್ದೇಶಪೂರ್ವಕವಾಗಿ ಜೈನಮತ-ಧರ್ಮೀಯರನ್ನು ನೋಯಿಸಿದ್ದಾರೆ ಎಂಬ ಆರೋಪ ಬಂತು, ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾದುವು. ಪ್ರತಿಯಾಗಿ ರಾಜರತ್ನಂ, "ಸರ್ವಥಾ ದುರುದ್ದೇಶ ಇಲ್ಲ. 'ತೀರ್ಥಕ' ಮತ್ತು 'ತೀರ್ಥಕರ' (ಅಥವಾ 'ತೀರ್ಥಂಕರ') ಬೇರೆಬೇರೆ ಪದಗಳು, ಸಮಾನಾರ್ಥಕವಲ್ಲ" ಎಂಬುದನ್ನು ಸಪ್ರಮಾಣ -ಸಯುಕ್ತಿಕವಾಗಿ ಪ್ರತಿಪಾದಿಸಿದರೂ ವಿವಾದಗಳ ಬಿಸಿ ಆರಲಿಲ್ಲ. ಬಿರುಸು ತಗ್ಗಲಿಲ್ಲ. ವ್ಯತಿರಿಕ್ತವಾಗಿ ಅದು ಕರ್ನಾಟಕದ ಗಡಿದಾಟಿ ಭರತವರ್ಷದ ಇತರ ಭಾಷಾಪ್ರದೇಶಗಳಿಗೂ ಹಬ್ಬಿತು. ಕೊನೆಗೆ ರಾಜರತ್ನಂ ಮತಧರ್ಮಶಾಸ್ತ್ರಪಾರಂಗತರಾಗಿದ್ದ ಸಜ್ಜನರೊಬ್ಬರನ್ನು ಭೇಟಿಯಾಗಿ, ಅವರಿಗೆ 'ತೀರ್ಥಕ' ಶಬ್ದಪ್ರಕರಣವನ್ನು ವಿವರಿಸುವ ಸಂದರ್ಭ ಪ್ರಾಪ್ತಿಯಾಯಿತು. ರಾಜರತ್ನಂ ಅವರ ವಾದವನ್ನು ಆಸಕ್ತಿಯಿಂದಲೂ ಸಹನೆಯಿಂದಲೂ ಆಲಿಸಿದ ಆ ಮಾನ್ಯರಿಗೆ ವಿಷಯದ ಮಗ್ಗುಲುಗಳೆಲ್ಲ ಮನವರಿಕೆಯಾದುವು. ಹಾಗೆ ತಾವು ಮನಗಂಡುದನ್ನೆಲ್ಲ ಹಿಂದೀ ಪತ್ರಿಕೆಯೊಂದರಲ್ಲಿ ಬರೆದು ಪ್ರಕರಣಕ್ಕೆ ತೆರೆಯೆಳೆದರು. ಬೇರೆ ಪತ್ರಿಕೆಯಲ್ಲೂ ಅದು ಉದ್ಧೃತವಾಯಿತು. ಬೆಂಕಿ ಆರಿದರೂ ಹೊಗೆ ಆಡುತ್ತಿರುವಂತೆ ಚಳುವಳಿಯ ಮೂಲಬೀಜವನ್ನು ಬಿತ್ತಿದವರು, ಆ ಶಬ್ದವಿಚಾರವನ್ನು ಬಿಟ್ಟು ವ್ಯಕ್ತಿವಿಷಯವನ್ನು ಹಿಡಿದುಕೊಂಡರು. ಹೀಗೆ ಶಬ್ದಾರ್ಥವಿಚಾರ ಎಲ್ಲಿಂದ ಎಲ್ಲಿಗೋ ಹೋಯಿತು, ಯಾರು - ಯಾರನ್ನೋ ಎಳಕೊಂಡಿತು; ಅನಪೇಕ್ಷಣೀಯವಾದ ಒಂದು ಅಪ್ರಿಯ ವಾತಾವರಣವನ್ನು ಸೃಷ್ಟಿಸಿತು.

ರಾಜರತ್ನಂ ಅವರು 'ತೀರ್ಥಕ' ಶಬ್ದವನ್ನು ಪ್ರಯೋಗಿಸುವಾಗ ದುರುದ್ದೇಶ ಲವಲೇಶವೂ ಇರಲಿಲ್ಲ, ನಿಜ. ಆದರೆ ಸ್ವಲ್ಪ ಅಜಾಗ್ರತೆ ಇತ್ತು. ಅದರ ಪರಿಣಾಮವೇ ಈ ಅಪ್ರಿಯ ಸನ್ನಿವೇಶ ಸೃಷ್ಟಿ ಎಂಬುದು ಅವರಿಗೂ ಕಾಲಾಂತರದಲ್ಲಿ ಹೊಳೆಯಿತು. ಈಗ ಮನಸ್ಸು ಮೊದಲಿನಷ್ಟು ವ್ಯಗ್ರವಾಗಿರಲಿಲ್ಲ; ಪೂರ್ವಾಪರ ವಿಚಾರ ಮಾಡಲು ಸಮರ್ಥವಾಗಿತ್ತು. ಆದುದರಿಂದ 'ತೀರ್ಥಕ' ಪದನಿಷ್ಪತ್ತಿ, ಅದರ ಮೂಲಾರ್ಥ, ಪ್ರಯೋಗಸಂದರ್ಭಗಳನ್ನೆಲ್ಲ ಆಮೂಲಾಗ್ರವಾಗಿ ಪರಿಶೀಲಿಸಿ, ಇಂಗ್ಲಿಶಿನಲ್ಲೊಂದು ಸುದೀರ್ಘ ಲೇಖನ ಬರೆದು, ಅನೇಕ ವಿದ್ವಜ್ಜನರಿಗೆ ಕಳುಹಿಸಿ, ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿದರು. ಎಲ್ಲರೂ ರಾಜರತ್ನಂ ಅವರೊಂದಿಗೆ ಸಹಮತವನ್ನು ಪ್ರಕಟಿಸಿದ್ದರು. ಆದರೂ ಅವರಿಗೆ ಸಮಾಧಾನವಾಗಲಿಲ್ಲ. 'ತಾನು ಶ್ರೀವೈಷ್ಣವ ನಿಜ. ಆದರೆ ಜಗತ್ತಿನ ಎಲ್ಲ ಮತಧರ್ಮಗಳನ್ನೂ ಕಾವ್ಯಶಾಸ್ತ್ರಗಳನ್ನೂ ಸಮಾನ ಶ್ರದ್ಧೆ, ಆಸಕ್ತಿಗಳಿಂದ

ಓದಿದ್ದೇನೆ, ಎಲ್ಲ ಪ್ರವಾದಿಗಳನ್ನೂ ಮಹಾಪುರುಷರನ್ನೂ ಸಾಧುಸಂತರನ್ನೂ ಪೂಜ್ಯ ಭಾವದಿಂದ ನೋಡಿದ್ದೇನೆ. ಹಾಗೆ ತಾನು ಕಂಡದ್ದನ್ನು, ತಿಳಿದದ್ದನ್ನು ಕನ್ನಡದ ಹತ್ತು ಮಂದಿ ಓದಿ, ತಿಳಿದು, ಮೆಚ್ಚುವಂತೆ ಬರೆಯುತ್ತೇನೆ. ಮೊದಲಿಗೆ ಜೈನ ಮಹಾಪುರುಷರ ಜೀವನ–ಸಂದೇಶಗಳನ್ನೇ ಸಚಿತ್ರವಾಗಿ ಬರೆದು ಪ್ರಕಟಿಸುತ್ತೇನೆ' ಎಂದು ಸಂಕಲ್ಪಿಸಿ, "ಅರಿಯದೆ ನೋಯಿಸಿದ ದೋಷಕ್ಕೆ ಇದು ಅರಿತು ಅಂತಃಕರಣ ಪೂರ್ವಕ ಮಾಡಿದ ಪ್ರಾಯಶ್ಚಿತ್ತವಾಗಲಿ" ಎಂದು ಪ್ರಾಚೀನವೂ ವಿಸ್ತಾರವೂ ಸಮೃದ್ಧವೂ ಆಗಿರುವ ಜೈನ ವಾಙ್ಮಯಕ್ಷೇತ್ರವನ್ನು ವಿನಮ್ರವಾಗಿ ಪ್ರವೇಶಿಸಿದರು.

ರಾಜರತ್ನಂರ ಈ ಸತ್ಸಂಕಲ್ಪದ ಫಲವಾಗಿ 'ಮಹಾವೀರನ ಮಾತುಕತೆ', 'ಶ್ರೀಗೋಮಟೇಶ್ವರ', 'ಭಗವಾನ್ ಮಹಾವೀರ' ಎಂಬ ಮೂರು ಪುಸ್ತಕಗಳು ೧೯೩೭–೩೮ರ ಅವಧಿಯಲ್ಲಿ ಅಚ್ಚಾದುವು. ೧೯೩೯ರಲ್ಲಿ 'ಹತ್ತು ವರುಷ'ವೆಂಬ ತಮ್ಮ 'ಆತ್ಮಕಥನ'ವನ್ನು ಪ್ರಕಟಿಸಿದ ಅನಂತರದ ಮೂವತ್ತೆಂಟು ವರ್ಷಗಳ ಅವಧಿಯಲ್ಲಿ ರಾಜರತ್ನಂ ನಿರಂತರವಾಗಿ ಜೈನಮತತತ್ತ್ವಗಳನ್ನು ಜನರಿಗೆ ವಿವರಿಸಿದರು. ಅದಕ್ಕಾಗಿ ಅನೇಕ ತೀರ್ಥಂಕರಚರಿತ್ರೆಗಳನ್ನು ಬರೆದರು, ಜೈನಕಾವ್ಯಗಳನ್ನು ಸಂಗ್ರಹರೂಪದಲ್ಲಿ ಸಂಪಾದಿಸಿದರಲ್ಲದೆ ಅವುಗಳಿಗೆ ವ್ಯಾಖ್ಯಾನಗಳನ್ನೂ ಮಾಡಿದರು. ರಾಜರತ್ನಂ ಅವರ ಕಾಲಾನಂತರ ಅಂತಹ ಇಪ್ಪತ್ತೆಂಟು ಗ್ರಂಥಗಳನ್ನು ಸೇರಿಸಿ ಒಟ್ಟು ಸುಮಾರು ಸಾವಿರ ದೆಂಟುನೂರು ಪುಟಗಳ ಎರಡು ಸಂಯುಕ್ತ ಸಂಪುಟಗಳಾಗಿ, 'ರಾಜರತ್ನಂ ಜೈನಮತ ಧರ್ಮಸಾಹಿತ್ಯಸೇವೆ' ಎಂಬ ಹೆಸರಲ್ಲಿ ಅವರ ಸುಪುತ್ರ ಶ್ರೀಧರ ಮತ್ತು ಸೊಸೆ ಶ್ರೀಮತಿ ಶೈಲಾ ಪ್ರಕಟಿಸಿ ಪುಣ್ಯ ಕಟ್ಟಿಕೊಂಡಿದ್ದಾರೆ. ನೋಡಿದರೆ ಕಣ್ತುಂಬುವ, ಎತ್ತಿದರೆ ಕೈತುಂಬುವ, ಪುಟ ಬಿಡಿಸಿ ಓದಿದರೆ ಮನಸ್ಸನ್ನೂ ತುಂಬುವ ಸಂಪುಟಗಳು ಅವು ಗಳಾಗಿವೆ.

ಹೀಗೆ, ಮಾಸ್ತಿಯವರಿಂದ ಪ್ರೋತ್ಸಾಹಿತರಾಗಿ ಬೌದ್ಧವಾಙ್ಮಯವನ್ನೂ, ಸಂದರ್ಭದಿಂದ ಪ್ರೇರಿತರಾಗಿ ಜೈನಸಾಹಿತ್ಯವನ್ನೂ ರಾಜರತ್ನಂ ರಚಿಸಿದರು. ಇಂದಿಗೂ ಆ ಎರಡೂ ಕ್ಷೇತ್ರಗಳಲ್ಲಿ ರಾಜರತ್ನಂರಂತೆ ವಿಪುಲವಾಗಿ ಕೃತಿ ರಚಿಸಿದವರು ಮತ್ತೊಬ್ಬರಿಲ್ಲ. ಕನ್ನಡದಲ್ಲಿ ಬೌದ್ಧ ಮತ್ತು ಜೈನ ಸಾಹಿತ್ಯ ಹಾಗೂ ಮತಧರ್ಮಗಳನ್ನು ಕುರಿತು ಅಧಿಕಾರವಾಣಿಯಿಂದ ಬರೆಯಬಲ್ಲವರೂ, ಮಾತಾಡಬಲ್ಲವರೂ ರಾಜರತ್ನಂ ಒಬ್ಬರೇ ಎಂದು ಅವರು ಸರ್ವತ್ರವೂ ಸಂಮಾನ್ಯರೂ ಶ್ಲಾಘನೀಯರೂ ಆದರು. ಜೈನ–ಬೌದ್ಧ ಮಾತ್ರವೇ ಅಲ್ಲ ತಮ್ಮದೇ ಆದ ಶ್ರೀವೈಷ್ಣವ, ಅಂತೆಯೇ ಕನ್ನಡನಾಡಿನಲ್ಲಿ ಬಹು ಜನರು ಅನುಸರಿಸುವ ವೀರಶೈವ, ಹಾಗೆಯೇ ಜಾಗತಿಕವಾದ ಕ್ರಿಶ್ಚಿಯನ್ ಮತ್ತು ಇಸ್ಲಾಂ ಮತತತ್ವಗಳನ್ನೂ ರಾಜರತ್ನಂ ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ದರು, ಆ ಕುರಿತು ಅಲ್ಲಲ್ಲಿ ಮನೋಜ್ಞ ಉಪನ್ಯಾಸಗಳನ್ನು ಮಾಡಿದರು, ವಿಚಾರಪ್ರದ ಲೇಖನಗಳನ್ನೂ ಬರೆದರು.

ಗಂಡುಗೊಡಲಿಯ ಪರಶುರಾಮ:

ರಾಜರತ್ನಂ ಅವರು ಮೊದಲನೆಯ ದೃಶ್ಯಕಾವ್ಯವನ್ನು ಬರೆಯುವುದಕ್ಕೂ ಒಂದು ಅಪ್ರಿಯ ಸನ್ನಿವೇಶವೇ ಪ್ರೇರಕವಾಯಿತು. 'ಗಂಡುಗೊಡಲಿ' ಎಂಬುದು ೧೯೩೨ರಲ್ಲಿ ಪ್ರಕಟವಾದ ಅವರ ಮೊದಲ ನಾಟಕ, ಅದು ಕನ್ನಡದ ಒಂದು ಗಂಡು ನಾಟಕವೂ ಹೌದು.

ರಾಜರತ್ನಂ ಅವರು ಎಂ. ಎ. ಪದವೀಧರನಾಗಿ ಉದ್ಯೋಗದ ಅನ್ವೇಷಣೆಯಲ್ಲಿದ್ದ ಕಾಲಕ್ಕೆ 'ಹೈದರಾಬಾದಿನಲ್ಲಿ ಒಂದು ಶಿಕ್ಷಣ ಸಂಸ್ಥೆಗೆ ಕನ್ನಡ ಕಲಿಸುವವರೊಬ್ಬರು ಬೇಕಾಗಿದ್ದಾರೆ. ಅಲ್ಲಿಗೆ ಹೋಗಿ; ನಾನು ಶಿಫಾರಸ್ಸು ಮಾಡುತ್ತೇನೆ' ಎಂದು ಹಿರಿಯರೊಬ್ಬರು ಹೇಳಿದರಂತೆ. 'ಪಾಪದ ಪ್ರಾಣಿ ರತ್ನ' ಅದನ್ನು ನೆಚ್ಚಿ, ನಾಲ್ಕು ಪುಡಿಗಾಸು ಹಿಡಿದುಕೊಂಡು ಅಷ್ಟು ದೂರದ ಹೈದರಾಬಾದಿಗೆ ಹೋದರು. ಅಲ್ಲಿ ಗುರುತಿನವರೊಬ್ಬರ ಮನೆಯನ್ನು ಕಷ್ಟದಿಂದ ಹುಡುಕಿ ಹಿಡಿದರು. ಈ ಹುಡುಕಾಟದಲ್ಲಿ ಅವರು ಒಬ್ಬ ಪೋಲೀಸನ ಕಣ್ಣಿಗೆ ಬಿದ್ದರು. ಅವರ ತಲೆಮೇಲಿನ ಗಾಂಧಿ ಟೊಪ್ಪಿ, ಮೈಮೇಲಿನ ಖಾದಿ ಬಟ್ಟೆ, ಕೊರಳಿಗೆ ಸುತ್ತಿದ ದೇಶೀ ಶಾಲುಗಳನ್ನು ಕಂಡು ಈತ ಯಾರೋ ಸ್ವಾತಂತ್ರ್ಯಯೋಧ, ಗಾಂಧೀವಾದಿ ಇರಬೇಕೆಂಬುದು ನಿಜಾಮ್ ಪ್ರಾಂತದ ಆ ಪೋಲೀಸನಿಗೆ ಸಂದೇಹ. ಆತ ಇವರ ಬೆನ್ನುಹತ್ತಿದ. ಅದೂ ಸಾಲದೆಂಬಂತೆ ಹೈದರಾಬಾದಿನ ಆ ಸಂಸ್ಥೆಯಲ್ಲಿ ಕನ್ನಡ ಮುನಿಷಿಯ ಹುದ್ದೆ ಇಲ್ಲವೆಂದೂ ಹಾಗೆ ಇದೆಯೆಂದು ಬುಲೆಟಿನ್ ಹೊರಡಿಸಿದವರು ಬರಿಯ ಬುರುಡೆ ಬಿಟ್ಟಿದ್ದಾರೆಂದೂ ವಿಚಾರಾಂತ್ಯದಲ್ಲಿ ರಾಜರತ್ನಂರಿಗೆ ತಿಳಿಯಿತು. ಅಂತೂ ಹೋದದ್ದಕ್ಕೆ ಎರಡು ದಿನ ಗುರುತಿನವರ ಮನೆಯಲ್ಲಿ ಉಳಕೊಳ್ಳೋಣ ಎಂದರೆ ಆ ಪೋಲೀಸ್ ಶನೀಶ್ವರ ಅಲ್ಲಿಗೂ ಬೆಂಬತ್ತಿ ಬಂದ. ತನ್ನಿಂದಾಗಿ ಮನೆಯವರಿಗೆ ತೊಂದರೆಯಾಗುತ್ತದೆ ಎಂಬುದನ್ನು ಗ್ರಹಿಸಿದ ರಾಜರತ್ನಂ ಉಟ್ಟ ಬಟ್ಟೆಯಲ್ಲೇ ಅಲ್ಲಿಂದ ಹೊರಟು ಬೆಂಗಳೂರಿಗೆ ಬಂದರು.

ರಾಜರತ್ನಂ ಹಾಗೆ ಬೆಂಗಳೂರಿಗೆ ಹಿಂದಿರುಗಿದ ಕೆಲವೇ ದಿನಗಳಲ್ಲಿ ಜನನಾಯಕ ಪಂಡಿತ ಜವಾಹರಲಾಲ ನೆಹರೂ ಅವರು ಬೆಂಗಳೂರಿಗೆ ಬಂದರು; ಒಂದು ಸಾರ್ವಜನಿಕ ಸಭೆಯಲ್ಲಿ ದೇಶಭಕ್ತಿ ಪ್ರಚೋದಕವಾದ, ಉದ್ಬೋಧಕ ಉಪನ್ಯಾಸ ಮಾಡಿದರು. ಅವರ ವೀರವಾಣಿಯನ್ನು ಕೇಳುತ್ತಿದ್ದಂತೆ ರಾಜರತ್ನಂರಿಗೆ ಕೃತಯುಗದ ಪರಶುರಾಮನ ನೆನಪಾಯಿತು. ಹೈದರಾಬಾದಿನ ಅಪ್ರಿಯ ಅನುಭವ, ನೆಹರೂ ವಾಣಿಯ ಗಾಢಪ್ರಭಾವಗಳಿಂದ ಪ್ರೇರಿತರಾದ ಅವರು ಒಂದೇ ರಾತ್ರಿಯಲ್ಲಿ ಒಂದು ನಾಟಕವನ್ನು ಬಗೆದು, ಬರೆದು ಮುಗಿಸಿಯೇ ಬಿಟ್ಟರು– ಅದೇ 'ಗಂಡುಗೊಡಲಿ'!

ಮಹರ್ಷಿ ಜಮದಗ್ನಿಯನ್ನು ಮಾಹಿಷ್ಮತೀ ಪುರಾಧೀಶ ಕಾರ್ತವೀರ್ಯಾರ್ಜುನ ಅನ್ಯಾಯವಾಗಿ ಕೊಂದುದರ ಪ್ರತೀಕಾರವೆಂಬಂತೆ ಋಷಿಪುತ್ರ ಪರಶುರಾಮ ಇಪ್ಪತ್ತೊಂದು ಸಲ ಭೂಸಂಚಾರ ಮಾಡಿ, ಹೇಳಲು ಒಂದು ಹೆಸರೂ ಉಳಿಯದಂತೆ ಕ್ಷತ್ರಿಯಕುಲಸಂಹಾರ ಮಾಡಿದ ಕಥೆಯನ್ನೇ ರಾಜರತ್ನಂ ಇಲ್ಲಿ ದೃಶ್ಯಕಾವ್ಯವಾಗಿ

ಕನ್ನಡಿಸಿದ್ದಾರೆ. ಆದರೆ ಇದು ಮೂಲ ವೃತ್ತಾಂತದ ಪ್ರತಿಕೃತಿಯಲ್ಲ, ಪ್ರತಿಮಾಸೃಷ್ಟಿ. ಆಂಗ್ಲಶಾಹಿಯ ದುರ್ನೀತಿಗೊಳಗಾಗಿ, ಪರತಂತ್ರಭಾರದಿಂದ ಕುಸಿದಿರುವ ಭಾರತದ ವರ್ತಮಾನಸ್ಥಿತಿಯೊಂದಿಗೆ ಪ್ರಜಾಪೀಡಕರೂ, ಅಧಿಕಾರಮತ್ತರೂ ಆಗಿದ್ದ ಕೃತಯುಗದ ಕ್ಷತ್ರಿಯರಾಜರ ಕಥೆಯನ್ನು ಸಮೀಕರಿಸಿ, ಹೇಗೆ ಪರಶುರಾಮ ತನ್ನ ಗಂಡುಗೊಡಲಿಯಿಂದ ದುಷ್ಟ ಕ್ಷತ್ರಿಯರ ತಲೆಗಳನ್ನು ತರಿದು ಭೂಭಾರವಿಳಿಸಿದನೋ ಹಾಗೆಯೇ ಒಬ್ಬ ಅಭಿನವ ಭಾರ್ಗವರಾಮ ಆಂಗ್ಲೇಯ ಪ್ರಭುಗಳ ಅಧಿಕಾರಮುಷ್ಟಿಯಿಂದ ಭಾರತವನ್ನು ಮುಕ್ತಗೊಳಿಸುವನೆಂಬ ಧ್ವನಿ ಈ ನಾಟಕದಲ್ಲಿದೆ. ಕಾರ್ತವೀರ್ಯನ ದೌರ್ಜನ್ಯ, ಮಗ ಪರಶುರಾಮನಿಂದ ತಾಯಿ ರೇಣುಕೆಯ ವಧೆ, ಕಾರ್ತವೀರ್ಯನಿಂದ ಜಮದಗ್ನಿಯ ಹತ್ಯೆ, ಅದಕ್ಕೆ ಪರಶುರಾಮನ ಭಯಂಕರ ಪ್ರತೀಕಾರಗಳೆಲ್ಲ ಮೂಲಕಥೆಯಲ್ಲಿರುವಂತೆಯೇ ನಾಟಕದಲ್ಲೂ ವಿವೃತವಾಗಿವೆ. ಆದರೆ ಸಂಭಾಷಣೆಗಳೆಲ್ಲ ದ್ವಂದ್ವಾರ್ಥಸೂಚಕವಾಗಿವೆ! ಎಂದರೆ ಭೂತಕಾಲದ ಕಥೆಗೆ ಹೇಗೆ ಅನ್ವಯಿಸುತ್ತವೆಯೋ ಹಾಗೆಯೇ ವರ್ತಮಾನದ ಪರಿಸ್ಥಿತಿಯನ್ನು ಪ್ರತಿಧ್ವನಿಸುತ್ತವೆ. ನಾಟಕವು ಕ್ರಾಂತಿಯನ್ನು, ಪ್ರತೀಕಾರವನ್ನು, ರಕ್ತಪಾತವನ್ನು ಪ್ರಚೋದಿಸುವಂತೆ ಮೇಲ್ನೋಟಕ್ಕೆ ತೋರಿದರೂ ಲೋಕಹಿತಸಾಧನೆಗೆ ಪರಶುರಾಮನ ಕೋಪಕ್ಕಿಂತ ಜಮದಗ್ನಿಯ ಶಮವೇ ಮುಖ್ಯ; 'ಕ್ಷಾತ್ರವನ್ನು ಸವರುವುದು ಹೆಚ್ಚಲ್ಲ, ಲೋಕವನ್ನು ಕಾಪಿಡುವುದು ಮುಖ್ಯತಮ' ಎಂಬ ತತ್ವ ಅದರಲ್ಲಿ ಪ್ರತಿಪಾದಿತವಾಗಿದೆ.

'ಗಂಡುಗೊಡಲಿ' ಒಂದು ನಾಟಕ ಎಂದರೆ ದೃಶ್ಯಕಾವ್ಯ. ಇಲ್ಲಿಯ ಸಂಭಾಷಣೆಗಳು ಹೆಚ್ಚಾಗಿ ಸರಳ ರಗಳೆಯಲ್ಲಿವೆ. ರಗಳೆಯ ಸಾಲುಗಳನ್ನು ಉದ್ದೇಶಕ್ಕೆ ತಕ್ಕಂತೆ ಹಿಗ್ಗಿಸಿ, ಕುಗ್ಗಿಸಿ ಇಲ್ಲಿ ಬಳಸಲಾಗಿದೆ. ಸಾಂದರ್ಭಿಕವಾಗಿ ಇತರ ಛಂದೋಬಂಧಗಳನ್ನೂ ಪ್ರಯೋಗಿಸಲಾಗಿದೆ. ಭಾಷೆಯಂತೂ ಈ ಗಂಡುನಾಟಕಕ್ಕೆ ತಕ್ಕುದಾಗಿ ಸಿಡಿಗುಂಡುಗಳಂತೆ ಪುಟಿಯುತ್ತದೆ. ಬಿಸಿನೆತ್ತರ ತಾರುಣ್ಯ, ದೇಶಭಕ್ತಿಯ ಕಾವು, ಹೈದರಾಬಾದಿನ ಅಪ್ರಿಯ ಅನುಭವ, ನೆಹರೂ ಅವರ ಉದ್ಬೋಧಕ ಭಾಷಣಗಳೆಲ್ಲ ರಾಜರತ್ನಂ ಲೇಖನಿಗೆ ಭಾರ್ಗವರಾಮನ ಉಗ್ರ ಪರಶುವಿನ ನಿಶಿತತೆ–ಪರವಶತೆಗಳನ್ನು ನೀಡಿದಂತಿವೆ:

ಧರೆಗಿಳಿದ ಸಾವಿಂಗೆ! ಭಾರ್ಗವನ ಸೇಡಿಂಗೆ!
ಹೆಡೆ ಮುರಿದ ಕ್ಷಾತ್ರಕಾಳೋರಗದ ಕೇಡಿಂಗೆ!
ವಿಪ್ಲವದ ವಿಜಯಕ್ಕೆ!
ಕ್ರಾಂತಿ ಹಿಡಿದೆಳೆತಂದ ಕಲ್ಯಾಣಕೂಟಕ್ಕೆ!
ಭಾರ್ಗವನ ಸಗ್ಗಕ್ಕೆ!
ದಬ್ಬಾಳಿಕಾವ್ಯಗ್ರರುಗ್ರಕ್ಕೆ!
ಕ್ಷಾತ್ರಹನನಕ್ಕೆ!

ಇಂತಹ ಕಿಡಿನುಡಿಗಳ ಗೊಂಚಲು 'ಗಂಡುಗೊಡಲಿ'.

'ದಬ್ಬಾಳಿಕಾವ್ಯಗ್ರರುಗ್ರಕ್ಕೆ' ಎಂಬಲ್ಲಿ ಅರಿಸಮಾಸದೋಷವಿದೆಯೆಂದು ಹಿರಿಯ ಹಿತೈಷಿಯೊಬ್ಬರು ರಾಜರತ್ನಂರನ್ನು ಆಕ್ಷೇಪಿಸಿದ್ದರಂತೆ! – ಆದರೂ ವೀರರಸಪ್ರಧಾನ ವಾದ ಈ ನಾಟಕದ ವಸ್ತುವಿಗೆ ಅಂತಹ ಪ್ರಯೋಗ ಅನುಚಿತವಾಗಿ ತೋರುವುದಿಲ್ಲ. – ಒಟ್ಟಿನಲ್ಲಿ, ಆರು ಸಣ್ಣ ದೃಶ್ಯಗಳ, ಕೇವಲ ಮೂವತ್ತೆರಡು ಪುಟಗಳ ಈ ಪುಟ್ಟ ನಾಟಕ ರಂಗಭೂಮಿಯಲ್ಲಿ ರಂಜಿಸುತ್ತದೆ, ಮನೋರಂಗದಲ್ಲಂತೂ ಪರಿಣಾಮ ರಮಣೀಯವೆನಿಸುತ್ತದೆ.

ನಾಯಕರತ್ನ:

ರಾಜರತ್ನಂ ಅವರು ೧೯೭೯ರ ಮಾರ್ಚ್ ೧೩ರಂದು ದೈವಾಧೀನರಾದಾಗ ಪಂಡಿತಶ್ರೇಷ್ಠ ಸೇಡಿಯಾಪು ಕೃಷ್ಣ ಭಟ್ಟರು ಇಂಗ್ಲಿಶಿನಲ್ಲಿರುವ Elegy(ಚರಮಗೀತ) ಯಂತಹ ಪದ್ಯಗಂಧಿಯಾದ ಒಂದು ಗದ್ಯಲೇಖನವನ್ನು ಬರೆದರು. ಅದರಲ್ಲಿ ಒಂದು ವಾಕ್ಯವೃಂದ ಹೀಗಿದೆ:

"..........ಈ ಶತಮಾನದಲ್ಲಿ ಕನ್ನಡ ಕವಿತಾಕಾಮಿನಿ ಕಟ್ಟಿದ ಪದ್ಯಗುಚ್ಛಗಳೊಳಗೆ ಮೂರು ಸರ್ವ ಜನಪ್ರಿಯ, ಸರ್ವಾಂಗಸುಂದರ, ಶಾಶ್ವತ. ಅವುಗಳಲ್ಲೊಂದು 'ರತ್ನನ ಪದಗಳು'."

ಸೇಡಿಯಾಪು ಹೇಳಿದ ಮೂರರಲ್ಲಿ ಮಿಕ್ಕೆರಡು ಯಾವುವು ಎಂಬುದು ಅಪ್ರಕೃತ ವಾದರೂ ಉಲ್ಲೇಖನೀಯ– ಅವೆಂದರೆ, ಡಿ. ವಿ. ಜಿ.ಯವರ 'ಮಂಕುತಿಮ್ಮನ ಕಗ್ಗ' ಮತ್ತು ಕೆ. ಎಸ್. ನರಸಿಂಹಸ್ವಾಮಿಯವರ 'ಮೈಸೂರು ಮಲ್ಲಿಗೆ'. ಕನ್ನಡದಲ್ಲಿ ಪ್ರಕಟವಾಗಿ, ಈವರೆಗೆ ಹಲವು ಸಲ ಪುನರ್ಮುದ್ರಣಗೊಂಡು ಬಹು ಸಂಖ್ಯೆಯಲ್ಲಿ ಮಾರಾಟವಾಗಿರುವ ಪದ್ಯಕಾವ್ಯಗಳಲ್ಲೂ ಮೂರಕ್ಕೂ ಸಮಾನತೆಯಿದೆ. ಕಾಲಾನುಕ್ರಮ ಣಿಕೆಯಲ್ಲಿ 'ರತ್ನನ ಪದಗಳು' ಈ ಎರಡಕ್ಕೂ ಹಿಂದಿನದು ಎಂಬುದು ಪ್ರತ್ಯೇಕ ವೈಶಿಷ್ಟ್ಯ. 'ರತ್ನನ ಪದಗಳು' ರಾಜರತ್ನಂ ಅವರ ಕೃತಿರತ್ನ; ಕನ್ನಡಶಾರದೆಯ ಒಂದು ಸುಂದರ ಕಂಠಾಭರಣ ಎಂಬುದು ಸರ್ವಜನಸಮ್ಮತ ಅಭಿಪ್ರಾಯ. 'ರತ್ನನ ಪದಗಳು' ಎಂಬ ಶೀರ್ಷಿಕೆಯಲ್ಲಿ ಆ ಕಾವ್ಯಗುಚ್ಛ ಮೊದಲ ಸಲ ಮುದ್ರಣವಾದದ್ದು ೧೯೩೪ರಲ್ಲಿ; ಕಳೆದ ಎಪ್ಪತ್ತು ವರ್ಷಗಳಲ್ಲಿ ಅದು ಹತ್ತು ಬಾರಿ ಪುನರ್ಮುದ್ರಣಗೊಂಡಿದೆ.

ರಾಜರತ್ನಂ ರತ್ನನ ಪದಗಳನ್ನು ಬರೆದದ್ದೂ ಪ್ರಕಟಿಸಿದ್ದೂ ಮತ್ತೊಂದು **ರೋಚಕ ಕಥೆ:**

೧೯೩೨ನೆಯ ಇಸವಿ– ಮೈಸೂರಲ್ಲಿ ವಾಸಿಸುತ್ತಿದ್ದ ರಾಜರತ್ನಂ ಒಂದು ರಾತ್ರಿ ಸಿನೆಮಾ ನೋಡಲು ಹೊರಟಿದ್ದರು. ದಾರಿ ಬದಿಯಲ್ಲೊಂದು ವಿದ್ಯುದ್ದೀಪದ ಕಂಬ. ಕಂಬದ ಕೆಳಗೆ, ವೃತ್ತಾಕಾರದ 'ಶೇಡ್'ನಿಂದಾಗಿ ಬೆಳಕು ವರ್ತುಲವಾಗಿ ಬಿದ್ದಿತ್ತು. ಒಬ್ಬ ಕುಡುಕ ಆ ದೀಪವರ್ತುಲದ ಅಂಚಿನಲ್ಲಿ ಸುತ್ತುತ್ತಾ ಇದ್ದ. ಹಾಗೆ ಸುತ್ತಿ ಸುತ್ತಿ ಕೊನೆಗೆ, "ಥೂ, ಮುಂಡೇದೆ, ಸುಂಕೆ ಗಿರ್ಕಿ ಒಡೀತೈತೆ" ಎಂದು ಉಗಿದು ಮತ್ತೆ ಹೆಂಡ ದಂಗಡಿಗೇ ಹೋದ. ಆ ದೃಶ್ಯವನ್ನೇ ತಲೆಯಲ್ಲಿ ತುಂಬಿಕೊಂಡ ರಾಜರತ್ನಂ ಸಿನೆಮಾಕ್ಕೆ ಹೋದರು, ಸಿನೆಮಾ ನೋಡಿ, ಮಧ್ಯರಾತ್ರಿ ಮನೆಗೆ ಹಿಂದಿರುಗುವಾಗಲೂ ಅದೇ

ದೃಶ್ಯ ಅವರ ತಲೆಯಲ್ಲಿ ತುಂಬಿತ್ತು. ಕುಡುಕನ ನಡತೆ ಅವರ ಮನಸ್ಸಿನಲ್ಲಿ ಬಗೆಬಗೆಯ ಭಾವಲಹರಿಗಳನ್ನು ಎಬ್ಬಿಸಿತು. ಅಂತಹದೊಂದು ಭಾವತರಂಗವೇ 'ಯೆಂಡದ್ ತೊಂದ್ರೆ' ಎಂಬ ಮೊತ್ತಮೊದಲ ಕವನವಾಗಿ ಎದ್ದುಬಂತು.

ಆ ಕವಿತೆ 'ಜಯಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದರ ವಿನೂತನ ಭಾವ, ವಿಶಿಷ್ಟ ಭಾಷೆ, ಸಮುಚಿತ ಬಂಧಗಳೆಲ್ಲವೂ ಓದುಗರಿಗೆ ಒಪ್ಪಿಗೆಯಾದುವು; 'ಅಂತಹವನ್ನು ಇನ್ನಷ್ಟು ಬರೆಯಿರಿ' ಎಂದು ರಾಜರತ್ನಂರನ್ನು ಒತ್ತಾಯಿಸಿದರು. ರಾಜರತ್ನಂ ಬೇರೊಂದು ಕಡೆ ಹೇಳಿದಂತೆ, "ಗಿಳಿಗೆ ಗೋಡಂಬಿ ಸಿಕ್ಕಹಾಗಾಯಿತು". ಮತ್ತಷ್ಟು ಬರೆಯಲು ಸಂಕಲ್ಪಿಸಿದರು. ಮೊದಲ ಕವಿತೆಯಲ್ಲಿ ಯಾವ ಭಾಷೆಯನ್ನು ಪ್ರಯೋಗಿಸಿದ್ದರೋ ಅದೇ ಭಾಷೆಯಲ್ಲಿ, ಅದೇ ರೀತಿಯಲ್ಲಿ, ಒಬ್ಬ ಹೆಂಡಕುಡುಕನನ್ನು ಸ್ಥಾಯೀಪಾತ್ರವಾಗಿ ಬಳಸಿ ಬರೆಯಲು ನಿರ್ಧರಿಸಿದರು. ಆದರೆ ಬೆಚ್ಚನೆಯ ಮನೆಯಲ್ಲಿ ಕುಳಿತು ಬರೆಯುವುದಲ್ಲ; ಹಾಗೆ ಬರೆದರೆ ಅದರಲ್ಲಿ ನೈಜತೆ ಇರುವುದಿಲ್ಲ. ಆದುದ ರಿಂದ, ಹೆಂಡಕುಡುಕನ ಪ್ರಪಂಚವನ್ನು ಹೊಗಬೇಕು, ಅಲ್ಲಿಯ ನೀತಿನೀತಿಗಳ ಪ್ರತ್ಯಕ್ಷಾ ನುಭವ ಹೊಂದಬೇಕು ಎಂದು ರಾಜರತ್ನಂ ಯೋಚಿಸಿದರು. ಆ ಕಾಲದ ಮೈಸೂರಿನ ರೈಲ್ವೇ ನಿಲ್ದಾಣ ಮತ್ತು ಹಿಮಾಲಯ ಥಿಯೇಟರುಗಳ ಒತ್ತಿನಲ್ಲೊಂದು ಹೆಂಡದ ಪಡಖಾನೆಯಿತ್ತಂತೆ. ಅಲ್ಲಿಗೂ ರಾಜರತ್ನಂ ವಾಸಿಸುತ್ತಿದ್ದ ಅವರ ಕೋಣೆಗೂ ಕೂಗಳತೆ ದೂರ. ಆ ಪಡಖಾನೆ "ಕಾವ್ಯ ಸುರಾಯೋಗಿಯ ತಪೋಭೂಮಿಯಾಗಿ ಪರಿಣಮಿ ಸಿತು". ರಾಜರತ್ನಂ ಅಲ್ಲಿಗೆ ಹೋಗುತ್ತ ಬರುತ್ತ, ಹೆಂಡ ಕುಡುಕನದೇ ವೇಷ–ಭಾಷೆ–ಚರ್ಯೆಗಳಿಂದ ಹೆಂಡಕುಡುಕರಲ್ಲಿ ಒಬ್ಬನಾಗಲು–ಪ್ರಯತ್ನಿಸಿದರು. ಪರಕಾಯಪ್ರವೇಶ ಮಾಡಿದರು ಎಂದರೂ ಸರಿಯೆ. ನಾಲ್ಕಾರು ತಿಂಗಳ ಸಾಧನೆ–ಸಾಹಚರ್ಯಗಳಿಂದಾಗಿ ಆ ಹೆಂಡದ ಹೊಂಡದ ಕೊಳಕಿನಿಂದ ಸುಂದರ ಸುಗಂಧಿತ ಪದಪದ್ಮಗಳು ಒಂದೊಂ ದಾಗಿ ಎದ್ದುಬರಲು ಪ್ರಾರಂಭಿಸಿದುವು. ಅರಳಿದ ಮೊದಲ ಹದಿನಾಲ್ಕು ಕವನಕುಸುಮ ಗಳನ್ನು ಪೋಣಿಸಿ ರಾಜರತ್ನಂ ಒಂದು ಮಾಲೆ ಕಟ್ಟಿದರು, ಅದಕ್ಕೆ 'ಯೆಂಡ್ಕುಡ್ಕ ರತ್ನ' ಎಂದು ಸರಳವಾದ ಹೆಸರಿಟ್ಟರು. ಪದ ಹಾಡುವವ ಯೆಂಡ್ಕುಡ್ಕ ರತ್ನನಾದರೆ ಆತ ಹಾಡಿದುದನೆಲ್ಲ ಬರೆದುಕೊಳ್ಳುವುದಕ್ಕೆ ಒಬ್ಬ 'ಬೇವಾರ್ಸಿ', ರತ್ನನಿಗೆ ಸ್ಫೂರ್ತಿಯಾಗಿ ಆತನ ಮನೆಮನ ತುಂಬಿರುವ ಒಲವಿನ ಮಡದಿ ನಂಜಿ, ಆ ಮೂವರೊಂದಿಗೆ ಹೆಂಡದಂಗಡಿಯ ಒಡೆಯನಾಗಿರುವ ಮುನಿಯ ಈ ಚೌಕಟ್ಟಿನಲ್ಲಿ ಹೆಂಡದ ಪ್ರಪಂಚ ಸೃಷ್ಟಿಯಾಯಿತು:

ನಂಗ್ ಎಸರು ಏಳ್ತಾರೆ ಜೇಪೀರಾಜ್ರತ್ನ
ನಾನ್ ಆಡೋ ಪದಗೋಳು ಯೆಂಡದ್ ಪ್ರಯತ್ನ

ಎಂದು ಮೊದಲ ನುಡಿಯನ್ನು ಆಡಿ,

ಮಾಬಾರ್ತ ಬರೆಯಾಕೆ ಯಾಸಂಗ್ ಇನಾಯ್ಕು
ಸಿಕ್ದಂಗೆ ನಂಗೊಬ್ಬ ಬೇವಾರ್ಸಿ ನಾಯ್ಕು

ಎಂದು ತನ್ನ ಕಾವ್ಯಕರ್ಮಕ್ಕೆ ವಿವರಣೆ ನೀಡಿ,

ಪದಗೋಳು ಚೆಂದಿದ್ರೆ ಯೆಂಡಕ್ ಸಿಪಾರ್ಸಿ!

ಚೆಂದಾಗ್ ಇಲ್ದಿದ್ರನಕ ತೆಪ್ಗೆ ಬೇವಾರ್ಸಿ

ಎಂದು ತನ್ನ ಹೊರೆ ಹೊಣೆಗಳನ್ನು ತಿಳಿಸಿ,

ಯಾರಾನ ಕೇಳ್ದೋರು ಪದಗೋಳು ಚೆಂದಂದ್ರೆ

ಮಸ್ತಾಗ್ ನಾನ್ ಆಡ್ತೀನಿ ನೀ ತಿರಗ ಬಂದ್ರೆ

ಎಂದು ಹಾರೈಸಿ, ಆ ಹದಿನಾಲ್ಕು ಹಾಡುಗಳ ಪುಟ್ಟ ಪುಸ್ತಿಕೆಯನ್ನು ರಾಜರತ್ನಂ ಅಚ್ಚು ಹಾಕಿಸಿದರು. ಹೊತ್ತಗೆಯೇನೋ ಕಿರಿಯದು. ಆದರೆ ಅದನ್ನು ಅಚ್ಚು ಹಾಕಿಸಿ ಹೊರತರಬೇಕಾದ ಹೊರೆ ಮಾತ್ರ ಹಿರಿಯದಾಯಿತು.

ರಾಜರತ್ನಂ 'ಯಂಡ್ಕುಡ್ಕನ ಪದಗಳ'ನ್ನು ಬರೆದದ್ದೇ ಒಂದು ಕತೆಯಾದರೆ ಅವುಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸಿದ್ದು ಮತ್ತೊಂದು ಸಾಹಸ. ಸ್ನಾತಕೋತ್ತರ ಪದವೀಧರನಾದರೂ ರಾಜರತ್ನಂ ನಿರುದ್ಯೋಗಿ. ಆಗಲೇ ಮದುವೆಯೂ ಆಗಿದೆ. ಪತ್ನಿ ಅನಾರೋಗ್ಯಪೀಡಿತೆ. ಕೈಯಲ್ಲಿ ಕಿಲುಬು ಕಾಸೂ ಇಲ್ಲ. ಆದರೂ ಆಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿ, ತಾನೇ ಅಲ್ಲಿ-ಇಲ್ಲಿ ಹಾಡಿ ಪ್ರಸಾರವೂ ಆಗಿ, ಜನಪ್ರಿಯವೆನಿಸಿದ್ದ ಯಂಡ್ಕುಡ್ಕನ ಪದಗಳನ್ನು ಪುಟ್ಟ ಪುಸ್ತಕವಾಗಿ ಪ್ರಕಟಿಸಲೇಬೇಕೆಂಬ ಚಪಲ ರಾಜರತ್ನಂ ಅವರಿಗೆ. ಅಚ್ಚಿನ ವೆಚ್ಚಕ್ಕೆ ದುಡ್ಡು ಎಲ್ಲಿಂದ? – ರಾಜರತ್ನಂ ವಿದ್ಯಾರ್ಥಿದಶೆಯಲ್ಲಿ ಬರೆದಿದ್ದ ಒಂದು ಕವನಕ್ಕೆ ಬಿ. ಎಂ. ಶ್ರೀ. ಸ್ವರ್ಣಪದಕ ಬಂದಿತ್ತು ತಾನೇ? ಆ ಪದಕವನ್ನು ಅವರು ತಮ್ಮ ಒಲವಿನ ಮಡದಿಯ ಕೊರಳಿಗೆ ಅಕ್ಕರೆಯಿಂದ ತೊಡಿಸಿದ್ದರು. ಆ ಪದಕವನ್ನೇ ಆಕೆಯಿಂದ ಕೇಳಿ ಪಡೆದು, ಅದನ್ನು ಮಾರಿ ಬರುವ ಹಣದಿಂದ ಪುಸ್ತಕವನ್ನು ಪ್ರಕಟಿಸಿದರೆ ಹೇಗೆ ಎಂದು ಯೋಚಿಸಿದ ರಾಜರತ್ನಂ ಮಡದಿ ಲಲಿತಮ್ಮನನ್ನು ಕೇಳಿಯೇಬಿಟ್ಟರು. ಆಕೆ ಪರಮ ಸಾಧ್ವಿ. – "ಇಂತಹ ಪದಕಗಳನ್ನು ಮಾಡಿಸಿಕೊಡುವುದಕ್ಕೆ ನೀವೇ ಇರುವಾಗ, ನಿಮ್ಮದನ್ನು ನಿಮಗೆ ಕೊಡೋದಕ್ಕೆ ನನಗೇನು ಕಷ್ಟ?" ಎಂದು "ನಿಸೂರಾಗಿ ಕೊಟ್ಟೇಬಿಟ್ಟ"ರಂತೆ! ಆದರೆ ಅದನ್ನು ಮಾರುವ ಪ್ರಸಂಗ ಬರಲಿಲ್ಲ. ರಾಜರತ್ನಂ ಅವರನ್ನು ತಿಳಿದಿದ್ದ ಶೆಟ್ಟರೊಬ್ಬರು ಅದನ್ನು ತಮ್ಮ ಬಳಿ ಒತ್ತೆಯಾಗಿ ಇರಿಸಿಕೊಂಡು ಕೊಟ್ಟ ಮೂವತ್ತೈದು ರೂಪಾಯಿಯಲ್ಲಿ ಪುಸ್ತಕ ಅಚ್ಚಾಯಿತು. ಪ್ರತಿಗಳನ್ನು ಮಾರಿ ಬಂದ ಹಣದಿಂದ ಅಚ್ಚಿನ ವೆಚ್ಚವನ್ನು ಪಾವತಿಸಿದ್ದಾಯಿತು. ಶೆಟ್ಟರ ಸಾಲವನ್ನು ಸಲಾಯಿಸಿದ್ದೂ ಆಯಿತು. ಆಮೇಲೂ ಉಳಿದಿದ್ದ ಇಪ್ಪತ್ತೈದು ರೂಪಾಯಿಯಿಂದ ಸ್ವಾಮೀ ವಿವೇಕಾನಂದರ ಭಾಷಣಗಳ ಏಳು ಸಂಪುಟಗಳನ್ನು ಕೊಂಡುಕೊಂಡರು! ಆ ಸಂದರ್ಭವನ್ನು ಸ್ಮರಿಸುತ್ತಾ, ರಾಜರತ್ನಂ, ತಮ್ಮ ಮಡದಿ ಚಿನ್ನದ ಪದಕವನ್ನು 'ಶುಭ ಗಳಿಗೆಯಲ್ಲಿ ಮಂಗಳದ ಮನಸ್ಸಿನಿಂದ ಕೊಟ್ಟದ್ದರಿಂದ', ಪುಸ್ತಕದ ಮುದ್ರಣ, ಮತ್ತೆ ವಿಸ್ತರಣ, ಆಮೇಲೆ ಪುನರ್ಮುದ್ರಣಗಳಾದುವು" ಎಂದು ಹೇಳಿ, "ಆಕೆ ಕಣ್ಮರೆಯಾಗಿ ಹೋದರೂ ಆ ಪುಸ್ತಕ ಇನ್ನೂ ಜೀವಂತವಾಗಿದೆ" ಎಂದು ಬರೆದಿದ್ದಾರೆ. ('ನಮ್ಮ ರಾಜರತ್ನಂ' – ಪುಟ: ೪೪)

'ಯೆಂಡ್ಕುಡ್ಕ ರತ್ನ' ಅಚ್ಚಾಗಿ ಹೊರ ಬರುವುದೇ ತಡ– ಅದನ್ನು ಜನ ಓದಿದರು. ಹಲವರು ಓದಿ ಮೆಚ್ಚಿದರೆ. ಇನ್ನೂ ಹಲವರು ಓದಿ ಪೆಚ್ಚಾದರು. ಪದ್ಯಗಳ ವಸ್ತು, ಭಾಷೆ, ಭಾವಗಳನ್ನು ಮೆಚ್ಚಿದವರು ಹಲವರಾದರೆ ಪದಚ್ಛೇದ ಮಾಡಲಾಗದೆ, ಅರ್ಥ ಗ್ರಹಣವೂ ಆಗದೆ ಪೆಚ್ಚಾದವರು ಮಿಕ್ಕವರು. ಪಡಖಾನೆಯ ಪರಿಸರವನ್ನು ಕಾವ್ಯ ವಲಯಕ್ಕೆ ತಂದು, ವಸ್ತುವಿಗೆ ಉಚಿತವಾದ ಭಾಷೆಯನ್ನು ತೊಡಿಸಿ, ಆ ಎರಡರಿಂದ ಆ ಮೊದಲು ಎಲ್ಲೂ ಅನುಭವಕ್ಕೆ ಬಾರದೆ ಇದ್ದ, ವಿಚಿತ್ರ ಹಾಗೂ ರಸಾರ್ದ್ರವಾದ ಭಾವಬಿಂಬಗಳನ್ನು ಓದುಗನ ಬಗೆಯಗಲದಲ್ಲಿ ಮೂಡಿಸುವುದರಲ್ಲಿ ರಾಜರತ್ನಂ ಸಮರ್ಥರೆನ್ನಿಸಿದರು. ಕನ್ನಡದಲ್ಲಿ ಆ ಮೊದಲು ಅಪರಿಚಿತವೇ ಆಗಿದ್ದ, ನವೀನತರ ಎನ್ನಬಹುದಾದ ಒಂದು ಕಾವ್ಯಕ್ಷೇತ್ರದಲ್ಲಿ ಅವರದು ಅತ್ಯಂತ ಸಫಲವಾದ ಕೃಷಿಕರ್ಮ ಎನ್ನಬಹುದು. ಆ ಕ್ಷೇತ್ರದಲ್ಲಿ ಅವರು ಇಂದಿಗೂ ಅದ್ವಿತೀಯರೆಂದೇ ಹೇಳಬಹುದಾಗಿದೆ.

ರಾಜರತ್ನಂ ಅವರ ಶ್ರೇಯಃಕಾಂಕ್ಷಿಗಳಾದ ಹಲವು ಹಿರಿಯರು ಆ ಪುಸ್ತಿಕೆಯನ್ನು ಓದಿ, ಸಂತೋಷಪಟ್ಟರು, ಮತ್ತೂ ಬರೆಯುವಂತೆ ಪ್ರೋತ್ಸಾಹಿಸಿದರು, ಯುಕ್ತ ಮಾರ್ಗದರ್ಶನ ಮಾಡಿದರು. ಕಾಲೇಜ್ ವಿದ್ಯಾರ್ಥಿಗಳೂ ರಾಜರತ್ನಂ ಸಮವಯಸ್ಕರೂ ಓದಿ, ಓದಿಸಿ ಕೇಳಿ ನಕ್ಕು ಕುಣಿದರು. ಅದೇ ವರ್ಷ, ಎಂದರೆ ೧೯೩೨ರಲ್ಲಿ, ಡಿ. ವಿ. ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, ರಾಜರತ್ನಂ ಭಾಗವಹಿಸಿದ್ದರು. ಆಗಿನ್ನೂ ಅವರು ಇಪ್ಪತ್ತನಾಲ್ಕರ ತರುಣ. ಮೊದಲಿಂದಲೂ ಅವರಲ್ಲಿ ಆಸಕ್ತಿ ಪ್ರೀತಿಗಳನ್ನು ಹೊಂದಿದ್ದ ಮಾಸ್ತಿಯವರೇ ತರುಣ ಕವಿಯನ್ನು ವೇದಿಕೆಗೆ ಏರಿಸಿ, ಹೆಂಡ್ಕುಡ್ಕನ ಪದಗಳನ್ನು ಓದಿಸಿ, ಕೇಳುಗರ ತಲೆದೂಗಿಸಿದರು; ಕವಿಯ ಕಿವಿಗಳಿಗೆ ಕೈಪರೆಯ ಕಚ್ಚಳಿಯನ್ನು ತೊಡಿಸಿದರು. ಅದೂ ಸಾಲದೆಂಬಂತೆ ಕಳಲೆ ಸಂಪತ್ಕುಮಾರಾಚಾರ್ಯರೆಂಬ ಪ್ರಸಿದ್ಧ ಗಮಕಿ ರಾಜರತ್ನಂರ ಕೆಲವು ಶಿಶುಗೀತಗಳನ್ನು ಇಂಪಾಗಿ ಹಾಡಿ ಜನರ ಮೆಚ್ಚುಗೆಗೆ ಹುರಿಗೂಡಿಸಿದರು. ಕಾವೇರಿ ನದೀಮಾತೆಗೆ ಬೆಡಗಿನ ಕೊಡಗೇ ಉದ್ಗಮಸ್ಥಾನವಾಗಿರುವಂತೆ ರಾಜರತ್ನಂ ಅವರ ಕಾವ್ಯಕಾವೇರಿಯೂ ಉಕ್ಕುಕ್ಕಿ ಹರಿಯುವುದಕ್ಕೆ ಕೊಡಗಿನ ಮಡಿಕೇರಿಯ ಆ ಸಮ್ಮೇಳನವೇ ಸುವಿಶಾಲ ಪಾತ್ರವಾಯಿತು. ಸಮ್ಮೇಳನ ಮುಗಿದರೂ ಯೆಂಡ್ಕುಡ್ಕನ ಹಾಡುಗಳು ಜನರ ನಾಲಗೆಯಲ್ಲಿ ನಲಿಯುತ್ತಲೇ ಇದ್ದುವು, ಪತ್ರಿಕೆಗಳಲ್ಲಿ ದೊಡ್ಡದಾದ ಕೊಂಡಾಟದ ವರದಿಗಳು ಬಂದುವು. ಮತ್ತೆ ರಾಜರತ್ನಂ ಹಿಂದಿರುಗಿ ನೋಡಲಿಲ್ಲ. ಪದ್ಯಗಳನ್ನು ಹೊಸೆಯುತ್ತ ಹೋದರು; ಪಟ್ಟಿ ಬೆಳೆಯಿತು.

ಹೀಗೆ ರಾಜರತ್ನಂ ಕಲ್ಪಿಸಿದ 'ಯೆಂಡ್ಕುಡ್ಕ' ತನ್ನ ಕರ್ತಾರನ ಹೆಸರನ್ನು ನಾಡಿನ ಹತ್ತು ಕಡೆಗಳಲ್ಲೂ ಹರಡಿ ಓದು ಕಲಿತ ಹರೆಯದವರೊಂದಿಗೆ ಓದಿ ಕಲಿಯುತ್ತಿರುವ ಎಳೆಯರ ಎದೆಯನ್ನೂ ಹೇಗೆ ತಟ್ಟಿದನೆಂಬುದು ಕಳೆದ ಶತಮಾನದ ನವಕಾವ್ಯ ಪ್ರಪಂಚದ ಆಶ್ಚರ್ಯಗಳಲ್ಲಿ ಒಂದು. ಅದನ್ನು ಸಮರ್ಥಿಸುವ ಒಂದು ಘಟನೆಯನ್ನು ಸ್ವತಃ ರಾಜರತ್ನಂ ಅವರೇ ನಿರೂಪಿಸಿದ್ದಾರೆ:

ಒಮ್ಮೆ ರಾಜರತ್ನಂ ಯಾವುದೋ ಕಾರ್ಯಾರ್ಥ ಮೈಸೂರಿಂದ ಬೆಂಗಳೂರಿಗೆ ರೈಲಿನಲ್ಲಿ ಹೊರಟಿದ್ದರು. ಅವರು ರೈಲಿನ ಒಂದು ಡಬ್ಬಿಯಲ್ಲಿ ಎಂಜಿನ್ನಿಗೆ ಬೆನ್ನು ಹಾಕಿ (ಕಣ್ಣಿಗೆ ಇದ್ದಲು ಪುಡಿ ಬೀಳಬಾರದಲ್ಲ!) ಕೂತು, ಯಾವುದೋ ಪುಸ್ತಕ ಓದುತ್ತಿದ್ದರು. ಇನ್ನೇನು ಉಗಿಬಂಡಿ ಸಿಳ್ಳು ಹಾಕಿ ಹೊರಡುವ ಹೊತ್ತಿಗೆ ಸರಿಯಾಗಿ 'ಒಂದು ಹಿಂಡು ಸ್ಕೌಟುಗಳ ಪಟಾಲಂ ದಡದಡ ಬೂಟ್ಸು ಸದ್ದು, ಕೂಗು ಕಿರಿಚುಗಳೊಂದಿಗೆ' ಅದೇ ಡಬ್ಬಿಗೆ ನುಗ್ಗಿತು. ಒಂದಿಬ್ಬರು ರಾಜರತ್ನಂ ಹತ್ತಿರ ಬಂದು, 'ಇಳೀರಿ, ಇದು ನಮಗೆ ರಿಸರ್ವಾಗಿದೆ' ಎಂದು ಅಬ್ಬರಿಸಿದರು. ರಾಜರತ್ನಂ ಇಳಿಯಲಿಲ್ಲ. 'ನಾನು ಹತ್ತುವ ಹೊತ್ತಿಗೆ ರಿಸರ್ವ್ ಆಗಿರಲಿಲ್ಲ. ನಾನು ಸರಿಯಾಗಿ ನೋಡಿಯೇ ಹತ್ತಿದ್ದೇನೆ' ಎಂದರು. ಮಾತಿಗೆ ಮಾತು ಬೆಳೆಯಿತು; ರಾಜರತ್ನಂ ಜಪ್ಪೆನ್ನಲಿಲ್ಲ. ಸ್ಟೇಶನ್ ಮಾಸ್ಟರಿಗೆ ದೂರು ಹೋಯಿತು. ಅಷ್ಟು ಹೊತ್ತಿಗೆ ಗಾರ್ಡ್ ಸೀಟಿಯೂದಿದ. ರೈಲು ಹೊರಟಿತು. ಸ್ಕೌಟು ಗಳು ಸಿಟ್ಟಿನಿಂದ ಹಲ್ಲುಕಚ್ಚಿಕೊಂಡರು; ಅವರಿಗೆ ಒತ್ತಿಕೊಂಡು ಕೂತರು. ಅವರ ಹೊಟ್ಟೆಯಲ್ಲಿದ್ದ ಸಿಟ್ಟು ರಟ್ಟೆಗೆ ಇಳಿಯಲಿಲ್ಲ; ಏಕೆಂದರೆ ರಾಜರತ್ನಂ ಗುಂಡಗೆ ಕಟ್ಟುಮಸ್ತಾಗಿದ್ದ ಆಳು. ಅವರನ್ನು ಮುಟ್ಟುವುದೂ ಆಚೆ ತಳ್ಳುವುದೂ ಕಷ್ಟ. ಹಾಗೂ ಹೀಗೂ ರೈಲು ಮದ್ದೂರು ಮುಟ್ಟಿತು. ಮದ್ದೂರು ಎಂದಾಗ ಅಲ್ಲಿಯ ವಡೆ ತಿನ್ನದೇ ಇರುವುದುಂಟೇ? ರಾಜರತ್ನಂ ಸಹ, "ಏನಾದರೂ ಆಗಲಿ, ನೋಡೋಣ" ಎಂದು ತಾವು ಕುಳಿತಿದ್ದಲ್ಲಿ, ಓದುತ್ತಿದ್ದ ಪುಸ್ತಕವನ್ನು ಹಾಗೆಯೇ ಇರಿಸಿ ರೈಲಿಂದ ಇಳಿದುಹೋಗಿ ತಿಂಡಿ ತಿಂದು ಕೈಬಾಯಿ ಒರಸಿಕೊಂಡರು; 'ಈಗ ಚೋಟಾರಿಗಳು ಏನಾದರೂ ಕೀಟಲೆ ಮಾಡಿಯೇ ಇರುತ್ತಾರೆ' ಎಂದು ಮನಸ್ಸಿನಲ್ಲೇ ಹೇಳಿಕೊಂಡರು; ಆದರೆ ಅದನ್ನು ಹೊರಗೆ ತೋರಗೊಡದೆ ನಿಧಾನವಾಗಿಯೇ ಡಬ್ಬಿಯೇರಿದರು. ಒಳಗೆ ಬಂದು ನೋಡುತ್ತಾರೆ– ಕೀಟಲೆಯ ಮಾತಿರಲಿ, ರಾಜರತ್ನಂ ಕೂತಿದ್ದ ಇಡಿಯ ಸೀಟೇ ಖಾಲಿ! ಅವರಿಗೆ ಒತ್ತಿ ಕೂತಿದ್ದ ಸ್ಕೌಟುಗಳೆಲ್ಲ ದೂರ ದೂರ ಮುದುರಿ ಕೂತಿವೆ! 'ಇದು ಕುಚೇಷ್ಟೆಯ ಲಕ್ಷಣ' ಎಂದುಕೊಂಡ ರಾಜರತ್ನಂ, ತಮ್ಮ ಜಾಗದಲ್ಲಿ ಗಂಭೀರ ವಾಗಿ ಕೂತರು. ಗುಂಡುಸೂಜಿ ಚುಚ್ಚಲಿಲ್ಲ, ಪಟಾಕಿ ಸಿಡಿಯಲಿಲ್ಲ! ರೈಲು ಹೊರಟಿತು. ಸ್ವಲ್ಪ ಹೊತ್ತಿನಲ್ಲಿ ಒಬ್ಬ ಸ್ಕೌಟು ಹತ್ತಿರ ಬಂದ; ತುಂಬ ವಿನಯದಿಂದ, "ಸರ್, ನೀವು ರಾಜರತ್ನಮ್ಮಾ? 'ಯೆಂಡ್ಕುಡ್ಕರತ್ನ' ಬರೆದೋರಾ?" ಎಂದು ಕೇಳಿದ. ರಾಜರತ್ನಂ ನಟನೆಯಲ್ಲಿ ಪರಿಣತ; 'Yes' ಎಂದರು; 'ನಿನಗೆ ಹೇಗೆ ತಿಳಿಯಿತು?' ಎಂದು ಕೇಳಿದರು. 'ನೀವಿಲ್ಲದ ಹೊತ್ತಲ್ಲಿ ಆ ಪುಸ್ತಕ ತೆಗೆದು ನೋಡಿದಿವಿ, ನಿಮ್ಮ ಹೆಸರು ಕಂಡಿವಿ' ಎಂದ ಸ್ಕೌಟು, 'ಗೊತ್ತಿರಲಿಲ್ಲ ಸರ್, ವಿ ಆರ್ ಸೋರ್‍ರಿ' ಎಂದು ಕ್ಷಮೆ ಕೋರಿದ. ರಾಜರತ್ನಂ 'ಇಟ್ಸ್ ಆಲ್ ರೈಟ್. ಫಾರ್‌ಗೆಟ್ ಇಟ್' ಎಂದರು. ಸ್ಕೌಟುಗಳ ಮುಖಮಂಡಲದಲ್ಲಿದ್ದ ಕರಿಮೋಡ ಕರಗಿತು; ನಗೆಯ ಬೆಳುದಿಂಗಳು ಹೊಮ್ಮಿತು!

* * *

'ಯೆಂಡ್ಕುಡ್ಕ ರತ್ನ'ನದರಲ್ಲಿ ಮೊದಲನೆಯದಾದ 'ಯೆಂಡತ್ತೊಂದ್ರೆ'ಯನ್ನು ಬರೆದಾಗ, ಅದು ಬೆಳೆದು ಒಂದು ಸಂಕಲನವಾಗುವುದೆಂದು ರಾಜರತ್ನಂ ಎಣಿಸಿರ

ಲಿಲ್ಲವಂತೆ. ಆದರೆ 'ತಾನೊಂದು ಬಗೆದರೆ ದೈವ ತಾ ಬೇರೊಂದು ಬಗೆಯಿತು' – ದೈವ ಒಳ್ಳೆಯದನ್ನೇ ಬಗೆಯಿತು, ಬರೆಯಿಸಿತು. ಕಾಲಕ್ರಮೇಣ ಹದಿನಾಲ್ಕು ಪದಗಳ 'ಯೆಂಡ್ಕುಡ್ಕ ರತ್ನ' ಅದರ ಹಿಂದೆ – ಮುಂದೆ ಐದುಪಟ್ಟು ದೊಡ್ಡದಾಗಿ ಎಪ್ಪತ್ತೇಳು ಪದಗಳ ಸಂಚಯವಾಯಿತು. ೧೯೩೪ರಲ್ಲಿ ವಸ್ತುವೈವಿಧ್ಯದಿಂದ ರಸಸ್ಯಂದಿಯಾಗಿ, ಪರಿಪುಷ್ಟವಾದ 'ರತ್ನನ ಪದಗಳು' ಪ್ರಕಟವಾಯಿತು. ಕೇವಲ ಹದಿನಾಲ್ಕೇ ಪದಗಳ ಯಾವ 'ಯೆಂಡ್ಕುಡ್ಕ ರತ್ನ'ನನ್ನು ಕನ್ನಡಿಗರ ಮುಂದೆ ತಂದು ನಿಲ್ಲಿಸಬೇಕಾದರೆ ರಾಜರತ್ನಂ ತಮಗೆ ಬಹುಮಾನವಾಗಿ ಬಂದಿದ್ದ ಚಿನ್ನದ ಪದಕವನ್ನೂ ಒತ್ತೆಯಿಡ ಬೇಕಾಯಿತೋ, ಅದೇ 'ರತ್ನ' ಮುಂದೆ, 'ಮುಪ್ಪಿನಲ್ಲಿ ತಂದೆಗೆ ಸಂಪಾದಿಸಿ ತಂದು ಹಾಕುವ ಮಗನಂತೆ' ಅವರಿಗೆ ಆಸರೆಯಾದನೆಂಬುದೂ 'ರತ್ನನ ಪದಗಳು' ಕನ್ನಡದ ಚಿರಂತನ ಕೃತಿಗಳಲ್ಲಿ ಒಂದೆನಿಸಿ ತನ್ನ ಕರ್ತೃವಿನ ಹೆಸರನ್ನು ಚಿರಸ್ಥಾಯಿಗೊಳಿಸಿ ತೆಂಬುದೂ ಕನ್ನಡನಾಡಿನ, ನಾಡು–ನುಡಿಯ 'ಕುತುಕ'ಗಳಲ್ಲಿ ಒಂದಾಗಿದೆ.

'ಯೆಂಡ್ಕುಡ್ಕ ರತ್ನ'ದಲ್ಲಿರುವ 'ಯೆಂಡತ್ತೊಂದ್ರೆ'ಗೆ ಹೇಗೋ ಹಾಗೆಯೇ ಅದರಲ್ಲಿರುವ ಮಿಕ್ಕ ಹದಿಮೂರು ಪದ್ಯಗಳಿಗೂ, ಆ ಮೇಲಿನ 'ರತ್ನನ ಪದಗಳ'ಲ್ಲಿರುವ ಅರುವತ್ತಮೂರು ಪದಗಳಲ್ಲಿ ಒಂದೊಂದಕ್ಕೂ ಹುಟ್ಟಿನ ಒಂದೊಂದು ಹಿನ್ನೆಲೆಯಿದೆ. ರಾಜರತ್ನಂ ತಮ್ಮ ಮನೆಯ (ಗಟ್ಟಿನೆಲೆ ಎಂದಾದದ್ದು ಎಷ್ಟೋ ವರ್ಷಗಳ ಅನಂತರ) ಶೀತಲಕಕ್ಷೆಯಲ್ಲಿ, ಮೃದುತಲ್ಪದಲ್ಲಿ ಕುಳಿತು, ರತ್ನದೀಪದ ಮಂದ ಪ್ರಕಾಶದಲ್ಲಿ ಕವಿತೆಗಳನ್ನು ಹೊಸೆದವರಲ್ಲ. ಒಂದೊಂದು ಕವಿತೆಯೂ ಸಂದರ್ಭ ಪ್ರೇರಿತವಾದದ್ದು. ಒಂದೊಂದರಲ್ಲೂ ಜೀವನಾನುಭವ ಘನೀಕರಿಸಿದೆ. ಕೆಲವು ಪದ್ಯಗಳ ತಲೆಬರೆಹವನ್ನು ನೋಡಿದರೇ ಸಾಕು– ಅವುಗಳ ಹೂರಣ ಏನೆಂಬುದು ತಿಳಿಯುತ್ತದೆ; ಓದಿದ ಮೇಲೆ ಮತ್ತೂ ತಿಳಿಯಾಗುತ್ತದೆ. ರತ್ನನ ಪದಗಳಲ್ಲಿ ಭಾಷಾಸ್ವರೂಪಕ್ಕೆ, ಭಾವಸೌಂದರ್ಯಕ್ಕೆ, ಛಂದೋವಿಲಾಸಕ್ಕೆ ಎಷ್ಟನ್ನೋ ಉದಾಹರಿಸಬಹುದು. ಭಾಷೆ ಗ್ರಾಮ್ಯವಾಗಿದ್ದರೂ ಅಥವಾ ರಾಜರತ್ನಂ ಹೇಳುವಂತೆ, 'ಬಡವನ ಬಾಸೆ'ಯಾಗಿದ್ದರೂ ಉತ್ತಮ ಕವಿತ್ವದ ಗುಣಲಕ್ಷಣಗಳಿಗೆ ಇಲ್ಲಿಯ ಪದ್ಯಗಳು ಸಮುಚಿತ ಲಕ್ಷ್ಯವಾಗುತ್ತವೆ. ಸತ್ಕಾವ್ಯದ ಮೌಲ್ಯಮಾಪನಕ್ಕೆ ಎಲ್ಲಕ್ಕಿಂತ ಮಿಗಿಲಾದ ಮಾನದಂಡಗಳೆಂದರೆ ವಾಚಕನ ರಸನೇಂದ್ರಿಯ ಮತ್ತು ಅವನ ಸಹೃದಯ. ಯಾವುದೊಂದು ಕಾವ್ಯವನ್ನು ಓದುಗ ಓದಿ ಚಪ್ಪರಿಸುತ್ತಾನೋ, ತನ್ನೆದೆಯಚ್ಚಿನಲ್ಲಿ ಅದರ ಸಾರವನ್ನು ಎರಕಹೊಯ್ಯುತ್ತಾನೋ ಅದೇ ನಿಜವಾದ ಸತ್ಕೃತಿ. ಅದರ ತೂಕಕ್ಕೆ, ಬಣ್ಣಕ್ಕೆ ಬೇರೆ ತಕ್ಕಡಿ, ಒರೆಗಲ್ಲು ಬೇಕಿಲ್ಲ.

'ರತ್ನನ ಪದಗಳ' ರಚನೆಗೆ ಪ್ರೇರಣೆ ಯಾವುದು ಎಂಬುದನ್ನು ರಾಜರತ್ನಂ ಅವರೇ ಸೂಚಿಸಿದ್ದಾರೆ ತಾನೇ. ಜನ್ಮತಃ ವೈಷ್ಣವ, ವೃತ್ತಿಯಲ್ಲಿ ಉಪಾಧ್ಯಾಯ– ಇಂತಹ ರಾಜರತ್ನಂ ಗ್ರಾಮ್ಯಭಾಷೆಯಲ್ಲಿ, ಅದರಲ್ಲೂ ಪಡಖಾನೆ ಪದ್ಯಗಳನ್ನು ಬರೆಯುವುದೇ ಎಂದು ಅವರ ಹಿತವಂದಿಗರಲ್ಲಿ ಹಲವರಿಗೆ ಅಸಮಾಧಾನ; ಕೆಲವರಿಗೆ ಕೋಪ. ಅಂತಹವರು ರತ್ನರ ತಂದೆಯ ಮುಂದೆ ದೂರು ಹೇಳಿದರು; ತಂದೆಮಗನನ್ನು ಕರೆದು ಬುದ್ಧಿಮಾತು ಆಡಿದರು. ಆದರೆ ರಾಜರತ್ನಂ ಪಟ್ಟು ಸಡಿಲಿಸಲಿಲ್ಲ, ದಾರಿ

ಬಿಡಲಿಲ್ಲ. ಸಿಟ್ಟುಗೊಂಡವರು ಕ್ರಮೇಣ ತಣ್ಣಗಾದರು. ಕೆಲವರು ಈ ಪದಗಳಲ್ಲಿ ಏನೋ ಇದೆ ಎಂದುಕೊಂಡರು, ಮತ್ತೊಮ್ಮೆ ಕಣ್ತೆರೆದು ತಿಳಿಮನಸ್ಸಿನಿಂದ ಓದಿದರು. ಸ್ವಲ್ಪಸ್ವಲ್ಪ ಅರ್ಥವಾಯಿತು, ಅಥವಾ ಅರ್ಥವಾದಂತೆ ತೋರಿತು. ನಾಲಗೆಗೆ ರುಚಿ ಹತ್ತಿತು, ತುಟಿ ಚಪ್ಪರಿಸಿದರು: "ಏಲಾ! ರಸ ರಸವಾಗಿದೆಯಲ್ಲಾ" ಎಂದರು, "ಇಂಥದ್ದನ್ನು ಬರೆಯಬೇಡ, ಒಳ್ಳೆಯದಲ್ಲ" ಎಂದವರೇ ರತ್ನರ ಬೆನ್ನುತಟ್ಟಿದರು! 'ಇನ್ನಷ್ಟು ಬರೆ' ಎಂದು ಹುರಿದುಂಬಿಸಿದರು!

ರತ್ನನ ಪದಗಳಲ್ಲಿ ಮೊದಮೊದಲು ಅಲ್ಲಿ ಇಲ್ಲಿ ರತ್ನನ 'ಯೆಡ್ತಿ'ಯ 'ಸುದ್ದಿ ಸುಳಿದಾಡಿತ್ತು'. ಆದರೆ ಆ ಸರ್ವನಾಮ ಇನ್ನೂ ನಂಜಿ–ಪುಟ್ನಂಜಿಯೆಂಬ ನಾಮ ವಾಚಕವಾಗಿರಲಿಲ್ಲ. ರತ್ನರ ಮನೆಯೊಡತಿಗೆ ಗಂಡ ಹೆಂಡದ ಪದಗಳನ್ನು ಬರೆಯುವು ದಾಗಲೀ, 'ಯೆಡ್ತಿ'ಯನ್ನು ಅವುಗಳ ಒಳಗೆ ತರುವುದಾಗಲೀ ಒಪ್ಪಿಗೆಯಾಗಿರಲಿಲ್ಲ, ಆದರೆ ಅಡ್ಡಿ ಮಾಡಲೂ ಇಲ್ಲ. ನಿಜಜೀವನದಲ್ಲಿ ರಾಜರತ್ನಂ ಪತ್ನಿ –ಲಲಿತಮ್ಮ– ಅನಾರೋಗ್ಯ ಪೀಡಿತೆಯಾಗಿ, ಮನೆಗಿಂತ ಆಸ್ಪತ್ರೆಯಲ್ಲಿ ಇರುವುದೇ ಹೆಚ್ಚಾಗಿತ್ತು. ಹಾಗೆ ಒಮ್ಮೆ ಆಸ್ಪತ್ರೆಯಲ್ಲಿ ಮಲಗಿದ್ದಾಗ "ಯೆಂಡ ವೋಗ್ಲಿ, ಯೆಡ್ತಿ ವೋಗ್ಲಿ, ಎಲ್ಲಾ ಕೊಚ್ಕೊಂಡು ವೋಗ್ಲಿ" ಎಂದು ತಮ್ಮ ಗಂಡ ಹಾಡಿದ್ದು ಅವರ ಕಿವಿಗೂ ಬಿತ್ತು. ಆಗ ಆ ಸಾಧ್ವಿ ಬಹುಕಾಲ ಮುಚ್ಚಿದ್ದ ಬಾಯಿ ತೆರೆದರು, ನೋವಿನಿಂದ ಕೊಂಚ ಬಿರು ಮಾತಾಡಿದರು. ರತ್ನರಿಗೆ ಹೆಣ್ಣಿನ ಮನಸ್ಸು ಅರ್ಥವಾಯಿತು. ಆಕೆಯ ಮನಸ್ಸನ್ನು ತಿಳಿಗೊಳಿಸಿ, ನಲಿಸಲೆಂದೇ, 'ಪುಟ್ನಂಜಿ ರೂಪ', 'ನಿಂಗ್ ನೆಪ್ಪೈತ ನಂಜಿ', 'ರತ್ನನ್ ಪರ್ಪಂಚ' ಮೊದಲಾದ, ಒಂದಕ್ಕಿಂತ ಒಂದು ಮಿಗಿಲು ಎನ್ನಬಹುದಾದ ಪದಗಳನ್ನು ಬರೆದರು. ಬರಿಯ 'ಯೆಡ್ತಿ' ಎಂದಿದ್ದವಳನ್ನು 'ನಂಜಿ'ಯೆಂದು ಕರೆದರು; ಸಂದರ್ಭ ನೋಡಿ ಪದಗಳನ್ನು ಆಕೆಗೆ ಓದಿ ಹೇಳಿದರು. ಮಡದಿಯ ಮೊಗದ ಮೇಲಿನ ಮುಸುಕು ಮರೆಯಾಯಿತು, ಗೆಲುವು ಮೂಡಿತು, ತುಟಿಯಂಚಿನಲ್ಲಿ ನಗೆಮಲ್ಲಿಗೆ ಅರಳಿತು!

ರತ್ನನ ಪದಗಳಲ್ಲಿ ಐದು ವಿಭಾಗಗಳಿದ್ದು ಈ ವಿಭಾಗಪಂಚಕದಲ್ಲಿ ಮೊದಲನೆ ಯದಾದ 'ರತ್ನನ ಮೊಕಾಬಿಲೆ'(ಪರಿಚಯ)ಯಲ್ಲಿ ರತ್ನನ ಕಾವ್ಯೋದ್ದೇಶ, ಆತನ ಕನ್ನಡಪ್ರೇಮ, ಜೀವನದರ್ಶನಗಳನ್ನು ಬಿಂಬಿಸುವ ಆರು ಪದ್ಯಗಳಿವೆ. ಎರಡನೆಯ ದಾದ 'ಬುರಡೇ ಬಕ್ತ ರತ್ನ'ದಲ್ಲಿರುವ ಹನ್ನೆರಡು ಪದ್ಯಗಳು ರತ್ನ ಒಟ್ಟು ಬದುಕನ್ನು ಕಾಣುವ ಬಗೆ, ಅದರ ಹಾಸುಹೊಕ್ಕುಗಳಿಗೆ ಅವನು ಬಳಿಯುವ ಬಣ್ಣ ಮತ್ತು ಕಟ್ಟುವ ಬೆಲೆಗಳನ್ನು ಹೇಳುತ್ತವೆ. ಮೂರನೆಯ 'ಮುನಿಯನ್ ಗಿರಾಕಿ ರತ್ನ' ಎಂಬ ಭಾಗದಲ್ಲಿ ಹದಿನೆಂಟು ಕವಿತೆಗಳಿವೆ. ಅವು ಗಿರಾಕಿ ರತ್ನ ಮತ್ತು ಪಡಖಾನೆಯ ಮುನಿಯರ ನಡುವಣ ಕೊಳ್ಕೊಡೆಗಳ ರೀತಿನೀತಿಗಳನ್ನು ತಿಳಿಸುತ್ತವೆ. ನಾಲ್ಕನೆಯ 'ಪುಟ್ನಂಜಿ ರತ್ನ'ದ ಹದಿನಾರು ರಚನೆಗಳಲ್ಲಿ ರತ್ನ ಮತ್ತು ಮಡದಿ ನಂಜಿಯವರ ಒಡಬಾಳಿನ ನುಡಿಚಿತ್ತಾರಗಳನ್ನು ಕಾಣಬಹುದು. ಕೊನೆಯದು ಸಂಕೀರ್ಣಸ್ವರೂಪದ 'ರುಸ್ತುಂ ರತ್ನ' – ಅದರಲ್ಲಿ ಇಪ್ಪತ್ತೈದು ಪದ್ಯಗಳು. ಈ ವಿಭಾಗಗಳ ಕೊನೆಯಲ್ಲಿ ವಾಚಕಸಾಮಾನ್ಯ

ನಿಗೆ ಪದ್ಯಪಠನವಾಗಲೀ, ಅವುಗಳ ಅರ್ಥಗ್ರಹಣವಾಗಲೀ ಕಷ್ಟ-ಕ್ಲಿಷ್ಟ ಆಗಬಾರದೆಂಬ ಉದ್ದೇಶದಿಂದ ರಾಜರತ್ನಂ 'ರತ್ನನ ಕನ್ನಡಕ್ಕೆ ಕನ್ನಡಿ' ಎಂಬ ವಿಸ್ತಾರವಾದ ಟಿಪ್ಪಣಿಯನ್ನೂ 'ಬಾಲಂಗೋಚಿ'ಯೆಂಬ ವಿಶಿಷ್ಟ ಸಂದರ್ಭಸೂಚಿಯನ್ನೂ ಆ ಎರಡೂ ಅಲ್ಲದೆ ಒಂದು ಎರಡು ಎಂಬುದಾಗಿ ಪದಗಳ ಪ್ರತ್ಯೇಕ ಅನುಕ್ರಮಣಿಕೆಯನ್ನೂ ಪ್ರತ್ಯೇಕ ಪದಗಳ ಪ್ರಥಮಪಂಕ್ತಿಗಳ 'ಅ ಆ ಇ ಈ' ಪಟ್ಟಿಯನ್ನೂ ಕೊಟ್ಟಿದ್ದಾರೆ.

ಹದಿನಾಲ್ಕು ಪದ್ಯಗಳ 'ಯೆಂಡ್ಕುಡ್ಕ ರತ್ನ' ಬೆಳೆಯುತ್ತ ಹೋಗಿ ಎಪ್ಪತ್ತೇಳಕ್ಕೆ ಏರಿ 'ರತ್ನನ ಪದಗಳೆ'ಂಬ ನೂತನ ಶೀರ್ಷಿಕೆಯಲ್ಲಿ ಅವೆಲ್ಲವೂ ಒಂದು ತೋರದಂಡೆಯಾದಾಗ ರಾಜರತ್ನಂ ಬಹುಮಟ್ಟಿಗೆ ವಿಷಯಾನುಗುಣವಾಗಿ ವಿಭಾಗಕ್ರಮವನ್ನು ಅನುಸರಿಸಿದರು. 'ರತ್ನನ ಪದಗಳ' ಮೊದಲ ವಿಭಾಗ 'ರತ್ನನ ಮೊಕಾಬಿಲೆ'. ಅದರಲ್ಲಿ ಇರುವ ಮೊದಲ ಕವಿತೆ 'ಯೆಂಡ್ಕುಡ್ಕ ರತ್ನ'ದಲ್ಲೂ ಇದ್ದದ್ದೇ- 'ಮೊಟ್ಮೊದಲು'. ಅದರ ಮುಂದಿನ ಪದ್ಯ 'ಕುಡಕರ್ ಮಾತ್ತು'. ಅದರಲ್ಲಿ ರತ್ನ ಮಾತು ಕುಡುಕನದ್ದಾದರೂ, ಅದನ್ನು 'ಒಕ್ ನೋಡಿದ್ರೆ ಮಸ್ತಾಗ್ ಅವೆ ಗುಟ್ಟು' ಎಂಬುದನ್ನು ತಿಳಿಸಿ, ಓದಿ ಅರಿಯಬೇಕೆಂಬ ಆಸೆಯನ್ನು ಕೆರಳಿಸಿ, ತಾನಾಡುವ ಮಾತಿನ ಮರ್ಮವನ್ನು ಕೊಂಚ ಸೂಚಿಸಿ, ಮತ್ತೆ ಓದುಗನಿಗೆ ತನ್ನ 'ಪ್ರಪಂಚ' ಯಾವುದೆಂಬುದನ್ನು ತೆರೆದು ತೋರಿಸುತ್ತಾನೆ. ಯಾವುದು ಆ ಪ್ರಪಂಚ? ಮನಸ್ಸು ಶ್ರೀಮಂತವಾದಾಗ ಬಡತನವೇ ಧನವಾಗಬಲ್ಲುದು ಎಂಬುದನ್ನು 'ರತ್ನನ್ ಪರ್ಪಂಚ' ಕಾಣಿಸುತ್ತದೆ:

ಯೋಳ್ಕೊಳ್ಳಾಕ್ ಒಂದ್ ಊರು
ತಲೇ ಮ್ಯಾಗ್ ಒಂದ್ ಸೂರು
ಮಲಗಾಕೆ ಬೂಮ್ತಾಯಿ ಮಂಚ;
ಕೈಯಿಡದೋಳ್ ಪುಟ್ನಂಜಿ
ನೆಗನೆಗೆತ ಉಪ್ಗಂಜಿ
ಕೊಟ್ರಾಯ್ತು ರತ್ನನ್ ಪರ್ಪಂಚ!

ಪಂಚಭೂತಾತ್ಮಕವಾದದ್ದೇ ಪ್ರಪಂಚ. ಅದು ಷಟ್ಖಂಡಸಹಿತವಾದದ್ದೂ ಹೌದು. 'ರತ್ನನ್ ಪ್ರಪಂಚ'ದಲ್ಲಿ ಆರು ಪದ್ಯಗಳಿದ್ದು ಅವು ರತ್ನನ ಷಟ್ಖಂಡಗಳನ್ನು ಸೂಚಿಸುತ್ತವೆ. ಆ ಕವಿತೆ ರಾಜರತ್ನಂ ಅವರ ಜೀವನದರ್ಶನವೂ ಆಗುತ್ತದೆ. ಅವರೇ 'ನನ್ನ ಜೀವನದರ್ಶನ'ವೆಂಬ ಲೇಖನದಲ್ಲಿ ಅದನ್ನು ಪ್ರಸ್ತಾವಿಸಿದ್ದಾರೆ. ('ನಮ್ಮ ರಾಜರತ್ನಂ' – ಪುಟ ೨೬)

ರತ್ನನ ಭಾವಪ್ರಪಂಚದಲ್ಲಿ ಎಲ್ಲದಕ್ಕಿಂತ ಎತ್ತರದಲ್ಲಿ ನಿಂತು ಹತ್ತು ಕಡೆಗೂ ಬೆಳಕು ಬೀರುವ ಒಂದು ದೀಪಸ್ತಂಭವಿದೆ- ಅದೇ 'ಕನ್ನಡ್ ಪದಗೊಳು' ಎಂಬ ಪದ. ಕನ್ನಡ ಕವಿಗಳೆಲ್ಲ ಅಪವಾದವೇ ಇಲ್ಲವೆಂಬಂತೆ, ರತ್ನನಿಗಿಂತ ಮೊದಲು, ರತ್ನನಿಗಿಂತ ಮತ್ತೆ, ಕನ್ನಡನಾಡು-ನುಡಿಗಳ ಹಿರಿಮೆಗರಿಮೆಗಳನ್ನು ವರ್ಣಿಸುವ, ಅವುಗಳಲ್ಲಿ ತಮಗಿರುವ ಭಕ್ತಿಪ್ರೇಮಗಳನ್ನು ಬಿಂಬಿಸುವ ಕವಿತೆಗಳನ್ನು ಬರೆದಿದ್ದಾರೆ; ತುಂಬ ಸೊಗಸಾಗಿಯೇ ಬರೆದಿದ್ದಾರೆ. ಆದರೆ ಯೆಂಡ್ಕುಡ್ಕರತ್ನನ ಹಾಡಿನ ಜಾಡೂ ಅದು

ಓದುಗನ ಮೇಲೆ ಮಾಡುವ ಮೋಡಿಯೂ ಅನನ್ಯವೂ ರೋಮಾಂಚನಕಾರಿಯೂ ಆದದ್ದು. ಸಾಕ್ಷಾತ್ ಪರಬ್ರಹ್ಮನೇ ಭೂಮಿಗೆ ಇಳಿದುಬಂದು ರತ್ನನನ್ನು ಕರೆದು ಅವನ ಜೀವವಾಗಿರುವ, ಜೀವಾಧಿಕವಾಗಿರುವ 'ಯೆಂಡ ಯೆಡ್ತಿ, ಕನ್ನಡ ಪದಗಳು'ಲ್ಲಿ ಒಂದೊಂದನ್ನೂ ಬಿಡು ಎಂದು ಅಪ್ಪಣೆ ಮಾಡಿದರೆ, ರತ್ನ ಯೆಂಡವನ್ನೂ ಯೆಡ್ತಿಯನ್ನೂ ಚಾಚು ಎನ್ನದೆ ಬಿಡಬಲ್ಲ, ಬಿಟ್ಟು ಕುಣಿಯಬಲ್ಲ. ಆದರೆ ಕನ್ನಡದ ಸುದ್ದಿಗೆ ಮಾತ್ರ ದೇವರಲ್ಲ, ದೇವರ ಆಚೆಯವರೇ ಬಂದರೂ 'ಮಾನಾ ಉಳಿಸಾಕಿಲ್ಲ' ಎಂದು ಉಗ್ಘಡಿಸಿ ಅವನು ಮಾಡುವ ಪ್ರತಿಜ್ಞೆಯು ಓದುಗನ ಮೆಯ್ಯ ನವಿರನ್ನು ನಿಮಿರಿಸಿ, ನೆಟ್ಟಗೆ ನಿಲ್ಲಿಸುತ್ತದೆ, ಒಂದು ಕ್ಷಣ ಅವನನ್ನು ವಿಸ್ಮಯ ಮೂಕನನ್ನಾಗಿ ಮಾಡುತ್ತದೆ. ಹಾಗೆ ಯಾರಿಗಾದರೂ ಆಗುವುದಿಲ್ಲ ಎಂದಾದರೆ ಒಂದೋ ಆತ ಪಶು, ಇಲ್ಲವೇ ಪಾಷಾಣ ಅಥವಾ ಪಶುಪತಿ! –

ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ-
ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ನ್ ನೀ ಕಾಣೆ!
ಯೆಂಡ ವೋಗ್ಲಿ! ಯೆಡ್ತಿ ವೋಗ್ಲಿ!
ಎಲ್ಲಾ ಕೊಚ್ಕೊಂಡ್ ವೋಗ್ಲಿ!
ಪರ್ಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೊಳ್ ನುಗ್ಲಿ!

ದೇಶ-ಭಾಷೆಗಳ ಪ್ರಸ್ತಾವ ಬರುವಲ್ಲೆಲ್ಲ ರಾಜರತ್ನಂ ಅವರ 'ಕನ್ನಡ ಪದಗೊಳ' ಉದ್ಧರಣವೂ ಆಗಿಯೇ ಆಗುತ್ತದೆ; ನಾಡು-ನುಡಿ ಇರುವ ತನಕ ಈ ಪದ್ಯ ಉಳಿದೇ ಉಳಿಯುತ್ತದೆ!

ರತ್ನನ ಒಳ ಬದುಕು ಹೀಗಾದರೆ ಹೊರಗಿನ ನಡತೆ ಹೇಗಿರುತ್ತದೆ? ಆತ ಕುಡುಕ ನಿಜ; ಹೆಂಡ ಕೆಟ್ಟದೆಂಬುದು ಅವನಿಗೂ ಗೊತ್ತಿದೆ. ಗೊತ್ತಿದ್ದೂ ಬಿಡಲಾರ. ಎಂದರೆ ಆತ ನ್ಯಾಯಮಾರ್ಗ ಬಿಟ್ಟವನೆಂದಲ್ಲ; ಅನೀತಿವಿಚಾರ ಮಾಡುವವನೂ ಅಲ್ಲ. ಪಡಖಾನೆಯ ಮುನಿಯನಿಗೆ ಆತನ 'ಬುದ್ವಾದ'ದಿಂದ ಇದು ತಿಳಿಯುತ್ತದೆ:

ಕಾಸಿಗ್ ಕಾಸ್ ಗಂಟಾಕಿ
ಒಟ್ಟೇಗ್ ಬೆನ್ ಅಂಟಾಕಿ
'ನಾನೂ ಒಬ್ ಸೆಟ್ಟಿ
ದುಡ್ಡೈತೆ ಗಟ್ಟಿ'
ಅಂತಂತಿ ಮುನ್ಯ!
ಚಂದಾನ ಮುನ್ಯ!

ಹೀಗೆ ಮುನಿಯನನ್ನು ಕೇಳಿ, ಆತನಿಗೆ ಹೇಳಬೇಕಾದದ್ದನ್ನು ಹೇಳಿ ಕೊನೆಯಲ್ಲಿ ಮಾಡುವ ಉಪದೇಶ ಇದು:

ಅದ್ರಿಂದ ಕೇಳ್ದಂಗೆ
ಯೆಂಡ ಬಿಟ್ ಯೋಳ್ದಂಗೆ
ಕೇಳಿದ್ರೆ ನೋಡು-
ಇಲ್ಲಾಂತ್ ಅನಬೇಡ.
ನೀನಾಗ್ತಿ ಮುನ್ಯ!
ಜಗದೊಳ್ಗೆ ಮಾನ್ಯ!

ಇದು ಸಾಮದ ಮಾತು. ರತ್ನ ಕೆರಳಿದರೆ ಅವನ ಒಳಗೆಲ್ಲ ಬಡಬಾಗ್ನಿ, ಮಾತೆಲ್ಲ ಬೆಂಕಿಮಳೆ. ಆತ ದೈವಭಕ್ತ ನಿಜ; ಪಾಪಭೀತಿಯೂ ಅವನಲ್ಲಿದೆ. ಆದರೆ ಹಸಿದವನ ಕಣ್ಮುಂದೆ ದೇವರು ಅನ್ನದೇವರಾಗಿಯೇ ನಿಲ್ಲಬೇಕು!-

ಸಾವರ್ ಜನಕೆ ಸಾವರ್ ದೇವ್ರು!
ಬಡವನ್ ದೇವ್ರುವೊಟ್ಟೆ!

* * *

ಬಡವನ್ ದೇವ್ರನ್ ಕೆರಳಿಸ್ಬಾರ್ದು-
ಲೋಕಕ್ ಒಳ್ಳೇದಲ್ಲ!
ಬಡವನ್ ದೇವ್ರಿಗ್ ನರಳಿಸ್ತಿದ್ರೆ-
ಲೋಕಕ್ ಬೆಳಕೇ ಇಲ್ಲ!

* * *

ಲೋಕಕ್ ಸಾಂತಿ-ಬಡವನ್ ದೇವ್ರು
ಮಲಗಿರೋ ವರಗೂನೆ!
ಬಡವನ್ ದೇವ್ರು ಎದ್ದ್ ನಿಂತಾಂದ್ರೆ
ಪ್ರಳಯ ಅದಕೇ ತಾನೆ!

ಹೀಗೆ ರತ್ನನ ಮಾತುಮಾತುಗಳೆಲ್ಲ ಬೆಂಕಿಯ ಉಂಡೆಗಳಾಗಿ ಉರುಳುತ್ತವೆ. ಕೊನೆಗೆ ಆತ ಬದುಕುವ ದಾರಿಗೆ ಬೆಳಕಿನ ಪಂಜು ಹಿಡಿಯುತ್ತಾನೆ!-

ಪ್ರಳಯ ಬಂದ್ರೆ ಯಾರ್ಗ್ ಏನ್ ಸುಕ?
ನಾಸ- ಅರಸೂ ಆಳೂ!
ಸಾಯೋರ್ ಜತೆಗೇ ಸಾಯೋ ಬದಲು
ಎಲ್ಲಾರ್ ಸಂಗ್ಡ ಬಾಳು!

'ತಾಳುವಿಕೆಗಿಂತನ್ಯ ತಪವು ಬೇರಿಲ್ಲ' ಎಂಬುದು ಸಂತವಾಣಿ; 'ತಾಳಿದವನು ಬಾಳಿಯಾನು' ಎಂಬುದು ಗಾದೆಮಾತು. ಆದರೆ ತಾಳ್ಮೆಗೂ ಒಂದು ನೀತಿಯಿದೆ, ಮಿತಿಯುಂಟು. ಅನ್ಯಾಯ, ಕ್ರೌರ್ಯ, ದೌರ್ಜನ್ಯ, ಶೋಷಣೆಗಳನ್ನು ತಣ್ಣಗೆ ತಾಳುವುದು ತಪವಲ್ಲ, ತಾಪ; ಹಾಗೆ ತಾಳುವವನದು ಬಾಳಲ್ಲ- ಹಾಳು. 'ನಾಡಿನ್ ಬಡವ! ಸರ್ಕಸ್ ಸಿಮ್ಮ!' ಎಂಬ ಪದ್ಯದಲ್ಲಿ ರತ್ನನ ಸಂದೇಶ ಹೀಗಿದೆ:

ಮೈ ನಿಂಗ್ ಐತೆ! ಮನಸ್ ನಿಂಗ್ ಇಲ್ಲ?
ಮನಸೂ ಐತೊ! ನೀನ್ ನೋಡಲ್ಲ!
ಸಕ್ತಿ ಇದೆ! ಉಕ್ತಾ ಅದೆ!
ನಿಂಗೆ ಎಲ್ಲಾ ಅದೆ!
ಸರಪ್ಳಿ ಬಿಕ್ಕೊಂಡು ಸುಂಕ್ ಯಾಕ್ ಇರಬೇಕ್?
ಯೆತ್ತ್ ಅದನ್ ಆಚೆಗ್ ಒಗೆ!

ನಡು ಬಗ್ಗಿಸುವುದೇ ಬಡವನ ಪಾಡಲ್ಲ. ಎದೆ ಸೆಟೆದು ನಿಲ್ಲಬೇಕು; ಸರಪಣಿಯನ್ನು ಕಿತ್ತು ಕೇಸರವನ್ನು ಕೆದರಿ ಗರ್ಜಿಸಿ ತರ್ಜಿಸುವ ನರಕೇಸರಿಯಾಗಬೇಕು!

ಹೆಂಡ್ಕುಡ್ಕ ರತ್ನನ ಬಾಯಿ ಭಗವದ್ಗೀತೆ ಓದಿರಲಾರದು; ಆದರೆ ಆತನ ಬಾಳಿನಲ್ಲಿ ಗೀತೆಯ ಬೆಳಕಿತ್ತು. 'ನಮ್ಮ್ ಪ್ಟಕ್ ನಾವಾಗಿ ಇದ್ದಿದ್ರಲ್ಲಿ ಆಯಾಗಿ' ಇರಬಲ್ಲೆನೆಂಬ ಸ್ಥಿತಪ್ರಜ್ಞೆ ರತ್ನನದು. 'ಸಮಾದಾನ' ಎಂಬ ಪದ್ಯದಲ್ಲಿ ಆತ 'ಸ್ತುತಿನಿಂದಾ ಮೌನಿ'ಯಾಗಿರಬೇಕೆಂಬ ಗೀತೋಪದೇಶವನ್ನೇ ಪಡಿನುಡಿಯುತ್ತಾನೆ-

ಚಿಕ್ಕೋರ್ ಸಿಕ್ಕೌರಣ್ಣ ಎಲ್ಲಾರ್ ನೆಗಾಕೆ!
ದೊಡ್ಡೋರ್ ಎಂಗಾಡಿದ್ರ ಎಲ್ಲಾನ ಸೈ!
ಲೋಕಾನೆ ಇಂಗೈತೆ - ನಾನ್ ಯಾಕ್ ದುಕ್ಪಡಲಿ-
ಮುನಿಯನ್ನು ಯೆಂಡಕ್ಕು ಜೋಲೋರೆ ಜೈ!

ಬಾಳುವೆ ಎಂಬುದು ಸರ್ಕಸ್ಸ್ ಕನ್ಯೆ ಸರಿಗೆಯ ಮೇಲೆ ನಡೆಯುವ ಹಾಗೆ - ತೂಕ ತಪ್ಪಿದರೆ ಅಪಾಯ. 'ರತ್ನನ ಪದಗಳ'ಲ್ಲಿ ಬಾಳುವೆಯ ಹರವು, ಹದ, ಹೂರಣಗಳನ್ನು ಸರಳವಾಗಿ, ಆದರೆ ಸೊಗಸಾಗಿ ತಿಳಿಸುವ ರಚನೆಗಳಿವೆ. ಅವುಗಳಲ್ಲಿರುವ ಲೋಕನೀತಿ ಗೋಪುರದ ಮೇಲಿನ ಉಪದೇಶವಾಗಿ ಕೇಳುವುದಲ್ಲ; ಹತ್ತಿರದವನೊಬ್ಬನ ಅಕ್ಕರೆಯ ಮಾತಾಗಿ ಮನಸ್ಸನ್ನು ತಟ್ಟುತ್ತದೆ:

ಮಾತ್ ಇರಬೇಕು ಮಿಂಚು ಒಳದಂಗೆ!
ಕೇಳ್ದೋರ್ 'ಹ್ಞಾ' ಅನಬೇಕು!
ಸೋನೆ ಯಿಡದ್ರೆ, ಉಗದ್ ಅಂದಾರು:
'ಮುಚ್ಕಂಡ್ ಓಗೋ ಸಾಕು'!

* * *

ಒಗ್ಗಟ್ಟಿನ್ ಗೋಂದ್ ಅಂಟ್ದಿವೋದ್ರೆ
ಲೋಕ ಚುಕ್ಕಾಚೂರು!
ಲೋಕ ಮುಳುಗೋಕ್ ತಾವ್ ಕೊಟ್ಬೋನ್ಗೆ
ವೊಕ್ಕೆ ಸೆಗಣಿ ನೀರು!
ಕೈಲ್ ಕಿಸೀದೆ ಕರ್ಮಾಂತ ಕಿರ್ರೋ
ಕಂಚೋರ್ ಆದ್ಮಿ! ಬಕ್ರ!

ಕೈಲ್ ಆಗೋರ್‍ನ್ನ ಕೆಳಕ್ ಎಳಿಯೋನು
ನೀನ್ ಎಲ್ ಉಟ್ಗೊ! ವಕ್ರ!

ರತ್ನನ ಪದಗಳ ಅರ್ಥ ಭಾವ ಸರಸತೆಗಳಲ್ಲಿ ತರತಮವನ್ನು ಹುಡುಕುವುದೂ ಎಣಿಸುವುದೂ ಕಷ್ಟ. ಒಂದೊಂದು ಪದ್ಯವೂ ಒಂದೊಂದು ವಿಧ, ಒಂದೊಂದಕ್ಕೂ ಒಂದೊಂದು ಹದ. ಆದರೂ 'ಪುಟ್ನಂಜಿ ರತ್ನ' ಎಂಬ ವಿಭಾಗದ ದಾಂಪತ್ಯಗೀತಗಳು ಕಾವ್ಯರಸಿಕರಿಗೆಲ್ಲ ಅತ್ಯಂತ ಆಪ್ಯಾಯನಕಾರಿಯಾಗಿವೆ. ಅವುಗಳು ತಮ್ಮ ಸರಳತೆ-ಸಹಜತೆಗಳಿಂದಲೇ ಚಿತ್ತಮೋಹಕವೆನಿಸಿವೆ. ಅವು ಕನಸಿನ ಲೋಕದ ಬಣ್ಣ ಬೆಡಗುಗಳನ್ನು ಕಣ್ಣಿಗೆ ಕಟ್ಟಿಸುವ ಗೀತಗಳಲ್ಲ. ವಾಸ್ತವಿಕ ಜೀವನದಲ್ಲಿ ಗಂಡು-ಹೆಣ್ಣು ಒಬ್ಬರನ್ನೊಬ್ಬರು ನಂಬಿ ತುಂಬಿ ನಡೆದಾಗ ಬಾಳು ಹೇಗೆ ಹಸನಾಗುತ್ತದೆ ಎಂಬುದನ್ನು ಅಕೃತಕವಾಗಿ ನಿರೂಪಿಸುವ ದಾಂಪತ್ಯಸಂಹಿತೆಯೆಂದರೂ ಸಲ್ಲುತ್ತದೆ. ಈ ಪದ್ಯಗಳ ಮಾತುಗಳೆಲ್ಲ ರತ್ನನವುಗಳೇ ಆದರೂ ಅವುಗಳಿಂದ ಹೊರಡುವ ಧ್ವನಿ ಎರಡೂ ಕೈಯ ಚಪ್ಪಾಳೆ; ಅದರಲ್ಲಿ ನಂಜಿಯ ಒಳದನಿಯೂ ಸೇರಿದೆ ಎಂಬುದನ್ನು ಮರೆಯಬಾರದು.

ಗಂಡು ಹೆಣ್ಣನ್ನೂ ಹೆಣ್ಣು ಗಂಡನ್ನೂ ಇಡಿಯಾಗಿ ಒಪ್ಪುವುದೂ, ಹಾಗೆ ಒಪ್ಪಿಕೊಳ್ಳುವುದರಲ್ಲೇ ನೆಮ್ಮದಿ ಕಾಣುವುದನ್ನೂ ಮನೆವಾಳ್ತೆಯಲ್ಲಿ ಬಹು ಮುಖ್ಯ ಭಾಗ; ಅದೇ ದಾಂಪತ್ಯಸೌಧದ ಅಡಿಗಲ್ಲು. ರತ್ನ ಪುಟ್ನಂಜಿಯನ್ನು ಬಣ್ಣಿಸುವ ಬಗೆಯಲ್ಲಿ ಆ ಒಪ್ಪಿಗೆ, ಒಲುಮೆ ದಟ್ಟವಾಗಿ ಕಾಣಿಸಿಕೊಳ್ಳುತ್ತದೆ:

ಆಲ್ನಲ್ ಕಮಲದ್ ಊ ತೇಲ್ಬುಟ್ಟಿ
ಮೇಲ್ ಒಂದ್ ತೆಳ್ನೆ ಲೇಪ
ಚಿನ್ನದ ನೀರ್‍ನಲ್ ಕೊಟ್ಟಂಗೈತೆ
ನನ್ ಪುಟ್ನಂಜೀ ರೂಪ!

*   *   *

ಚಿನ್ನದ ಬರಣೀಲ್ ತುಂಬಿಟ್ಟಂಗೆ
ಆಲು ಸಕ್ರೆ ತುಪ್ಪ-
ಒಳ್ಳೇ ಗುಣಗೊಳ್ನ ಒಳಗಿಟ್ಟೈತೆ
ನನ್ ಪುಟ್ನಂಜೀ ರೂಪ!

ರತ್ನ ನಂಜಿಯ ಹೊರಗಿನ ಚೆಲುವಿಗೆ ಮಾತ್ರ ಒಲಿದದ್ದಲ್ಲ, ಒಳಗಿನ ಗುಣವನ್ನು ಕಂಡುಕೊಂಡಿರುವುದೇ ಅವರಿಬ್ಬರ ಸೊಗ ಬಾಳಿನ ಗುಟ್ಟು.

ಮಡದಿ ನಂಜಿಯ ಚೆಲುವು, ನಡತೆ, ಮಾತು, ನಗುಗಳನ್ನೆಲ್ಲ ರತ್ನ ಬಾಯ್ತುಂಬ ಬಣ್ಣಿಸಿ ಹಿಗ್ಗುವಂತೆಯೇ ಅವರಿಬ್ಬರ ನಡುವೆ ಸಣ್ಣಪುಟ್ಟ ಕಾರಣಗಳಿಗಾಗಿ ಮುನಿಸಿನ ಹೊಗೆಯೇಳುವುದೂ ಮಾತು ಬಿರುಸಾಗುವುದೂ ಮುರಿಯುವುದೂ ಇಲ್ಲವೆಂದಲ್ಲ. ಆದರೆ ಆ ಹೊಗೆ ಕಾಡ್ಗಿಚ್ಚಿನದ್ದಲ್ಲ, ಬೆಳಗ್ಗಿನ ಮಂಜಿನ ಪರದೆ, – ನೇಸರು

ಮೇಲೇರುತ್ತಲೇ ಅದು ಕರಗಿ ಮರೆಯಾಗುತ್ತದೆ. ರತ್ನ-ನಂಜಿಯರ ನಡುವಿನ ಮುನಿಸೂ ಹಾಗೆಯೇ ಕ್ಷಣಿಕ: ಇದ್ದಕ್ಕಿದ್ದಂತೆ ರತ್ನ ಇನ್ನ್ಯಾರನ್ನೋ ನೋಡ್ತಿದ್ದಾನೆ, ನೋಡಿ ಮೆಚ್ಚಿದ್ದಾನೆ ಎಂಬ ಸಂದೇಹ ನಂಜಿಗೆ ಬಂದಾಗ, ರತ್ನ ಆಕೆಗೆ ತಿಳಿಹೇಳಿ ಸಂತೈಸುವ ರೀತಿ ಹೀಗಿದೆ-

ನಾನ್ ಇನ್ನಾರ್ಗೋ ನೋಡ್ದೇಂತ ಯೋಳಿ
ಇಲ್ದಿದ್ ಅತ್ತೀನ್ ಇಂಜಿ
ಸಿಕದಿದ್ ಬಿತ್ತಾನ್ ಎತ್ಕೋಕ್ ನೋಡಿ
ರಾಂಗ್ ಮಾಡ್ಬ್ಯಾರ್ದು ನಂಜಿ

* * *

ನಿದ್ದೇಲ್ ಇದ್ದಿ ನನ್ ಎಬ್ಬಿಸ್ದ
'ನಿನ್ ಎಸರೇನ್?' ಅಂತನ್ನು-
'ಪುಟ್ನಂಜಿ' ಅಂತನ್ದೆ ಓದ್ರೆ
ಮಾತಿನ್ ಮೆಯ್ಗೆ ತೋನ್ನು!

* * *

ಈ ಗುಮಾನೀನೇ ನಾವ್ ಪ್ರೀತೀಗ್
ಕಟ್ಕೋ ಚಕ್ಕರ್ ಬಡ್ಡಿ!
ಈ ಗುಮಾನೀನೇ ನಂ ಪ್ರೀತೀನ್
ಅಳೆಯೋಕೆ ಅಳತೇ ಕಡ್ಡಿ!

ಬೇಂದ್ರೆ, ಕುವೆಂಪು, ಕೆ. ಎಸ್. ನ. - ಹೀಗೆ ಮೂವರೋ ಆರ್ವರೋ ಎಂದಲ್ಲ, ಅಪವಾದವೇ ಇಲ್ಲವೆಂಬಂತೆ ಕನ್ನಡದ ಕವಿಗಳೆಲ್ಲ ಪ್ರೇಮಗೀತೆಗಳನ್ನು ಬರೆದಿದ್ದಾರೆ, ದಾಂಪತ್ಯಚಿತ್ರಗಳನ್ನು ಬಿಡಿಸಿದ್ದಾರೆ. ಕೆಲವರು ಪ್ರತ್ಯೇಕ ಕವನಸಂಗ್ರಹಗಳನ್ನೇ ಪ್ರಕಟಿಸಿದ್ದಾರೆ. ಕೆ. ಎಸ್. ನ. ಅವರಂತೂ 'ಒಲವಿನ ಕವಿ'ಯೆಂದೇ ಮಾನ್ಯರಾಗಿದ್ದಾರೆ. ಜಿ. ಪಿ. ರಾಜರತ್ನಂ ಅವರು ಅಂತಹ ಕವಿತೆಗಳನ್ನು ಹೆಚ್ಚು ಬರೆದಿಲ್ಲ. ಪ್ರೇಮ ಅಥವಾ ದಾಂಪತ್ಯಗೀತಗಳ ಪ್ರತ್ಯೇಕ ಗುಚ್ಛವನ್ನು ಕಟ್ಟಿಲ್ಲ; ಆದರೆ 'ರತ್ನನ ಪದಗಳು' ಮತ್ತು ಆ ಮೇಲಿನ 'ನಾಗನ ಪದಗಳ'ಲ್ಲಿರುವ ಹತ್ತಾರು ಕವಿತೆಗಳೇ ಸಾಕು - ರಾಜರತ್ನಂ ಸಹ ದಾಂಪತ್ಯಜೀವನದ ಸ್ನಿಗ್ಧಚಿತ್ರಗಳನ್ನು, - ಭಾಷೆ ಗ್ರಾಮ್ಯವೇ ಆಗಿದ್ದರೂ, -ಅತ್ಯಂತ ಸಭ್ಯವಾಗಿ ಮತ್ತು ಸಹಜಸುಂದರವಾಗಿ ರಚಿಸಬಲ್ಲರು ಎಂಬುದನ್ನು ಪ್ರಬಲವಾಗಿ ಪ್ರಮಾಣಿಸುತ್ತವೆ.

* * *

ರತ್ನನ ಪದಗಳಲ್ಲಿ ನೇರವಾಗಿ ಸೌಂದರ್ಯವರ್ಣನೆ ಎಂದು ಕರೆಯಬಹುದಾದ ಕವಿತೆಗಳು ಎರಡುಮಾತ್ರ: 'ಮಡಿಕೇರೀಲಿ ರತ್ನ' ಮತ್ತು 'ಮಡಿಕೇರೀಲಿ ಮಂಜು'.

ಮಡಿಕೇರಿಯ, ಎಂದರೆ ಕೊಡಗಿನ ವರ್ಣನೆ ಎಂದಾಗ ಪಂಜೆಯವರ 'ಹುತ್ತರಿಹಾಡು' ಡಿ. ವಿ. ಜಿ.ಯವರ 'ಕೊಡಗಿನ ನೋಟ' ಮತ್ತು ಸಾಲಿ ರಾಮಚಂದ್ರ ರಾಯರ 'ಕೊಡಗು' ಎಂಬ ಕವಿತೆಗಳೊಂದಿಗೇ ರಾಜರತ್ನಂ ಅವರ ಆ ಎರಡು ಪದ್ಯಗಳೂ ಅಪ್ರಯತ್ನವಾಗಿ ನೆನಪಿಗೆ ಬಂದೇ ಬರುತ್ತವೆ. ಪಂಜೆಯವರ ಪದ್ಯ 'ಕೊಡಗಿನ ನಾಡಗೀತ'ವೆಂದೇ ಮಾನ್ಯವಾಗಿದ್ದರೆ ಡಿ. ವಿ. ಜಿ. ಮತ್ತು ಸಾಲಿಯವರದು ಪ್ರೌಢಬಂಧ ದಲ್ಲಿರುವ ಬಂಧುರ ರಚನೆಗಳಾಗಿವೆ. ಆ ಮೂರಕ್ಕಿಂತ ಸರಳವಾಗಿ, ಆ ಸರಳತೆಯೇ ಸೌಂದರ್ಯವಾಗಿ ಅವುಗಳಿಗೆ ಹೆಗಲೆಣೆಯಾಗಿ ನಿಲ್ಲಬಲ್ಲ ಪದ್ಯಗಳು ರಾಜರತ್ನಂ ಅವರ 'ಮಡಿಕೇರೀಲಿ ರತ್ನ' ಮತ್ತು 'ಮಡಿಕೇರೀಲಿ ಮಂಜು'. ಅವು ಸಾದ್ಯಂತವಾಗಿ ಕೊಡಗಿನ ಸಂಸ್ಕೃತಿ, ಸಭ್ಯತೆ ಮತ್ತು ನಿಸರ್ಗಸೌಂದರ್ಯಗಳನ್ನು ಚಿತ್ರಿಸುವುದಿಲ್ಲ. ಅವುಗಳಲ್ಲಿರು ವುದು ಆಂಶಿಕ ಚಿತ್ರಣ. ಆದರೆ ಒಂದು ತುಣುಕಿನಿಂದಲೇ ಅಚ್ಚುಬೆಲ್ಲದ ಸವಿಯನ್ನು ತಿಳಿಯಬಹುದಾದಂತೆ ಆ ಎರಡೇ ಕವಿತೆಗಳು ಮಂಜಿನ ಕಡಲಲ್ಲಿ ತೇಲುವ ಮುಳು ಗುವ, ಬೆಡಗಿನ ಕೊಡಗಿನ ಆರ್ದ್ರ–ಹಾರ್ದ ಚಿತ್ರಗಳನ್ನು ಕಣ್ಣಿಗೆ ಕಟ್ಟಿಸುತ್ತದೆ.

ರತ್ನ ಮಡಿಕೇರಿಗೆ ಹೋಗಿದ್ದ; [ಯಾವಾಗ, ಏಕೆ ಎಂಬುದನ್ನೆಲ್ಲ ಈ ಹಿಂದೆಯೇ ಹೇಳಿದ್ದಾಗಿದೆ.] 'ಮಡಿಕೇರೀಲಿ ಮಡಿಕೆ ಯೆಂಡ ಯೀರ್ದಿದ್ರ್ ಅಲ್ಲೀಗ್ ವೋದ್ದೂ ದಂಡ' ಎಂದುಕೊಂಡಿದ್ದ. ಆತ 'ಯೆಂಡ'ವನ್ನು ಹೀರಿದ, ಆದರೆ ಅದರ ಮತ್ತು ಮಾತ್ರ 'ವೊಸ್ತು'!

ಕೊಡಗಿನ ನೆತ್ತಿ ಮಡಿಕೇರಿಯಲ್ಲಿ–

ಸುತ್ತ ಸಾಯೋ ಬಿಸಿಲಿನ್‌ಚಾಪೆ!
ಅಲ್ಲಲ್ಲೆ ವೊಸಿ ನೆರಳಿನ್ ತೇಪೆ!
ಅಲೆಯಲೆಯಾಗಿ ಬಿಸಿಲಿನ್ ಜೊತೆಗೆ
ಸುತ್ತಿನ್ ಗುಡ್ಡಗೊಳ್ ಕುಣದರ್ ಮೆತ್ಗೆ
ಮನಸೀಗ್ ಅರ್ಸ ತರ್‍ತ–
ರತ್ನ ಯೆಂಡ ಮರ್‍ತ!

ಅಂತಹ ಸನ್ನಿವೇಶದಲ್ಲಿ ರತ್ನ ಐದಾರು ವರ್ಷದ ಕೊಡಗಿನ ಒಬ್ಬ ಚೆಲು ಹುಡುಗಿ ಯನ್ನು ಕಾಣುತ್ತಾನೆ. ಆಕೆ ಹೇಗಿದ್ದಳು?–

ಕೊಡಗಿನ್ ತೋಟದ್ ಕಾಪೀ ಅಣ್ಣು
ತುಟಿಗೊಳ್! ಇಳ್ಳಿನ್ ಬೆಳಕೆ ಕಣ್ಣು!
ಕೆನ್ನೆ ಅನಕ ಕೊಡಗಿನ್ ಕಿತ್ಲೆ!
ಔಳೇಳಿದ್ಲು ನಾ ಕೇಳೂತ್ಲೆ:
'ನಿಂಗೆ ಯೆಸರೇನಮ್ಮ?'
'ನನ್ನೆಸರು ಪೂವಮ್ಮ!'

ಹುಡುಗಿಯಾದರೋ ಬೆಡಗಿ ಮಾತ್ರವಲ್ಲ, ದಿಟ್ಟೆ. ರತ್ನನೊಂದಿಗೆ ಸಲುಗೆ ಮಾತಾಡಿದಳು, ಆತ 'ನಾನ್ಯಾರ್ ಗೊತ್ತೆ' ಎಂದರೆ 'ನೀ ಯೆಂಡ ಕುಡುಕ' ಎಂದು ಹೇಳುತ್ತ ಹತ್ತಿರ ಹೋಗಿ, ತೊಡೆಮೇಲೆ ಹತ್ತಿ ಕೂತೇಬಿಟ್ಟಳು! ಹಾಗೆ ಕೂತು,

ಕತ್ತಿನ್ ಸುತ್ತ ಕೈ ಆಕ್ಕೊಂಡಿ
'ಅಣ್ಣ ರತ್ನ' ಅಂತ್ ನೆಕ್ಕೊಂಡಿ
'ಯೆಂಡದ ಪದಗೊಳ್ ಏಳ್ ನೋಡಾನೆ!
ನಾನೂ ನಿನ್ನಂಗ್ ಕಲ್ತ್ ಆಡಾನೆ!'
ಅಂದ್ಲು ಮೊಕಾನ್ ನೋಡಿ!
ಕಣ್ಣು ದೊಡ್ಡು ಮಾಡಿ!

ಆಗ ರತ್ನ ಹೇಳುತ್ತಾನೆ-

ಇಲ್ಲಿದ್ ತಂಗಿ ಆಗ್ ವುಟ್ಟಿದ್ಲು
ಪೂವಮ್ಮಾನೆ ನಂಗೆ ಮೊದಲು!

ಈ ಕವಿತೆಯ ಭಾವ ಅನಾಯಾಸವಾಗಿ ಓದುಗನ ಎದೆಯನ್ನು ಮುಟ್ಟುತ್ತದೆ, ಕರಗಿಸುತ್ತದೆ, ಕಣ್ಣಂಚಿನಲ್ಲಿ ನೀರಾಡಿಸುತ್ತದೆ.

ಎರಡನೆಯ ಕವಿತೆ 'ಮಡಿಕೇರೀಲಿ ಮಂಜು' ಸಮಗ್ರವಾಗಿ ಮಂಜಿನ ಮಡಿಲಲ್ಲಿ ಮಲಗಿರುವ ಮಡಿಕೇರಿಯ ವರ್ಣನೆ-

ಬೂಮೀನ್ ತಬ್ಬಿದ್ ಮೋಡ್ ಇದ್ದಂಗೆ
ಬೆಳ್ಳಿ ಬಳದಿದ್ ರೋಡ್ ಇದ್ದಂಗೆ
ಸಾಫಾಗ್ ಅಳ್ಳ ತಿಟ್ಟಿಲ್ದಂಗೆ
ಮಡಿಕೇರೀಲಿ ಮಂಜು!

ಹೀಗೆ ಮಂಜಿನಿಂದ ಮಂಜುಳವಾದ ಮಡಿಕೇರಿ ರತ್ನನ ಕಣ್ಣಿಗೆ ಒಮ್ಮೆ ಕಡಲಲ್ಲಿ ಲಂಗರು ಹಾಕಿದ ಹಡಗಿನಂತೆ ತೋರಿದರೆ, ಇನ್ನೊಮ್ಮೆ ಹೆತ್ತ ತಾಯಿ ಅಕ್ಕರೆಯಿಂದ ಎತ್ತಿಕೊಂಡು ತನ್ನೆದೆಗೆ ಅಪ್ಪಿಕೊಂಡ ಮಗುವಿನಂತೆ ಕಾಣುತ್ತದೆ. ಒಮ್ಮೆ ಸುರಿದ ಮಂಜು ಸೊಳ್ಳೆಪರದೆಯಂತೆಯೂ ಮತ್ತೊಮ್ಮೆ ಹೊದೆಯುವ ಅಚ್ಚ ಬಿಳಿಯ ದುಪಟಿಯಂತೆಯೂ ಮಗದೊಮ್ಮೆ ಜಂಗಮದೇವಾಲಯದಂತೆಯೂ ಕಂಗೊಳಿಸುತ್ತದೆ. ಒಂದು ಕಡೆ ಬೆಳಗಿನ ಕೆಂಬಿಸಿಲು, ಮತ್ತೊಂದೆಡೆ ಹೊಳೆಹೊಳೆಯುವ ಬಿಳಿ ಮಂಜು ರತ್ನನ ಮನಸ್ಸನ್ನು ತೊಟ್ಟಿಲಾಡಿಸುವ ರೀತಿ ಈ ಪದ್ಯದಲ್ಲಿ ತುಂಬ ಸುಂದರವಾಗಿ ವರ್ಣಿತವಾಗಿದೆ. ಬಿ.ಎಂ.ಶ್ರೀ.ಯವರಿಂದ ಸಂಪಾದಿತವಾಗಿ ೧೯೩೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಾಶಿತವಾದ, ಪ್ರಾಯಃ ಕನ್ನಡದಲ್ಲೇ ಮೊದಲನೆಯ 'ಆ್ಯಂಥಾಲಜಿ' ಎನ್ನಬಹುದಾದ 'ಕನ್ನಡ ಬಾವುಟ'ದಲ್ಲಿ ರಾಜರತ್ನಂ ಅವರ 'ಕನ್ನಡ್ ಪದಗೊಳ್' ಸಹಜವಾಗಿಯೇ ಸೇರಿಕೊಂಡಿದೆ. ಎಂದರೆ ಆ ಕವಿತೆ ಆಗಲೇ ಕನ್ನಡಿಗರ ಕಣ್ಸೆಳೆದಿತ್ತು ಎಂಬುದನ್ನು ನಿರ್ದೇಶಿಸುತ್ತದೆ. ಅದು ಮಾತ್ರವಲ್ಲ, 'ಮಡಿಕೇರೀಲಿ

ಮಂಜು' ಮತ್ತು 'ಮಟಕೇರೀಲಿ ರತ್ನ' ಸಹ ಸಪಾಂಕ್ತಿಕವಾಗಿವೆ ಎಂದರೆ ಆ ಎರಡೂ ಕವಿತೆಗಳ ಅತಿಶಯತೆಯೂ ದೃಗ್ಗೋಚರವಾಗುತ್ತದೆ.

*   *   *

'ಯೆಂಡ್ಕುಡ್ಕ ರತ್ನ'ವಾಗಲೀ, ಆ ಮೇಲಿನ 'ರತ್ನನಪದಗಳಾ'ಗಲೀ ಮೊದಲ ಸಲ ಪ್ರಕಟವಾದದ್ದು ೧೯೩೦ರ ದಶಕದಲ್ಲಿ. ಆ ಸಂಕಲನ ಕನ್ನಡದಲ್ಲೊಂದು ಪ್ರವೃತ್ತಿ ನಿರ್ಮಾಪಕ ವಾದ ಅಪೂರ್ವ-ಅದ್ವಿತೀಯ ಪದಗುಚ್ಛವೆಂದು ಶ್ಲಾಘ್ಯವಾಯಿತೆಂದೂ ಹೇಳಿದೆ. ದುರ್ದೈವವಶಾತ್ ರಾಜರತ್ನಂ ಅವರ ಜೀವಿತಾವಧಿಯಲ್ಲೇ ಒಮ್ಮೆ, ಕಾಲ ವಶರಾದ ನಾಲ್ಕು ವರ್ಷಗಳ ಅನಂತರ ಮತ್ತೊಮ್ಮೆ ಅವರ ಮೇಲೆ ಕೃತಿಚೌರ್ಯ ವನ್ನು ಆರೋಪಿಸಲಾಯಿತು. ಮೊದಲ ಸಲ, ವಿಚಾರಮತಿಯೊಬ್ಬರಿಗೆ ರತ್ನನ ಪದಗಳಲ್ಲಿ ಉಮರ್ ಖಯ್ಯಾಮನ ದ್ರಾಕ್ಷಾರಸದ ವಾಸನೆ ಬಂತು. ಪರ್ಶಿಯಾ ದೇಶದ ಉಮರನಿಗೂ ಕನ್ನಡದ ರತ್ನನಿಗೂ ಸಂಬಂಧವಿಲ್ಲವೆಂದು ರಾಜರತ್ನಂ ಆ ವಾದವನ್ನು ತಳ್ಳಿಹಾಕಿದರು. ಬಟ್ಟಲಿನ ಗಾಳಿ ಬಟ್ಟಲಲ್ಲೇ ತಣ್ಣಗಾಯಿತು. ಎರಡನೆಯ ಬಾರಿ ಸಂಶೋಧನ ಕುತೂಹಲಿಯೊಬ್ಬರು ರಾಜರತ್ನಂ ಅವರ ಕರ್ತೃತ್ವವನ್ನೇ ಪ್ರಶ್ನಿಸಿದರು. ಟಿ.ಪಿ.ಕೈಲಾಸಂ ಅವರು ರಚಿಸಿದುದನ್ನು ರಾಜರತ್ನಂ ತಮ್ಮ ಹೆಸರಲ್ಲಿ ಪ್ರಕಟಿಸಿದರು ಎಂಬುದೇ ಆ ಆರೋಪದ ಸಾರ. ಆ ಆರೋಪಕ್ಕೆ ನೀಡಲಾದ ಕಾರಣಗಳೆಂದರೆ (೧) ಕೈಲಾಸಂ ಅವರಿಗೆ ಸಹಜವಾಗಿದ್ದ, ಅವರು ತಮ್ಮ ಪ್ರಹಸನಗಳಲ್ಲಿ ಪ್ರಯೋಗಿಸುತ್ತಿದ್ದ ಭಾಷೆಯೇ ರತ್ನನ ಪದಗಳಲ್ಲೂ ಪ್ರಯುಕ್ತವಾದದ್ದು, (೨) ಮದ್ಯಪಾನ-ಧೂಮಪಾನಗಳೆಲ್ಲ ಕೈಲಾಸಂ ಅವರಿಗೆ ಅಭ್ಯಾಸವಾಗಿದ್ದುವೇ ವಿನಾ ರಾಜರತ್ನಂ ಅವರಿಗಲ್ಲ, (೩) ರಾಜರತ್ನಂ ಅವರು ಕೈಲಾಸಮಿಗೆ ಅತಿ ಸಮೀಪವರ್ತಿಯಾಗಿದ್ದು ಅವರು ಬಾಯ್ದೆರೆ ಯಾಗಿ ಹೇಳುತ್ತಿದ್ದ ಅನೇಕ ನಾಟಕಗಳನ್ನು ಕೈಯಾರೆ ಬರೆದು ಕೃತಿರೂಪಕ್ಕೆ ಅವತರಣ ಗೊಳಿಸಿದವರು ರಾಜರತ್ನಂ. ಇಂತಹ ವಾದಗಳನ್ನು ಹೂಡಿ, ರಾಜರತ್ನಂ ಅವರ ತಲೆಯ ಮೇಲೆ ಕೃತಿಚೌರ್ಯದ ಮುಳ್ಳಿನ ಕಿರೀಟವನ್ನು ತೊಡಿಸಲಾಯಿತು. ಆದರೆ ರಾಜರತ್ನಂ ಅವರ ಜೀವನಕ್ರಮವನ್ನು, ನೀತಿನಿಷ್ಠೆಯನ್ನು, ಮನೋಧರ್ಮವನ್ನು, ಭಾಷಾಪ್ರಭುತ್ವವನ್ನು, ವಾಙ್ಮಯಸಂಪತ್ತನ್ನು ಬಹುಕಾಲದಿಂದ ಮತ್ತು ಅತಿ ಸಮೀಪದಿಂದ ಬಲ್ಲವರು ಪುಣ್ಯವಶಾತ್ ಬಹುಜನರಿದ್ದು ಅವರೆಲ್ಲ ಒಕ್ಕೊರಲಿನಿಂದ ಈ ಹುರುಳಿಲ್ಲದ ಅಪಲಾಪವನ್ನು ಬಲವಾಗಿ ವಿರೋಧಿಸಿ, ಸಾಧಾರವಾಗಿ ಖಂಡಿಸಿ, ರಾಜರತ್ನಂ ಅವರ ಸ್ವಾಮಿತ್ವವನ್ನು ನಿಸ್ಸಂದಿಗ್ಧವಾಗಿ ಸ್ಥಾಪಿಸಿದರು. ಅಲ್ಲದೆ, ಆ ಮೊದಲೇ ರಾಜರತ್ನಂ 'ಮಹಾ ಹರಟೆ'ಯೆಂದು ಕರೆದು ಬರೆದಿರುವ 'ಹತ್ತು ವರುಷ'ವೆಂಬ ಆತ್ಮಕಥನದಲ್ಲಿ ಅವರ ವ್ಯಕ್ತಿ-ವೃತ್ತಿ-ಸಾಹಿತ್ಯಜೀವನಗಳ ಪ್ರಾಂಜಲ ನಿರೂಪಣೆಯಿದ್ದು, ರತ್ನನ ಪದಗಳು ಹುಟ್ಟಿಬಂದ ಹಿನ್ನೆಲೆಯನ್ನೆಲ್ಲ ಅದರಲ್ಲಿ ಮುಚ್ಚುಮರೆಯಿಲ್ಲದೆ ತೆರೆದಿರಿಸಿದ್ದಾರೆ. "ಇದರ ರೀತಿಯಾದರೂ ನವೀನವಾಗಿದೆ. ಶ್ರೀ ಕೈಲಾಸಂ ಅವರ ನಾಟಕದಲ್ಲಿ ಗ್ರಾಮ್ಯಭಾಷೆಯ ಯೋಜನೆಯಾಗಿದೆ. ಶ್ರೀನಿವಾಸರು 'ಚೆಲುವಿ'ನಲ್ಲಿಯ ಕೆಲವು ಕವಿತೆಗಳಲ್ಲಿ ಇದನ್ನು ಕಾವ್ಯಕ್ಕೆ ಬಳಸಿಕೊಂಡಿದ್ದಾರೆ. ರತ್ನನು ತನ್ನ

ಅನುಭವವನ್ನು ಪ್ರಕಟಗೊಳಿಸಲು 'ಯೆಂಡಕುಡುಕ ರತ್ನ'ನನ್ನು ನಿರ್ಮಿಸಿ, ಅವನ ಹಾಡುಗಳನ್ನು ಯಥಾಯೋಗ್ಯವಾಗಿ ಗ್ರಾಮ್ಯಭಾಷೆಯಲ್ಲಿ ಬರೆದಿದ್ದಾನೆ, ಇದರ ಫಲಿತಾಂಶವು ಬಹಳ ಯಶಸ್ವಿಯಾಗಿದೆ'' (ದ್ವಿತೀಯ ಮುದ್ರಣ, ಪುಟ ೯ಳ) ಎಂದು ಹೇಳಿ, ಕಾವ್ಯ, ವಸ್ತು ಮತ್ತು ಅದರ ಭಾಷೆಯನ್ನು ಎಲ್ಲಿಂದ ಹೆಕ್ಕಿಕೊಂಡೆನೆಂಬುದನ್ನು ಹೀಗೆ ತಿಳಿಸಿದ್ದಾರೆ: "..........ಹಿಂದೆ ಮೊಲಿಯೇರ್ ಎಂಬ ಕವಿಯನ್ನು ಅವನ ರಾಜ ಲೂಯಿ 'ಇಷ್ಟು ಮೋಪಾದ ಪ್ರಾಸಗಳನ್ನು ಎಲ್ಲಿ ಹಿಡಿಯುತ್ತೀಯೆ?' ಎಂದು ಕೇಳಿದನಂತೆ. ಅದಕ್ಕೆ ಮೋಲಿಯೆರ್ 'ನಗರದ ಬಚ್ಚಲು ಮೋರಿಗಳಲ್ಲಿ, ಮಹಾರಾಜ' ಎಂದು ಉತ್ತರಿಸಿದನಂತೆ, 'ಯೆಂಡತ್ತೊಂದ್ರೆ'ಯಂತಹವನ್ನು ಬರೆಯಬೇಕಾದರೆ ಹೆಂಡ ಕುಡುಕರನ್ನೇ ಆಶ್ರಯಿಸಬೇಕೆಂದು ರತ್ನ ನಿಶ್ಚಯಿಸಿದ.'' (ಪುಟ ೯೬). ಹೀಗೆ ತಮ್ಮ ಸ್ವತ್ವವನ್ನು ಸ್ಪಷ್ಟವಾಗಿ ಸೂಚಿಸಿರುವ ರಾಜರತ್ನಂ, 'ಎರಡು ಪದ ಮಾತ್ರ ಬೇರೆ ತೋಟದಿಂದ ತಂದ್ಕೊಂಡದ್ದು' ಎಂಬುದನ್ನು ಮರೆಯದೆ ಒಪ್ಪಿದರೂ ಬೇರೆ ಒಂದೆರಡ ರಲ್ಲೂ ಆಂಗ್ಲ ಕವಿತೆಗಳ ಛಾಯೆಯಿದೆಯೆಂಬುದನ್ನು ಗಟ್ಟಿಯಾಗಿ ಅಲ್ಲಗಳೆದಿದ್ದಾರೆ. ರಾಜರತ್ನಂ ಎಷ್ಟೋ ಕೃತಿಗಳನ್ನು ಅನ್ಯಭಾಷೆಗಳಿಂದ ಅಥವಾ ಮೂಲಗಳಿಂದ ಭಾಷಾಂತರ ಅಥವಾ ರೂಪಾಂತರ ಮಾಡಿದ್ದಿದೆ. ಆದರೆ ಮೂಲ ಮಾತೃಕೆಗಳನ್ನು ಎಂದಿಗೂ ಮರೆಯದೆ, ಎಚ್ಚರದಿಂದ ಅಲ್ಲಲ್ಲಿ ಕಾಣಿಸಿದ್ದಾರೆ. ಬದುಕು-ಬರೆಹ ಎರಡ ರಲ್ಲೂ ಒಂದು ನೀತಿಯ ಚೌಕಟ್ಟಿನಲ್ಲೇ ವ್ಯವಹರಿಸಿದವರು ರಾಜರತ್ನಂ. ಅಂತಹವರ ಮೇಲೂ ಇಂತಹ ಆರೋಪ ಬಂತೆಂಬುದು ಅತ್ಯಂತ ವಿಷಾದನೀಯವೆಂದೇ ಹೇಳಬಹುದು.

* * *

ನಾಗನಾದ ರತ್ನ:

'ರತ್ನನ ಪದಗಳ'ಜತೆಯ ಕಾವ್ಯ ಎನ್ನಿಸಿಕೊಂಡಿರುವ 'ನಾಗನಪದಗಳ'ನ್ನು ಕುರಿತು ಇಲ್ಲೇ ಕೆಲವು ಮಾತು ಹೇಳಬಹುದು. ಎಣೆ ಗಬ್ಬ ಎಂದಿದ್ದರೂ ಅವುಗಳ ನಡುವೆ ಕಾಲದ ಅಂತರವಿದೆ. 'ರತ್ನನ ಪದಗಳು' ಪ್ರಕಟ(೧೯೩೪)ವಾದ ಹದಿನೆಂಟು ವರ್ಷಗಳ ಅನಂತರ 'ನಾಗನ ಪದಗಳು' ಮುದ್ರಣಗೊಂಡಿತು. ಈ ದೀರ್ಘಕಾಲಿಕ ವಾದ ಮಧ್ಯಂತರಕ್ಕೆ ಕಾರಣವನನ್ನು ಊಹಿಸಿಕೊಳ್ಳಬಹುದು. ರತ್ನನ ಪದಗಳು ಅಚ್ಚಾಗುತ್ತಿದ್ದಂತೆ ರಾಜರತ್ನಂರಿಗೆ ಒದಗಿದ ಪತ್ನೀವಿಯೋಗದಿಂದ ತತ್‌ಕ್ಷಣದಲ್ಲಿ ಅವರ ಕಾವ್ಯೋತ್ಸಾಹವೂ ಕೊಂಚ ಬತ್ತಿತು ಎಂಬುದನ್ನು ಆಗಲೇ ಹೇಳಿದೆ. ಆದರೆ ಯಾವುದೋ ಒಂದು ಕೊಂಕುನುಡಿ, ರಾಜರತ್ನಂರನ್ನು ಕೆಣಕಿತು. ಅವರೇ ಹೇಳಿದಂತೆ inspiration- ಸ್ಫೂರ್ತಿ ಅಲ್ಲ, irritation- ಚುಚ್ಚುಮಾತು ನಾಗನ ಪದಗಳ ಹುಟ್ಟಿಗೆ ಕಾರಣವಾಯಿತು. "ರಾಜರತ್ನಂ ಅವರು ರತ್ನನ ಪದಗಳನ್ನು ಬರೆದದ್ದು ಒಂದು ಆಕಸ್ಮಿಕ, fuke. ಅಲ್ಲದಿದ್ದರೆ ಆಮೇಲೆ ಅವರು ಆ ಪುಸ್ತಕದಲ್ಲಿರುವ ಒಂದಾದರೂ ಪದ್ಯ ಬರೆದಿದ್ದಾರೆಯೇ'' ಎಂದು ಯಾರೋ ಆಡಿದ ಮಾತು

ರಾಜರತ್ನಂರನ್ನು ತಿವಿದು, ಲೇಖನಿಯನ್ನು ಎತ್ತಿಕೊಳ್ಳುವಂತೆ ಮಾಡಿತು. ಹಾಗೆ ಎತ್ತಿದ ಲೇಖನಿಯ ಮೊನೆಯಿಂದ ಮೂಡಿ ಬಂದದ್ದೇ "ನಾಗನ ಪದಗಳು".

ನಾ ನಾಗ ಮುತ್ತು
ಶಾನೆ ದಿವಸಾಗಿತ್ತು
ಯಿಂಗೆ ನಾ ಯೆಡೆನೆತ್ತಿ ನಿತ್ತು

ಎಂದು ನಾಗ ಬುಸುಗುಟ್ಟಿದ.

ರತ್ನನ ಪದಗಳಲ್ಲಿರುವಂತೆಯೇ ನಾಗನ ಪದಗಳಲ್ಲೂ ವಿಷಯವೈವಿಧ್ಯವಿದೆ. ಆದರೆ ನಾಗ ಮಲ್ಲಿಯರ ಒಡಬಾಳ್ವೆ, ಮನೆವಾರ್ತೆ ಮತ್ತು ಅವರ ಮಕ್ಕಳ ನಡೆನುಡಿಗಳಿಗೆ ಪ್ರಾಧಾನ್ಯ, ಮಲ್ಲಿಯ ತಿಳಿಮನಸ್ಸು, ಬೆಚ್ಚನೆಯ ಒಲುಮೆ, ಹುಸಿಮುನಿಸು ಮತ್ತು ಮಕ್ಕಳ ಊಟ-ಪಾಠ-ಆಟ-ಕಾಟಗಳೊಂದಿಗೆ ಊರು-ಕೇರಿಯ ಜನ, ಅವರ ರೀತಿನೀತಿಗಳೂ ಲೋಕವ್ಯವಸ್ಥೆಗಳ ನಿರೂಪಣೆಯೂ ಹದವಾಗಿ, ಹಾಳತವಾಗಿ, ಇಲ್ಲಿಯ ಪದಗಳಲ್ಲಿ ಬಂದಿವೆ. ಅವುಗಳನ್ನು ಹೇಳುವ ಭಾಷೆ, ಕಟ್ಟಿರುವ ಬಂಧಗಳು ಮೇಲ್ನೋಟಕ್ಕೆ 'ರತ್ನನ ಪದಗಳ'ಲ್ಲಿರುವಂತೆಯೇ ಕಂಡರೂ ಕಣ್ಣಿಟ್ಟು ನೋಡಿದರೆ ಭಿನ್ನತೆಯೂ ಗೋಚರಿಸುತ್ತದೆ. ಅಂತಸ್ಸತ್ವದಲ್ಲಿ "ಇವು ಎರಡೂ ಒಂದೇ ಜಾತಿಯವು, ಪ್ರಾಕೃತವರ್ಗದ ಪದ್ಯರಚನೆಗಳು" ಎಂದು ಹೇಳಿದ್ದಾರೆ ರಾಜರತ್ನಂ.

'ರತ್ನನ ಪದಗಳ'ಲ್ಲಿ ರತ್ನ-ನಂಜಿಯರ ದಾಂಪತ್ಯಚಿತ್ರಣವಿದೆ. ಅದು ಸುಂದರವಾಗಿಯೇ ಇದೆ. ಆದರೆ ಅದು ಅವರಿಬ್ಬರಿಗೇ ಸೀಮಿತವಾದದ್ದು. 'ನಾಗನ ಪದಗಳ'ಲ್ಲಿ ಹಾಗಲ್ಲ. ಅಲ್ಲಿ ವರ್ಣಿತವಾಗಿರುವ ನಾಗ-ಮಲ್ಲಿಯರ ದಾಂಪತ್ಯ ಅದರ ಬೇರೆ ಮುಖಗಳನ್ನೂ ಕಾಣಿಸುತ್ತದೆ. 'ನಲ್ಲೀ ತಾವ್ ನಂ ಮಲ್ಲಿ' ಮತ್ತು 'ಪ್ರಾಯ ತಂದ ವಡವೆ'ಯಲ್ಲಿ ನಾಗನಿಗೆ ತನ್ನ ಮಡದಿಯ ಚೆಲುವಿನ ಬಗೆಗೆ ಹಿಗ್ಗಾದರೆ, 'ನನ್ನ ಯೆಂಡತ್ತಿ'ಯಲ್ಲಿ ಆಕೆ ಮನೆಯೊಡತಿಯಾಗಿ ಅದನ್ನು ನಿರ್ವಹಿಸುವ ಕುರಿತು ತುಂಬು ಮನಸ್ಸಿನ ಮೆಚ್ಚಿಕೆ ಕಾಣುತ್ತದೆ. 'ತಿರುಮಂತ್ರ'ದಲ್ಲಿ ಹಳ್ಳಿಯ ಮುಗುದೆ ಎಂಬ ಭಾವನೆಯಿಂದ ಮಲ್ಲಿಗೆ ಸೈಕಲ್ ಕಲಿಸಲು ಹೊರಡುವ ನಾಗ ತಾನೇ ಆಕೆಯ ಕಸರತ್ತಿಗೆ ಬೆಚ್ಚಿಪೆಚ್ಚಾಗುವ ಸ್ವಾರಸ್ಯವಿದೆ. 'ಮಕ್ಕಳಿವು ಮೂರು' ಮತ್ತು 'ಆಲು-ಕೆನೆ'ಗಳಲ್ಲಿ ಮನೆ ಮಕ್ಕಳ ಚರ್ಯೆಗಳ, ಗುಣಪ್ರಭಾವಗಳ ನೈಜ ನಿರೂಪಣೆಯಿದೆ. 'ತುಳಸಿಪೂಜೆ' ಮತ್ತು 'ಮುತ್ತೈದೆ ಸಾವು'ಗಳಲ್ಲಿ ಒಮ್ಮೊಮ್ಮೆ ಗಂಡುಬೀರಿಯಾಗಿ, ಹಟಮಾರಿಯಾಗಿ, ಜಗಳಗಂಟಿಯಾಗಿ ಕಾಣುವ ಮಲ್ಲಿಯ ಒಳಬಗೆಯೇ ಬೇರೆ ಎಂಬುದನ್ನು ಅತ್ಯಂತ ಮಾರ್ಮಿಕವಾಗಿ ತೆರೆದುತೋರಿಸುತ್ತದೆ. ಒಂದೆರಡು ಉದಾಹರಣೆಗಳನ್ನು ನೋಡಬಹುದು:

ಇದು ಮಲ್ಲಿಯ ಚೆಲುವಿನ ಬಣ್ಣನೆ-

ಬೇಲೂರು ಗುಡಿಯಾಗ್ ಕನಡಿ ಕೈಯಿನ್
ಯಿಗ್ರಾ ಯಿಲ್ವಾ ಅಲ್ಲಿ-
ಅಂಗೇ ಕೈನಾಗ್ ಚೌರ್ಗ ಯಿಡಕಂಡ್
ನಲ್ಲೀ ತಾವ್ ನಂ ಮಲ್ಲೀ!

*   *   *

ನಿಂತ್ರೊಂ ಚಂದ! ಕುಂತ್ರೊಂ ಚಂದ!
ನಡಿತಾನಿದ್ರೆ ಒಂಚಂದ!
ಮಲ್ಲಿ ಚೌರ್ಗೆ ಬೆಳಗೋದ್ ಚಂದ!
ನೀರ್ ತುಂಬೋದೂ ಚಂದ!

*   *   *

ಮಲ್ಲಮ್ಮ- ನನ್ ಮಕ್ಕಳ್ ತಾಯಿ!
ಮಲ್ಲೀ- ನಂಗ್ ಔಳ್ ಯೆಂಡ್ರು!
ನಂ ಪ್ಯಾಟೇಗ್ ಔಳೇ ಪಾಳೇಗಾತಿ
ಯಿಂತೋಳನ್ ಯಾರ್ ಕಂಡ್ರು!

(ನಲ್ಲೀ - ತಾವ್ - ನಂ ಮಲ್ಲೀ)

ಮನೆ ಚಿತ್ರಣ ಹೀಗಿದೆ:

ವೊಂದು ಬಕಾಸುರ, ವೊಂದು ಯಿಡಿಂಬ,
ತೇಟು ತಾಟಕಿ ವೊಂದನಕ;
ಗೋಳು ವುಯ್ಕೊತವೆ; ಗದರು ಆಕಿದರೆ
ಸುಂಕೆ ನೋಡ್ತವೆ ಮಕಾಮಕ!

(ಮಕ್ಕಳಿವು ಮೂರು)

ಮನೆಯ ಮತ್ತು ನೆರೆಮನೆಯ ಮಕ್ಕಳು ಸೇರಿಕೊಂಡಾಗ ಏನಾಗುತ್ತದೆ ಎಂಬುದರ ವರ್ಣನೆ ಇಲ್ಲಿದೆ:

ಆಚೆ ಜೆಡೆ, ಈಚೆ ಜೆಡೆ
ನಡಿವೆ ಊನ್ನ ಶೇತವೆ!
ಅಕ್ಕ ತಂಗಿ ಕುಂತಂಗನೆ
ಕಟ್ಟೆ ಮ್ಯಾಗೆ ಕೂತವೆ!

*   *   *

ವುರಿಬಟಾಣಿ ಶಿಪ್ಪೆ ಸುಲಿದು
ಬಾಯಿಗ್ ಎಸಕೊತ-
ಯಿದ್ಕಿದ್ದಂಗೇ ಜಗಳ ಸುರು:
"ನಂದು! ನಂದ್ ತತ್ತ!"

*   *   *

ಯೀಗ ಶೆಕೆ, ಮತ್ತೆ ತಂಪು
ಚಕ್ಕರ್ ತಿರುಗೊ ಮಾದರಿ

ವೊದ್ದಾಡ್ತವೆ, ಮುದ್ದಾಡ್ತವೆ
ಅವಳಿ ಜವಳಿ ಕುರಿಮರಿ! (ಆಲು-ಕಿನೆ)

ಸಣ್ಣ ಪುಟ್ಟ ಕಾರಣಗಳಿಗಾಗಿ ಒಮ್ಮೊಮ್ಮೆ ಮಾತಿಗೆ ಮಾತು ಬೆಳೆದು, ಸೈರಣೆ ತಪ್ಪಿ ನಾಗ ಮಲ್ಲಿಯನ್ನು ಬಯ್ದು ಮಲ್ಲಿ ನಾಗನನ್ನು ಹಂಗಿಸುವುದೂ ಉಂಟು–

ಯಾವ ಗಳಿಗೆಲೋ ಕಟ್ಟಿದೆ ತಾಲಿ;
ನನ್ನ ಜೀವ, ಯೆಣ್ಣೆ, ನಿಂಗೇ ಅವಾಲೀ!

ಒಂದೇ ಗಳಿಗೆ ಇಂತಹ ಮಾತು, ಬಿರುಸು, ಮುನಿಸು– ಮತ್ತೆ 'ಮಾತಾಯಿ' ಯಲ್ಲಿ ನಾಗನ ಮೊರೆ ಇದು:

"ಮಾತಾಯಿ! ಮಲ್ಲಿನೇ ತಾಯ್‌ಬೇರು ನನ ಜೀವಮರಕ!
ಕೇಳುದಿಸ್ಟೇ ನಿನ್ನ! ಒಟ್ಟಗೇ ಯಿಬ್ಬರನು ಕರಕ!"

ಮನೆಯಂಗಳದ ತುಳಸಿಗೆ ನೀರೆರೆಯುವಾಗ ಮಲ್ಲಿ ಮಾಡಿಕೊಳ್ಳುವ ಬಿನ್ನಹ ಹೀಗಿರುತ್ತದೆ:

"ಬುದ್ಧಿ ಕೊಡು ತುಳಸಿ
ಮನೆಯ ಗಂಡಸಿಗೆ;
ಯಿದ್ದೆ ಕೊಡು ಕಲಿಸಿ
ಮೂರು ಅಸುಗೂಸ್ಗೆ;
ನಂಗೆ ಮಾತಾಯಿ-
ಕೊಡು ವೊದಲು ಬಕ್ತಿ!
ಮತ್ತೆ ಕೊಡು ಸಕ್ತಿ!
ಕಡೆಗೆ ಕೊಡು ಮುಕ್ತಿ!
ಕೊಟ್ಬು ನೀ ಕಾಯಿ!"

ಮೈಸೂರ ಚಾಮುಂಡಿಬೆಟ್ಟಕ್ಕೆ ಹೋದಾಗಲೂ ಗುಡಿಯಲ್ಲಿ ಮಲ್ಲಿ ಮಾಡುವ ಪ್ರಾರ್ಥನೆಯೂ ಇದೇ ಆಗಿದೆ:

'ಗಂಡನಿಗೆ ಆಯುಸ್ಸು, ಆರೋಗ್ಯ; ಮಕ್ಕಳಿಗೆ ಗುಣ, ಯಿದ್ದೆ, ಬಾಗ್ಯ; ತನಗೆ- ಮುತ್ತೈದಿ ಸಾವು!'

ನಾಗ-ಮಲ್ಲಿಯರ ದಾಂಪತ್ಯಜೀವನದ ಹಾರ್ದವರ್ಣನೆಗಳಿಂದ ಕೊಂಚ ಬೇರೆಯಾಗಿಯೇ ಉಳಿದರೂ ಪಾಯಸದ ರುಚಿಯೇರಿಸುವ ದ್ರಾಕ್ಷೆ ಗೋಡಂಬಿಗಳಂತೆ ಸಂಗ್ರಹದ ಕವಿತೆಗಳ ಎಡೆಯಲ್ಲಿ ಮತ್ತು ಕೊನೆಯಲ್ಲಿ 'ಕಪಿತೆ ಗುರಾಣಿ' 'ಗಳ್ಡವಾಲನ' (ಗರುಡವಾಹನ) 'ವೋಯ್ತೂ ನಿಯತ್ತು', 'ಕಂಡಕ್ಟರ್ ಕಂದಾರಿ', 'ಅಳ್ಳೀಮರ' (ಅರಳಿಮರ)ಗಳಂತಹ ರಚನೆಗಳೂ ಇವೆ. ಇವು ಪರಿವರ್ತನಗೊಳ್ಳುತ್ತಿರುವ ಸಾಮಾಜಿಕ ರೀತಿನೀತಿಗಳ, ಅವುಗಳ ಮೇಲೆ ಆಗುತ್ತಿರುವ ವಿವಿಧ ಪ್ರಭಾವಗಳ ಮತ್ತು ಸಂಕೀರ್ಣವಾಗುತ್ತಿರುವ ಜೀವನಕ್ರಮಗಳ ಮೇಲೆ ಬೆಳಕನ್ನು ಬೀರುತ್ತವೆ.

'ರತ್ನನ ಪದಗಳ'ಲ್ಲಿ ಮತ್ತು 'ನಾಗನ ಪದಗಳ'ಲ್ಲಿ ರಾಜರತ್ನಂ ಬಳಸಿರುವ ಭಾಷೆಯ ಮೇಲೆ ವಿಮರ್ಶಕರು ಬಗೆಬಗೆಯ ಸೀಳುನೋಟಗಳನ್ನು ಹಾಯಿಸಿದ್ದಾರೆ. ರತ್ನನ ಪದಗಳಲ್ಲಿರುವುದು ಜನಸಾಮಾನ್ಯರ ಆಡುನುಡಿಯೋ, ಅನಕ್ಷರಸ್ಥರ ಗ್ರಾಮ್ಯ ಭಾಷೆಯೋ, ಹೆಂಡ ಮಾರುವ-ಹೀರುವ ಮಂದಿಯ ದೊರಗು ಮಾತೋ ಎಂಬುದರ ವಿಶ್ಲೇಷಣೆಯನ್ನು ಮಾಡಿದ್ದಾರೆ. ರಾಜರತ್ನಂ 'ರತ್ನನ ಪದಗಳ'ನ್ನು ಬರೆದ ಕಾಲಕ್ಕೆ ಅಥವಾ ಅದರ ಹಿಂದೆ ಮುಂದೆ ಮಾಸ್ತಿಯವರು ತಮ್ಮ 'ಚೆಲುವು' ಸಂಗ್ರಹದ ಕೆಲವು ಪದ್ಯಗಳಲ್ಲಿ, ಬೇಂದ್ರೆಯವರು ತಮ್ಮ ಕೆಲವು ಕವಿತೆಗಳಲ್ಲಿ ಮಿರ್ಜಿ ಅಣ್ಣಾರಾಯರು 'ನಿಸರ್ಗ'ವೆಂಬ ಕಾದಂಬರಿಯಲ್ಲಿ ಆಡುನುಡಿಯನ್ನು ಬಳಸಿದ್ದರು. ಕೈಲಾಸಂ ಅವರು ತಮ್ಮ ನಾಟಕಗಳಿಗಾಗಿ ಕನ್ನಡಾಂಗ್ಲಮಿಶ್ರಿತವಾದ ವಿಶಿಷ್ಟಭಾಷೆಯೊಂದನ್ನು ರೂಪಿಸಿ ಕೊಂಡಿದ್ದರು. ರಾಜರತ್ನಂ ಅವನ್ನೆಲ್ಲ ಓದಿ ತಿಳಿದವರಾಗಿದ್ದರು. ಆದರೆ ಅವರು ಅವು ಗಳಿಂದ ಪ್ರೇರಿತರಾದರೇ, ಅವುಗಳನ್ನು ಅನುಸರಿಸಿದರೇ ಎಂಬುದನ್ನು ಹೇಳುವುದು ಕಷ್ಟ. ರಾಜರತ್ನಂ ಅವರ ಕಾವ್ಯವಸ್ತುವನ್ನು ಮೆಚ್ಚಿ, ಭಾಷಾ ವೈಶಿಷ್ಟ್ಯವನ್ನು ಎತ್ತಿ ಹೇಳುವ ವಿಮರ್ಶಕರು, ಭಾಷಾಸ್ವರೂಪ ನಿರ್ಣಯದಲ್ಲಿ ಮಾತ್ರ ವಿಭಿನ್ನ ಅಭಿಪ್ರಾಯ ಗಳನ್ನು ಹೊಂದಿದ್ದಾರೆ. ಅದು ಏನೇ ಇರಲಿ, ರಾಜರತ್ನಂ ಅವರು ತಮ್ಮ ಕಾವ್ಯ ಪಾತ್ರ (ರತ್ನ, ನಂಜಿ, ಬೇವಾರ್ಸಿ, ಮುನಿಯ, ನಾಗ, ಮಲ್ಲಿ ಇತ್ಯಾದಿ)ಗಳಿಗೆ ಮತ್ತು ವಸ್ತು ಗಳಿಗೆ ಉಚಿತವೆಂದು ತೋರುವ ಭಾಷೆಯೊಂದನ್ನು ಹೊಂದಿಸಿಕೊಂಡ ರೆಂಬುದು ಸಲ್ಲುವ ಮಾತಾಗುತ್ತದೆ.

* * *

ವ್ಯಂಗವಿನೋದ :

(ಅ) ಪುರುಷ ಸರಸ್ವತಿ

ರಾಜರತ್ನಂ ಬರೆದಿರುವ ಮಾತ್ರವಲ್ಲ, ಕನ್ನಡದಲ್ಲಿ ಬಂದಿರುವ ವ್ಯಂಗ್ಯವಿನೋದ ಕೃತಿಗಳಲ್ಲಿ 'ಪುರುಷ ಸರಸ್ವತಿ'ಗೊಂದು ವಿಶಿಷ್ಟ ಸ್ಥಾನವಿದೆ.

ಆ ಪುಸ್ತಕದ ರಚನೆಗೆ ಪ್ರೇರಣೆಯಾದ ಸಂದರ್ಭ ಹೀಗಿದೆ:

೧೯೩೭ರಲ್ಲಿ ಜಮಖಂಡಿಯಲ್ಲಿ ಇಪ್ಪತ್ತೆರಡನೆಯ ಕನ್ನಡ ಸಾಹಿತ್ಯ ಸಮ್ಮೇಳನ ಜರಗಿತು. ಸಮ್ಮೇಳನಾಧ್ಯಕ್ಷ ಬೆಳ್ಳಾವೆ ವೆಂಕಟನಾರಣಪ್ಪನವರು ತಮ್ಮ ಭಾಷಣದಲ್ಲಿ ಪ್ರಾಸಂಗಿಕವಾಗಿ, "ಮಹಾರಾಷ್ಟ್ರರಂತೆ ಕನ್ನಡಿಗರಲ್ಲಿ ಒಕ್ಕಟ್ಟಿಲ್ಲ; ನಮ್ಮ ಮಾತೆಯ ಹೆಸರನ್ನು 'ಕರ್ನಾಟಕ' ಎಂದು ಕೆಲವರೂ 'ಕರ್ಣಾಟಕ' ಎಂದು ಮತ್ತೆ ಕೆಲವರೂ ಹಠ ಹಿಡಿದು ಬರೆಯಲು ಸಾಧಿಸುತ್ತ ಬಂದು, ಒಂದು ಶಬ್ದಕ್ಕೆ ಏಕರೂಪತೆ ಕೊಡಲು ಒಪ್ಪದ ನಾವು ಒಕ್ಕಟ್ಟಾಗುವುದು ಹೇಗೆ?" ಎಂದು ಪ್ರಶ್ನಿಸಿದರು. ಆ ಪ್ರಶ್ನೆಯೇ ಕಾರಣ ವಾಗಿ ಪಂಡಿತ ಮಂಡಲಿಗಳಲ್ಲಿ, ಪತ್ರಿಕೆಯ ಪುಟಗಳಲ್ಲಿ, ಸಂಪಾದಕೀಯ ಅಗ್ರಲೇಖನ ಗಳಲ್ಲಿ, 'ಕರ್ಣಾಟಕವೋ' 'ಕರ್ನಾಟಕವೋ' ಎಂಬ ವಾದ-ವಿವಾದ ಸುಂಟರ ಗಾಳಿಯಂತೆ ಕಾಣಿಸಿ, ಬೀಸತೊಡಗಿತು. ಜನ ಎಷ್ಟೊಂದು ಉದ್ವೇಗದಿಂದ, ಆವೇಶ

ದಿಂದ, ಕೋಪದಿಂದ ಚರ್ಚಿಸಿದರೆಂದರೆ, ಶಿವರಾಮ ಕಾರಂತರಂತಹವರು, ಈ 'ನ–ಣ' ಜಿಜ್ಞಾಸೆಯನ್ನು 'ನೊಣ' ಜಗಳ ಎಂದು ಲೇವಡಿ ಮಾಡುವಷ್ಟಾಯಿತು. ರಾಜರತ್ನಂ ರವರೂ, ಮೊದಮೊದಲು ದೂರನಿಂತೇ ಮಾತಿನ ಈ ಮಲ್ಲಗಾಳಗವನ್ನು ನೋಡಿ ನಗುತ್ತಿದ್ದರು. ಆದರೆ ಮತ್ತೆ ಅವರೂ ಅಪ್ರಯತ್ನವಾಗಿ ಈ ಕಾಳಗದ ಕಳಕ್ಕೆ ಧುಮುಕಿದರು. ಅದು ಹೀಗೆ:

'ಕರ್ಣಾಟಕ'ವೋ 'ಕರ್ನಾಟಕ'ವೋ – ಯಾವುದು ಸರಿ, ಯಾವುದು ತಪ್ಪು ಎಂಬುದಾಗಿ ಬೆಂಗಳೂರಲ್ಲಿ ಅಲ್ಲಲ್ಲಿ ಪಂಡಿತಮಂಡಲಿಗಳಲ್ಲಿ ಚರ್ಚೆ ನಡೆಯುತ್ತಿತ್ತು. ಅಂತಹದೊಂದು ಸಭೆಯಲ್ಲಿ ರಾಜರತ್ನಂ ಅವರೂ ಭಾಗವಹಿಸಿ, ವ್ಯವಹಾರ ದೃಷ್ಟಿಯಿಂದ, ವಸ್ತುನಿಷ್ಠವಾಗಿ ತಮಗೆ ಸಂಗತವೆಂದು ತೋರಿದ ಕೆಲವು ಮಾತುಗಳನ್ನು ಆಡಿದರು. ಮತ್ತೆ, "ಇತರರು ಚಿನ್ನದಲ್ಲಿರುವ 'ನ'ಕಾರದ ಕರ್ನಾಟಕಕ್ಕೆ ಹೋರಾಡುತ್ತಿದ್ದರೆ ನೀವು ಮಣ್ಣಿನಲ್ಲಿರುವ 'ಣ'ಕಾರದ ಕರ್ಣಾಟಕಕ್ಕೆ ಕೂಗಾಡಿ" ಎಂದು ಹೇಳಿ ಮಾತು ಮುಗಿಸಿದರು. ಮಾತ್ರವಲ್ಲ, ಸಭೆಯ ಅಂತ್ಯದಲ್ಲಿ 'ಕರ್ನಾಟಕ' ತಪ್ಪೆಂದೂ 'ಕರ್ಣಾಟಕ'ವೇ ಸರಿಯೆಂದೂ ಮಾಡಲಾದ ನಿರ್ಣಯವನ್ನು ಅವರು ವಿರೋಧಿಸಿದರು. ಆದರೆ ಮೂರನೆಯ ದಿನ ಪತ್ರಿಕಯಲ್ಲಿ ಅವರು ಆಡಿದ ಮಾತು ಅನ್ಯಾರ್ಥ ಬರುವಂತೆ ವರದಿಯಾಗಿತ್ತು. ರಾಜರತ್ನಂ ತಿದ್ದುಪಡಿ ಕಳುಹಿಸಿದರು. ಅದಕ್ಕೆ ಪತ್ರಿಕೆಯ ವಿವರಣೆ ಬಂತು. ರಾಜರತ್ನಂ ಮತ್ತೆ ಪ್ರತಿವಾದ ಹೂಡಿದರು. ಕೆಲವು ದಿನಗಳ ಬಳಿಕ ಯಾರದೋ ಯಾವುದೋ ಕೆಣಕಿಗೆ ಒಳಗಾದ ರಾಜರತ್ನಂ ಒಂದು ಲೇಖನ ಬರೆದು ಪತ್ರಿಕೆಯಲ್ಲಿ ಪ್ರಕಟಿಸಿದರು. ಅದನ್ನು ಓದಿದ ದೊಡ್ಡ ಗಂಟಲಿನವರು ಒಂದಷ್ಟು ಬೊಬ್ಬೆ ಹೊಡೆದರು. ರಾಜರತ್ನಂ ಅವರು ಅನುಪಯುಕ್ತವೂ ಅಹಿತಕರವೂ ಆಗಿರುವ ವಾದ–ವಿವಾದಗಳಲ್ಲಿ ಎಂದಿಗೂ ಒಳಗೊಳ್ಳಬಾರದೆಂಬ ಸಂಕಲ್ಪ ಮಾಡಿದ್ದರೂ ಅವರ ಸುಪ್ತಮಾನಸದಲ್ಲಿ ಗುಪ್ತವಾಗಿದ್ದ ವ್ಯಂಗ್ಯ ವಿಡಂಬನ ಪ್ರಜ್ಞೆ ಒಂದು ಅಪೂರ್ವ ಗ್ರಂಥರೂಪದಲ್ಲಿ ಪ್ರಕಟವಾಗಿಯೇ ಬಿಟ್ಟಿತು! ಆ ಗ್ರಂಥ ಅನೇಕಾಂಶಗಳಲ್ಲಿ ವಿಶಿಷ್ಟವಾದದ್ದು. ಅದಕ್ಕೆ ಶೀರ್ಷಿಕೆಗಳು ಎರಡು: ಮುಖಪುಟದಲ್ಲಿ "ಗುಂಡ್ಲುಪಂಡಿತ ಶ್ರೀ ರಾಜರತ್ನ ಕೃತ ಮಹಾಕವಿ ಪುರುಷ ಸರಸ್ವತಿ" ಎಂದಾದರೆ ಒಳಪುಟದಲ್ಲಿ "ಮಹಾಕವಿ ಪುರುಷ ಸರಸ್ವತಿ ಪ್ರಣೀತಮಪ್ಪ ಶತಕಾರ್ಥತ್ರಯೀ ಎಂಬ ತ್ರಿಲೋಕತುಲ್ಯ ಮಹಾ ಕ್ಷುದ್ರಕಾವ್ಯಪ್ರಪಂಚವು" ಎಂಬ ಸುದೀರ್ಘನಾಮವಿಶೇಷ. ಪುಸ್ತಕದ ಮತ್ತೊಂದು ವೈಶಿಷ್ಟ್ಯವೆಂದರೆ ಸುವಿಖ್ಯಾತನಾಮರಾದ ಸಾಹಿತಿಸಪ್ತಕರಿಂದ 'ಪುರುಷಸರಸ್ವತಿ'ಗೆ ಮುನ್ನುಡಿಯ ಅಲಂಕರಣ. ಭಾಮಿನಿ, ವಾರ್ಧಕ ಷಟ್ಪದಿಗಳನ್ನೂ ಕಂದವೃತ್ತಗಳನ್ನೂ ಸಲಕ್ಷಣವಾಗಿ ಮತ್ತು ವಿಪುಲವಾಗಿ ಬಳಸಿರುವುದಲ್ಲದೆ, ನವನವೀನವಾದ ಅಲಂಕಾರಗಳನ್ನೂ ರಚಿಸಿ ಪುರುಷಸರಸ್ವತಿಗೆ ತೊಡಿಸಿದ್ದಾರೆ! ನವಕವಿಗಳು ಛಂದೋಬಂಧಗಳನ್ನು ಮೀರಿ, ಕಾವ್ಯಲಕ್ಷಣಗಳನ್ನು ಗಾಳಿಯಲ್ಲಿ ತೂರಿ, ಬರುಗವಿತೆಗಳ ನಿರ್ಗಂಧ ಪುಷ್ಪಗಳ ಮಾಲೆ ಕಟ್ಟುತ್ತಿದ್ದಾರೆ ಎಂಬ ಸಂಪ್ರದಾಯವಾದಿಗಳ ಬಾಯಿ ಮುಚ್ಚಿಸಿರುವುದಲ್ಲದೆ ಹೊಸಗನ್ನಡದಲ್ಲಿ ಆವರೆಗೆ (೧೯೪೦) ವಿರಳವಾಗಿದ್ದ 'ವಿಡಂಬನೆ'ಯೆಂಬ ಸಾಹಿತ್ಯ ಕೃಷಿಗೆ ಸಾರವತ್ತಾದ ಕ್ಷೇತ್ರವನ್ನೂ ರಾಜರತ್ನಂ ಒದಗಿಸಿದ್ದಾರೆ.

(ಆ) ನಿರ್ಭಯಾಗ್ರಫಿ:

'ಪುರುಷ ಸರಸ್ವತಿ'ಯ ಪ್ರಕಟನೆ ೧೯೪೦ರ ಘಟನೆ. ಎಷ್ಟೋ ವರ್ಷಗಳ ಅನಂತರ ೧೯೭೨ರಲ್ಲಿ ರಾಜರತ್ನಂ ಮತ್ತೊಂದು ಬಗೆಯ irritationಗೆ ಒಳಗಾಗ ಬೇಕಾಯಿತು. ಅವರ ವೈಯಕ್ತಿಕವಾದ ನಂಬಿಕೆ, ನಡವಳಿಕೆಗಳನ್ನೂ ಸಾಹಿತ್ಯ ಪರಿಚಾರಿಕೆಯನ್ನೂ ಚುಚ್ಚಿ, ಲೇವಡಿ ಮಾಡಿ ಒಬ್ಬ ಮಹನೀಯರು ಒಂದು ಸಾಪ್ತಾಹಿಕದಲ್ಲಿ ಲೇಖನಗಳನ್ನು ಬರೆದರು. ಆ ಲೇಖನಗಳ ಸತ್ಯಾಸತ್ಯತೆಗಳನ್ನು ಪರಾ ಮರ್ಶಿಸದೆ, ಇನ್ನೂ ಒಬ್ಬಿಬ್ಬರು ಅವುಗಳನ್ನು ಸಮರ್ಥಿಸಿ, ಶ್ಲಾಘಿಸಿ, ರಾಜರತ್ನಂ ಅವರನ್ನು ಹಂಗಿಸಿ–ಭಂಗಿಸುವ ಲೇಖನಗಳನ್ನು ಬೇರೆಬೇರೆ ಪತ್ರಿಕೆಗಳಲ್ಲಿ ಪ್ರಕಟಿಸಿದರು. ರಾಜರತ್ನಂ ಈ ಆರೋಪ ಆಲಾಪಗಳನ್ನೆಲ್ಲ ಕೇಳಿದರು; ಕೇಳಿಯೂ ತುಟಿ ಬಿಗಿದು ಗಟ್ಟಿಯಾಗಿ ಕುಳಿತರು. ತಮ್ಮ ಸಹನೆಗೆ 'Sky is the limit' ಎಂಬುದೇ ಅವರ ನಿರ್ಧಾರ. ಆದರೆ ಈ ಮೌನಕ್ಕೆ ಪ್ರತಿವಾದಿಗಳು ಅಪಾರ್ಥ ಮಾಡಬಹುದೆಂದೂ ಆದುದರಿಂದ ಆಕ್ಷೇಪಗಳಿಗೆ ಉತ್ತರಿಸಬೇಕೆಂದೂ ಅವರ ಶಿಷ್ಯರೂ ಮಿತ್ರರೂ ಅಭಿಮಾನಿಗಳೂ ಒತ್ತಾಯಿಸಿದರು. ಅದೂ ಅಲ್ಲದೆ ರಾಜರತ್ನಂರ ಕೃತಿರತ್ನ 'ರತ್ನನ ಪದಗಳ' ಸ್ವಯಂಕಲ್ಪನೆಯನ್ನೂ ಅವರ ಟೀಕಾಕಾರರು ಪ್ರಶ್ನಿಸಿದ್ದರು. ಆಗ ರಾಜರತ್ನಂ ರಿಗೆ 'This is the limit' ಎಂದು ತೋರಿತು. ಇನ್ನು ಸುಮ್ಮನಿದ್ದರೆ ಷಂಡತನ ವಾದೀತು ಎಂದು ಭಾವಿಸಿದ ರಾಜರತ್ನಂ ಶಸ್ತ್ರಗ್ರಹಣ ಮಾಡಿದರು. ಅವರ ಅಕ್ಷಯ ತೂಣೀರದಿಂದ ಮತ್ತೊಮ್ಮೆ ವ್ಯಂಗ್ಯ ವಿಡಂಬನೆಗಳ ನಿಶಿತಾಸ್ತ್ರಗಳು ಪುಂಖಾನುಪುಂಖ ವಾಗಿ ಚಿಮ್ಮಿ ಹೊಮ್ಮಿದುವು; ಪ್ರತಿವಾದಿಗಳನ್ನು ಎಲ್ಲೆಂದರೆ ಅಲ್ಲಿ ಚುಚ್ಚಿ ಚಚ್ಚಿದುವು. 'ಚಕ್ರವರ್ತಿ ವಜ್ರ ಅಥವಾ ಪುರುಷ ಸರಸ್ವತಿಯ ಪುನರುತ್ಥಾನ', 'ಕೊರವಂಜಿಯ ದಾರಿಯಲ್ಲಿ', 'ಹಾಸ್ಯದ ಬಡಿಗೆ', 'ವಜ್ರವಾದ ರತ್ನ', 'ಅನಕೃ ಮತ್ತು ನಾನು', 'ಶಿಶುಪಾಲ ವಧ', 'ಶನಿಕಾಟ', 'ಸರ್ ರಾಜರತ್ನಂ' ಮತ್ತು 'ಶ್ವೇತಾತಪತ್ರ' ಎಂಬ ಶೀರ್ಷಿಕೆಗಳಲ್ಲಿ ಒಂಬತ್ತು ಪುಸ್ತಕಗಳನ್ನು ಪ್ರಕಟಿಸಿ, ತಮ್ಮ ವೈಯಕ್ತಿಕ ಜೀವನ ಹಾಗೂ ಸಾಹಿತ್ಯ ಪರಿಚಾರಿಕೆಗಳನ್ನು ಕುರಿತು ಎತ್ತಲಾದ ಒಂದೊಂದು ಪ್ರಶ್ನೆಗಳಿಗೂ ಸಮುಚಿತ ವಾದ ಉತ್ತರಗಳನ್ನು ನೀಡಿ, ಪ್ರತಿವಾದಿಗಳನ್ನು ನಿರಸ್ತ್ರಗೊಳಿಸಿದರು. ಆ ಒಂಬತ್ತು ಪುಸ್ತಕಗಳಿಗೆ 'ನಿರ್ಭಯಾಗ್ರಫಿ' ಎಂಬ ಸಮಾನಶೀರ್ಷಿಕೆಯನ್ನು ನೀಡಿ, ತಮ್ಮದು 'ಭಯಾಗ್ರಫಿ'ಯಲ್ಲ, 'ಬಯ್ಯೋಗ್ರಫಿ'ಯೂ ಅಲ್ಲ 'ನಿರ್ಭಯಾಗ್ರಫಿ' ಎಂಬುದನ್ನು ಸ್ಪಷ್ಟ ಪಡಿಸಿದರು. ಸಟೆಯನ್ನೇ ಸವಿದು ಮೆಚ್ಚುವವರಿಗೆ ರಾಜರತ್ನಂ ಅವರ ಕಶಾಘಾತದಿಂದ ನೋವಾಗಿದ್ದರೆ ಅದು ಅವರ ಪ್ರಾಪ್ತಿ; ಆದರೆ ದಿಟವನ್ನು ಒಪ್ಪುವವರಿಗೆ ಆ ಒಂಬತ್ತು ಕಂತುಗಳನ್ನು ಓದಿದಾಗ ಪೂರ್ಣ ತೃಪ್ತಿ.

* * *

ಆತ್ಮಕಥನ : ಹತ್ತು ವರುಷ

ಬೆಳ್ಳಿ, ಚಿನ್ನಗಳಲ್ಲದ 'ಜ್ಯೂಬಿಲಿ'!

ಜೀವನರಂಗದಲ್ಲೂ ಸಾಹಿತ್ಯಕ್ಷೇತ್ರದಲ್ಲೂ ಎದುರಾದ ಸಮಸ್ಯೆ, ಸಂಘರ್ಷ, ಸಂಕಷ್ಟಗಳ ಹೆದ್ದೊರೆಗಳಿಗೆ ಎದುರಾಗಿಯೇ 'ಈಸುತ್ತೇನೆ', 'ಜೈಸುತ್ತೇನೆ' ಎಂಬ ಛಲದಿಂದ ಮುಂಬರಿದವರು ರಾಜರತ್ನಂ. 'ಜೈಸುತ್ತೇನೆ' ಎಂಬ ಅಹಂ ಅವರಲ್ಲಿ ಇರಲಿಲ್ಲ; ಆದರೆ ಈಸುವುದರಲ್ಲಿ ಅವರಿಗೆ ಶ್ರದ್ಧೆಯಿತ್ತು, ಜೀವನಕ್ಕೆ ಅವರು ನಿಷ್ಠರಾಗಿದ್ದರು. ಮಿಗಿಲಾಗಿ ಅವರಲ್ಲಿ ಅಖಂಡ ದೈವಭಕ್ತಿಯಿತ್ತು. 'ಕಷ್ಟಕಾರ್ಪಣ್ಯಗಳು ಎದುರಾದಾಗ ಬೆಂಗೊಡಬೇಡ, 'Do not quit, but turn to God' ಎಂಬುದನ್ನು ಅವರೇ ಒಂದು ಕಡೆ ಹೇಳಿದ್ದಾರೆ. ರಾಜರತ್ನಂ ಅವರ ಜೀವನವಾಗಲೀ, ಸಾಹಿತ್ಯ ವ್ಯವಸಾಯವಾಗಲೀ ಎಂದೂ ಸರಳರೇಖೆಯಾಗಿರಲಿಲ್ಲ. ಅವು ಹಲವು ಏರು ಇಳಿತಗಳಲ್ಲಿ ಅಂಕುಡೊಂಕುಗಳಾಗಿ ಸಾಗಿದ ಪ್ರವಾಹ. ಆದರೆ 'ವಕ್ರತೆಯಲ್ಲೂ ಸೌಂದರ್ಯವಿದೆ'(Beauty lies in curves)ಯೆಂದು ಹೇಳುವಂತೆ ರಾಜರತ್ನಂ ಅವರ ವಾಙ್ಮಯಕ್ಕೂ ವ್ಯಕ್ತಿತ್ವಕ್ಕೂ ವಿಶಿಷ್ಟವಾದ ಸತ್ವ, ಸ್ವತ್ವ ಮತ್ತು ಸೌಂದರ್ಯಗಳನ್ನು ಈ ಸುತ್ತುಸುಳಿವುಗಳೂ ಏರಿಳಿತಗಳೂ ತಂದುಕೊಟ್ಟಿವೆ.

ರಾಜರತ್ನಂ ಅವರ ಜೀವನದ ಮತ್ತು ಸಾಹಿತ್ಯಕೃಷಿಗಳ ಅತಿಮುಖ್ಯ, ಅವಿಭಾಜ್ಯ ಅಂಗವೆಂದರೆ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಅವರ ಅಧ್ಯಾಪನ ಮತ್ತು ಆ ಕಾಲೇಜಿನ ಕರ್ಣಾಟಕಸಂಘದ ನಿಕಟಸಂಬಂಧ. ಎಂ. ಎ. ಪದವೀಧರನಾದ ಅನಂತರ ಏಳೆಂಟು ವರ್ಷಗಳನ್ನು ಹಾಗೂ ಹೀಗೂ ದೂಡಿದ ರಾಜರತ್ನಂ ಅವರಿಗೆ ೧೯೩೮ರಲ್ಲಿ ಕಾಲೂರುವುದಕ್ಕೆ ನೆಲೆಯೊಂದು ಸಿಕ್ಕಿತು. ಆ ವರ್ಷ ಮೈಸೂರು, ಮಹಾರಾಜಾ ಕಾಲೇಜಿನಲ್ಲಿ ತಿಂಗಳಿಗೆ ನಲ್ವತ್ತು ರೂಪಾಯಿ ಸಂಬಳದ 'ಕನ್ನಡ ಪಂಡಿತ'ನೆಂಬ –ಪರಮ– ಪದಪ್ರಾಪ್ತವಾಯಿತು. ಇದ್ದುದರಲ್ಲಿ ಅದೇ ಅವರ ಪಾಲಿಗೆ ಬಂದ ದೊಡ್ಡ ಹುದ್ದೆ. ಅಲ್ಪತೃಪ್ತ ರಾಜರತ್ನಂ ಆ ವೃತ್ತಿಯನ್ನು ನೆಮ್ಮದಿಯಿಂದಲೇ ಒಪ್ಪಿದರು ಎಂಬುದನ್ನು ಹಿಂದೆ ಹೇಳಿದೆ. ವಾರದಲ್ಲಿ ಭರ್ತಿ ಹದಿನಾರು ಗಂಟೆಗಳ ಪಾಠ, ಪಾಠಕ್ಕೆ ಪೂರ್ವಸಿದ್ಧತೆ, ಅವುಗಳ ಜತೆಗೆ ವಿದ್ಯಾರ್ಥಿಗಳ ಪ್ರಬಂಧಗಳನ್ನು ತಿದ್ದುವ ಕೆಲಸಗಳಲ್ಲಿ ಬೇರೆ ಓದುಬರೆಹಗಳಿಗೆ ಕಾಲವೇ ಸಿಗಂದಂತಾಯಿತು. ಆಗ, "ಇಲ್ಲಿಗೆ ನನ್ನ ಸಾಹಿತ್ಯಕ್ಕೆ ಸಮಾಧಿ"ಯೆಂದೇ ಅವರಿಗೆ ತೋರಿತು! ೧೯೨೮ರಲ್ಲಿ ಮುಂಬಾಗಿಲಿಂದ ಸಾಹಿತ್ಯ ಶಾರದೆಯ ಮಹಮನೆಯನ್ನು ಪ್ರವೇಶಿಸಿದ ರಾಜರತ್ನಂ ಆ ಮೇಲಿನ ಹತ್ತು ವರ್ಷಗಳ (೧೯೩೮) ತಮ್ಮ ಸಾಹಿತ್ಯಜೀವನದ ಅನುಭವಗಳನ್ನೇ ಪೋಣಿಸಿ ಒಂದು ಪುಸ್ತಕವನ್ನು ಮಾಡಿದರು. ಅದರ ಹೆಸರೂ 'ಹತ್ತುವರುಷ' ಎಂದೇ ಆಗಿತ್ತು! ವಾರವೋ ಪಕ್ಷವೋ ಮಾಸವೋ ನಡೆಯುವ ಯಾವುದಾದರೊಂದು ಶಿಬಿರದ ಅಂತ್ಯದಲ್ಲಿ 'ಶಿಬಿರಾಗ್ನಿ' (Camp-fire)ಯೆಂಬ ವಿಧಿಯಿರುತ್ತದೆ.[೬] ಹಾಗೆಯೇ ರಾಜರತ್ನಂ ಆ ಪುಸ್ತಕದ

---

೬. ಬಗೆಬಗೆಯ ಕಸಕಡ್ಡಿಗಳನ್ನೆಲ್ಲ ಸೇರಿಸಿ ರಾಶಿ ಮಾಡಿ ಬೆಂಕಿಹಚ್ಚಿ, ಅವೆಲ್ಲ ಉರಿದು ಬೂದಿಯಾಗುವುದನ್ನು ಶಿಬಿರಾರ್ಥಿಗಳು ದೂರ ನಿಂತು ನೋಡುತ್ತಾರೆ, ಹಾಡುತ್ತಾರೆ, ಕೈತಟ್ಟಿ ಕುಣಿಯುತ್ತಾರೆ.

ಮೂಲಕ 'I have burnt my boat' ಎಂದುಕೊಂಡರು. 'ಹತ್ತು ವರುಷ'ವೆಂಬ ತಲೆಕಟ್ಟನ್ನು ಹೊತ್ತ ಆ ಪುಸ್ತಕವನ್ನು ಧಾರವಾಡದ ಮನೋಹರ ಗ್ರಂಥಮಾಲೆ ಪ್ರಕಟಿಸಿತು. ಅದು ಪ್ರಕಟವಾದಾಗ "ಹತ್ತು ವರ್ಷಕ್ಕೆ ಒಂದು ನಿಕೆಲ್ ಜೂಬಿಲಿಯೂ ಆಗುವುದಿಲ್ಲ. ಇಷ್ಟು ಚಿಕ್ಕದೇನು ಬರೆಯುವುದು?" ಎಂದು ಶಿವರಾಮ ಕಾರಂತರು ತಮಾಷೆ ಮಾಡಿದ್ದರಂತೆ! ಆದರೂ ಆ ಮೊದಲು ಕನ್ನಡದಲ್ಲಿ ಅಂತಹ ಪುಸ್ತಕಗಳು ಬಂದದ್ದು ಕಡಮೆ. ರಾಜರತ್ನಂ ಅವರ ಹತ್ತು ವರ್ಷಗಳ ಜೀವನಾನುಭವ ಮತ್ತು ಸಾಹಿತ್ಯಜೀವನಗಳು ಆ ಪುಸ್ತಕದಲ್ಲಿ ವಿಶಿಷ್ಟವಾಗಿ, ರೋಚಕವಾಗಿ ಕಥಿತವಾಗಿವೆ. ಅವರ 'ಜೀವನಧರ್ಮಯೋಗ'ದ ಸಾಧನೆ-ಸಿದ್ಧಿಗಳು ಆ ಪುಸ್ತಕದ ಪುಟಗಳಲ್ಲಿ ದಟ್ಟವಾಗಿ ಕಣ್ಣಿಗೆ ಕಟ್ಟುತ್ತವೆ. ಮತ್ತೊಂದು ವಿಶೇಷತೆಯೆಂದರೆ, ರಾಜರತ್ನಂ ಭಾವಿಸಿ ದಂತೆ, 'ಹತ್ತು ವರುಷ'ಗಳ ಪ್ರಕಟನೆಯೊಂದಿಗೆ ಅವರ 'ಸಾಹಿತ್ಯಕ್ಕೆ ಸಮಾಧಿ' ಯಾಗಲಿಲ್ಲ, ಪಾಶ್ಚಾತ್ಯ ಪುರಾಣಗಳಲ್ಲಿ ವರ್ಣಿತವಾಗಿರುವ, ತನ್ನ ಚಿತಾಭಸ್ಮದಿಂದಲೇ ಎದ್ದುಬರುವ ಫೀನಿಕ್ಸ್ ಪಕ್ಷಿಯಂತೆ, ಅವರ ಸಾಹಿತ್ಯಸೃಷ್ಟಿ ಮತ್ತುಷ್ಟು ಹುಲುಸಾ ಯಿತು, ಅದರ ಹೊಗರೇರಿತು. 'ಇನ್ನು ಬರೆಯಲಾರೆ' ಎಂದು ರಾಜರತ್ನಂ ಬದಿಗಿಟ್ಟ ಲೆಕ್ಕಣಿಕೆಯನ್ನು ಸಾಹಿತ್ಯ ಶಾರದೆ ಎತ್ತಿ ಅವರ ಕೈಯಲ್ಲಿರಿಸಿ, "ನೀನು ಬರೆಯ ಬೇಕಾದದ್ದು ಇನ್ನೂ ಇದೆ" ಎಂದು ತಲೆದಡವಿದಳು, ಬೆನ್ನುತಟ್ಟಿದಳು; ಲೆಕ್ಕಣಿಕೆಯಲ್ಲಿ ಶಾಯಿಯನ್ನೂ ಕೈಯಲ್ಲಿ ಕಸುವನ್ನೂ ತುಂಬಿದಳು. ೧೯೩೮ರಿಂದ ಮುಂದೆ ಹತ್ತು ಹತ್ತರ ಹಾಗೆ ನಾಲ್ಕು ದಶಕಗಳ ಕಾಲ- ೧೯೭೮ರವರೆಗೂ ಕನ್ನಡ ಶಾರದೆಯ ಅನುಗ್ರಹದಿಂದ ರಾಜರತ್ನಂ ಲೇಖನಿ ತಡೆಯಿಲ್ಲದೆ ನಡೆಯಿತು!

ವಿಚಾರವಿಲಾಸ-ವಿವಿಧ ಸಂಪುಟ:

ಹೀಗೆ, ೧೯೩೮ರಲ್ಲಿ ಪ್ರಾರಂಭವಾದ ರಾಜರತ್ನಂ ಅವರ ಸಾಹಿತ್ಯಿಕ ಜೀವನದ ಎರಡನೆಯ ಸುದೀರ್ಘಘಟ್ಟದಲ್ಲಿ ಅವರ ಲೇಖನಬಾಹುಳ್ಯ, ಅಧ್ಯಾಪನಸಾಮರ್ಥ್ಯ, ಶಿಷ್ಯವಾತ್ಸಲ್ಯ ಮತ್ತು ಭಾಷಣಕೌಶಲ್ಯಗಳು ಅಧಿಕಾಧಿಕವಾಗಿ ಪ್ರಕಟಗೊಂಡುವು, ಲೋಕವಿಶ್ರುತವೆನಿಸಿದುವು. ಆ ಕಾರಣವಾಗಿ ಅವರಿಗೆ ಸಾಹಿತ್ಯಪ್ರಪಂಚದಲ್ಲಿ ವಿಶಿಷ್ಟ ಸ್ಥಾನವೂ ಸಂಮಾನವೂ ಪ್ರಾಪ್ತವಾದುವು. ರಾಜರತ್ನಂ ಅವರ ಸಾಹಿತ್ಯಜೀವನದ ಮೊದಲ ಹತ್ತು ವರ್ಷಗಳಲ್ಲಿ ಪ್ರಕಟವಾದ 'ರತ್ನನ ಪದಗಳು' ಅವರ ಸರ್ವ ಶ್ರೇಷ್ಠ ರಚನೆ, ಕನ್ನಡದ ಚಿರಂತನ ಕೃತಿಯೆಂಬುದು ನಿಜ. ೧೯೩೮ರಿಂದ ಈಚೆಯ ವರ್ಷಗಳಲ್ಲಿ ಅವರು ರಚಿಸಿದ, ಅನುವಾದಿಸಿದ, ಸಾರಸಂಗ್ರಹ ಮಾಡಿದ, ವ್ಯಾಖ್ಯಾ ನಿಸಿದ ಪುಸ್ತಕಸಂಖ್ಯೆ ಇನ್ನೂರನ್ನೂ ಮೀರುತ್ತದೆ. ಅವೆಲ್ಲವೂ ಒಂದೇ ಗಾತ್ರದವುಗಳಲ್ಲ, ಸತ್ವದಲ್ಲೂ ತಾರತಮ್ಯವಿದೆ. ಆದರೆ ರಾಜರತ್ನಂ ವಾಙ್ಮಯದಲ್ಲಿ ಕಳಪೆ, ಹೊಟ್ಟು, ಎನ್ನುವಂತಹದ್ದು ಯಾವುದೂ ಇಲ್ಲ. ಅವರದು 'ಪುಸ್ತಕಕ್ಕಾಗಿ ಪುಸ್ತಕ' ಎಂಬ ದೃಷ್ಟಿ ಯಲ್ಲ; ರಾಘವಾಂಕನು ಹೇಳಿದಂತೆ' 'ಜನ ಬದುಕಬೇಕೆಂ'ಬ ವಿಶ್ವಾಸವೂ ಪುಸ್ತಕ ಪಠನದಿಂದ ಆನಂದ ಮಾತ್ರವಲ್ಲ ಹೃದಯವಿಕಾಸ, ಮನಶ್ಶುದ್ಧಿ, ನೀತಿಪ್ರಚೋದನೆ ಯಂತಹ ಪರಿಣಾಮಗಳೂ ಆಗಬೇಕೆಂಬ ಆಶಯವೂ ಅವರ ಎಲ್ಲ ಸಾಹಿತ್ಯಸೃಷ್ಟಿಯ ಹಿಂದಿರುವ ಉದ್ದೇಶ.

ರಾಜರತ್ನಂ ತಮ್ಮ ಅನೇಕ ಪುಸ್ತಕಗಳನ್ನು ಸ್ವತಃ ಪ್ರಕಟಿಸಿದ್ದಾರೆ. ಏಕೆಂದರೆ ಮಾರುಕಟ್ಟೆಯಲ್ಲಿ ಸ್ವಲ್ಪ ಹೆಚ್ಚಿನ ಬೇಡಿಕೆಯಿರುವ, ಮನೋರಂಜನ ಪ್ರಧಾನವಾದ ಕಥೆ-ಕಾದಂಬರಿಗಳನ್ನು ಅವರು ಬರೆಯಲಿಲ್ಲ. ಅವರಿನ್ನೂ ಕಾಲೇಜ್ ವಿದ್ಯಾರ್ಥಿಯಾಗಿದ್ದಾಗಲೇ 'ಬೆಳುದಿಂಗಳು' ಎಂಬ ಕಥಾ ಸಂಗ್ರಹವನ್ನು ಪ್ರಕಟಿಸಿದ್ದರಾದರೂ ಆ ಕ್ಷೇತ್ರದಲ್ಲಿ ಅವರು ಮುಂಬರಿಯಲಿಲ್ಲ. "ಕನ್ನಡ ಸಣ್ಣಕತೆ'ಯೆಂದೊಡನೆ ಮನಸ್ಸನ್ನು ಮುತ್ತುವ ಹೆಸರುಗಳಲ್ಲಿ ರತ್ನನದು ಒಂದಲ್ಲ. ಕತೆಗಾರಿಕಯು ವಿಶೇಷವಾಗಿ ರತ್ನನ ಕ್ಷೇತ್ರವಲ್ಲ" ಎಂದು ಅವರೇ ಹೇಳಿದ್ದಾರೆ. ('ಹತ್ತು ವರುಷ' ಪು.೫೧) ಆದುದರಿಂದ ಪ್ರಕಾಶಕರು ಅವರನ್ನು ಹುಡುಕಿ ಬಂದದ್ದು ಕಡಮೆ; ಅವರು ಪ್ರಕಾಶಕರ ಹತ್ತಿರ ಹೋದದ್ದೂ ಹೆಚ್ಚಿಲ್ಲ. ಹಾಗಾಗಿ ರಾಜರತ್ನಂ 'ಶಾಕ್ಯ ಸಾಹಿತ್ಯ ಮಂಟಪ', 'ವಿದೇಹ' 'ಗುಬ್ಬಚ್ಚಿ ಪುಸ್ತಕಮಾಲೆ' ಮೊದಲಾದ ಹೆಸರುಗಳಲ್ಲಿ ತಾವೇ ಪುಸ್ತಕಗಳನ್ನು ಅಚ್ಚು ಹಾಕಿಸಿದರು. ಅಚ್ಚಿನ ವೆಚ್ಚವನ್ನು ತಾಳಿಕೊಳ್ಳುವುದಕ್ಕಾಗಿ ಮತ್ತು ವಾಚಕ ಸಾಮಾನ್ಯರ ಧಾರಣಶಕ್ತಿಯನ್ನು ಗ್ರಹಿಸಿಕೊಂಡು ಕಡಮೆ ಬೆಲೆಯ ಸಣ್ಣ ಸಣ್ಣ ಪುಸ್ತಕಗಳನ್ನೇ ಪ್ರಕಟಿಸಿದರು; ತಾವೇ ಅವುಗಳನ್ನು ಹೊತ್ತು ಮಾರುತ್ತಲೂ ಇದ್ದರು. ಇಂತಹ ಕಿರು ಹೊತ್ತಗೆಗಳ ಎಡೆಯಲ್ಲಿ ಹಿರಿ ಪುಸ್ತಕಗಳೂ ಬಂದದ್ದಿವೆ. 'ಪುರುಷ ಸರಸ್ವತಿ' ಪ್ರಕಟವಾದದ್ದು ೧೯೪೮ರಲ್ಲಿ. ಅವರ ಲೇಖನ ಹಾಗೂ ಉಪನ್ಯಾಸ ಸಂಗ್ರಹವಾಗಿರುವ 'ಕಿರಣಾನುಭವ' ಮತ್ತು 'ಸ್ವಾರಸ್ಯ' ಇವೂ ದೊಡ್ಡ ಪುಸ್ತಕಗಳು. 'ನಮ್ಮ ನಗೆಗಾರರು' ಮತ್ತು 'ಕವಿ ಗೋವಿಂದ ಪೈ' ಗಾತ್ರದಲ್ಲಿ ದೊಡ್ಡದಲ್ಲವಾದರೂ ಸತ್ವಪೂರ್ಣ ಪುಸ್ತಕಗಳು. 'ಕವಿ ಗೋವಿಂದ ಪೈ'ಯಂತೂ ಪೈಯವರ 'ಕಾವ್ಯಮಾರ್ಗ'ಕ್ಕೆ ರಾಜರತ್ನಂ ಕಡಿದಿರುವ ಹೆದ್ದಾರಿಯೇ ಸರಿ. ಅದು ಪೈಯವರ ಕವಿತೆಗಳನ್ನು ಹೇಗೆ ಅರ್ಥ ಮಾಡಬೇಕು, ಸ್ವಾರಸ್ಯವನ್ನು ಹೇಗೆ ಗ್ರಹಿಸಬೇಕು ಎಂಬುದನ್ನು ತಿಳಿಸುವ, ಕನ್ನಡದಲ್ಲಿ ಆಗಿರುವ, ಪ್ರಥಮ ಶ್ಲಾಘನೀಯ ಪ್ರಯತ್ನ. ರತ್ನಾಕರವರ್ಣಿ ಮತ್ತು ಮುದ್ದಣರ ಕಾವ್ಯಗಳಲ್ಲಿ ವಿಶುದ್ಧ ಹಾಸ್ಯವು ಹೇಗೆ ತೆರೆತೆರೆಯಾಗಿ ಹೊಮ್ಮಿದೆ ಎಂಬುದನ್ನು 'ನಮ್ಮ ನಗೆಗಾರ'ರಲ್ಲಿ ಕಾಣಿಸಿದರೆ, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹಾಸ್ಯಗ್ರಂಥಿಗಳು ಎಲ್ಲೆಲ್ಲಿ-ಎಷ್ಟೆಷ್ಟು ಕಾಣಿಸಿಕೊಂಡಿವೆ ಎಂಬುದನ್ನು 'ನಕ್ಕಳಾ ತಾಯಿ'ಯಲ್ಲಿ ಉದಾಹರಿಸಿ ವಿವರಿಸಿದ್ದಾರೆ. 'ಸುಧಾ' ವಾರಪತ್ರಿಕೆ ಆರಂಭವಾದ ಮೇಲೆ, ೧೯೬೫ರಿಂದ ಮುಂದೆ ೧೯೭೯ರ ಮಾರ್ಚ್ ತಿಂಗಳ ವರೆಗೂ ಪ್ರತಿವಾರವೂ ರಾಜರತ್ನಂ ಅವರು ಆ ಪತ್ರಿಕೆಯಲ್ಲಿ ಬರೆಯುತ್ತಿದ್ದ 'ವಿಚಾರರಶ್ಮಿ'ಯೆಂಬ ಅಂಕಣ ಕನ್ನಡದಲ್ಲಿ ಬಹುಜನ ಪ್ರಿಯವಾದುದಾಗಿತ್ತು; ವಿಚಾರಸಂಪತ್ತಿಗಿಂತ ಅಪೂರ್ವವೂ ಅನನ್ಯವೂ ಎನಿಸಿತ್ತು. ೧೯೭೩ರಲ್ಲಿ ಅಂತಹ ಮುನ್ನೂರ ಅರುವತ್ತೈದು ಬರೆಹಗಳನ್ನು ಸೇರಿಸಿ, 'ವಿಚಾರರಶ್ಮಿ' ಯೆಂಬ ಹೆಸರಲ್ಲೇ ಪ್ರಥಮ ಸಂಪುಟವಾಗಿ ರಾಜರತ್ನಂ ಪ್ರಕಟಪಡಿಸಿದರು. 'ವಿಚಾರರಶ್ಮಿ'ಯ ಪ್ರಥಮ ಸಂಪುಟದಲ್ಲಿ ಸೇರದೇ ಇದ್ದು – ೧೯೭೩ರಿಂದ ಮುಂದೆ ಅಚ್ಚಾದ ಎಲ್ಲ ರಶ್ಮಿಗಳನ್ನೂ ಸೇರಿಸಿ ಶ್ರೀಧರ ರಾಜರತ್ನಂ ಅವರು ಮತ್ತೊಂದು ಸುಂದರ, ಮೌಲಿಕ ಸಂಪುಟವನ್ನು ಪ್ರಕಟಿಸಿದರು. ಡಿ. ವಿ. ಜಿ.ಯವರು 'ಮಂಕುತಿಮ್ಮನ ಕಗ್ಗ'ದ ಪದ್ಯಗಳಲ್ಲಿ ಏನನ್ನು ಹಾಡಿದರೋ ಅದನ್ನೇ ಹೆಚ್ಚುಕಮ್ಮಿ ರಾಜರತ್ನಂ ತಮ್ಮ

'ವಿಚಾರರಶ್ಮಿ'ಯ ಗದ್ಯ ಲೇಖನಗಳಲ್ಲೂ ಆಡಿದ್ದಾರೆ. 'ಸುಧಾ' ಪತ್ರಿಕೆಯ ಆ ಅಂಕಣ ಬರೆಹ, ಡೆಮಿ ಆಕಾರದ ಮುದ್ರಿತ ಪುಸ್ತಕದಲ್ಲಿ ಒಂದು ಪುಟ. ಆ ಒಂದೊಂದು ಪುಟದಲ್ಲೂ ಆಕಾಶದ ಅಡಿಯಲ್ಲಿರುವ, ಭೂಮಿಯ ಮೇಲಿರುವ ಮನುಷ್ಯ ಜೀವನಕ್ಕೆ ಅವಶ್ಯವಾದ ಹತ್ತು ನೂರು ವಿಷಯಗಳನ್ನು ರಾಜರತ್ನಂ ಹೇಳಿದ್ದಾರೆ; ಅಂತಹ ವಿಷಯಗಳ ವಿಶ್ಲೇಷಣೆ ಮಾಡಿ ಅವುಗಳನ್ನು ಮನುಷ್ಯನಿಗೆ ಅನ್ವಯಿಸಿದ್ದಾರೆ. ಭಾಷೆ ಅಕ್ಲಿಷ್ಟ, ಲೇಖನಕ್ರಮ ಸರಳ, ಅರ್ಥಗ್ರಹಣ ನಿರಾಯಾಸ. ಹೊರಗಿನ ನೋಟದಿಂದಲೂ ಒಳಗಿನ ಹೂರಣದಿಂದಲೂ ಕಣ್ಣು ಮನಸ್ಸು ಎರಡನ್ನೂ ತುಂಬುವ ಗ್ರಂಥ 'ವಿಚಾರ ರಶ್ಮಿ'.

●

III. ರತ್ನ ಕಾಂತಿ

ಸರ್ವಗುರುಗಳ ಶಿಷ್ಯ; ಅನೇಕ ಶಿಷ್ಯರಿಗೆ ಗುರು:

ನಮ್ಮ ತ್ರಿಪದಿಯ ವಾಮನ ಸರ್ವಜ್ಞಕವಿ ತಾನು "ಸರ್ವರೊಳಗೊಂದೊಂದು ನುಡಿಗಲಿತು ವಿದ್ಯದಾ ಪರ್ವತವೆ ಆದೆ" ಎನ್ನುತ್ತಾನೆ. ರಾಜರತ್ನಂ ಹಾಗೆ ಹೇಳಿದವ ರಲ್ಲ, ಹೇಳುವವರೂ ಅಲ್ಲ- ಆದರೆ ಹಲವರಿಂದ ಹಲವನ್ನು ಕಲಿತವರು, ಹಲವರಿಗೆ ಹಲವನ್ನು ಕಲಿಸಿದವರು. ಅವರು ತಮ್ಮನ್ನು 'ಭ್ರಮರ' ಎಂದು ಕರೆದುಕೊಂಡರು. ಭ್ರಮರ ಹತ್ತು ಕಡೆ ಹಾರಿ, ನೂರು ಹೂಗಳಿಂದ ಮಧುಸಂಚಯ ಮಾಡುತ್ತದೆ. ರಾಜರತ್ನಂ ಅವರು ವಿವಿಧ ಕಾಲ ದೇಶಗಳ, ಭಾಷಾಸಾಹಿತ್ಯಗಳ, ಮತಪಂಥಗಳ, ಸಾಧುಸಂತರ, ಜ್ಞಾನಿವಿಜ್ಞಾನಿಗಳ, ವಿಚಾರರತ್ನಗಳನ್ನು ಸಂಗ್ರಹಿಸಿ ತಮ್ಮ ಹೃತ್ಕೋಶ ದಲ್ಲಿ ತುಂಬಿಕೊಂಡವರು; ಸ್ವಾಧ್ಯಾಯ ಸ್ವಾನುಭವಗಳಿಂದ ಅವುಗಳ ಕಳೆಯನ್ನೂ ಮೌಲ್ಯವನ್ನೂ ವೃದ್ಧಿಸಿಕೊಂಡವರು. ಹಾಗೆ ಸಂಗ್ರಹಿಸಿದ್ದನ್ನು ಆರ್ಜಿಸಿದ್ದನ್ನೂ 'ನೀ ಕಂಡ ಶಿವಪಥವ ಮಾನವರಿಗರುಹೆಂಬ' ಅಲ್ಲಮನ ಪ್ರಭುಸಂಹಿತಕ್ಕೆ ಅನುಗುಣವಾಗಿ, ಆ ಮಾರ್ಗವನ್ನು ಶ್ರದ್ಧೆಯಿಂದ ಅನುಸರಿಸಿದವರು. ರಾಜರತ್ನಂ ಸ್ವತಃ ಎಂ. ಎ. ಪದವೀ ಧರ; ವಿವಿಧ ವಾಙ್ಮಯಪಾರೀಣ; ಬಹುಭಾಷಾಪರಿಜ್ಞಾನಿ. ಆದರೂ ತಮಗೆ ತಿಳಿಯ ದುದನ್ನು, ಬೇರೆಯವರಿಂದ ಕಲಿತವರು, ತಮಗೆ ಹೊಳೆಯದುದನ್ನು ಬೇರೆಯವರ ಬೆಳಕಲ್ಲಿ ಕಂಡುಕೊಂಡವರು. ಹಾಗೆ ಕಲಿತದ್ದನ್ನು, ಕಂಡದ್ದನ್ನು ನಿಸ್ಸಂಕೋಚವಾಗಿ ಹೇಳಿಕೊಂಡವರೂ ಅವರಾಗಿದ್ದರು. ಡಿ. ವಿ. ಜಿ. ಮಾಸ್ತಿ ಮೊದಲಾದವರು ರಾಜರತ್ನಂ ರಿಗೆ ಗುರುಸದೃಶರೂ ಅವರ ಸಾಹಿತ್ಯ ಪೋಷಕರೂ ಆಗಿದ್ದರೆ ಟಿ. ಎಸ್. ವೆಂಕಣ್ಣಯ್ಯ, ಬಿ. ಎಂ. ಶ್ರೀಕಂಠಯ್ಯ, ಎ. ಆರ್. ಕೃಷ್ಣಶಾಸ್ತ್ರಿ ಮುಂತಾದವರು ಅವರ ಪ್ರತ್ಯಕ್ಷ ಗುರುಗಳು. ತಮಗೆ ತರಗತಿಯಲ್ಲಿ ಪಾಠ ಹೇಳದಿದ್ದರೂ ವಿ. ಸೀತಾರಾಮಯ್ಯ ನವರನ್ನೂ ಅವರು ಗುರುವೆಂದೇ ಪರಿಗ್ರಹಿಸಿದ್ದರು; ಆ ಗುರು-ಶಿಷ್ಯ ಸಂಬಂಧವನ್ನು ರಾಜರತ್ನಂ ತಮ್ಮ 'ಹತ್ತು ವರುಷ'ದಲ್ಲೂ ಬೇರೆ ಹತ್ತು ಕಡೆಗಳಲ್ಲೂ ಮತ್ತೆ ಮತ್ತೆ ಹೇಳಿಕೊಂಡಿದ್ದಾರೆ. ಆ ಸಮ್ಯಕ್ ಬಂಧ ಈ ರೀತಿಯಾದದ್ದು: ಕಾಲೇಜ್ ವಿದ್ಯಾರ್ಥಿ ರಾಜರತ್ನಂಗೆ ಹೊಸ ಕವಿತೆಗಳನ್ನು ಓದಿ, ಅರ್ಥ ಮಾಡಿಕೊಳ್ಳುವುದು ಹೇಗೆ ಎಂಬುದರಲ್ಲಿ ಆಸಕ್ತಿ. ಅದಕ್ಕಾಗಿ ಅವರು ಮಿತ್ರನೊಬ್ಬನ ಸೂಚನೆಯಂತೆ ವಿ. ಸೀ. ಯವರ ಹತ್ತಿರ ಹೋದ. ಹಾಗೆ ತಮ್ಮ ಹತ್ತಿರ ಬಂದ ರಾಜರತ್ನಂರನ್ನು ವಿ. ಸೀ. ವಾತ್ಸಲ್ಯದಿಂದ ಕಂಡು ಹೊಸಗನ್ನಡ ಪದ್ಯಕವಿತೆಗಳ ಧಾಟಿ, ಛಂದೋಬಂಧ ಇತ್ಯಾದಿ ವಿಚಾರಗಳನ್ನು ಪ್ರೀತಿಯಿಂದ ತಿಳಿಸಿಕೊಟ್ಟುದಲ್ಲದೆ ಅವರ ಬರಹಗಳನ್ನೂ ವಿಶ್ವಾಸ ದಿಂದ ತೆಗೆದುಕೊಂಡು ಅವುಗಳ ಮೇಲೆ ಕಣ್ಣಾಡಿಸಿ, ಕೈಯಾಡಿಸಿ 'ಹಿತಮಿತವಾಗಿ ವಿಮರ್ಶೆ ಮಾಡಿ, ತಿದ್ದಿ 'ಬೆಳೆಯುವ ಪಯಿರು ಭಾದ್ರಪದದೊಳೆ ಒಣಗಿ' ಹೋಗ ದಂತೆಯೂ ಹದವಾಗಿ ಹಸನಾಗಿ ಬೆಳೆಯುವಂತೆಯೂ ನಡೆಸಿಕೊಟ್ಟರು ಎಂಬುದನ್ನು

ಅವರು ಕೃತಜ್ಞತೆಯಿಂದ ಸ್ಮರಿಸಿದ್ದಾರೆ; ಪಿ. ಸೀ. ತಮ್ಮ 'ಕವಿ-ಕಾವ್ಯಗುರು'ವೆಂದೇ ಆದರಿಸಿದ್ದಾರೆ.

ರಾಜರತ್ನಂ ಅವರು ಜ್ಞಾನಾಂಜನ ಶಲಾಕೆಯಿಂದ ಎಷ್ಟು ಮಂದಿ ಶಿಷ್ಯರ ನೇತ್ರೋನ್ಮೀಲನ ಮಾಡಿದರು, ಎಷ್ಟು ಮಂದಿಯ ಹೃದಯಕ್ಷೇತ್ರಗಳಲ್ಲಿ ಸಾಹಿತ್ಯ ಪ್ರೇಮದ ಬೀಜಕ್ಷೇಪ ಮಾಡಿ ಅದಕ್ಕೆ ತಮ್ಮ ವಾತ್ಸಲ್ಯದ ಹೊಯ್ನೀರನ್ನು ಎರೆದರು ಎಂಬುದನ್ನು ಪರಿಭಾವಿಸಿದರೆ ಆಶ್ಚರ್ಯವಾಗುತ್ತದೆ. ಪ್ರೊ। ಎಲ್. ಎಸ್. ಶೇಷಗಿರಿ ರಾವ್, ಜೆ. ಆರ್. ಲಕ್ಷ್ಮಣ ರಾವ್, ನಾಡಿಗ ಕೃಷ್ಣಮೂರ್ತಿ, ಕೆ. ಬಿ. ಪ್ರಭುಪ್ರಸಾದ, ಪಿ. ಲಂಕೇಶ್, ಸುಮತೀಂದ್ರ ನಾಡಿಗ, ಕೆ. ಎಸ್. ನಿಸಾರ್ ಅಹಮ್ಮದ್, ಚಿ. ಶ್ರೀನಿವಾಸ ರಾಜು, ಚಿ. ನ. ಮಂಗಳಾ, ಎಲ್. ಜಿ. ಸುಮಿತ್ರ, ಎಲ್. ಜಿ. ಕಮಲ, ಕೆ. ಎನ್. ಶ್ರೀಹರಿ, ಬಿ. ಎಸ್. ಗುಂಡೂರಾವ್ ಇವರು, ಇವರಂತಹ ಇನ್ನೂ ಹತ್ತು ಹಲವರು ರಾಜರತ್ನಂರಿಂದ ಪ್ರತ್ಯಕ್ಷವಾಗಿ ಉಪದಿಷ್ಟರಾದವರು. ಅವರಿಂದ ಪರೋಕ್ಷವಾಗಿ ಉಪಕೃತರಾದವರೂ ಹಲವಾರು ಜನರು. 'ಮಲ್ಲಿಗೆಯ ಕವಿ'ಯೆಂದೇ ಮನೆಮಾತಾಗಿರುವ ಕೆ. ಎಸ್. ನರಸಿಂಹಸ್ವಾಮಿಯವರಿಗೆ ಮೊದಮೊದಲು ತಮ್ಮ ಕವಿತೆಗಳನ್ನು ಓದಿ ಜನರ ಕಿವಿಮನಸ್ಸುಗಳಿಗೆ ಮುಟ್ಟಿಸುವುದು ಹೇಗೆಂಬುದು ತಿಳಿದಿರಲಿಲ್ಲವಂತೆ. ತಮ್ಮ ಜನಪ್ರಿಯ ರಚನೆಯಾದ 'ರಾಯರು ಬಂದರು' ಕವನವನ್ನು ಒಂದು ಸಭೆಯಲ್ಲಿ ಸ್ವತಃ ಓದಿದಾಗ ಜನ ಗದ್ದಲ ಮಾಡಿದರೆಂದೂ, ಅವರ ಜತೆಯಲ್ಲಿ ಅದೇ ವೇದಿಕೆಯಲ್ಲಿದ್ದ ರಾಜರತ್ನಂ ಎದ್ದು ನಿಂತು, "ಅದೇ ಕವನವನ್ನು ನಾನೀಗ ಓದುತ್ತೇನೆ, ಶಾಂತರಾಗಿ ಕೇಳಿ" ಎಂದು ವಿನಂತಿಸಿ ಕವನವನ್ನು ಓದಿದಾಗ ಸಭೆಯಲ್ಲಿ ಚಪ್ಪಾಳೆಯ ಸುರಿಮಳೆಯಾಯಿತೆಂದೂ ಕೆ. ಎಸ್. ನ. ಅವರು ಒಂದು ಲೇಖನದಲ್ಲಿ ಪ್ರಸ್ತಾವಿಸಿದ್ದಾರೆ. ಕನ್ನಡದ ಇನ್ನೊಬ್ಬ ಪ್ರಾಸಾದಿಕ ಕವಿ ಜಿ. ಎಸ್. ಶಿವರುದ್ರಪ್ಪನವರ ಪ್ರಪ್ರಥಮ ಕವಿತೆ ಮಾಸ್ತಿಯವರ 'ಜೀವನ'ದಲ್ಲಿ ಪ್ರಕಟವಾಗುವಂತೆ ಪ್ರಯತ್ನಿಸಿದವರೂ ರಾಜರತ್ನಂ ಅವರೇ ಆಗಿದ್ದರು. ಇನ್ನು 'ಕೊರವಂಜಿ'ಯ ಸಂಪಾದಕರಾಗಿ ಜನಕ್ಕೆ ಸುಪರಿಚಿತರಾಗಿದ್ದ ರಾಶಿ – ಡಾ। ಎಂ. ಶಿವರಾಮ– ಅವರನ್ನು ಸಾಹಿತಿಯಾಗುವಂತೆಯೂ ಪ್ರೇರಿಸಿದ್ದು ಮಾತ್ರವಲ್ಲದೆ ತಮ್ಮ ಅರುವತ್ತನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ರಾಶಿಯವರ 'ಇಂದಾನೊಂದು ಕಾಲದಲ್ಲಿ' ಎಂಬ ಪುಸ್ತಕದ ಮುದ್ರಣ-ಅನಾವರಣಗಳ ವ್ಯವಸ್ಥೆ ಮಾಡಿದ್ದಲ್ಲದೆ ತಾವೇ ಅದರ ಪ್ರತಿಗಳನ್ನು ಹೊತ್ತುಕೊಂಡು ಊರೆಲ್ಲ ಸುತ್ತಿ, ಮಾರಿ, ಕೈಗೆ ಬಂದ ನಾಲ್ಕು ಸಾವಿರ ರೂಪಾಯಿಯನ್ನು ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಗುರು ವೆಂಕಣ್ಣಯ್ಯನವರ ಹೆಸರಲ್ಲಿ ಒಂದು ಪುದುವಟ್ಟಾಗಿಯೂ ಇರಿಸಿದರು! ಇದು ರಾಜರತ್ನಂ ಅವರ ಸ್ನೇಹದ ರೀತಿ, ಪುಸ್ತಕ ಪ್ರೀತಿ, ಸಾಹಿತ್ಯದ ಭಕ್ತಿ!

"ಕಂಡಲ್ಲಿ ಗುಣಕೆ ಕೈಮುಗಿದು ಕೊಂಡಾಡಿ ಕರೆವ । ಎತ್ತಿ ಮಡಿಲು ತೂಗಿ ಜಗಕೆಲ್ಲ ತೋರಿ ತಣಿವ" ಇವೇ ಮೊದಲಾದ ಪಂಕ್ತಿಗಳನ್ನು ಪಿ. ಸೀ.ಯವರ 'ಕನ್ನಡ ನಾಡು' ಎಂಬ ಕವಿತೆಯಲ್ಲಿ ಕಾಣಬಹುದು. ಆ ಪಂಕ್ತಿಗಳನ್ನು ಅವರು ರಾಜರತ್ನಂ

ರನ್ನು, ರತ್ನರಂತಹವರನ್ನು ನೋಡಿಯೇ ಬರೆದಿರಬೇಕು! - ರಾಜರತ್ನಂ ಅಂತಹ ಗುಣಗ್ರಾಹಿ, ಗುಣವಾಗ್ಮಿ. ಡಿ. ವಿ. ಜಿ.ಯವರ ಸುಪುತ್ರ, ಬೆಂಗಳೂರು ಸೆಂಟ್ರಲ್ ಕಾಲೇಜಿನ ಛಾತ್ರ ಎಂಬುದರಿಂದ ತಮಗೂ ವಿದ್ಯಾರ್ಥಿ ಆಗಬಹುದಾಗಿದ್ದ ಬಿ. ಜಿ. ಎಲ್. ಸ್ವಾಮಿಯವರ 'ಪಂಚಕಲಶಗೋಪುರ'ದ ಹಸ್ತಪ್ರತಿ ತಮ್ಮ ಕೈಗೆ ಬಂದಾಗ, ಅದನ್ನು ಓದಿದ ಮೇಲೆ ರಾಜರತ್ನಂರಿಗೆ "ಇದು ನಾವು ಪ್ರಕಟಿಸಬೇಕಾದ ಪುಸ್ತಕ, ಇದು ನಾವು ಪ್ರಕಟಿಸಬೇಕಾದ ಪುಸ್ತಕ, ಇದು ನಾವು ಪ್ರಕಟಿಸಲೇಬೇಕಾದ ಪುಸ್ತಕ" ಎಂದು ಎನ್ನಿಸಿತಂತೆ! ಆ ಮೇಲೆ ಅದನ್ನು ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ಮುಖೇನ ಪ್ರಕಟಿಸಿಯೂ ಬಿಟ್ಟರು.

ರಾಜರತ್ನಂ ಅವರ ವಿದ್ಯಾರ್ಥಿಗಳಾಗಿದ್ದು ಕಾಲಾಂತರದಲ್ಲಿ ಲೇಖಕರಾಗಿ ಪ್ರಸಿದ್ಧ ರಾದ ಕೆಲವರ ಹೆಸರನ್ನು ಹಿಂದೆ ಹೇಳಿದೆ. ಕಾಲೇಜ್ ವಿದ್ಯಾರ್ಥಿಗಳಾಗಿದ್ದಾಗಲೇ ಅಂತಹ ಹಲವರ ಸೃಜನಶಕ್ತಿಯನ್ನು ರಾಜರತ್ನಂ ಗುರುತಿಸಿದ್ದರು. ಅಂತಹ ವಿದ್ಯಾರ್ಥಿ ಗಳಿಗೆ ವಿಷಯವನ್ನು ಸೂಚಿಸಿ ಬರೆಯ ಹೇಳಿ, ಅಥವಾ ಅವರು ತರಗತಿಯಲ್ಲಿ ಬರೆದಿದ್ದ ಪ್ರಬಂಧಗಳನ್ನೇ ತಿದ್ದಿ ಬೆಳೆಯಿಸಿ, ಎಲ್ಲವನ್ನೂ ಸೇರಿಸಿ 'ಕಾಲೇಜ್ ಬರವಣಿಗೆ' ಎಂಬ ಹೆಸರಲ್ಲಿ ರಾಜರತ್ನಂ ಪ್ರಕಟಿಸಿದ್ದರು. ಅಂತಹ ಪುಸ್ತಕಗಳ ಸಂಖ್ಯೆ ಹದಿನೈದರಷ್ಟಿದೆ. ಅರೆಮೂಕ, ಗಂಧದ ಹುಡಿ, ನಮ್ಮ ಬೇಂದ್ರೆಯವರು, ಪಚ್ಚೆಯ ತೆನೆ, ಹೂವಿನ ಪೂಜೆ –ಇವೆಲ್ಲ ಹಾಗೆ ಪ್ರಕಟವಾದ ಪುಸ್ತಕಗಳು. ಅವುಗಳ ಶೀರ್ಷಿಕೆಯೇ ಎಷ್ಟೊಂದು ಸೊಗಸು! ತಲೆಬರೆಹ ಮಾತ್ರವಲ್ಲ, ಒಳಹೂರಣವೂ ಅಷ್ಟೇ ಸ್ವಾರಸ್ಯಕರ. ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಮುಖೇನ ಅನೇಕ ಖ್ಯಾತನಾಮರ ಮೌಲಿಕ ಕೃತಿಗಳನ್ನು ರಾಜರತ್ನಂ ಪ್ರಕಟಿಸಿದ್ದಾರೆ, ಇಲ್ಲವೇ ಪುನರ್ಮುದ್ರಿಸಿದ್ದಾರೆ. ಇಂತಹ ಪುಸ್ತಕಗಳ ಸಂಖ್ಯೆ ಸುಮಾರು ಇಪ್ಪತ್ತು. ಗೋವಿಂದ ಪೈಯವರ 'ಗಿಳಿವಿಂಡು' ವಿ. ಸೀ.ಯವರ 'ದೀಪಗಳು' ಮತ್ತು 'ಸೊಹ್ರಾಬ್ ರುಸ್ತುಂ' ಮುಂತಾದುವು ಪುನರ್ಮುದ್ರಣಗಳಾದರೆ ವಿ. ಸೀ.ಯವರ 'ಹೆಜ್ಜೆಪಾಡು' ಪ್ರಥಮ ಪ್ರಕಟನೆ. ಅವರದೇ 'ಶಾಕುಂತಲ ನಾಟಕ ವಿಮರ್ಶೆ'ಯ ವಿಸ್ತೃತ ಆವೃತ್ತಿಯನ್ನೂ ರಾಜರತ್ನಂ ಪ್ರಕಟಿಸಿದ್ದಾರೆ. ಕೆ. ವಿ. ಅಯ್ಯರ್ ಅವರ 'ಕೈಲಾಸಂ ಸ್ಮರಣೆ' ಮತ್ತು ವಿವಿಧ ಲೇಖಕರ 'ಸಂಸಕವಿ' ರಾಜರತ್ನಂ ಪ್ರಕಟಿಸಿದ ಬಹುಮಹತ್ವದ ಗ್ರಂಥಗಳು. ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಮುಖಾಂತರ ಮಾತ್ರವಲ್ಲ, ರಾಜರತ್ನಂ ತಾವೇ ವೆಚ್ಚದ ಹೊಣೆ ಹೊತ್ತು ರಾಶಿಯವರ 'ಮನೋನಂದನ'ದಂತಹ ಉಪಯುಕ್ತ ಪುಸ್ತಕವನ್ನು ಅಚ್ಚು ಹಾಕಿದ್ದೂ ಇದೆ.

ಅಧ್ಯಾಪಕ ರಾಜರತ್ನಂ:

ಕವಿತ್ವ, ಪಾಂಡಿತ್ಯ, ವಾಗ್ಮಿತೆಗಳೊಂದಿಗೆ ರಾಜರತ್ನಂ ವ್ಯಕ್ತಿತ್ವದ ಮತ್ತೊಂದು ಗಟ್ಟಿಯಾದ ಎಳೆಯೆಂದರೆ ಅವರ ಅಧ್ಯಾಪನನಿಷ್ಠೆ ಮತ್ತು ಕ್ಷಮತೆ. ಆ ಎಳೆಯಲ್ಲಿ ವಿಷಯಪ್ರಭುತ್ವ, ಪ್ರವಚನಪಟುತ್ವ ಮತ್ತು ವಿದ್ಯಾರ್ಥಿವಾತ್ಸಲ್ಯಗಳು ಮುಪ್ಪುರಿಯಾಗಿ ಗಟ್ಟಿಗೊಂಡಿದ್ದವು. ರಾಜರತ್ನಂ ಅವರು ಆಗರ್ಭ ಅಧ್ಯಾಪಕ. ಅವರ ತಂದೆ ಗೋಪಾಲ

ಕೃಷ್ಣ ಅಯ್ಯಂಗಾರ್ಯರು ಮೈಸೂರುಸೀಮೆಯಲ್ಲಿ ಹೆಸರಾದ ಅಧ್ಯಾಪಕರಾಗಿದ್ದರು. ತಂದೆಯ ಗುಣ ಮಗನಲ್ಲೂ ಮೆಯ್ಗೂಡಿದ್ದರೆ ಆಶ್ಚರ್ಯವೇನೂ ಅಲ್ಲ. ಅಧ್ಯಾಪಕ ನೆಂದರೆ ನಿತ್ಯವಿದ್ಯಾರ್ಥಿ. ರಾಜರತ್ನಂ ತನ್ನಲ್ಲಿ ಸಹಜವಾಗಿದ್ದ ಪ್ರವಚನಕೌಶಲವನ್ನು ಕನ್ನಡ- ಸಂಸ್ಕೃತ-ಇಂಗ್ಲಿಶ್ ಭಾಷಾಸಾಹಿತ್ಯಗಳ ನಿರಂತರ ಅಧ್ಯಯನದಿಂದ ವೃದ್ಧಿಸಿ ಕೊಂಡರು. ಅವರು ಜಗತ್ತಿನ ಇತರ ವಾಙ್ಮಯಗಳನ್ನು ಆಸಕ್ತಿಯಿಂದ ಅನುಶೀಲನ ಮಾಡುತ್ತಿದ್ದರು. ಪಾಠಸಂದರ್ಭದಲ್ಲಿ ಇವೆಲ್ಲವೂ ಉಪಯುಕ್ತವಾಗುತ್ತಿದ್ದುವು. ದೈವದತ್ತ ವಾಗಿದ್ದ ಗಂಭೀರ ಕಂಠದಿಂದ ಪಠ್ಯವಿಷಯಗಳನ್ನು ಸ್ಪಷ್ಟವಾಗಿ, ಸವಿವರವಾಗಿ ಮತ್ತು ಆಕರ್ಷಕವಾಗಿ ಬೋಧಿಸಬಲ್ಲ ರಾಜರತ್ನಂ ಪಾಠವೆಂದರೆ ವಿದ್ಯಾರ್ಥಿಗಳಿಗೆಲ್ಲ ಅತ್ಯಾಸಕ್ತಿ.[2] ಅದು ಪಾಠ ಮಾತ್ರವಲ್ಲ, ಹಬ್ಬದೂಟವೆನಿಸುತ್ತಿತ್ತು. ಅವರ ಪಾಠಕ್ಕೆ ಸೆಂಟ್ರಲ್ ಕಾಲೇಜಿನ ಬೇರೆ ತರಗತಿಗಳವರಲ್ಲದೆ, ಬೆಂಗಳೂರಿನ ಇತರ ಕಾಲೇಜಿಗಳ ವಿದ್ಯಾರ್ಥಿಗಳೂ ಬಂದು ಕುಳಿತುಕೊಳ್ಳುವುದೂ ಇತ್ತಂತೆ!

ವಿಷಯಬೋಧನೆ ಮಾತ್ರವಲ್ಲ, ವಿದ್ಯಾರ್ಥಿಗಳ ಶೀಲವೃದ್ಧಿಯನ್ನೂ ರಾಜರತ್ನಂ ಲಕ್ಷಿಸುತ್ತಿದ್ದರು. ವಿದ್ಯಾರ್ಥಿಗಳ ಬರವಣಿಗೆಗಳೊಂದಿಗೆ ಅವರ ಬದುಕನ್ನೂ ತೀಡಿ ತಿದ್ದುವುದರಲ್ಲಿ ಅವರಿಗೆ ಆಸಕ್ತಿ ಪ್ರೀತಿಗಳಿದ್ದುವು. ಡಿ.ವಿ.ಜಿ.ಯವರು ಮಂಕುತಿಮ್ಮನಿಂದ ಹೇಳಿಸಿದಂತೆ-

> **ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ**
> **ಚಿತ್ತದಲಿ ಬೆಳೆದರಿವು ತರು ತಳೆದ ಪುಷ್ಪ ।**
> **ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ**
> **ಶಾಸ್ತ್ರಿತನದಿಂದಲ್ಲ -ಮಂಕುತಿಮ್ಮ ॥**

ಹಾಗೆ ವಿದ್ಯಾರ್ಥಿಗಳು ತಮ್ಮ ಅಂತರೀಕ್ಷಣೆ ಮಾಡಿ, ವ್ಯಕ್ತಿತ್ವವನ್ನು ವಿಕಸನ ಗೊಳಿಸುವುದಕ್ಕೆ ಸಕಲ ವಿಧದಲ್ಲೂ ಸರ್ವ ಕಾಲಗಳಲ್ಲೂ ಅವರು ಪ್ರಯತ್ನಿಸುತ್ತಿದ್ದರು. ಅವರೇ ಹೇಳುವುದಿತ್ತು: "ಡಿಗ್ರಿ ಬಂದರೆ ಏನು ಭಾಗ್ಯ ಬಂತು? -ಬುದ್ಧಿ ಬಂತಾ? ಥರ್ಮಾಮೀಟರ್‌ಗೂ ಡಿಗ್ರಿ ಇದೆ. ಡಿಗ್ರಿ ಎನ್ನುವುದು ಒಂದು ಪ್ರಮಾಣ, ಅಳತೆ. ಪರೀಕ್ಷೆಯಲ್ಲಿ **ಮಾರ್ಕ್ಸ್** ತೆಗೆದುಕೊಳ್ಳದಿದ್ದರೂ ಚಿಂತೆಯಿಲ್ಲ; ಆದರೆ ಜೀವನಪರೀಕ್ಷೆ ಯಲ್ಲಿ ಯಾರಿಂದಲೂ **ರಿಮಾರ್ಕ್ಸ್** ಮಾತ್ರ ತೆಗೆದುಕೊಳ್ಳಬಾರದು".

ರಾಜರತ್ನಂ ಅವರ ಶಿಕ್ಷಣನೀತಿ ಏನೆಂಬುದು ಈ ಉಕ್ತಿಯಿಂದ ಸ್ಪಷ್ಟವಾಗುತ್ತದೆ. ಸಂಸ್ಕೃತದಲ್ಲಿ ಪಾಣಿನಿಯ ವ್ಯಾಖ್ಯಾನಕಾರ ಪತಂಜಲಿಯನ್ನು ಕುರಿತಾದ ಒಂದು ಶ್ಲೋಕ ಹೀಗಿದೆ:

---

೭. "ಗುರು ಮಹಾ ವಾಗ್ಮಿ, ಮಾತಾಡಿದರೆ ಗಂಟೆಕಂಚು!" ಎಂಬುದೊಂದು ಚುಟುಕವನ್ನು ರಾಜರತ್ನಂ ಬೇರೊಂದು ಸಂದರ್ಭದಲ್ಲಿ ರಚಿಸಿದ್ದಾದರೂ ಅದು ಅವರದೇ. ಪಾಠದ ವೈಖರಿಯನ್ನು ವರ್ಣಿಸುವಂತಹದ್ದು.

ಯೋಗೇನ ಚಿತ್ತಸ್ಯ ಪದೇನ ವಾಚಾಂ
ಮಲಂ ಶರೀರಸ್ಯ ಚ ವೈದ್ಯಕೇನ ।
ಯೋಪಾಕರೋತ್ತಂ ಮುನಿಮಪ್ರವೇಯಂ
ಪತಂಜಲಿಂ ಪ್ರಾಂಜಲಿರಾನತೋಽಸ್ಮಿ ।

ಪತಂಜಲಿ ಯೋಗಾಚಾರ್ಯನೂ ಹೌದು, ವೈಯಾಕರಣನೂ ಹೌದು, ಆಯುರ್ವೇದ ಪಂಡಿತನೂ ಹೌದು. ಒಬ್ಬ ಆಚಾರ್ಯನಲ್ಲಿ ಈ ಗುಣತ್ರಯವಿರುವುದು ಅಪೇಕ್ಷಣೀಯ. ಗುರುವಾದವನು ಶಿಷ್ಯನಿಗೆ ತರಗತಿಯಲ್ಲಿ ಒಂದು ತಾಸು ಪಾಠಮಾತ್ರ ಹೇಳಿದರೆ ಸಾಲದು. ರಾಜರತ್ನಂ ಎಂತಹ ಶಿಕ್ಷಕರಾಗಿದ್ದರು ಎಂಬುದನ್ನು ಅವರೊಬ್ಬ ಶಿಷ್ಯನೇ ಹೀಗೆ ವರ್ಣಿಸಿದ್ದಾರೆ:

೧. ವಿದ್ಯಾರ್ಥಿಪ್ರತಿಭೆಯನ್ನು ಗುರುತಿಸಿ ಆತ್ಮವಿಶ್ವಾಸ ಹುಟ್ಟಿಸಿದ **ಕ್ಷೇಮಕಾರಿ.**

೨. ವಿದ್ಯಾರ್ಥಿಗಳ ಅರಿವನ್ನು ಬೆಳಗಿಸಿಕೊಳ್ಳಲು ಸಹಾಯಕ ಸಾಮಗ್ರಿಗಳನ್ನು ನೀಡಿದ **ದೀಪಧಾರಿ.**

೩. ವಿದ್ಯಾರ್ಥಿ ಬರವಣಿಗೆಯ ಲೋಪದೋಷಗಳನ್ನು ತಿದ್ದಿ ಸರಿಪಡಿಸಿದ **ದಂಡಧಾರಿ.**

(ಜಿ. ಶ್ರೀನಿವಾಸರಾಜು: 'ಕರ್ಣಾಟಕ ಸಂಘ ಮತ್ತು ರಾಜರತ್ನಂ' -ರತ್ನದೀಪ)

ರಾಜರತ್ನಂ ಹೀಗೆ ಗುಣತ್ರಯಿಯಾದ ಗುರುಶ್ರೇಷ್ಠನಾದುದರಿಂದಲೇ ಅವರ ಪರೋಕ್ಷದಲ್ಲೂ ಶಿಷ್ಯಸಹಸ್ರರು ಅವರನ್ನು ಅನುದಿನವೂ ಸ್ಮರಿಸುತ್ತಾರೆ, 'ಪ್ರಾಂಜಲಿರಾನತೋಽಸ್ಮಿ' ಎಂದು ನಮಸ್ಕರಿಸುತ್ತಾರೆ. ರಾಜರತ್ನಂ ಅವರ ವಿದ್ಯಾರ್ಥಿ ವಾತ್ಸಲ್ಯ ಹೇಗೆ ಅಸೀಮವಾದದ್ದು, ಅವರ ಶಿಷ್ಯಸಮೂಹ ಹೇಗೆ ಅಗಣ್ಯವಾದದ್ದು ಎಂಬುದನ್ನು ಹಿಂದೆಯೇ ಹೇಳಿದ್ದಾಗಿದೆ.

'ಪುಸ್ತಕಪ್ರಾಣಿ' ರಾಜರತ್ನಂ:

ಬಸವಣ್ಣನವರು ತಮ್ಮನ್ನು 'ಜಂಗಮಪ್ರಾಣಿ' ಎಂದು ಕರೆದುಕೊಂಡರು. ಶಿವಶರಣರಾದ ಜಂಗಮರನ್ನು ಪ್ರಾಣಾಧಿಕವೆಂದು ತಿಳಿದು ಉಪಚರಿಸಿದವರು ಬಸವಣ್ಣನಾದರೆ ರಾಜರತ್ನಂ ತಾವೊಬ್ಬ 'ಪುಸ್ತಕಪ್ರಾಣಿ' ಎಂದು ಹೇಳಿಕೊಂಡರು. "...... ಈ ಪುಸ್ತಕ ಆ ಪುಸ್ತಕ ಎಂದೇನಿಲ್ಲ– 'ಪುಸ್ತಕ'ವೆಂಬ ಹೆಸರಿಗೆ ಅರ್ಹವಾದ ಸೃಷ್ಟಿವಿಶೇಷವೆಲ್ಲವೂ ನನಗೆ ಪ್ರಿಯವೇ." ಎಂದು ಹೇಳಿದ್ದು ('ನಮ್ಮ ರಾಜರತ್ನಂ': ಪುಟ ೧೭) ಮಾತ್ರವಲ್ಲ, "ಪುಸ್ತಕಗಳ ಓದುಬರಹ ನನಗೆ ಉಚ್ಛ್ವಾಸ ನಿಃಶ್ವಾಸಗಳಿದ್ದ ಹಾಗೆ...... ಅದರಿಂದಲೇ ಆರೋಗ್ಯ, ಅದರಿಂದಲೇ ಆನಂದ, ಅದರಿಂದಲೇ ಕೃತಕೃತ್ಯತೆ ನನ್ನ ಜೀವಕ್ಕೆ!" (ಅದೇ, ಪು. ೨೪–೨೫) ಎಂದೂ ಸಾರಿದರು. ಕನ್ನಡದಲ್ಲಿ ಅವರಂತೆ ಪುಸ್ತಕವನ್ನು ಪ್ರೀತಿಸಿದವರು ಹೆಚ್ಚು ಜನರಿಲ್ಲ. ಒಂದು ಒಳ್ಳೆಯ ಪುಸ್ತಕ ಪ್ರಕಟವಾಗಿದೆ ಎಂಬ ಸುದ್ದಿ ತಿಳಿದಾಗ ಅದನ್ನು ಕೊಂಡು ಓದುವುದಲ್ಲದೆ, ಅದರ ಕುರಿತು ಬರೆದು ಇಲ್ಲವೇ ಭಾಷಣಮಾಡಿ ಹತ್ತು ಜನಕ್ಕೆ ಅವರಂತೆ ತಿಳಿಸಿದವರೂ ವಿರಳ. ಯಾವುದಾದರೂ ಸಭೆ–ಸಮ್ಮೇಳನದಲ್ಲಿ ಯಾರಾದರೂ ಅವರ 'ಆಟೋಗ್ರಾಫ್' ಹಸ್ತಾಕ್ಷರ

ಕೇಳಿದರೆ, "ಯಾವುದಾದರೂ ಪುಸ್ತಕ ತನ್ನಿ. ಅದರಲ್ಲಿ ಹಸ್ತಾಕ್ಷರ ಹಾಕುತ್ತೇನೆ" ಎನ್ನುತ್ತಿದ್ದರು. ತನ್ನ ಪುಸ್ತಕವೇ ಆಗಬೇಕೆಂಬ ನಿರ್ಬಂಧವಿಲ್ಲ; ಅವರೇ ಹೇಳಿದಂತೆ, ಅದು "ಪುಸ್ತಕವೆಂಬ ಹೆಸರಿಗೆ ಅರ್ಹ"ವಾಗಿದ್ದರೆ ಸಾಕಿತ್ತು. 'ರತ್ನನ ಪದಗಳ'ಂತಹ ಕೆಲವೇ ಕೆಲವನ್ನು ಬಿಟ್ಟರೆ, ರಾಜರತ್ನಂ ತಮ್ಮ ಹೆಚ್ಚಿನ ಪುಸ್ತಿಕೆ-ಪುಸ್ತಕಗಳನ್ನು ತಾವೇ ಪ್ರಕಟಿಸಿ, ಹೊತ್ತು ಮಾರಿದವರು. ಭಾಷಣಕ್ಕೆ ಯಾರಾದರೂ ಕರೆದಾಗ, 'ನನಗೆ ಹಾರತುರಾಯಿ ಬೇಡ, ಆ ಖರ್ಚಿನಲ್ಲಿ ಒಂದೆರಡು ಪುಸ್ತಕ ಕೊಳ್ಳಿ' ಎನ್ನುತ್ತಿದ್ದರು. ಭಾಷಣಾದಿಗಳಿಗೆ ನೀಡಿದ ಸಂಭಾವನೆಗೆ ಪ್ರತಿಯಾಗಿ ಅದೇ ಮೊತ್ತದ ಪುಸ್ತಕಗಳನ್ನು ಕೊಟ್ಟುಬಿಡುತ್ತಿದ್ದರು. ಆ ಕಾರಣದಿಂದಲಾದರೂ ತಮ್ಮ ಪುಸ್ತಕ ನಾಲ್ಕು ಜನರ ಕಣ್ಣಿಗೆ ಬೀಳುವಂತಾಗಲಿ ಎಂಬುದು ಅವರ ಆಸೆ. ಅಷ್ಟೇ ಅಲ್ಲ, ತಾವು ಮೆಚ್ಚಿ ಓದಿದ ಪುಸ್ತಕಗಳ ಬಗೆಗೆ ಭಾಷಣಮಾಡುವುದು, ಭಾಷಣಕ್ಕಾಗಿ ಮಾಡಿದ ಟಿಪ್ಪಣಿಗಳನ್ನೇ ಹೊಂದಿಸಿ ಒಂದು ಪುಸ್ತಕವಾಗಿ ತಮ್ಮದೇ ಖರ್ಚಿನಲ್ಲಿ ಪ್ರಕಟಿಸುವುದೂ ರಾಜರತ್ನಂ ಸಾಹಿತ್ಯ ಪರಿಚಾರಿಕೆಯ ಒಂದು ಭಾಗವಾಗಿತ್ತು. ಅವರ 'ಕಿರಣಾನುಭವ', 'ಸ್ವಾರಸ್ಯ', 'ಸ್ನೇಹದ ದೀಪ'ವೇ ಮೊದಲಾದ ಪುಸ್ತಕಗಳಲ್ಲಿ ಅನೇಕ ಕವಿಸಾಹಿತಿಗಳ ಸ್ಮರಣೆಯನ್ನೂ ಉತ್ತಮೋತ್ತಮ ಗ್ರಂಥಗಳ ರಸನಿರೂಪಣೆಯನ್ನೂ ಕಾಣಬಹುದಾಗಿದೆ.

ರಾಜರತ್ನಂ ಅವರ ಪುಸ್ತಕಪ್ರೀತಿಯಲ್ಲಿ ಅವರ ವ್ಯವಹಾರಶುದ್ಧಿಯೂ ಅಂತರ್ಗತವಾಗಿತ್ತು. ಬೆಂಗಳೂರಿನ ಪುಸ್ತಕದ ಅಂಗಡಿಗಳಿಗೆ ಆಗಾಗ ಹೋಗುವುದು, ತಮ್ಮ ಹೊಸ ಪುಸ್ತಕದ ಕೆಲವು ಪ್ರತಿಗಳನ್ನು ಮಾರಾಟಕ್ಕಾಗಿ ಕೊಡುವುದು, ಮತ್ತೆ ಕೆಲಕಾಲದ ಮೇಲೆ ಮಾರಿಹೋದ ಪುಸ್ತಕಗಳ ವಿವರವನ್ನು ಕೇಳಿ ತಿಳಿಯುವುದು, ಮಾರಾಟವಾಗದೆ ಉಳಿದ ಪುಸ್ತಕಗಳನ್ನು ಹಿಂದಕ್ಕೆ ಪಡೆಯುವುದು, ಅವುಗಳ ಹಣ ಮೊದಲೇ ಕೈಗೆ ಬಂದಿದ್ದರೆ ಅಷ್ಟನ್ನೂ ಹಿಂದಕ್ಕೆ ಕೊಡುವುದು –ಇದು ರಾಜರತ್ನಂ ಅವರ ವ್ಯಾಪಾರ ನೀತಿ. ಅವರು ಒಮ್ಮೊಮ್ಮೆ ವಿನೋದವಾಗಿ ಹೇಳುವುದಿತ್ತು: "ನಾನು ಪುಸ್ತಕಲೇಖಕ ಎಂಬುದಂತೂ ನಿಜವೇ. ಅವುಗಳ ಪ್ರಕಾಶಕ ಮತ್ತು ವ್ಯಾಪಾರಿಯೂ ನಾನೇ. ಆಗಾಗ ನಾನೇ ಅವುಗಳ ವಾಚಕ!" ಇಂತಹ ಕಷ್ಟನಿಷ್ಠುರಗಳಲ್ಲೂ ಅವರ ಪುಸ್ತಕಪ್ರೀತಿಯ ಸೆಲೆ ಬತ್ತಿದ್ದಿಲ್ಲ; ಅವರ ಕಾಲಡಿಯ ನೆಲೆ ತಪ್ಪಿದ್ದಿಲ್ಲ. ಒಮ್ಮೆ ಒಬ್ಬ ಅಭಿಮಾನಿ ಪುಸ್ತಕದ ಹೊರೆ ಹೊತ್ತುಕೊಂಡು ಹೋಗುವ ರಾಜರತ್ನಂರನ್ನು ಕಂಡು, ಸ್ವಲ್ಪ ಅನುಕಂಪದಿಂದಲೇ ಕೇಳಿದನಂತೆ– "ಸರ್, ನಿಮಗೆ ಈ ಪುಸ್ತಕ ಭಾರವಾಗುವುದಿಲ್ಲವೇ?" ಅದಕ್ಕೆ ರಾಜರತ್ನಂ ಉತ್ತರ ಬಾಣದಂತೆ ಬಂತು: "ಯಾವೊತ್ತು ಪುಸ್ತಕ ನನಗೆ ಭಾರವಾಗುತ್ತೋ ಆವೊತ್ತೇ ನಾನು ಭೂಮಿಗೂ ಭಾರ!".

ಅನನ್ಯ ಕಂಠಶ್ರೀಯ ಅಸ್ಖಲಿತವಾಗ್ಮಿ:

ರಾಜರತ್ನಂ ತಮ್ಮ ಸಾಹಿತ್ಯಕೃಷಿಯನ್ನು ಸರಸ್ವತೀಪೂಜೆ, ಉಪಾಸನೆ, ಅಥವಾ ವಾಙ್ಮಯ ತಪಸ್ಸು ಎಂಬುದಾಗಿ ಹೇಳಿಕೊಳ್ಳಲಿಲ್ಲ. ಅಥವಾ 'ಸೇವೆ' ಎಂದೂ ಕರೆಯಲಿಲ್ಲ. ಅವರು ಮಾಡಿದುದೆಲ್ಲವೂ– ಅವರೇ ಟಂಕಿಸಿ, ಚಲಾವಣೆಗೆ ತಂದಿರುವ 'ಸಾಹಿತ್ಯಪರಿಚಾರಿಕೆ'. ಈ ಪರಿಚಾರಿಕೆಯಲ್ಲಿ ಪುಸ್ತಕ ಬರೆಯುವುದು, ಬರೆಯಿಸು

ವುದು, ಪ್ರಕಟಿಸುವುದು, ಪ್ರಕಟಿಸಿದುದನ್ನು ಹೊತ್ತು ಮಾರುವುದು; ಬೇರೆಯವರು ಬರೆದದ್ದನ್ನು ಮೆಚ್ಚಿ ಕೊಂಡಾಡುವುದು ಎಲ್ಲವೂ ಸೇರಿಕೊಂಡಿದ್ದುವು. ಅವುಗಳೊಂದಿಗೆ ಅವರು ಅಷ್ಟೇ ಉತ್ಸಾಹದಿಂದ ಮಾಡಿದ ಮತ್ತೊಂದು ಪರಿಚಾರಿಕೆಯೆಂದರೆ ಉಪನ್ಯಾಸಮುಖೇನ ಸಾಹಿತ್ಯಪ್ರಚಾರ. ಎಂದರೆ ತಮಗೆ ಪ್ರಿಯವಾದ ಅಥವಾ ನಿಯೋಜಿತವಾದ ವಿಷಯಗಳನ್ನು ಕುರಿತು, ಅವಕಾಶವೂ ಇದ್ದು, ಆರೋಗ್ಯವೂ ಚೆನ್ನಾಗಿದ್ದಾಗ, ಕರೆದಲ್ಲಿಗೆಲ್ಲ ಹೋಗಿ ಉಪನ್ಯಾಸ ಮಾಡುವುದು. ಸಾಮಾನ್ಯವಾಗಿ ಸಾಹಿತ್ಯ – ಸಂಸ್ಕೃತಿ, ಮತ – ಧರ್ಮ ವಿಚಾರಗಳು ಅವರಿಗೆ ಪ್ರಿಯವಾಗಿದ್ದುವು. ಜನ ಅವರನ್ನು ಅಂತಹ ಭಾಷಣಗಳಿಗಾಗಿ ಆಗಾಗ ಕರೆಯುತ್ತಿದ್ದರು. ಅವರನ್ನು ಎಷ್ಟು ಸಲ ಕೇಳಿದರೂ ಅವರಿಗೆ ಬೇಸರ ಆಗುತ್ತಿರಲಿಲ್ಲ. ಕಾರಣ ರಾಜರತ್ನಂ ಅವರ ವಾಗ್ಮಿತೆ.

ಅಖಿಲ ಕರ್ನಾಟಕದ ಸಾರ್ವಕಾಲಿಕ ಶ್ರೇಷ್ಠ ವಾಗ್ಮಿಗಳಲ್ಲಿ ರಾಜರತ್ನಂ ಒಬ್ಬರು. ತೇಜಸ್ವಿಯಾದ ಮುಖಮಂಡಲ, ಗಂಭೀರ ಸುಂದರವಾದ ಕಂಠಧ್ವನಿ, ಉಚ್ಚಾರಶುದ್ಧಿ, ವಿಚಾರಸಮೃದ್ಧಿ, ದೇಶ–ವಿದೇಶಗಳ ಸಾಹಿತ್ಯ–ಸಂಸ್ಕೃತಿ, ಮತ–ಧರ್ಮಗಳ ತಲಸ್ಪರ್ಶಿ ಅಧ್ಯಯನ, ಕನ್ನಡ–ಸಂಸ್ಕೃತ, ಪಾಲಿ, ಇಂಗ್ಲಿಶ್ ಮೊದಲಾದ ಭಾಷಾಪ್ರಭುತ್ವಗಳಿಂದಲೂ ಉಪನ್ಯಾಸಗಳಿಗಾಗಿ ಅವರು ಮಾಡುತ್ತಿದ್ದ ಸಿದ್ಧತೆ, ವಿಷಯಗಳನ್ನು ನಿರೂಪಿಸುತ್ತಿದ್ದ ರೀತಿ, ಅವುಗಳಿಗೆ ಪೋಷಕವಾಗುವಂತೆ ನೀಡುತ್ತಿದ್ದ ಉದಾಹರಣೆ, ಹೇಳುತ್ತಿದ್ದ ಕಥೆ, ಉಪಕಥೆ, ಮಾಡುತ್ತಿದ್ದ ಉದ್ಧರಣ, ಸಾಂದರ್ಭಿಕ ಹಾಸ್ಯ ಮೊದಲಾದುವುಗಳಿಂದ ಅವರ ಉಪನ್ಯಾಸಗಳು ಶ್ರೋತೃಗಳಿಗೆ ಕರ್ಣರಸಾಯನವೆನಿಸಿ ಒಂದು ಆನಂದಾನುಭವವನ್ನು ನೀಡುತ್ತಿದ್ದುವು. ಅವರ ಔಚಿತ್ಯಪ್ರಜ್ಞೆ ಮತ್ತು ಅವರು ಮಾಡುತ್ತಿದ್ದ ಸಮಯಪಾಲನೆಗಳಿಂದಾಗಿ ಜನ ಅವರನ್ನು ಮತ್ತಷ್ಟು ಇಷ್ಟಪಡುತ್ತಿದ್ದರು. ಸಮಯಾತಿಕ್ರಮಣವಾಗದಂತೆಯೂ ಅನವಶ್ಯಕ, ಅನಪೇಕ್ಷಿತ ವಿಚಾರ ಪ್ರವೇಶವಾಗದಂತೆಯೂ ವಿಷಯಕ್ಕೆ ಸಂಪೂರ್ಣ ನ್ಯಾಯವನ್ನು ಒದಗಿಸುತ್ತಿದ್ದದ್ದು ರಾಜರತ್ನಂ ವೈಶಿಷ್ಟ್ಯ. ಚಪ್ಪಾಳೆಯ ಚಪಲತೆಯಿಂದ ಅವರೆಂದೂ ಲಘು ಹಾಸ್ಯ, ಅಸಭ್ಯ ವರ್ಣನೆ, ಅನಾವಶ್ಯಕ ಅಂಗವಿಕ್ಷೇಪಗಳಿಗೆ ತೊಡಗುತ್ತಿರಲಿಲ್ಲ. ಅವರು ಆಡುವ ಮಾತುಗಳೆಂದರೆ 'ಮುತ್ತಿನ ಹಾರ', ಅವುಗಳಲ್ಲಿ ಇರುತ್ತಿದ್ದದ್ದು 'ಮಾಣಿಕ್ಯದ ದೀಪ್ತಿ'. ಅವರದೇ 'ರತ್ನನ ಪದಗಳ'ಲ್ಲಿರುವ 'ಮನ್ಸರ್ ಮಾತು' ಎಂಬ ಕವಿತೆಯ ಉಕ್ತಿಗಳೆಲ್ಲ ಅವರ ಉಪನ್ಯಾಸಗಳಿಗೂ ಯಥಾವತ್ತಾಗಿ ಅನ್ವಯಿಸುತ್ತವೆ:

ಕ್ಯೋಳೋವ್ರ್ ಇನ್ನಾ ಕ್ಯೋಳ್ಬೇಕೂಂತ
ಕುತ್ಕೊಂಡ್ ಇದ್ದಂಗೇನೆ
ಯೋಳ್ಕ್ಯಾದ್ನ್ ಎಸ್ಟೋ ಅಸ್ಟುಲ್ ಏಳಿ
ಮನೆಗ್ ಓಗೋನ್ಗೆ ವೋನೆ!
ಮಾತ್ ಇರಬೇಕು ಮಿಂಚ್ ಒಳದಂಗೆ
ಕೇಳ್ದೋರ್ 'ಹಾ' ಅನಬೇಕು!

ರಾಜರತ್ನಂ ಮಾತೆಲ್ಲ ಹೊಳೆಮಿಂಚಿನ ಹಾಗೆ, ಮಕ್ಕಳ ಮುತ್ತಿನ ಹಾಗೆ, ಇನ್ನೂ ಕೇಳಬೇಕು ಎಂಬ ಹಾಗೆಯೇ ಇರುತ್ತಿದ್ದುವು. ಹಾಗಾಗಿ ಕೇಳುಗರ ಮನಸ್ಸಿನ ಮೇನೆಯಲ್ಲೇ ರಾಜರತ್ನಂ ಮೆರವಣಿಗೆ! ಕರ್ನಾಟಕ ಸಂಗೀತಪ್ರಪಂಚದಲ್ಲಿ ಚೆಂಬೈ ವೈದ್ಯನಾಥ ಭಾಗವತರಿಗೆ 'ಕಂಚಿನ ಕಂಠ'ದ ಗಾಯಕರೆಂದೇ ಪ್ರಸಿದ್ಧಿ. ಕರ್ನಾಟಕ ಸಾಹಿತ್ಯಲೋಕದಲ್ಲಿ ನಮ್ಮ ರಾಜರತ್ನರಿಗೆ 'ಕಂಚಿನ ಕಂಠ'ದ ವಾಗ್ಮಿಯೆಂದೇ ವಿಖ್ಯಾತಿ. ದೇವಾಲಯದ ಘಂಟಾನಾದದಿಂದ ಹೊಮ್ಮುವ ಧ್ವನಿತರಂಗಗಳಂತೆ ರಾಜರತ್ನಂ ಅವರ ವಿಚಾರ ವೀಚಿಗಳೂ ಎದ್ದೆದ್ದು ಬಂದು ಶ್ರೋತೃವಿನ ಕಿವಿದೆರೆಗೆ ಬಡಿಯುತ್ತಿದ್ದುವು. ಇಂತಹ ಕಂಠಶ್ರೀಯಿಂದಾಗಿಯೇ ರಾಜರತ್ನಂ ಅವರು ಕರ್ನಾಟಕದ ಆಕಾಶವಾಣಿ ಕೇಂದ್ರಗಳವರಿಗೂ ಅತಿಪ್ರಿಯರಾಗಿದ್ದರು. ಕೇಂದ್ರಗಳು ಪ್ರತಿದಿನ ಪ್ರಾತಃಕಾಲ ಪ್ರಸಾರ ಮಾಡುತ್ತಿರುವ 'ಚಿಂತನ'ಗಳಲ್ಲಿ ರಾಜರತ್ನಂ ವಾಣಿಯನ್ನು ಕೇಳುವುದಕ್ಕಾಗಿಯೇ ಜನ ಬೆಳಗ್ಗೆ ಬೇಗನೇ ಎದ್ದು ರೇಡಿಯೋ ಪೆಟ್ಟಿಗೆಗಳಿಗೆ ಕಿವಿಯೊಡ್ಡುವುದು ಒಂದು ಕಾಲದಲ್ಲಿ ಸಾಮಾನ್ಯವಾಗಿತ್ತು. ವಿಶಿಷ್ಟ ಸಂದರ್ಭಗಳಲ್ಲಿ ಕಾರ್ಯಕ್ರಮನಿರೂಪಣೆ (Compere) ಮತ್ತು ನಿರಂತರ ವ್ಯಾಖ್ಯಾನ(Running commentary)ಗಳಿಗೂ ಅವರು ಆಕಾಶವಾಣಿಯ ಕೇಂದ್ರಗಳಿಂದ ಆಮಂತ್ರಿತರಾಗುತ್ತಿದ್ದರು. ಶ್ರವಣಬೆಳ್ಗೊಳದ ಗೊಮ್ಮಟಸ್ವಾಮಿಯ ಮಹಾಮಸ್ತಕಾಭಿಷೇಕ ಸಂದರ್ಭಗಳಲ್ಲಿ ಎರಡು ಸಲ (೧೯೫೩ ಮತ್ತು ೧೯೬೭) ಆ ಮಹಾಮಾರ್ಜನದ ಪ್ರತಿಕ್ಷಣದ ವರ್ಣವೈಭವವನ್ನು ದೂರದೂರದಲ್ಲಿ ಕುಳಿತು ಕೇಳುವ ಲಕ್ಷಾವಧಿ ಭಾವುಕಜನರ ಕಿವಿಮನಸ್ಸುಗಳಿಗೆ ರಾಜರತ್ನಂ ತಮ್ಮ ವಿವರಣೆ, ವ್ಯಾಖ್ಯಾನಗಳಿಂದ ಮುಟ್ಟಿಸಿದ್ದರು. "ಭಗವತ್ಕೃಪಾವಿಶೇಷ"ದಿಂದ ಸಿದ್ಧಿಸಿದ ಆ ವಕ್ತೃತ್ವಕೌಶಲ ರಾಜರತ್ನಂ ಅವರಿಗೆ ಸಾಹಿತ್ಯ ಪರಿಚಾರಿಕೆಯಲ್ಲಿ ಒಂದು ಪರಿಣಾಮಕಾರೀ ಸಾಧನವಾಯಿತು. ಒಟ್ಟಿನಲ್ಲಿ ಅವರು, ತಮ್ಮ ಗುರು ಬಿ. ಎಂ. ಶ್ರೀಕಂಠಯ್ಯನವರಂತೆಯೇ "ಭಾಷಣಗಳನ್ನು ಮಾಡುತ್ತಿರಲಿಲ್ಲ, ಭಾಷಣ ಗಳನ್ನು ಬಾಳುತ್ತಿದ್ದರು" ಎಂದರೂ ಸಲ್ಲುತ್ತದೆ!

* * *

ಸಾಹಿತಿ–ಸಜ್ಜನ, ಸಂಪೂಜಕ ರಾಜರತ್ನಂ:

ಪ್ರಸಿದ್ಧ ಮತ್ತು ಪ್ರವರ್ಧಮಾನ ಲೇಖಕರ ಕೃತಿಪ್ರಕಟನೆ ಮತ್ತು ಪ್ರಚಾರಗಳೊಂದಿಗೆ ರಾಜರತ್ನಂ ಸಾಹಿತಿ ಸಜ್ಜನರ ಅಭಿಮಾನಿಯೂ ಸಂಪೂಜಕರೂ ಆಗಿದ್ದರು. 'ಕೀರ್ತಿ ನೆಗಳ್ತೆ ಲಾಭ'ಗಳೇನಿದ್ದರೂ ಅವೆಲ್ಲವೂ ತನಗೇ ಬರಲಿ ಎಂದು ಹಂಬಲಿಸಿದವರು ಅವರಲ್ಲ. ಅವಕ್ಕೆ ಪಾತ್ರರಾದವರು ಮಿಕ್ಕವರೂ ಇದ್ದಾರೆ ಎಂಬುದರೊಂದಿಗೆ ಅಂತಹವರನ್ನು ನೆನೆದು ಕೊಂಡಾಡುವವರೂ ಅವರಾಗಿದ್ದರು, ಅದು ಬರಿಯ ಬಾಯ್ಮಾತಿನ ಕೊಂಡಾಟವಲ್ಲ, ಕೆಲಸದಲ್ಲೂ ಮಾಡಿ ತೋರಿದವರು ರಾಜರತ್ನಂ. ತಮ್ಮ ಅಧ್ಯಾಪನದ ಅವಧಿಯ ಸಣ್ಣ ಸಂಬಳದಿಂದ, ನಿವೃತ್ತಿಯ ಅನಂತರದ ಅಲ್ಪಾದಾಯದಿಂದ, ಪುಸ್ತಕ ಪ್ರಕಟನೆಯ ಕಿಂಚಿತ್ ಪ್ರತಿಫಲದಿಂದ ಬೆಂಗಳೂರಿನ ಅನೇಕ ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಸಂಸ್ಥೆಗಳಲ್ಲಿ ಅನೇಕ ಸಾಹಿತಿ–ಸಜ್ಜನರ ಹೆಸರಲ್ಲಿ

ನಲ್ವತ್ತು ಸಾವಿರ ರೂಪಾಯಿಯ ದತ್ತಿನಿಧಿಗಳನ್ನು ಅವರು ಸ್ಥಾಪಿಸಿದ್ದರು. ರಾಜರತ್ನಂ ೧೯೩೯ರಲ್ಲಿ ಅಧ್ಯಾಪನವನ್ನು ಆರಂಭಿಸುವಾಗ ಅವರ ತಿಂಗಳ ಸಂಬಳ ನಲ್ವತ್ತು ರೂಪಾಯಿ; ೧೯೬೪ರಲ್ಲಿ ನಿವೃತ್ತರಾಗುವಾಗ ಪರಮಾವಧಿ ತಲಬು ರೂಪಾಯಿ ಐನೂರು. ಅಷ್ಟರಿಂದ ಅವರು ಎಷ್ಟೆಲ್ಲ ಮಾಡಿದರು-ಯೋಚಿಸಿದರೆ ಆಶ್ಚರ್ಯ ವಾಗುತ್ತದೆ!

'ಶ್ರೀಯುತನೊಳುದಾರತೆ ವಾಕ್ಶ್ರೀಯುತನೊಳಮತ್ಸರತ್ವಂ ಆಗದು' ಎಂಬುದು ಶಾಸ್ತ್ರಕಾರ ಕೇಶಿರಾಜನ ಸುಪ್ರಸಿದ್ಧ ಉಕ್ತಿ. ರಾಜರತ್ನಂ ಅದಕ್ಕೆ ಅಪವಾದವಾಗಿದ್ದರು. ಸಮಾಕಾಲೀನ ಸಾಹಿತಿಶ್ರೇಷ್ಠರೂ ವಿದ್ವಜ್ಜನರೂ ಸಂಮಾನಿತರಾದಾಗ ಅಥವಾ ಕಾಲವಶರಾದಾಗ ರಾಜರತ್ನಂ ಅಂತಹವರನ್ನು ಕುರಿತು ಶ್ಲಾಘನಪರವಾಗಿ ಅಥವಾ ಸ್ಮರಣಾರ್ಥವಾಗಿ ಉಪನ್ಯಾಸ ಮಾಡುತ್ತಿದ್ದರು. ಅಂತಹ ಕವಿ-ಸಾಹಿತಿಗಳ ಕರ್ತೃತ್ವ ಯಾವ ಬಗೆಯದು, ವ್ಯಕ್ತಿತ್ವ ಯಾವ ನೆಲೆಯದು ಎಂಬುದನ್ನು ಜನಕ್ಕೆ ಜ್ಞಾಪಿಸು ತ್ತಿದ್ದರು. ಅಂತಹ ಉಪನ್ಯಾಸಗಳನ್ನು ಮತ್ತೆ ಪುಸ್ತಿಕೆಗಳಾಗಿ ಪ್ರಕಟಿಸಿ ಹೊತ್ತು ಮಾರುತ್ತಿದ್ದರು. 'ಸ್ನೇಹದ ದೀಪ' ಎಂಬುದು ಇಂತಹ ಉಪನ್ಯಾಸಗಳದೇ ಒಂದು ಸಂಗ್ರಹ. 'ಸ್ವಾರಸ್ಯ' 'ಕಿರಣಾನುಭವ'ಗಳಲ್ಲೂ ಅಂತಹ ಕೆಲವು ಉಪನ್ಯಾಸಗಳನ್ನು ಕಾಣಬಹುದು. ವ್ಯಕ್ತಿ ಹೃದಯಗಳ ಮಧ್ಯೇ ಸ್ನೇಹದ ಸೇತುವೆ ಕಟ್ಟಬೇಕೆಂಬುದೂ ಸಾಹಿತ್ಯದಲ್ಲಿ ಅಹಂಭಾವ ಇರಬಾರದು, 'ದಾಸೋಹಂ'ಭಾವ ಇರಬೇಕೆಂಬುದೂ, 'ಅನ್ಯೋನ್ಯ ವೈರಜನನೀ ವಿಜಹಾತ್ವಸೂಯಾ' ಎಂಬುದೂ ರಾಜರತ್ನಂ ಆಗಾಗ ಉದ್ಧರಿಸುತ್ತಿದ್ದ ನುಡಿಮುತ್ತುಗಳಾಗಿದ್ದುವು. ರಾಜರತ್ನಂ ಆ ಉಕ್ತಿಗಳಿಗೆ ತಕ್ಕಂತೆ ಬಾಳಿದ ವ್ಯಕ್ತಿಯಾಗಿದ್ದರು.

ದೈವಭಕ್ತ, ಪ್ರಯತ್ನಶೀಲ:

ವಿಚಾರಶುದ್ಧಿ, ಆಚಾರಶುದ್ಧಿ, ಉಚ್ಚಾರಶುದ್ಧಿ ಎಂಬುದು ರಾಜರತ್ನಂ ನಿತ್ಯ ಜಪಿಸುತ್ತಿದ್ದ ತಿರುಮಂತ್ರ. ಅವು ಅವರಿಗೆ ಪರಮಪ್ರಿಯವಾಗಿದ್ದ ಶುದ್ಧಿತ್ರಯ. ಸಭ್ಯ ವಿಚಾರ, ಸ್ಪಷ್ಟ ಉಚ್ಚಾರಗಳಂತೆಯೇ ಜೀವನದಲ್ಲಿ ಶುದ್ಧ ಆಚಾರಗಳನ್ನೂ ಅವರು ಮೆಯ್ಗೂಡಿಸಿಕೊಂಡಿದ್ದರು. ರಾಜರತ್ನಂ ಚಿನ್ನದ ಚಮಚೆಯನ್ನು ಬಾಯಲ್ಲಿರಿಸಿ ಹುಟ್ಟಿಬಂದವರಲ್ಲ. ಅವರ ತಂದೆ ಗೋಪಾಲಕೃಷ್ಣಯ್ಯಂಗಾರ್ಯರು ಮಾಧ್ಯಮಿಕಶಾಲಾ ಮುಖ್ಯೋಪಾಧ್ಯಾಯರಾಗಿದ್ದವರು. ಅವರೂ ನಿಯತ್ತಿನ ವ್ಯಕ್ತಿ. ಸಂಬಳವೊಂದೇ ಸಂಪಾದನೆ, ಅಡ್ಡಕಸುಬುಗಳೂ ಬೇರೆ ಗಳಿಕೆಗಳೂ ಇರಲಿಲ್ಲ. ರಾಜರತ್ನಂ ತಮ್ಮ ಬಾಲ್ಯಕಾಲ, ವಿದ್ಯಾರ್ಥಿದಶೆ, ಪ್ರಾಪ್ತವಯಸ್ಸುಗಳಲ್ಲಿ ಜೀವನಯಾಪನೆಗೆ ಪಡಬಾರದ ಕಷ್ಟಪಟ್ಟರು. ಪುಡಿಗಾಸಿಗಾಗಿ ಅಲ್ಲಿ-ಇಲ್ಲಿ ಓಡಾಡಿ ಸಿಕ್ಕಿದ ಕೆಲಸ ಹಿಡಿದರು. ಪ್ರತಿಭಾವಂತ ವಿದ್ಯಾರ್ಥಿ; ವಿದ್ಯಾರ್ಥಿದಶೆಯಲ್ಲೇ ಖ್ಯಾತನಾಮ ಲೇಖಕ; ಆ ಮೇಲೆ ಎಂ. ಎ. ಪದವೀಧರ. ಆದರೂ ಎಂ. ಎ. ಪರೀಕ್ಷೆಯಲ್ಲಿ ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾದುದರಿಂದ ಅಧ್ಯಾಪನಕ್ಕೆ ಅರ್ಹವಾದ 'ಯೋಗ್ಯತೆ'ಯಿಂದ ವಂಚಿತ ರಾದರು. ಆ ಹೊತ್ತಿಗಾಗಲೇ ರಾಜರತ್ನಂ ವಿವಾಹಿತರಾಗಿದ್ದರು. ಪತ್ನಿ ಲಲಿತಮ್ಮ

ಸಾಧ್ವಿ, ಸದ್ಗೃಹಿಣಿ. ಆದರೆ ಕ್ಷಯರೋಗಪೀಡಿತೆ. ಅಧ್ಯಾಪಕನಾಗಿದ್ದ ಹಿರಿಯಣ್ಣ ತೀರಿಕೊಂಡಿದ್ದರು. ತಂದೆಯವರು ನಿವೃತ್ತರಾಗಿ ಸಂಪಾದನೆ ನಿಂತಿತ್ತು. ಅವರು ಅಧ್ಯಾಪಕರಾಗಿದ್ದ ಮೈಸೂರಿನ 'ಕುಂಚಟಿಗರ ಎ. ವಿ. ಸ್ಕೂಲ'ಲ್ಲಿ ರಾಜರತ್ನಂ ಬದಲಿ ಮೇಷ್ಟ್ರಾಗಿ ಕೆಲವು ದಿನ ಕೆಲಸ ಮಾಡಿದರು. ಕೈಗೆ ಬರುತ್ತಿದ್ದ ಸಂಬಳ ಇಪ್ಪತ್ತೇಳು ರೂಪಾಯಿ ಹನ್ನೊಂದಾಣೆ. ಆ ಮೇಲೂ ಅಷ್ಟೆ. ೧೯೩೮ರಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಉಪನ್ಯಾಸಕನಾಗಿ ನಿಯುಕ್ತರಾಗಿ, ಅಲ್ಲಿ-ಇಲ್ಲಿ ಸುತ್ತಿ ೧೯೫೨ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಬಂದು ೧೯೬೪ರಲ್ಲಿ ಅಧ್ಯಾಪನನಿವೃತ್ತರಾಗುವ ಕಾಲಕ್ಕೆ ರಾಜರತ್ನಂ 'ರೀಡರ್' ಎಂಬ ಪದನಾಮ ಹೊಂದಿದ್ದರು. ನಾಮದ ಬಲವೇನೋ ಇತ್ತು, ಆದರೆ ಧನಬಲವೇನೂ ಇರಲಿಲ್ಲ.

ಆದರೂ ರಾಜರತ್ನಂ ಎಂದಿಗೂ ತಮ್ಮ ಬದುಕನ್ನು ಕಹಿ ಮಾಡಿಕೊಳ್ಳಲಿಲ್ಲ, 'ಹಣೆಬರಹ'ವೆಂದು ಗೊಣಗಲಿಲ್ಲ. ತಮ್ಮ ಕಷ್ಟಕಾರ್ಪಣ್ಯಗಳ ಹೊಣೆಯನ್ನು ಅವರಿವರ ಮೇಲೆ ಹೇರಲಿಲ್ಲ, ಅಧಿಕಾರೀವರಿಷ್ಠರ 'ಮರ್ಜಿಕಾಯದೆ', ಪ್ರಭಾವೀ ವ್ಯಕ್ತಿಗಳ ಮುಖಸ್ತುತಿ ಮಾಡದೆ ಪಾಲಿಗೆ ಬಂದದ್ದನ್ನೇ ಪಂಚಾಮೃತವೆಂದು ಸ್ವೀಕರಿಸಿದರು. ದಾರಿಯಲ್ಲಿ ಹೋಗುವವರನ್ನು ಕರೆಕರೆದು ತಮ್ಮ ಕಾವು-ನೋವುಗಳನ್ನು ತೋಡಿಕೊಳ್ಳುವುದಿರಲಿ, ತೀರ ಪರಿಚಿತರು, ಮಿತ್ರರು, ಆತ್ಮೀಯರು, ಬಂಧುವರ್ಗದವರು ಎಂಬವರ ಮುಂದೆಯೂ ಹೇಳಿಕೊಳ್ಳಲಿಲ್ಲ. ಅವರು ಅಲ್ಪತೃಪ್ತ, ಆತ್ಮನಿರ್ಭರರಾಗಿದ್ದರು. ಅವರಿಗೆ ದೈವಕೃಪೆಯಲ್ಲಿ ಅಖಂಡ ವಿಶ್ವಾಸವಿತ್ತು. ಆ ವಿಶ್ವಾಸದಿಂದ ಅವರು ಯಾವುಯಾವುದೋ ಸವಾಲುಗಳಿಗೆ ಎದೆಯೊಡ್ಡಿದರಲ್ಲದೆ ಬೆಂಗೊಡಲಿಲ್ಲ. 'ಹೇಳದಿರು ಹೋರಾಡಿ ಫಲವಿಲ್ಲವೆಂದು' ಎಂಬ ಕವನಪಂಕ್ತಿ ಅವರಿಗೆ ಪ್ರಿಯವಾಗಿತ್ತು. 'Do not quit, but turn to God' ಎಂಬ ಸೂಕ್ತಿ ಅವರಿಗೆ ಮಾರ್ಗದರ್ಶಕಸೂತ್ರವಾಗಿತ್ತು ಎಂಬುದನ್ನು ಈ ಹಿಂದೆಯೇ ಹೇಳಿದ್ದಾಗಿದೆ.

* * *

ರಾಜರತ್ನಂ ಶುದ್ಧಾಂಗವಾಗಿ ಆಸ್ತಿಕ; ಅವರು ದೈವಭಕ್ತರೂ ಗುರುಜನಪೂಜಕರೂ ಆಗಿದ್ದರು. ಅವರ ದಿನಚರ್ಯೆ ಪ್ರಾತಃಕಾಲದಲ್ಲಿ "ಓಂ ಪ್ರಾತಃಸ್ಮರಾಮಿ ಹೃದಿ ಸಂಸ್ಫುರದಾತ್ಮತತ್ವಂ......" ಎಂದು ಮೊದಲಾಗುವ ದೇವತಾಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ರಾತ್ರಿ ಮಲಗುವ ಹೊತ್ತಿಗೆ "ಯೋಽಂತಃ ಪ್ರವಿಶ್ಯ ಮಮವಾಚಮಿಮಾಂ ಪ್ರಸುಪ್ತಾಂ......." ಇತ್ಯಾದಿಯಾದ ಭಗವತ್‌ವಂದನದೊಂದಿಗೆ ಕೊನೆಗೊಳ್ಳುತ್ತಿದ್ದುವು. ರಾಜರತ್ನಂ ವೈಷ್ಣವ ಪರಂಪರೆಯ ಆಚಾರ್ಯರೆಲ್ಲರನ್ನೂ ಆಗಾಗ ತಮ್ಮ ಮಾತಿನಲ್ಲೂ ಬರೆಹದಲ್ಲೂ ಸ್ಮರಿಸುತ್ತಿದ್ದರು, ಅವರ ಉಕ್ತಿಗಳನ್ನು ಉದ್ಧರಿಸುತ್ತಿದ್ದರು. ಅವರು ವೈಷ್ಣವ ಮತತತ್ವಗಳಿಗೆ ನಿಷ್ಠರಾಗಿ ಸನಾತನ ಧರ್ಮಸೂತ್ರಗಳಿಗೆ ಬದ್ಧರಾಗಿದ್ದರು. ಆದರೆ ಸರ್ವದೇವನಮಸ್ಕಾರವೂ ಸರ್ವಮತಸಮಭಾವವೂ ಅವರ ಬಾಳಬಟ್ಟೆಯ ಹಾಸುಹೊಕ್ಕುಗಳಾಗಿದ್ದುವು, ಶ್ವಾಸೋಚ್ಛ್ವಾಸಗಳಂತಿದ್ದುವು. ಧಾರ್ಮಿಕ ಮನೋವೃತ್ತಿ ಉಳ್ಳವರು ಜಾಗತಿಕ ಮತಧರ್ಮಗಳೆಲ್ಲವನ್ನೂ ಆದರಿಸುತ್ತಾರೆ ಎಂಬು

ದಕ್ಕೆ ರಾಜರತ್ನಂ ನಿದರ್ಶನವಾಗಿದ್ದರು. ಜಗತ್ತಿನ ವಿವಿಧ ಮತತತ್ವಗಳನ್ನು ಅವರಂತೆ ಅಧ್ಯಯನ ಮಾಡಿ, ಹೃದ್ಗತಗೊಳಿಸಿಕೊಂಡವರು ಕನ್ನಡದಲ್ಲಂತೂ ವಿರಳ. ಅಂತಹ ವಿಷಯಗಳನ್ನು ಕುರಿತು ಅವರಂತೆ ನಿರರ್ಗಳವಾಗಿಯೂ ಹೃದಯಸ್ಪರ್ಶಿಯಾಗಿಯೂ ಉಪನ್ಯಾಸ ಮಾಡಬಲ್ಲವರಂತೂ ವಿರಳಾತಿವಿರಳವೆಂಬುದನ್ನು ಹಿಂದೆಯೇ ಪ್ರಸ್ತಾವಿಸ ಲಾಗಿದೆ. ಮತ-ಧರ್ಮವಿಷಯಕವಾದ ಉಪನ್ಯಾಸಗಳೆಲ್ಲವನ್ನೂ ಸಾಮಾನ್ಯವಾಗಿ ಅವರು "ಶಿವಾಯ ಧಾತ್ರೇ ಸುಗತಾಯ ವಿಷ್ಣವೇ । ಜಿನಾಯ ತಸ್ಮೈ ಸಕಲಾತ್ಮನೇ ನಮಃ ।" ಎಂಬ ಕೈದಾಳ ಶಾಸನದ ಶ್ಲೋಕದಿಂದಲೇ ಆರಂಭಿಸುತ್ತಿದ್ದರು. ರಾಜರತ್ನಂ ಅವರಲ್ಲಿ ತೀವ್ರವಾದ ಔಚಿತ್ಯಪ್ರಜ್ಞೆ ಇತ್ತು. ಆದುದರಿಂದ ಅವರು ತಮ್ಮ ನಂಬಿಕೆ ನಡವಳಿಕೆಗಳನ್ನು ಇನ್ನೊಬ್ಬರ ಮೇಲೆ ಹೇರುತ್ತಿರಲಿಲ್ಲ. ಅಸಾಂದರ್ಭಿಕವಾಗಿ ಅವರು ಎಲ್ಲಿಯೂ ಯಾರ ಮುಂದೆಯೂ ತಮ್ಮ ದೈವಶ್ರದ್ಧೆ-ಗುರುಭಕ್ತಿಗಳನ್ನು ಪ್ರಸ್ತಾವಿ ಸುತ್ತಲೂ ಇರಲಿಲ್ಲ.

* * *

ನಿರ್ಭೀತ, ನೀತಿನಿಷ್ಠ:

ರಾಜರತ್ನಂ ಅವರ ಜೀವನಕ್ರಮ ಅಥವಾ ಋಜು ಜೀವನದ ಬಗೆಗೆ ಎಷ್ಟೂ ಹೇಳಬಹುದು. ಸಾಂಸ್ಕೃತಿಕವಾಗಿ ಅವರು ಶ್ರೀಮಂತರಾಗಿರಲಿಲ್ಲ, ನಿಜ; ಆದರೆ ಅವರಲ್ಲಿ ದೀನಭಾವವೂ ಇರಲಿಲ್ಲ. ಅವರು ಅಹಂಕಾರಿಯಾಗಿರಲಿಲ್ಲ, ಆದರೆ ಆತ್ಮಸಂಮಾನಿಯಾಗಿದ್ದರು. ಅವರು ಏಕಾಂತಪ್ರಿಯರಲ್ಲ. ಸ್ನೇಹಪರರಾಗಿದ್ದರು, ಆದರೆ ಲಘುಮತಿಯೂ ಆಗಿರಲಿಲ್ಲ- ಶೇಕ್ಸ್‌ಪಿಯರ್ ವರ್ಣಿಸಿದ Be thou familiar but by no means vulgar ಎಂಬಂತೆ ಅವರ ನಡೆನುಡಿ. ಅವರು ವಿದ್ಯಾರ್ಥಿವತ್ಸಲ ರಾಗಿದ್ದರು, ಆದರೆ ನಿಯಮಗಳಿಗೆ ನಿಷ್ಠರಾಗಿದ್ದರು. ತರಗತಿಯಲ್ಲಿ ವಿದ್ಯಾರ್ಥಿಗಳ ಅವಿನಯ, ದುರ್ವರ್ತನೆಗಳನ್ನು ಕ್ಷಣಕಾಲವೂ ಅಣುಮಾತ್ರವೂ ಸಹಿಸುತ್ತಿರಲಿಲ್ಲ. ಯಾವನಾದರೂ ವಿದ್ಯಾರ್ಥಿ ನಿಯಮೋಲ್ಲಂಘನೆ ಮಾಡಿದರೆ, ತಮ್ಮ ಆದೇಶವನ್ನು ಧಿಕ್ಕರಿಸುವ ಪೊಗರನ್ನು ತೋರಿದರೆ ರಾಜರತ್ನಂ, ಪ್ರವಚನಪೀಠದಿಂದ ಕೆಳಗಿಳಿದು, ಜುಬ್ಬದ ಕೈಯನ್ನು ಮೇಲಕ್ಕೆತ್ತಿ ಆ ವಿದ್ಯಾರ್ಥಿ ಕುಳಿತಿದ್ದಲ್ಲಿಗೆ ಹಜ್ಜೆ ಹಾಕಿದರೆ ಸಾಕು- ಗರಡಿಮನೆಯ ಮಲ್ಲನಂತಿದ್ದ ಅವರ ಮೈಕಟ್ಟನ್ನೂ ರುದ್ರಾವತಾರವನ್ನು ನೋಡಿಯೇ ವಿದ್ಯಾರ್ಥಿಗಳು ಬೆದರಿ ಬೆವತುಬಿಡುತ್ತಿದ್ದರಂತೆ! ಅಷ್ಟಾದರೂ ಮರುಕ್ಷಣವೇ ರಾಜರತ್ನಂ ಯಥಾಸ್ಥಿತಿಗೆ ಬಂದು, ನಗಿಸಿ, ನಕ್ಕು, ಪಾಠ ಮುಂದುವರಿಸುತ್ತಿದ್ದರೆಂಬುದನ್ನು ಅವರ ಪೂರ್ವ ವಿದ್ಯಾರ್ಥಿಗಳು ಜ್ಞಾಪಿಸುತ್ತಾರೆ.

ರಾಜರತ್ನಂ ಅವರ ನೀತಿನಿಷ್ಠ ಜೀವನಕ್ಕೆ ವಿಪುಲ ಉದಾಹರಣೆಗಳನ್ನು ಕೊಡ ಬಹುದು. ತ್ಯಾಗರಾಜ ಸ್ವಾಮಿಗಳು 'ಚಕ್ಕನಿ ರಾಜಮಾರ್ಗಮು.........' ಎಂದು ಹಾಡಿ ದಂತೆ ರಾಜರತ್ನಂ ಮನಸ್ಸು ನೇರದಾರಿಯಲ್ಲಿ ನಡೆಯುತ್ತಿತ್ತೇ ವಿನಾ ಸಂದುಗೊಂದು ಗಳಲ್ಲಿ ಎಂದಿಗೂ ಸುತ್ತಿ ಸುಳಿದದ್ದಿಲ್ಲ. ಮಾತಿನಲ್ಲಾಗಲೀ, ಬರೆಹದಲ್ಲಾಗಲೀ ಅಶ್ಲೀಲ ಪದಗಳು ನುಸುಳದಂತೆ ತುಂಬ ಎಚ್ಚರಿಕೆಯಿಂದ ಇರುತ್ತಿದ್ದರು. ಅವರ ಬಾಳ ಬಗೆ

ಯನ್ನು ಅರ್ಥ ಮಾಡಲಾಗದವರು, "ರತ್ನನ ಪದಗಳು' ಉಮರಖಯ್ಯಾಮನಿಂದ ಪ್ರೇರಿತವಾಗಿದೆ, ಅವರು ಭಾಷಣಕ್ಕೆ ಕರೆದರೆ ದುಡ್ಡು ಕೇಳುತ್ತಾರೆ, ಹೋದಲ್ಲೆಲ್ಲ ಸಾಯಿಬಾಬಾರ ಡೋಲು ಬಾರಿಸುತ್ತಾರೆ" ಎಂದು ಆರೋಪಿಸಿ, ಅವರನ್ನು ಚುಚ್ಚುವ, ಕಚ್ಚುವ, ಪರಚುವ ಲೇಖನಗಳನ್ನು ಪ್ರಕಟಿಸಿದಾಗಲೂ ಸೈರಣೆಯನ್ನು ಕಳಕೊಂಡ ವರಲ್ಲ. ಆ ಮೇಲೆ ಕಾಳೆಗದ ಕಳಕ್ಕೆ ಇಳಿಯಲೇ ಬೇಕಾದಾಗಲೂ, "ಮರೆಯಲ್ಲಿ ನಿಂತು ಕೆಸರಿನ ಉಂಡೆಗಳನ್ನೇಕೆ ಎಸೆಯುತ್ತೀಯೆ? ಬಾ, ಮಲ್ಲಯುದ್ಧಕ್ಕೆ" ಎಂದು ತೋಳು ತೊಡೆ ತಟ್ಟಿ ವಿರೋಧಿಗಳನ್ನು ಕರೆದರು; ಎದುರಾಳಿಗಳೊಂದಿಗೆ ಗುದ್ದಾಡುವಾಗಲೂ ಅವರ ಸೊಂಟಕ್ಕಿಂತ ಕೆಳಗೆ ಹೊಡೆದವರೇ ಅಲ್ಲ.

* * *

ರಾಜರತ್ನಂ ಅವರ ಖಚಿತದೃಷ್ಟಿ, ರುಚಿಶುದ್ಧಿಗಳಿಗೆ ಕೆ. ವಿ. ಅಯ್ಯರ್ ಒಂದು ಸೊಗಸಾದ ಉದಾಹರಣೆಯನ್ನು ನೀಡಿದ್ದಾರೆ: ಒಮ್ಮೆ ರಾಜರತ್ನಂ ಅವರು ಅಯ್ಯರ್ ಮನೆಗೆ ಹೋಗಿದ್ದಾಗ, ಅಲ್ಲಿ ಹಿತ್ತಾಳೆಯಲ್ಲಿ ಎರಕ ಹೊಯ್ದ ನೃತ್ಯಸರಸ್ವತಿಯ ಸುಂದರ ವಿಗ್ರಹವನ್ನು ನೋಡಿ ತುಂಬ ಮೆಚ್ಚಿದರಂತೆ. ಅಯ್ಯರ್ ಅದನ್ನು 'ಎತ್ತಿ ನೋಡೋಣ' ಎಂದು ಹೇಳಿದಾಗ ರಾಜರತ್ನಂ ತಾಯಿ ಮಗುವನ್ನು ಮೇಲೆತ್ತುವ ಹಾಗೆ, ವಿಗ್ರಹದ ಕಂಕುಳ ಕೆಳಗೆ ಕೈಹಾಕಿ ಎತ್ತಲು ಪ್ರಯತ್ನಿಸಿದರು. ಮೂರ್ತಿ ಮಿಸುಕಾಡಲಿಲ್ಲ. ಆಗ ಅಯ್ಯರ್ ಒಂದು ಕೈಯನ್ನು ಅದರ ಪೀಠದ ಮುಂದಕ್ಕೂ ಮತ್ತೊಂದನ್ನು ಪೃಷ್ಠದ ಕೆಳಗೂ ಚಾಚಿ ಅನಾಮತ್ತಾಗಿ ಎತ್ತಿಬಿಟ್ಟರಂತೆ. ಅದನ್ನು ನೋಡಿದ ರಾಜರತ್ನಂ, ಕೆನ್ನೆ ಕೆನ್ನೆ ಬಡಿದುಕೊಂಡು "ಶಾಂತಂ ಪಾಪಂ! ಅಯ್ಯೋ, ಆಕೆ ಪೂಜನೀಯಳಾದ ದೇವತೆ. ಪೃಷ್ಠದ ಕೆಳಗೆ ಮುಟ್ಟುವುದೇ?" ಎಂದು ಉದ್ಗರಿಸಿದರಲ್ಲದೆ, "ಸರಸ್ವತೀವಿಗ್ರಹ ಹಾಗಿರಲಿ, ಒಂದು ಹೆಣ್ಣುಬೊಂಬೆಯನ್ನೂ ನಾನು ಹಾಗೆ ಮುಟ್ಟಲಾರೆ" ಎಂದರಂತೆ![೮]

ಈ ಲೇಖಕನದೇ ಒಂದು ಅನುಭವ: ಒಮ್ಮೆ ರಾಜರತ್ನಂ ಉಪನ್ಯಾಸಕ್ಕಾಗಿ ಕಾರ್ಕಳದ ನಮ್ಮ ಶ್ರೀ ಭುವನೇಂದ್ರ ಕಾಲೇಜಿಗೆ ಬಂದಿದ್ದರು. ಆಕಾಲಕ್ಕೆ ನಮ್ಮೂರ ಲ್ಲಾಗಲೀ, ಕಾಲೇಜಿನಲ್ಲಾಗಲೀ ತಕ್ಕುದಾದ ವಸತಿವ್ಯವಸ್ಥೆ ಇರಲಿಲ್ಲ. ಆದುದರಿಂದ ಅವರನ್ನು ಸರಕಾರೀ ಪ್ರವಾಸೀಮಂದಿರದಲ್ಲಿ ಉಳಿಸಿಕೊಂಡಿದ್ದೆವು. ಕಾರ್ಯಕ್ರಮ ಮುಗಿಸಿ, ಬೆಂಗಳೂರಿಗೆ ಹೊರಟು ಹೋದರು. ಕೆಲವೇ ದಿನಗಳಲ್ಲಿ ಒಂದು ಪಾರ್ಸೆಲ್ ಬಂತು– ಅವರು ಬಿಚ್ಚಿ ನೋಡಿದರೆ ಅದರಲ್ಲೊಂದು ಬಿಳಿಯ ಹಚ್ಚಡ, ಜತೆಗೆ ಒಂದು ಕಾಗದ! ಕಾಗದದಲ್ಲಿ, "ನಾನು ಹೊರಡುವ ಗಡಿಬಿಡಿಯಲ್ಲಿ ಟಿ.ಬಿ.ಯ ಬೆಡ್‌ಶೀಟನ್ನೂ ಮಡಚಿ ಚೀಲದಲ್ಲಿ ತುರುಕಿದ್ದೆ. ಊರಿಗೆ ಬಂದ ಬಳಿಕ ತಪ್ಪು ಗೊತ್ತಾಯಿತು. ಅದನ್ನು

೮. ವಂಗ ಸಾಹಿತಿ ಬಂಕಿಮಚಂದ್ರ ಚಟರ್ಜಿಯವರು ಭಾಗವಹಿಸಿದ್ದ ಒಂದು ಸಭೆಯಲ್ಲಿ ಯಾರೋ ಒಬ್ಬ ರಸಿಕ ಒಂದು ಶೃಂಗಾರಪದ ಹಾಡಿದಾಗ ಬಂಕಿಮರು ತಮ್ಮೆರಡೂ ಕೈಗಳಿಂದ ಕಿವಿಮುಚ್ಚಿಕೊಂಡು ಬೇಗಬೇಗ ಆ ಸಭೆಯಿಂದ ಹೊರಟುಹೋದರೆಂದು ಕವಿ ವರ್ಯ ಠಾಕೂರರು ಒಂದು ಕಡೆ ಬರೆದಿದ್ದಾರೆ. (ನೋಡಿ– 'ಬಂಕಿಮಚಂದ್ರ': ಎ. ಆರ್. ಕೃಷ್ಣಶಾಸ್ತ್ರೀ) ರಾಜರತ್ನಂ ಅವರದೂ ಅಂತಹದೇ ಸದ್ವರ್ತನೆ.

ಬಂಗ್ಲೆಯ ವಾಚ್‌ಮೆನ್‌ಗೆ ತಲಪಿಸಿಬಿಡಿ'' ಎಂದು ಬರೆದಿದ್ದರು! - ರಾಜರತ್ನಂ ಅವರ ನೀತಿನಿಷ್ಠೆ ಈ ಬಗೆಯದು.

ದುಡ್ಡುಕಾಸುಗಳ ವ್ಯವಹಾರದಲ್ಲೂ ರಾಜರತ್ನಂ ತುಂಬ ಎಚ್ಚರದಿಂದ ಇರುತ್ತಿದ್ದರು. ಅವರ ವ್ಯವಹಾರವೆಂದರೆ ಪುಸ್ತಕಪ್ರಕಟನೆ ಮತ್ತು ಮಾರಾಟ. ತಾವು ಕೊಡಬೇಕಾದುದನ್ನು ತಪ್ಪದೆ ಕೊಡುತ್ತಿದ್ದರು; ಬರಬೇಕಾದುದನ್ನು ಬಿಡದೆ ಪಡೆಯುತ್ತಿದ್ದರು. ನ್ಯಾಯಸಮ್ಮತವಾಗಿ ನಾಲ್ಕು ಕಾಸು ಬರುವುದಿದ್ದರೆ ಎಂಟು ಸಲ ಅವರು ಪುಸ್ತಕದಂಗಡಿಗಳಿಗೆ ಓಡಾಡಲೂ ಸಿದ್ಧರೇ. ಅಂಗಡಿಗಳಲ್ಲಿ ಮಾರಾಟವಾಗದೆ ಉಳಿದಿರುತ್ತಿದ್ದ, ಬೆಂಗಳೂರು ಬೀದಿಬದಿಯ 'ಸೆಕೆಂಡ್‌ಹ್ಯಾಂಡ್' ಬುಕ್‌ಸ್ಟಾಲುಗಳಲ್ಲಿ ಧೂಳು ಮೆತ್ತಿಕೊಂಡಿರುತ್ತಿದ್ದ ತಮ್ಮದೇ ಎಷ್ಟೋ ಪುಸ್ತಕಗಳನ್ನು ದುಡ್ಡುಕೊಟ್ಟು ಹಿಂದಕ್ಕೆ ತಂದು ತಮ್ಮ ಮನೆಯ ಬೀರುಗಳಲ್ಲಿ ಓರಣವಾಗಿ ಪೇರಿಸಿ ಇಟ್ಟದ್ದೂ ಉಂಟು! ೧೯೭೯ರ ಮಾರ್ಚ್ ೧೨ರಂದು, ಎಂದರೆ ಅವರು ತೀರಿಕೊಳ್ಳುವ ಹಿಂದಿನ ದಿನದ ತಮ್ಮ ದಿನಚರಿಯಲ್ಲಿ ಪುಸ್ತಕಗಳ ಬಾಬ್ತು, ಮನೆವಾರ್ತೆಯ ಬಾಬ್ತು ಯಾರು ಯಾರಿಂದ ಎಷ್ಟೆಷ್ಟು ಬರಬೇಕಾಗಿದೆ, ಯಾರು ಯಾರಿಗೆ ಎಷ್ಟೆಷ್ಟು ತೆರಬೇಕಾಗಿದೆ ಎಂಬುದರ ಲೆಕ್ಕವನ್ನು ಕಾಸೂ ಬಿಡದಂತೆ ಬರೆದಿಟ್ಟಿದ್ದರಂತೆ!

ರಾಜರತ್ನಂ ಶ್ರೀಮಂತರಾಗಿರಲಿಲ್ಲ. ಆದರೆ ಧೀಮಂತರಾಗಿದ್ದರು. ಅವರು ಅಹಂ ಅಲ್ಲದ, ದೀನತೆಯೂ ಇಲ್ಲದ ಆತ್ಮಾಭಿಮಾನಿಯಾಗಿದ್ದರು. ಅವರು ಅಧ್ಯಾಪನವನ್ನು ತೊಡಗಿದ ಕಾಲದಲ್ಲಿ ಆಂಗ್ಲೇಯರಂತೆ ಕೋಟು-ಪ್ಯಾಂಟು ಧರಿಸಿ ತರಗತಿಗಳಿಗೆ ಹೋಗಬೇಕೆಂಬ ನಿರ್ಬಂಧವಿತ್ತು. "ಆದರೆ ನೀವು ಕೊಡುವ ಸಂಬಳ ಹೊಟ್ಟೆಗೇ ಸಾಲದು, ಇನ್ನು ಬಟ್ಟೆ ಎಲ್ಲಿಂದ ತರೋಣ" ಎಂದು ಸಂಸ್ಥೆಯ ಮುಖ್ಯಸ್ಥರನ್ನೇ ಕೆಚ್ಚಿನಿಂದ ಕೇಳಿ, ಎಂದಿನ ತಮ್ಮ ಸರಳ ವೇಷ- ಅಡ್ಡಮುಂಡು, ಗಿಡ್ಡತೋಳಿನ ಅಂಗಿಗಳಲ್ಲೇ ಕೊಠಡಿಯನ್ನು ಹೊಕ್ಕು ಪಾಠ ಮಾಡಿದವರು ರಾಜರತ್ನಂ. ಕೊನೆತನಕವೂ ಒಂದೇ ರೀತಿಯದಾಗಿತ್ತು ಅವರ ಉಡುಗೆತೊಡುಗೆ. ಹೆಚ್ಚೆಂದರೆ ಒಮ್ಮೊಮ್ಮೆ ಮೈಮೇಲೊಂದು ಶಾಲು. ಅವೆಲ್ಲವೂ ಖಾದಿಯದೇ ಆಗಿರುತ್ತಿದ್ದುವು.

ರಾಜರತ್ನಂ ಜೀವನಕ್ರಮವನ್ನು ಎಂದರೆ ಅವರ ದೈವಭಕ್ತಿ, ಧರ್ಮಶ್ರದ್ಧೆ, ಸಾಧುಪೂಜನ ಮೊದಲಾದುವುಗಳನ್ನು ಅಸಹನೆಯಿಂದ ಕಂಡವರೂ ಆ ಕುರಿತು ಸಲ್ಲದ ಮಾತುಗಳನ್ನು ಆಡಿದವರೂ ಇಲ್ಲವೆಂದಲ್ಲ. ಆದರೆ ರಾಜರತ್ನಂ ಅಂತಹವುಗಳಿಂದ ವಿಚಲಿತರಾದವರಲ್ಲ. ರಾಜರತ್ನಂ ತಮ್ಮ 'ನಿರ್ಭಯಾಗ್ರಹಿ'ಯಲ್ಲಿ ಒಂದು ಕಡೆ ಹೀಗೆ ಬರೆದಿದ್ದಾರೆ- ಅದನ್ನು ಬರೆಯಬೇಕಾದ ಸಂದರ್ಭ ಅಷ್ಟೇನೂ ಸುಖಕರವಾಗಿರಲಿಲ್ಲ; ಅದು ಹಾಗಿದ್ದರೂ, ಅವರು ಬರೆದದ್ದು ಯಾವುದೋ ಮಾತಿಗೆ ಪಡಿಮಾತಲ್ಲ- ಅದು ಅವರ ಬದುಕಿನ ಭಾಷ್ಯವೇ ಆಗಿದೆ: 'ಯಾವ ಭೀಮಸೇನನೇ ಆಗಲಿ- ಎಷ್ಟೇ ಮುಕ್ಕಿರಿದು ತನ್ನ ಬಟ್ಟೆಯನ್ನು ಕೆಡಿಸಿಕೊಳ್ಳಬಹುದಾದರೂ ನನ್ನ ಶ್ರದ್ಧೆಯೆಂಬ ಆಂಜನೇಯನ ಬಾಲದ ತುದಿಯ ಒಂದು ಕೂದಲನ್ನಾದರೂ ಕದಲಿಸಲಾರನು!" (ಮಹಾಭಾರತದ ಸೌಗಂಧಿಕಾಪುಷ್ಪಪ್ರಸಂಗವನ್ನು ತಿಳಿದವರಿಗೆ ಮಾತ್ರ ಇದು ಅರ್ಥವಾದೀತು!)

ರಾಜರತ್ನಂರಿಗೆ ಅರುವತ್ತು ತುಂಬಿದಾಗ ಅವರ ಶಿಷ್ಯಮಿತ್ರ ಅಭಿಮಾನೀಜನ ಏರ್ಪಡಿಸಿದ್ದ ಶುಭಾಶಂಸನಸಭೆಯ ಪ್ರಸ್ತಾವ ಹಿಂದೆ ಬಂದಿದೆ. ಆ ಸಭೆಗೆ ಸಂಬಂಧಿಸಿದ ಒಂದು ಘಟನೆಯನ್ನು ಡಾ। ಶಿವರಾಮ (ರಾಶಿ) ಅವರು ತಮ್ಮ 'ಜಿ. ಪಿ. ರಾಜರತ್ನಂ' ಎಂಬ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ. ಅದು ಹೀಗಿದೆ: ಅಂದಿನ ಸಂಮಾನ ಸಭೆಯಲ್ಲಿ ಒಬ್ಬ ಅಭಿಮಾನಿ ಶ್ರೀಗಂಧದ ಒಂದು ಸೊಗಸಾದ ಊರುಗೋಲನ್ನು ರಾಜರತ್ನಂರಿಗೆ ಕೊಡಹೋದಾಗ ರಾಜರತ್ನಂ ನಿರಾಕರಿಸಿಬಿಟ್ಟರು. ಅಂದಿನದು ತುಂಬಿದ ಸಭೆ, ಅಭಿಮಾನಿಯ ಮುಖ ಸಣ್ಣದಾಯಿತು. ಸಭೆ ಮುಗಿದ ಕೆಲದಿನಗಳ ಬಳಿಕ ಡಾ। ಶಿವರಾಮರು ರಾಜರತ್ನಂರನ್ನೇ, "ಆ ದಿನ ಹಾಗೇಕೆ ಮಾಡಿದಿರಿ? ಆತ ಪ್ರೀತಿಯಿಂದ ಕೊಟ್ಟದಲ್ಲವೇ?" ಎಂದು ಕೇಳಿದರು. ಆಗ ರಾಜರತ್ನಂ, "ನೋಡಿ ಡಾಕ್ಟರೇ, ನಡೆಗೋಲಿಲ್ಲದೆ ನಡೆಯೋಕ್ಕಾಗುಲ್ಲ ಅನ್ನೋ ಸ್ಥಿತಿಗೆ ಬರೋಕ್ ಮುಂಚೆಯೇ ಕಣ್ಣುಮುಚ್ಚಿಕೊಳ್ಳಬೇಕು ಎಂದು ನನ್ನ ಆಸೆ. ದೇವರಲ್ಲಿ ಪ್ರಾರ್ಥನೆ" ಎಂದುಬಿಟ್ಟರು! – 'ವಿನಾ ದೈನ್ಯೇನ ಜೀವನಂ' ಎಂದರು ಆಚಾರ್ಯರು. ರಾಜರತ್ನಂ ಎಂತಹದೇ ವಿಪನ್ನಾವಸ್ಥೆಯಲ್ಲೂ ಯಾರ ಮುಂದೆಯೂ 'ಸಿರ್‌ಜುಕಾಯಿಸದೆ', ಎಂತಹ ಕಷ್ಟಕಾಲದಲ್ಲೂ 'ಇದ್ದದ್ರಲ್ಲಿ ಹಾಯಾಗಿ' ಬಾಳಿದವರು.

* * *

ಶ್ರವಣಬೆಳ್ಗೊಳದ ಶ್ರೀಬಾಹುಬಲಿಸ್ವಾಮಿಯ ಮಹಾಮಸ್ತಕಾಭಿಷೇಕ ಸಂದರ್ಭದಲ್ಲಿ ಎರಡು ಸಲ ಆಕಾಶವಾಣಿಗಾಗಿ (೧೯೫೪ ಮತ್ತು ೧೯೫೭) ಆ ಭವ್ಯದೃಶ್ಯದ ಪ್ರತಿಕ್ಷಣದ ವೀಕ್ಷಕ ವಿವರಣೆ ನೀಡುವ ಅವಕಾಶ ರಾಜರತ್ನಂ ಅವರಿಗೆ ಪ್ರಾಪ್ತವಾಗಿತ್ತು ಎಂಬುದನ್ನು ಹೇಳಿದೆ. ಹಾಗೆ ಎರಡನೆಯ ಸಲ (೧೯೬೭) ಅವರು ಶ್ರವಣಬೆಳ್ಗೊಳಕ್ಕೆ ಹೋದವರು ಕಾರ್ಯಾಂತರವಾಗಿ ಒಂದು ದಿನ ಮೊದಲೇ ಬೆಂಗಳೂರಿಗೆ ಹಿಂದಿರುಗಬೇಕಿತ್ತು. ಬೆಟ್ಟಕ್ಕೆ ಹೋಗಿ ಬರುವುದಕ್ಕಾಗಿ ಮಸ್ತಕಾಭಿಷೇಕ ಸಮಿತಿ ನೀಡಿದ ಪ್ರವೇಶ ಪತ್ರ (Pass) ಅವರ ಕೈಯಲ್ಲಿತ್ತು. ಅದನ್ನು ತಿಳಿದ, ರಾಜರತ್ನಂರಿಗೆ ತೀರ ಪರಿಚಿತರೇ ಆದ ಮಾನ್ಯರೊಬ್ಬರು "ಸರ್, ನಾಳೆ ನೀವು ಹೇಗೂ ಇರುವುದಿಲ್ಲ. ನಿಮ್ಮ Pass ನನಗೆ ಕೊಟ್ಟರೆ ಉಪಕಾರ" ಎಂದರು. ಅದಕ್ಕೆ ರಾಜರತ್ನಂ, "ಅಪ್ಪಾ, ಸಮಿತಿಯೋರು Pass ಕೊಟ್ಟದ್ದು ರಾಜರತ್ನಂಗೆ. ನಿಮಗೆ Pass on ಮಾಡೋಕೆ ಅಲ್ಲ. ಹಾಗೆ ಕೊಡೋದು ಸಲ್ಲ" ಎಂದುಬಿಟ್ಟರು! ರಾಜರತ್ನಂಗೆ ಆ ಮಹನೀಯರಲ್ಲಿ ಸ್ನೇಹವಿಶ್ವಾಸಗಳಿದ್ದುವು. ಆದರೆ ಅವರ ನೀತಿ ದೃಷ್ಟಿ ಅದಕ್ಕಿಂತ ಹೆಚ್ಚಿನದಾಗಿತ್ತು. ಆ ಮಹನೀಯರೇ ಆ ಘಟನೆಯನ್ನು ಒಂದು ಸಂದರ್ಭದಲ್ಲಿ ಜ್ಞಾಪಿಸಿಕೊಂಡರು.

* * *

ಡಿ. ವಿ. ಜಿ.ಯವರ 'ಸಂಸ್ಕೃತಿ'ಯಲ್ಲಿ ಸುಸಂಸ್ಕೃತನ ಲಕ್ಷಣಗಳನ್ನು ಪಟ್ಟಿ ಮಾಡುತ್ತಾ 'ಸ್ವಸ್ಥಾನಪರಿಜ್ಞಾನ'ವೂ ಅವುಗಳಲ್ಲಿ ಒಂದೆಂಬುದಾಗಿ ಹೇಳಿದ್ದಾರೆ. ಎಂದರೆ 'ತಾನು ಎಲ್ಲಿದ್ದೇನೆ, ಹೇಗಿರಬೇಕು' ಎಂಬ ತಿಳಿವಳಿಕೆ ಮತ್ತು ನಡವಳಿಕೆ. ರಾಜರತ್ನಂ ಯಾವುದಾದರೂ ಸಭೆಗೋ ಸಮಾರಂಭಕ್ಕೋ ಒಬ್ಬ ಆಮಂತ್ರಿತಶ್ರೋತೃವಾಗಿ

ಹೋದಾಗ ಸಭಾಗೃಹದಲ್ಲಿ ಹಿಂದಿನ ಸಾಲಲ್ಲಿ ಕೂತುಕೊಳ್ಳುವುದು ಅವರ ಸಾಮಾನ್ಯ ಕ್ರಮ. ಆ ಕುರಿತು ಒಮ್ಮೆ ಅವರ ಮಗಳು ಶ್ರೀಲತಾ "ಅದೇಕೆ ಹಾಗೆ ಮಾಡ್ತೀರಿ? ಇಷ್ಟು ಪ್ರಸಿದ್ಧ ಸಾಹಿತಿ ನೀವು. ಮುಂದ್ಗಡೆ ಕೂತ್ಕೋಬಾರ್ದೇ?" ಎಂದು ಕೇಳಿದಾಗ ರಾಜರತ್ನಂ ಉತ್ತರ ಹೀಗಿತ್ತು: "ನೋಡಮ್ಮಾ, ಹಿಂದೆ ಕೂತೋನನ್ನ ಯಾರಾದ್ರೂ ಕರ್ದು ಮುಂದುಗಡೆ ಕೂರಿಸಿದ್ರೆ ಅದು ಗೌರವ. ಅದು ಬಿಟ್ಟು ಇನ್ನ್ಯಾರೋ ಅತಿ ಗಣ್ಯ ವ್ಯಕ್ತಿ – V.I.P. ಬಂದಾಗ ಮುಂದಿನ ಜಾಗ ಬಿಡುವಂತಾದ್ರೆ ಅದು ಅಪಮಾನ ಅಲ್ವೇ?" ('ನಮ್ಮ ತಂದೆ – ಕೆಲವು ನೆನಪುಗಳು' : ರತ್ನದೀಪ) – 'ಸ್ವಸ್ಥಾನ ಪರಿಜ್ಞಾನ'ವೆಂದರೆ ಹಾಗಿರುತ್ತದೆ; ರಾಜರತ್ನಂ ಅದಕ್ಕೆ ಜೀವಂತ ನಿದರ್ಶನ.

* * *

ರಾಜರತ್ನಂ ಅವರ ಹಲ್ಲುಗಳೆಲ್ಲ ಉದುರಿ ಬಾಯಿ ಬೋಡಾಗಿದ್ದರೂ ಅವರು 'ಕೃದಂತಿ' (ಕೃತಕ ದಂತಪಂಕ್ತಿ) ಆಗಿರಲಿಲ್ಲ. ಬಾಯಿ ಬೋಡಾದಾಗ ಉಚ್ಚಾರ ಅಸ್ಪಷ್ಟವಾಗುವುದು ಸಾಮಾನ್ಯ. ಆದರೆ ರಾಜರತ್ನಂ ಇದಕ್ಕೆ ಅಪವಾದ. ಮಾತ್ರವಲ್ಲ, ಅವರು ಊಟ–ತಿಂಡಿಗೂ ಕಷ್ಟಪಡುತ್ತಿರಲಿಲ್ಲ. ಹಲವರಿಗೆ ಅದೇ ಕುತೂಹಲ. ಅಂತಹದೇ ಕುತೂಹಲದಿಂದ ಒಮ್ಮೆ, "ಸರ್, ನೀವೇಕೆ ಡೆಂಚರ್ ಇರಿಸಿಕೊಂಡಿಲ್ಲ" ಎಂದು ಕೇಳಿದಾಗ ಬಂದ ಉತ್ತರ ಆಶ್ಚರ್ಯಕರವಾಗಿತ್ತು: "ಹಲ್ಲು ಕಟ್ಟಿಸಿಕೊಳ್ಳೋದೇನೂ ಕಷ್ಟವಲ್ಲ. ಅದು ಬೇಡಾ ಅಂದ್ಕೊಂಡಿದ್ದೇನೆ. ಹಲ್ಲಿದ್ದರೆ ಅದೂ–ಇದೂ ತಿನ್ಬೇಕೂಂತ ಚಪಲ ಆಗುತ್ತೆ. ಮೊದಲೇ ಒಂದಿಷ್ಟು ಡಯಾಬಿಟೀಸ್ ಇದೆ. ಅಂಥೋರಿಗೆ ತಿನ್ನೋ ಆಸೆ ಮೊದಲೇ ಹೆಚ್ಚು. ಹಲ್ಲಿದ್ರಂತೂ ಮುಗ್ದೇ ಹೋಯ್ತು. ಆದ್ರಿಂದಲೇ ಡೆಂಚರ್ ಬೇಡಾ ಅನ್ತೇನೆ."

ರಾಜರತ್ನಂ ಅನುಸರಿಸುತ್ತಿದ್ದ ನಿಗ್ರಹ, ನಿಯತ್ತುಗಳಿಗೆ ಇದೂ ಒಂದು ಉದಾಹರಣೆ.

* * *

ಹಾಸ್ಯಪ್ರಜ್ಞೆ:

'ಹಾಸ್ಯೇಂದ್ರಿಯಪಟುತ್ವ' ಎಂಬುದು ರಾಜರತ್ನಂ ಅವರಿಗೆ ಪ್ರಿಯವಾಗಿದ್ದ ಒಂದು ಪದಪ್ರಯೋಗ. ಅವರಲ್ಲಿ ಆ ಗುಣ ಧಾರಾಳವಾಗಿಯೇ ಇತ್ತು. ಅದರಲ್ಲಿ ವ್ಯಂಗ್ಯ, ವಿಡಂಬನೆ, ವರ್ಣವ್ಯತ್ಯಯ (Spoonarism) ಶ್ಲೇಷೆ (Pun)ಗಳೆಲ್ಲವೂ ಸೇರಿದ್ದು, ಪುರುಷಸರಸ್ವತಿ, ಕಂಬ್ಳಿಸೇವೆ, ನರಕದ ನ್ಯಾಯ, ಶಕಾರನ ಶಾರೋಟು ಮೊದಲಾದ ಕಾವ್ಯ–ನಾಟಕಗಳಲ್ಲಿ, ಬಾಲಕರಿಗಾಗಿ ಬರೆದ ಗೋಳೂರಿನ ಗಾಯಕರು –ಮುಂತಾದ ಪುಸ್ತಕಗಳಲ್ಲಿ, ಅವರ ಅಂತಿಮ ರಚನೆಗಳಲ್ಲಿ ಒಂದಾದ 'ನಿರ್ಭಯಾಗ್ರಫಿ'ಯಲ್ಲಿ ಅವೆಲ್ಲವೂ ಢಾಳವಾಗಿ ಪ್ರಕಟವಾಗುತ್ತವೆ. 'ಪುರುಷಸರಸ್ವತಿ' ಮತ್ತು 'ನಿರ್ಭಯಾಗ್ರಫಿ'ಗಳಲ್ಲಿ ವ್ಯಂಗ್ಯ–ವಿನೋದ ಹೇಗಿದೆಯೆಂಬುದನ್ನು ಈ ಮೊದಲು ಹೇಳಿದೆ. ನಮ್ಮ 'ನಗೆಗಾರರು' ಮತ್ತು 'ನಕ್ಕಳಾ ತಾಯಿ' ಎಂಬ ಪುಸ್ತಕಗಳನ್ನು ರಾಜರತ್ನಂ ಅವರು ರಚಿಸುವುದಕ್ಕೂ ಅವರಲ್ಲಿದ್ದ ಹಾಸ್ಯಗುಣವೇ ಮೂಲಧಾತು.

ಬರವಣಿಗೆಯಂತೆಯೇ ಅವರ ಬಾಯಿಮಾತಿನಲ್ಲೂ ಹದವಾದ ನಗೆಗಾರಿಕೆಯಿತ್ತು. ಹೋಳಿಗೆಯ ಹೂರಣದಲ್ಲಿ ಸೇರಿಕೊಳ್ಳುವ ಏಲಕ್ಕಿಯಂತೆ ನಗೆಯ ತುಂತುರುಗಳು ರಾಜರತ್ನಂ ಭಾಷಣಗಳ ಸೊಗಸನ್ನು ಹೆಚ್ಚಿಸುತ್ತಿದ್ದುವು.

ರಾಜರತ್ನಂ ಹಾಸ್ಯದಲ್ಲಿ ದ್ವಂದ್ವಾರ್ಥಪ್ರಯೋಗಗಳೂ ಅಲ್ಲಲ್ಲಿ ಮಿಂಚುತ್ತಿದ್ದುವು. ಇಂಗ್ಲಿಷಿನಲ್ಲಿ 'seller' ಮತ್ತು 'cellar' ಎಂಬ ಎರಡು ಪದಪ್ರಯೋಗವಿದೆ. ಉಚ್ಚಾರ ಒಂದಾದರೂ ಅರ್ಥ ವಿಭಿನ್ನ. ರಾಜರತ್ನಂ Book sellerನ್ನು Book cellar ಎಂದು ಬಳಸಿ ಅದರಲ್ಲೊಂದು ನವೀನ ಅರ್ಥಚಮತ್ಕೃತಿಯನ್ನು ಕಾಣಿಸುತ್ತಾರೆ. ನಿವೃತ್ತಿ ಎಂಬ ಅರ್ಥದ Retireನ್ನು Retyre ಪುನರ್ನವೀಕರಣ ಎಂಬ ಅರ್ಥದಲ್ಲಿ ಬಳಸುತ್ತಾರೆ. 'ಭಾಷಾವಾರು ಪ್ರಾಂತ್ಯವಲ್ಲ, ಭಾಷಾ Wise ಪ್ರಾಂತ್ಯ ರಚನೆ ಆಗಬೇಕಿತ್ತು' ಎಂಬುದು ಅವರದೇ ವ್ಯಾಖ್ಯಾನ. ಪರೀಕ್ಷೆಯಲ್ಲಿ Marks ಬರುವುದಿಲ್ಲ, ಜೀವನದಲ್ಲಿ Remarks ಬಾರದೆ ಇರುವುದು ಮುಖ್ಯ ಎಂಬುದರಲ್ಲಿ ಅಂತಹದೇ ಶಬ್ದಚಮತ್ಕಾರವಿದೆ. 'ಕನ್ನಡವನ್ನು ಕಾಸಿಗಾಗಿ ಕಟ್ಟಿಕೊಂಡವರುಂಟು, ಒಂದು Cause ಆಗಿ ಕಟ್ಟಿಕೊಂಡವರೂ ಉಂಟು' ಎನ್ನುವಾಗ ಕನ್ನಡದ ಕಾಸು ಮತ್ತು ಇಂಗ್ಲಿಷಿನ Causeಗಳಲ್ಲಿ ಧ್ವನಿಸಾಮ್ಯವಿದ್ದರೂ ಅರ್ಥಭೇದ ಸ್ಪಷ್ಟವಾಗಿದೆ. ಇನ್ನೊಮ್ಮೆ ಕನ್ನಡ ಸಾಹಿತ್ಯ ಪರಿಷತ್ತಿನ ಚರಿತ್ರೆಯನ್ನು ವರ್ಣಿಸುತ್ತಾ "ಅದು ಐವತ್ತು ಕಮಾನುಗಳ ಸೇತುವೆ. ಆ ಸೇತುವೆ ಕನ್ನಡಿಗರನ್ನು Come on ಎಂದು ಕರೆಯುತ್ತಿದೆ" ಎಂದರು! (ಆಗ ಪರಿಷತ್ತಿನ ಚಿನ್ನದ ಹಬ್ಬ) ಇಲ್ಲಿ ಕನ್ನಡದ 'ಕಮಾನ'ನ್ನು ಇಂಗ್ಲಿಷಿನ Come onಗೆ ಹೋಲಿಸಿಕೊಂಡು ಎಂತಹ ಅರ್ಥವನ್ನು ಹೊರಡಿಸುತ್ತಾರೆ ಎಂಬುದೇ ಸ್ವಾರಸ್ಯಕರ! ಇನ್ನು ಸಂಸ್ಕೃತದ 'ಸಂತಾಪ' (ಸಮ್ಯಕ್+ತಾಪ)ಕ್ಕೆ Some +ತಾಪ ಎಂಬ ಆಂಗ್ಲೋ ಸಂಸ್ಕೃತ ಪದಸಂಕರ ಮಾಡುವುದು, ಕೊಂಡಾಡು ಎಂಬ ಅಚ್ಚಗನ್ನಡ ಪದಕ್ಕೆ 'ಕೊಂಡು+ಆಡು' ಎಂಬ ವಿಶಿಷ್ಟಾರ್ಥವನ್ನು ಆರೋಪಿಸುವುದು, ಒಂದು ಕಾಲದಲ್ಲಿ ಬಳಕೆಯಲ್ಲಿದ್ದ 'ಕನ್ನಡಿಗರ ಅಡಿಯಾಳು' ಎಂಬ ವಿನಯಸೂಚಕ ಪ್ರಯೋಗವನ್ನು 'ಕನ್ನಡ ಗರಡಿಯಾಳು' ಎಂಬುದಾಗಿ ಪದಚ್ಛೇದ ಮಾಡುವುದೆಲ್ಲ ರಾಜರತ್ನಂ ಅವರ ವಿಶೇಷ ಸಿದ್ಧಿ. ರಾಜರತ್ನಂ ಅವರು 'ದುಡ್ಡಿನ ಡಬ್ಬಿ'(ಧನಿಕ ಎಂಬ ಅರ್ಥದಲ್ಲಿ)ಯಂತಹ ಅನೇಕ ವಿನೂತನ ಪದಗಳನ್ನು ಟಂಕಿಸಿದ್ದಾರೆ.

ರಾಜರತ್ನಂ ಅವರ ವಾಙ್ಮಯವೆಂದರೆ ಅದೊಂದು ಸೂಕ್ತಿಸುಧಾರ್ಣವ. ಗದ್ಯ ಲೇಖನಗಳಿರಲಿ, ಪದ್ಯ ಕಾವ್ಯಗಳಿರಲಿ ಅಲ್ಲಲ್ಲಿ ಮಿಂಚು ನುಡಿಗಳು ಪಳಚ್ಚನೆ ಹೊಳೆಯುತ್ತವೆ, ಓದುಗರ ಒಳಗನ್ನು ಬೆಳಗುತ್ತವೆ. ಅಂತಹದೊಂದು ನುಡಿಮುತ್ತನ್ನು ನೋಡಿ: "ನಮ್ಮಲ್ಲಿ ಎರಡು ಬಗೆಯ ಪುಸ್ತಕಗಳು: ಕೈತೊಳೆದು ಮುಟ್ಟಬೇಕಾದ ಪುಸ್ತಕಗಳು; ಮುಟ್ಟಿದರೆ ಕೈತೊಳೆಯಬೇಕಾದಂತಹ ಪುಸ್ತಕಗಳು" – 'ವಿಚಾರರಶ್ಮಿ' 'ಕಿರಣಾನುಭವ' 'ಸ್ವಾರಸ್ಯ'ಗಳಂತಹ ಗ್ರಂಥಗಳಿಂದ ಇಂತಹ ನುಡಿಹರಳುಗಳನ್ನು ಆರಿಸಿ ಮಾಲೆಗಳನ್ನು ಕಟ್ಟಬಹುದು, ತೊಟ್ಟು ನಲಿಯಬಹುದು.

* * *

ಸಂಮಾನ್ಯ ರಾಜರತ್ನಂ:

ರಾಜರತ್ನಂ ಅವರಿಗೆ ಸಕಾಲದಲ್ಲಿ ಅಲ್ಲವಾದರೂ ಕಾಲಾಂತರದಲ್ಲಿ ಯೋಗ್ಯತಾನುಗುಣವಾದ ಪ್ರಶಸ್ತಿಗಳು ಬಂದುವು, ಸಂಮಾನಗಳು ಸಂದುವು. ಅವರಿಗೆ ಬರಬೇಕಾಗಿದ್ದ ಪ್ರಶಸ್ತಿಗಳೂ ಪುರಸ್ಕಾರಗಳೂ ಸ್ವಲ್ಪ ವಿಳಂಬವಾಗಿ ಬಂದುದಕ್ಕೆ ಅನೇಕ ಅಭಿಮಾನಿಗಳಿಗೆ ಅಸಮಾಧಾನ. ಅಂತಹ ಆಕ್ಷೇಪ ಅಸಮಾಧಾನಗಳನ್ನೆಲ್ಲ ಸೇರಿಸಿ ರಾಜರತ್ನಂ ಒಂದು ಟಿಪ್ಪಣಿ ಮಾಡಿದ್ದರು; ಅದು ಹಿಂದೆ ಹೇಳಿದ ಅವರ 'ಹಾಸ್ಯೇಂದ್ರಿಯಪಟುತ್ವ'ಕ್ಕೂ ಒಂದು ಸುಂದರವಾದ ನಿದರ್ಶನ. ತಮ್ಮ ದೇಹಾಂತ್ಯಕ್ಕೆ ಕೆಲವೇ ದಿನಗಳ ಹಿಂದೆ ಕಿರಿಮಗಳನ್ನು ಕರೆದು, "ಮುಂದಿನ ನನ್ನ ಲೇಖನಕ್ಕೆ ವಿಷಯ ಇದು" ಎನ್ನುತ್ತಾ ಒಂದು ಕಾಗದದ ಚೂರನ್ನು ತೋರಿಸಿದರಂತೆ. ಅದರಲ್ಲಿ ಹೀಗಿತ್ತು: "ಪದವಿ, ಉದ್ಯೋಗ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಡಾಕ್ಟರೇಟ್, (ಸಮ್ಮೇಳನ) ಅಧ್ಯಕ್ಷ, ಗೌರವಧನ, ಮರಣ" ಮಗಳು ಅಚ್ಚರಿಯಿಂದ ತಂದೆಯ ಮುಖ ನೋಡಿದಾಗ ಹೇಳಿದರು: "ನನ್ ಜೀವನದಲ್ಲಿ ಪ್ರತಿಯೊಂದೂ ಹ್ಯಾಗೆ ತಡವಾಗಿ ಬಂತೂ ಅನ್ನೋದನ್ನ ಬರೀಬೇಕೂಂತ ಇದ್ದೀನಿ. ನಾನು ಡಿಗ್ರಿಯನ್ನು ಪಡೆದಾಗ, ನನಗೆ ಉದ್ಯೋಗ ಸಿಕ್ಕಿದಾಗ ಜನ 'ಅದೆಲ್ಲ ಈ ಮೊದಲೇ ಸಿಗಬೇಕಾಗಿತ್ತು' ಎಂದು ಹೇಳ್ದ್ರು. ಮುಂದೆ ಅಕಾಡೆಮಿ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿ, ಸಾಹಿತ್ಯ ಸಮ್ಮೇಳನಾಧ್ಯಕ್ಷಸ್ಥಾನ, ಸರಕಾರದ ಗೌರವಧನ ಬಂದಾಗ್ಲೂ ಅದೇ ಮಾತು –'ತಡವಾಗಿ ಬಂತು'. ಈ ರೀತಿ ಹೇಳುವುದು ನಮ್ ಜನಕ್ಕೆ ಎಷ್ಟು ಅಭ್ಯಾಸವಾಗಿದೆ ಅಂತಂದ್ರೆ, ನನಗೆ ಸಾವು ಬಂದಾಗ್ಲೂ 'ಇದಕ್ಕೂ ಮುಂಚೇನೇ ಬರಬೇಕಾಗಿತ್ತು' ಅಂತ ಹೇಳಿಯೇ ಹೇಳ್ತಾರೆ!" ಹಾಸ್ಯದ ಮಾತು ಹಾಗಿರಲಿ, ಮೈಸೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ (ಅದು ಅವರ ಮಾತೃವಿಶ್ವ ವಿದ್ಯಾನಿಲಯವೂ ಹೌದು) ಸಾಹಿತ್ಯಸಮ್ಮೇಳನದ ಅಧ್ಯಕ್ಷಸ್ಥಾನ, ಸರಕಾರದ ಗೌರವಧನಗಳಿಗೆ ಅವರ ಆಯ್ಕೆ ತಡವಾಗಿಯೇ ಆದರೂ ಅವರ ಶಿಷ್ಯರೂ, ಮಿತ್ರರೂ ಮೊದಲೇ ಅವರ ಯೋಗ್ಯತೆಯನ್ನು ಗುರುತಿಸಿ ಗೌರವಿಸಿದ್ದರು. ೧೯೫೦ರಷ್ಟು ಹಿಂದೆಯೇ ಸೆಂಟ್ರಲ್ ಕಾಲೇಜಿನ ಅವರ ವಿದ್ಯಾರ್ಥಿಗಳು 'ರಾಜರತ್ನಂ' ಎಂಬ ಪುಸ್ತಕವನ್ನು ಮುದ್ರಿಸಿ ಅವರಿಗೆ ಅರ್ಪಿಸಿದ್ದರು. ೧೯೬೮ರಲ್ಲಿ ಅವರಿಗೆ ಅರುವತ್ತು ತುಂಬಿದಾಗ ಶಿಷ್ಯರೂ ಮಿತ್ರರೂ ಅಭಿಮಾನಿಗಳೂ ಅರುವತ್ತು ಸಾವಿರದ ನಿಧಿ ಸಂಗ್ರಹಿಸಿ ಒಪ್ಪಿಸಿದರಲ್ಲದೆ 'ನಮ್ಮ ರಾಜರತ್ನಂ' ಎಂಬ ಒಂದು ಪುಸ್ತಕವನ್ನೂ ಸಂಪಾದಿಸಿದರು. ರಾಜರತ್ನಂ ಆ ಅರುವತ್ತು ಸಾವಿರದ ಮೊತ್ತವನ್ನು ಸ್ವಂತಕ್ಕೆ ಬಳಸಿಕೊಳ್ಳದೆ ಸತ್ಕಾರ್ಯಕ್ಕೆ ವಿನಿಯೋಗಿಸಿದರೆಂಬುದು ಬೇರೆ ಮಾತು. ಇನ್ನು ಅಲ್ಲಿ–ಇಲ್ಲಿ ಅವರು ಭಾಷಣಗಳಿಗೆ ಹೋದಾಗ ಜನ ಅವರನ್ನು ನೋಡಿ ಅವರ ಮಾತುಗಳನ್ನು ಕೇಳಿ ಪಡುತ್ತಿದ್ದ ಸಂತೋಷ, ರತ್ನನ ಪದಗಳನ್ನೂ ಇನ್ನಿತರ ಕೃತಿಗಳೂ ಓದಿ ಅನುಭವಿಸುತ್ತಿದ್ದ ಆನಂದ ರಾಜರತ್ನಂ ಅವರಿಗೆ ಬಹುದೊಡ್ಡ ಸಂಭಾವನೆ, ಸತ್ಕಾರ. ಮಲ್ಲೇಶ್ವರಂನ ಒಂದು ಮೂಲೆಯಲ್ಲಿ ಆಟವಾಡುತ್ತಿದ್ದ ಮಕ್ಕಳ ಗುಂಪಿನ ಒಬ್ಬ ಹುಡುಗ ರಾಜರತ್ನಂರನ್ನು ನೋಡಿ, 'ಅಲ್ನೋಡಿ, ನಾಯಿಮರಿ ರಾಜರತ್ನಂ' ಎಂದು ಕೂಗಿದ್ದೂ, ಒಂದು ಮನೆಯ ಎಳೆಯ

ಹುಡುಗ 'ನಾನೂ ರಾಜರತ್ನಂ ಆಗ್ತೀನಿ' ಎಂದು ತನ್ನ ಗುಂಗುರು ಕೂದಲನ್ನೆಲ್ಲ ಕತ್ತರಿಸಿ ತಲೆಯನ್ನು ನುಣ್ಣಗೆ ಬೋಳಿಸಿಕೊಂಡದ್ದೂ ರಾಜರತ್ನಂ, ಹಿರಿಯರ ಮನಸಿನಲ್ಲಿ ಮಾತ್ರವಲ್ಲ ಕಿರಿಯರ ಹೃದಯದಲ್ಲೂ ಎಂತಹ ಸ್ಥಾನವನ್ನು ಸಂಪಾದಿಸಿದ್ದರು ಎಂಬು ದನ್ನು ನಿದರ್ಶಿಸುತ್ತದೆ. ಕವಿ ಬಸವಪ್ಪ ಶಾಸ್ತ್ರಿಯವರ ಒಂದು ಪದ್ಯ ಹೀಗಿದೆ:

ಅರಸರ್ಕುಡುವಾ ಕಾರ್ತ
ಸ್ವರ ಕಂಕಣಮಿರ್ಕೆ ಸರಸರಾಸ್ವಾದಿಸಿ ಕಾ ।
ವ್ಯರಸವ ಸೂಸುವ ಸುಖ ಭಾ
ಷ್ಪರಾಶ್ರು ಕಂಕಣಮೆ ಕವಿಗೆ ಕಂಕಣಮಲ್ತೆ ॥

(ಅಧಿಕಾರ ಸ್ಥಾನದಲ್ಲಿರುವ ಅರಸರು –ಅವರು ಕಾವ್ಯಗಳನ್ನು ಓದಿ ಮೆಚ್ಚಲಾಗದ ಅರಸಿಕರೂ ಆಗಿರುತ್ತಾರೆ! – ತೊಡಿಸುವ ಒರಟು ದನಿಯ ಚಿನ್ನದ ಬಳೆಗಳಿಗಿಂತ, ಸರಸರು, ಎಂದರೆ ರಸಿಕಜನರು ಕಾವ್ಯವನ್ನು ಕೇಳಿ, ಓದಿ, ಮೆಚ್ಚಿ, ಮನಸು ತುಂಬಿ ಬಂದಾಗ ಸುರಿಸುವ ಕಣ್ಣ ಕಣವೇ ಎಂದರೆ ಕಂಬನಿಯೇ ಕವಿಗೆ ನಿಜವಾದ ಕಂಕಣವಲ್ಲವೇ?) –ರಾಜರತ್ನಂ ಅವರ ಕಡಲೆಪುರಿ, ತುತ್ತೂರಿಗಳನ್ನು ಕೇಳಿ ರತ್ನನ ಪದ, ನಾಗನ ಪದಗಳನ್ನು ಓದಿ, ಗಂಡುಗೊಡಲಿ ಶಕಾರನ ಶಾರೋಟುಗಳನ್ನು ನೋಡಿ, 'ವಿಚಾರರಶ್ಮಿ' ಸಂಪುಟಗಳನ್ನು ಮನನ ಮಾಡಿ ಅದೆಷ್ಟು ಜನರ ಎದೆ ಮೆದುವಾಗಿಲ್ಲ! ಸಂತಸದ ಹನಿಗಳಿಂದ ಕಣ್ಣುಗಳು ಒದ್ದೆಯಾಗಿಲ್ಲ! ಒಬ್ಬ ಕವಿ–ಸಾಹಿತಿಗೆ ಅದಕ್ಕಿಂತ ಮಿಗಿಲಾದ ಬಹುಮಾನ ಸಂಮಾನಗಳು ಬೇರೇನಿವೆ?

●

IV. ಉಪಸಂಹಾರ

ಸಾವಿರದೊಂಬೈನೂರ ಎಪ್ಪತ್ತೊಂಬತ್ತನೆಯ ಮಾರ್ಚ್ ಒಂಬತ್ತರಿಂದ ಹನ್ನೊಂದರ ವರೆಗೆ – ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಐವತ್ತೊಂದನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. 'ಒಂದು ಜನಾಂಗದ ಕಣ್ಣು ತೆರೆಯಿಸಿದ ಕವಿ'ಯೆಂದು ವರ್ಣಿತರಾದ ಎಂ. ಗೋಪಾಲಕೃಷ್ಣ ಅಡಿಗರಿಗೆ ಸಮ್ಮೇಳನಾಧ್ಯಕ್ಷತೆಯ ಗೌರವ. ಹಿಂದಿನ ವರ್ಷ– ೧೯೭೮ರ ಎಪ್ರಿಲ್ ತಿಂಗಳಲ್ಲಿ ನವದೆಹಲಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಐವತ್ತನೆಯ ಅಧಿವೇಶನ – 'ಸುವರ್ಣೋತ್ಸವ' ನಡೆದಿತ್ತು. ಅದರ ಅಧ್ಯಕ್ಷತೆ ಕನ್ನಡದ ಜೀವರತ್ನ ಜಿ. ಪಿ. ರಾಜರತ್ನಂ ಅವರದಾಗಿತ್ತು. ಆದುದರಿಂದ ಆ ಅಧಿಕಾರವನ್ನು ಅಡಿಗರಿಗೆ ಹಸ್ತಾಂತರಿಸುವುದಕ್ಕೆ ರಾಜರತ್ನಂ ಧರ್ಮಸ್ಥಳಕ್ಕೆ ಆಗಮಿಸಿದ್ದರು. ಹಾಗೆ ಬಂದವರು ಸಮ್ಮೇಳನಾಂಗವಾಗಿದ್ದ ಶಿಶುಸಾಹಿತ್ಯಗೋಷ್ಠಿಯಲ್ಲೂ ಪಾಲ್ಗೊಂಡರು. ಎರಡು ವಿಚಾರಪ್ರದವಾದ, ಸ್ಮರಣೀಯವಾದ ಉಪನ್ಯಾಸಗಳನ್ನೂ ಮಾಡಿದರು. ಸಹಸ್ರ ಸಂಖ್ಯೆಯ ಶ್ರೋತೃಗಳ ಕಣ್ಣುಕಿವಿಗಳನ್ನು ತುಂಬಿದರು. ಮೂರೂ ದಿನ ಸಭಾಮಂಟಪದಲ್ಲಿ ಓಡಾಡಿದರು, ಹತ್ತಿರ ಬಂದವರನ್ನು ಮಾತಾಡಿಸಿದರು, ಕೈಕುಲುಕಿದರು, ಹಸ್ತಾಕ್ಷರಗಳನ್ನು ನೀಡಿದರು. ಧರ್ಮಸ್ಥಳದ ರತ್ನಗಿರಿಯನ್ನೇರಿ ಶ್ರೀಗೊಮ್ಮಟಸ್ವಾಮಿಯ ದರ್ಶನವನ್ನೂ ಮಾಡಿದರು.

ಮಾರ್ಚ್ ಹನ್ನೊಂದರ ರಾತ್ರಿ ಬಸ್ಸಿನಲ್ಲಿ, ತಮ್ಮ ಜತೆಗಾರರಾಗಿದ್ದ ಮಾಸ್ತಿ, ಗೊರೂರು, ಪು.ತಿ.ನ. ಮೊದಲಾದವರನ್ನು ಧರ್ಮಸ್ಥಳದಲ್ಲೇ ಬಿಟ್ಟು, ಅವರು ಒಂಟಿಯಾಗಿ ಬೆಂಗಳೂರಿಗೆ ಹಿಂದಿರುಗಿದ್ದರು.

ರಾಜರತ್ನಂ ಅವರು ಸಮ್ಮೇಳನಾಧ್ಯಕ್ಷ ಸ್ಥಾನಕ್ಕೆ ಅಡಿಗರನ್ನು ಆಮಂತ್ರಿಸುತ್ತ ಆಡಿದ ಮಾತುಗಳ ಮೊದಲಲ್ಲಿ ಎಂದಿನಂತೆ 'ಶಿವಾಯ ಧಾತ್ರೇ... ನಮಃ' ಎಂಬ ಸರ್ವದೇವನಮಸ್ಕಾರವಿತ್ತು. ಭಾಷಣದ ಅಂತಿಮ ವಾಕ್ಯ ಹೀಗಿತ್ತು: ".....ಶ್ರೀ ಅಡಿಗರನ್ನು ಸಮ್ಮೇಳನಾಧ್ಯಕ್ಷಸ್ಥಾನಕ್ಕೆ ಸ್ವಾಗತಿಸಿ ವಿರಮಿಸುತ್ತೇನೆ". ಅನಂತರ ಸಂಸ್ಕೃತದ ಒಂದು ಸ್ವಸ್ತಿ ಮಂತ್ರ:

ಶಿವಮಸ್ತು ಸರ್ವಂ ಜಗತಾಂ
ಪರಹಿತನಿರತಾ ಭವನ್ತು ಭೂತಗಣಾಃ ।
ದೋಷಾಃ ಪ್ರಯಾನ್ತು ಶಾಂತಿಂ
ಸರ್ವತ್ರ ಸುಖೀಭವತು ಲೋಕಃ ॥

'ದೈವೀ ವಿಚಿತ್ರಾ ಗತಿಃ' ಎನ್ನುತ್ತಾರೆ. ರಾಜರತ್ನಂ ಅವರು ಧರ್ಮಸ್ಥಳದಲ್ಲಿ ಆಡಿದ ಮಾತುಗಳೇ ಅವರ ಹಂಸಗೀತವಾಗುವುದೆಂದು ಅವರನ್ನು ಕಂಡ–ಕೇಳಿದ ಯಾರೂ ಊಹಿಸಿರಲಿಲ್ಲ. ಅವರು 'ವಿರಮಿಸುತ್ತೇನೆ' ಎಂದದ್ದು ಅಧಿಕಾರಸ್ಥಾನದಿಂದಲ್ಲ, ಐಹಿಕ ಜಗತ್ತಿನಿಂದಲೇ ಎಂಬ ಅರ್ಥಧ್ವನಿ ಆಗ ಯಾರಿಗೂ ಕೇಳಿರಲಿಲ್ಲ!

ಮಾರ್ಚ್: ೧೩

ಮಾರ್ಚ್ ೧೨ರಂದು ಬೆಳಗ್ಗೆ ಬೆಂಗಳೂರು ತಲಪಿದ ರಾಜರತ್ನಂ ಆ ದಿನವಿಡೀ ಪೂರ್ತಿ ಅಲ್ಲಿ ಇಲ್ಲಿ ಓಡಾಡಿ, ಪುಸ್ತಕದ ಅಂಗಡಿಗಳಿಗೂ ಹೋಗಿ, ತಮಗೆ ಪ್ರಿಯವಾದ ಮಲ್ಲೇಶ್ವರಂ ಗಾಂಧೀ ಸಾಹಿತ್ಯಸಂಘಕ್ಕೂ ಭೇಟಿ ನೀಡಿ ಕಾಣಬೇಕಾದವರನ್ನು ಕಂಡು ಮಾತಾಡಿದರು. ಧರ್ಮಸ್ಥಳ ಸಮ್ಮೇಳನದ ಅನುಭವವನ್ನೂ ಹೇಳಿದರು.

ಮರುದಿನ ಮಾರ್ಚ್ ೧೩ರಂದು ಎಂದಿನಂತೆ ಬೆಳಗ್ಗೆ ಬೇಗ ಎದ್ದು ಮನೆಗೆಲಸ ಪೂರೈಸಿ, ಪೇಟೆಗೆ ಒಂದು ಸುತ್ತು ಹಾಕಿ ಮನೆಗೆ ಬಂದರು. ಮಧ್ಯಾಹ್ನದ ಊಟ ಮುಗಿಸಿ ಕೊಂಚ ಹೊತ್ತು ವಿಶ್ರಾಂತಿ ಪಡೆದರು. ಇದ್ದಕ್ಕಿದ್ದಂತೆ ಎದೆ ನೋವು ಬಂತು. ರಾಜರತ್ನಂ ಅವರಿಗೆ ಮಧುಮೇಹದ ಪೀಡೆ ಇತ್ತು. ಪೂರ್ವಾನುಭವದಿಂದ ದೇಹದಲ್ಲಿ ಸಕ್ಕರೆಯ ಅಂಶ ಕಡಮೆಯಾಗಿರಬೇಕೆಂದು ಊಹಿಸಿ, ಪಕ್ಕದ ಮನೆಯಲ್ಲಿದ್ದ ಮೊಮ್ಮಗ ಶ್ರೀನಿವಾಸನನ್ನು ಕರೆದು, 'ಸಕ್ಕರೆ' ಎಂದರು; ಮತ್ತೆ 'ನಾರಾಯಣಾ' ಎಂದರು. ಅದೇ ಕೊನೆ, ಈಸಿಚೇರಿನಲ್ಲಿ ಕುಳಿತಿದ್ದಂತೆಯೇ ಕೊನೆಯುಸಿರೆಳೆದರು ರಾಜರತ್ನಂ......

ಎಂಬತ್ತು ವರ್ಷಗಳ. ಕಾಲ, ಕೋಟಿ ಕನ್ನಡಿಗರ ಮನಸ್ಸನ್ನು ತಮ್ಮ ಲೇಖನ, ಭಾಷಣ, ಅಧ್ಯಾಪನ, ಜೀವನವಿಧಾನಗಳಿಂದ ಪ್ರಭಾವಿಸಿದ್ದ 'ರತ್ನಪ್ರಭೆ' ಮಂಕಾಯಿತು, ಮರೆಯಾಯಿತು.

ಮಾರ್ಚ್ ೧೩, ೧೯೭೯ –ಅಂದು ಫಾಲ್ಗುಣಶುದ್ಧ ಪೂರ್ಣಿಮೆ–

ರಾಜರತ್ನಂ ಜನಿಸಿದ್ದು ದಶಂಬರ ೫, ೧೯೦೮ –ಆ ದಿನವೂ ಪೂರ್ಣಿಮೆಯಾಗಿತ್ತು.

ಒಂದು ಹುಣ್ಣಿಮೆಯಿಂದ ಮತ್ತೊಂದು ಹುಣ್ಣಿಮೆ. ರಾಜರತ್ನಂ ಅವರ ಎಂಬತ್ತು ವರ್ಷಗಳ ಜೀವನಯಾತ್ರೆ ಪೂರೈಸಿತ್ತು. ಅವರದು 'ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಂ'. ಬದುಕಿನಲ್ಲಿ ಹೇಗಿದ್ದರೋ ಹಾಗೆಯೇ ಸಾವಿನಲ್ಲೂ! ಹಾಸುಗೆ ಹಿಡಿದು ನರಳದೆ, ತಮ್ಮಿಂದ ಯಾರಿಗೂ ನೋವಾಗದಂತೆ ಕುಳಿತಲ್ಲಿಂದ ಎದ್ದು ಹೋಗುವ ಹಾಗೆ 'ನೆಮ್ಮದಿಯ ನಾಡಿಗೆ' ನಡೆದುಬಿಟ್ಟರು! ಕನ್ನಡ ಸಾಹಿತ್ಯೇತಿಹಾಸದ 'ರತ್ನಪರ್ವ' ಮುಗಿಯಿತು!

ಮತ್ತೆ ಹೇಳುವುದೇನು? –ಕ್ಷಣಾರ್ಧದಲ್ಲಿ ರಾಜರತ್ನಂ ಮರಣವಾರ್ತೆ ಬೆಂಗಳೂರಲ್ಲಿ ಹಬ್ಬಿತು, ಆಕಾಶವಾಣಿಯಿಂದ ನಾಡಿನ ನಾಲ್ದೆಸೆಗಳಲ್ಲೂ ಮಾರ್ದನಿಸಿತು. ರಾಜರತ್ನಂ ಅವರ ಹಿರಿಯರು, ಮಿತ್ರರು, ಶಿಷ್ಯರು, ಸರಕಾರಿ ವರಿಷ್ಠರು ಮಲ್ಲೇಶ್ವರಂ ಹದಿನಾಲ್ಕನೆಯ ತಿರುವಿನ 'ವಿದೇಹ'ಕ್ಕೆ ಧಾವಿಸಿದರು, ರಾಜರತ್ನಂ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಮಾಡಿದರು, ಅಶ್ರುದರ್ಪಣ ನೀಡಿದರು. ಮರುದಿನ, ಮಾರ್ಚ್ ೧೪ರಂದು ರಾಜರತ್ನಂ ನಿಧನವಾರ್ತೆ ಕನ್ನಡದ ಎಲ್ಲ ಪತ್ರಿಕೆಗಳ ಮುಖಪುಟಗಳಲ್ಲೂ ಚಿತ್ರಸಹಿತ ಸವಿವರವಾಗಿ ಪ್ರಕಟವಾಯಿತು. ಓದಿದವರೆಲ್ಲ 'ಇಂತಹ ರತ್ನವನ್ನು ಇನ್ನೆಲ್ಲಿ ಕಾಣೋಣ' ಎಂದು ಉದ್ಗರಿಸಿದರು!

ದೂರದ ಶಿಲ್ಲಾಂಗಿನಲ್ಲಿದ್ದ ಮಗ ಬರುವುದು ತಡವಾದುದರಿಂದ ಒಂದು ದಿನವಿಡೀ ಮೃತಶರೀರವನ್ನು ಸಂರಕ್ಷಿಸುವ ವ್ಯವಸ್ಥೆ ಮಾಡಲಾಯಿತು. ಮಾರ್ಚ್ ೧೪ರಂದು ಮಧ್ಯರಾತ್ರಿಯ ಹೊತ್ತಿಗೆ ಶ್ಮಶಾನಯಾತ್ರೆಯಲ್ಲಿ ಶ್ರೀಧರ ಸೇರಿಕೊಂಡರು. ಶ್ರೀರಾಮಪುರದ ರುದ್ರಭೂಮಿಯಲ್ಲಿ ರಾಜರತ್ನಂ ಕಲೇವರ ಪಂಚಭೂತಗಳನ್ನು ಸೇರಿಕೊಂಡಿತು.

* * *

'ಕಣ್ಣಿಂದ ದೂರವಾದದ್ದು ಮನದಿಂದಲೂ ದೂರವೇ' ಎಂಬ ಆಂಗ್ಲ ವಾಕ್ಯವೊಂದಿದೆ. ಆದರೆ ರಾಜರತ್ನಂ ವಿಷಯದಲ್ಲಿ ಹಾಗೆ ಆಗಲಿಲ್ಲ. ರಾಜರತ್ನಂ ಅವರ ಅಂತಿಮ –ಸಾರ್ವಜನಿಕ ಭಾಷಣ ನೆರವೇರಿದ್ದು ದಕ್ಷಿಣ ಕನ್ನಡದ ಧರ್ಮಸ್ಥಳದಲ್ಲಿ. ೧೯೩೦ರ ದಶಕದಲ್ಲಿ ಶಿವರಾಮ ಕಾರಂತರು ಪುತ್ತೂರಲ್ಲಿ ದಸರೆಯ ಹಬ್ಬವನ್ನು ಜರಗಿಸುತ್ತಿದ್ದ ಕಾಲದಿಂದಲೂ ರಾಜರತ್ನಂರಿಗೆ ದಕ್ಷಿಣ ಕನ್ನಡದ ಸಂಪರ್ಕ. ಅವರು ಕಾರಂತರ ಪುತ್ತೂರನ್ನೂ ಗೋವಿಂದ ಪೈ ಅವರ ಮಂಜೇಶ್ವರವನ್ನೂ ಯಾತ್ರಾ ಸ್ಥಳಗಳೆಂದೇ ಭಾವಿಸಿದ್ದರು. ಆದುದರಿಂದ ದಕ್ಷಿಣ ಕನ್ನಡದ ಅವರ ಅಭಿಮಾನಿಗಳು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ 'ಶ್ರೀ ಜಿ.ಪಿ. ರಾಜರತ್ನಂ ಸಂಸ್ಮರಣ ಸಮಿತಿ'ಯನ್ನು ರಚಿಸಿದರು; ೧೯೭೯ ಎಪ್ರಿಲ್ ತಿಂಗಳಿಂದ ೧೯೮೦ರ ಮಾರ್ಚ್ ೧೩ರ ತನಕ ಹನ್ನೆರಡು ತಿಂಗಳ ಎಲ್ಲ ಹುಣ್ಣಿಮೆಗಳಂದೂ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ರಾಜರತ್ನಂ ಅವರನ್ನು ಕುರಿತು ಅಥವಾ ಅವರಿಗೆ ಪ್ರಿಯವಾಗಿದ್ದ ವಿಷಯಗಳನ್ನು ಕುರಿತು ಶಕ್ತರಿಂದ ಸ್ಮಾರಕೋಪನ್ಯಾಸಗಳನ್ನು ಏರ್ಪಡಿಸಿದರು. ಆ ಉಪನ್ಯಾಸಗಳನ್ನು ಪ್ರತ್ಯೇಕ ಪುಸ್ತಕಗಳಾಗಿ ಮುದ್ರಿಸಿದರು; ೧೯೮೦ರ ಮಾರ್ಚ್ ತಿಂಗಳ ವಾರ್ಷಿಕ ಸಂಸ್ಮರಣ ಸಂದರ್ಭದಲ್ಲಿ ಆ ಎಲ್ಲ ಉಪನ್ಯಾಸಗಳನ್ನೂ 'ರತ್ನದೀಪ' ಎಂಬ ಸಂಯುಕ್ತ ಸಂಪುಟವಾಗಿ ಪ್ರಕಟಿಸಿದರು. ಒಂದು ದಿನ ಪೂರ್ತಿಯಾಗಿ ಕನ್ನಡದ ಹಿರಿಯಣ್ಣ, –ರಾಜರತ್ನಂ ಅವರನ್ನು ಅತಿಪ್ರೀತಿಯಿಂದ ಕಂಡಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸಂಸ್ಮರಣ ಸಭೆ ನೆರವೇರಿತು. ರಾಜರತ್ನಂ ಅವರ ತೈಲಚಿತ್ರದ ಅನಾವರಣವಾಯಿತು. ಅವರ ಹೆಸರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿನಿಧಿಯೊಂದನ್ನು ಸ್ಥಾಪಿಸಲಾಯಿತು.

ಅತ್ತ, ರಾಜರತ್ನಂ ಅವರ ಕಾರ್ಯಕ್ಷೇತ್ರವಾಗಿದ್ದ ಬೆಂಗಳೂರಲ್ಲೂ ಅವರ ಶಿಷ್ಯರು, ಮಿತ್ರರು, ಅಭಿಮಾನಿಗಳು ಸೇರಿ 'ಡಾ। ಜಿ.ಪಿ. ರಾಜರತ್ನಂ ಸ್ಮಾರಕ ಸಮಿತಿ'ಯೊಂದನ್ನು ರೂಪಿಸಿದರು, ಪ್ರತಿ ತಿಂಗಳೂ ಉಪನ್ಯಾಸಗಳನ್ನು ಏರ್ಪಡಿಸಿದರು. ಅಂತಿಮವಾಗಿ ೧೯೮೦ರ ದಶಂಬರ ೫ರಂದು– ರಾಜರತ್ನಂ ಜನ್ಮದಿನದಂದು 'ರಾಜಮಾರ್ಗ'ವೆಂಬ ಸಮೃದ್ಧ ಸ್ಮಾರಕ ಸಂಪುಟವನ್ನೂ ಪ್ರಕಟಿಸಿದರು.

* * *

ರಾಜರತ್ನಂ ಅವರ ಮೇಧಾವೀ ಪುತ್ರ ಆರ್. ಶ್ರೀಧರ ಅಸ್ಸಾಮಿನಲ್ಲಿ ಉನ್ನತ ಅಧಿಕಾರಸ್ಥಾನದಲ್ಲಿದ್ದರು; ಕಾಲಾಂತರದಲ್ಲಿ ಸರಕಾರದ ಮುಖ್ಯ ಕಾರ್ಯದರ್ಶಿಸ್ಥಾನಕ್ಕೂ ಏರುವವರಿದ್ದರು. ಆದರೆ ತಂದೆಯವರ ದೇಹಾಂತದ ಸುದ್ದಿ ಕೇಳಿ ಬೆಂಗಳೂರಿಗೆ ಧಾವಿಸಿಬಂದವರು ಅಂತ್ಯಕ್ರಿಯೆಗಳೆಲ್ಲ ಮುಗಿದ ಬಳಿಕ ಯೋಚಿಸಿದರು: "ಮನೆಯಲ್ಲಿ ಪ್ರಾಯಕ್ಕೆ ಬಂದ ತಂಗಿ ಇದ್ದಾಳೆ, ಅವಳ ಮದುವೆ ಆಗಬೇಕು. ಕುಟುಂಬ ಸದಸ್ಯರೆಲ್ಲರೂ ಸೇರಿ ಮದುವೆ ಆಗುತ್ತದೆ, ಆದರೆ ತಂದೆಯವರಿಗೆ ಅತಿಪ್ರಿಯವಾಗಿದ್ದ ಸಾಹಿತ್ಯಪರಿಚಾರಿಕೆ? ಅವರ ಪುಸ್ತಕ ಪ್ರಕಟನ ಕಾರ್ಯ?" ಮಾಸ್ತಿಯವರ 'ಅರೆಯಲಿ ಬಿಡುವೆಯ ತೊಡಗಿದ ಕಾರ್ಯವ....' ಎಂಬ ಪದ್ಯ ಶ್ರೀಧರರ ನೆನಪಿಗೂ ಬಂತು. 'ತಾನೇ ಆ ಹೊಣೆಯನ್ನು ಹೊತ್ತುಕೊಳ್ಳಬೇಕು, ತಂದೆಯವರ ಜನ್ಮಶತಮಾನೋತ್ಸವ ವರ್ಷ(೨೦೦೮)ದ ವರೆಗಾದರೂ ಅವರ ಅಪ್ರಕಟಿತ ಕೃತಿಗಳನ್ನು ಮುದ್ರಿಸುವ, ಪ್ರಕಟಿತ ಪುಸ್ತಕಗಳನ್ನು ಪುನರ್ಮುದ್ರಿಸುವ ಕಾರ್ಯವನ್ನು ಮಾಡಲೇ ಬೇಕು. ಅದು ಅಸ್ಸಾಮಿನಲ್ಲಿದ್ದರೆ ಅಸಾಧ್ಯ, ಬೆಂಗಳೂರೇ ಅದಕ್ಕೆ ಸುಯೋಗ್ಯ ಸ್ಥಾನ' –ಹೀಗೆ ಚಿಂತಿಸಿ ನಿರ್ಧರಿಸಿದ ಶ್ರೀಧರ ತಡಮಾಡಲಿಲ್ಲ, ಕೈತುಂಬ ಸಂಬಳ ಬರುತ್ತಿದ್ದ ಉದ್ಯೋಗಕ್ಕೆ ತ್ಯಾಗಪತ್ರ ಸಲ್ಲಿಸಿದರು, ಪುಟ್ಟ ಕುಟುಂಬದೊಂದಿಗೆ ಬೆಂಗಳೂರಲ್ಲೇ ನೆಲಸಿದರು. ತಂದೆಯವರು ಕಟ್ಟಿದ್ದ 'ಶಾಕ್ಯ ಸಾಹಿತ್ಯ ಮಂಟಪ' ಕುಸಿಯದಂತೆ ಅದಕ್ಕೆ ಹೆಗಲೊಡ್ಡಿ ಎತ್ತಿ ನಿಲ್ಲಿಸಿದರು.

ಕನ್ನಡದಲ್ಲಿ ಪುಸ್ತಕ ಪ್ರಕಟನೆ, ಮಾರಾಟಗಳು ಬಲು ದೊಡ್ಡ ಸಾಹಸ. ಆದರೆ ಶ್ರೀಧರ ಎದೆಗೆಡಲಿಲ್ಲ. ರಾಜರತ್ನಂ ಅವರ ಪುಸ್ತಕಗಳಲ್ಲಿ ಲಭ್ಯವಾಗಿದ್ದುವನ್ನು ಒಂದೊಂದಾಗಿ ಪುನರ್ಮುದ್ರಿಸಿದರು, ಕೆಲವು ಸಂಯುಕ್ತ ಸಂಪುಟಗಳನ್ನೂ ಪ್ರಕಟಿಸಿದರು. ರಾಜರತ್ನಂ ಅವರ ಕಾಲದಲ್ಲೇ ಅಚ್ಚಾಗಿದ್ದ 'ವಿಚಾರರಶ್ಮಿ'ಯ ಪ್ರಥಮ ಸಂಪುಟದ ಪುನರ್ಮುದ್ರಣ ಮಾಡಿದ್ದಲ್ಲದೆ ದ್ವಿತೀಯ ಸಂಪುಟವನ್ನೂ ಸಂಪಾದಿಸಿ ಮೊದಲಿನದರಷ್ಟೇ ಆಕರ್ಷಕವಾಗಿ ಅಚ್ಚುಹಾಕಿಸಿದರು. 'ರತ್ನನ ಪದಗಳ' ಎಂಟನೆಯ ಆವೃತ್ತಿಯೂ ಸುಂದರವಾಗಿ ಹೊರಬಂತು. ಅದಕ್ಕೂ ಮಿಗಿಲಾಗಿ ದೊಡ್ಡದೊಂದು ಯೋಜನೆಯನ್ನು ಅವರು ಸಿದ್ಧಪಡಿಸಿದರು: ಜೈನ ಮತ ಧರ್ಮ ಸಾಹಿತ್ಯಗಳನ್ನು ಕುರಿತು ರಾಜರತ್ನಂ ಬರೆದದ್ದು ವಿಪುಲವಾಗಿತ್ತು. ಅವೆಲ್ಲವನ್ನೂ ಒಟ್ಟುಸೇರಿಸಿ ಎರಡು ಬೃಹತ್ ಸಂಪುಟಗಳಲ್ಲಿ ಹೊರತರುವ ಯೋಜನೆ ಅದಾಗಿತ್ತು. ಹಾಗೆ ಯೋಜನೆ ಮಾಡಿದ ಶ್ರೀಧರ ಕಾಲವಿಲಂಬವಿಲ್ಲದೆ ಕಾರ್ಯರಂಗಕ್ಕೆ ಇಳಿದರು. ಡೆಮಿ 1/8 ಆಕಾರದಲ್ಲಿ ಸುಮಾರು ಒಂಬೈನೂರು ಪುಟಗಳ ಮೊದಲ ಬೃಹತ್ ಸಂಪುಟ ಅಚ್ಚಾಯಿತು. ಎರಡನೆಯ ಸಂಪುಟದ ನೀಲ ನಕ್ಷೆಯನ್ನೂ ತಯಾರಿಸಿದರು. ಅಚ್ಚಿನ ಮನೆಗೂ ಹೊರಟರು. ಆದರೆ ಹೋಗಲಿಲ್ಲ. ಏಕೆಂದರೆ ದೈವಚಿತ್ತ ಬೇರೆಯೇ ಆಗಿತ್ತು. ಹಠಾತ್ತಾಗಿ, ತೀರ ಅಕಾಲಿಕವಾಗಿ ಶ್ರೀಧರ ಕಾಲವಶರಾದರು. ಹತ್ತುಹಲವು ಹಂಬಲಗಳನ್ನು ತಲೆಯಲ್ಲಿ ಹೊತ್ತಿದ್ದ, ಅವುಗಳನ್ನು ಒಂದೊಂದಾಗಿ ಕೈಗೂಡಿಸುತ್ತಲೂ ಇದ್ದ ಶ್ರೀಧರರ ವಿಯೋಗದಿಂದ ಅವರ ಪತ್ನಿ ಶ್ರೀಮತಿ ಶೈಲ ಸಹಜವಾಗಿಯೇ ದುಃಖಿತೆಯೂ ವಿಚಲಿತೆಯೂ ಆದರು. ಆದರೆ ದುಃಖವನ್ನು ನಿಗ್ರಹಿಸಿ, ಮನಸ್ಸನ್ನು

ದೃಢ ಮಾಡಿ ಪತಿ ತೋರಿದ ಪಥದಲ್ಲಿ ಮುನ್ನಡೆದು ಮಾವನ ಪುಸ್ತಕಗಳ ಪ್ರಕಟನೆಯ ಮುಂದರಿಕೆಯೇ ತನ್ನ ಪತಿಗೆ ನಿಜವಾದ ಶ್ರದ್ಧಾಂಜಲಿಯೆಂದು ನಿರ್ಧರಿಸಿದರು. 'ಜೈನ ಮತ ಧರ್ಮ ಸಾಹಿತ್ಯಸೇವೆ'ಯ ದ್ವಿತೀಯ ಸಂಪುಟವನ್ನು ಮೊದಲಿನದರಷ್ಟೇ ಸುಂದರವಾಗಿ ಮುದ್ರಿಸಿ ಪ್ರಕಟಿಸಿದರು. ಇದೀಗ ರಾಜರತ್ನಂ ಅವರ ಇತರ ಪುಸ್ತಕಗಳನ್ನೂ ಅಚ್ಚು ಹಾಕಿಸುತ್ತಾ ಆ ಮಾವನ ನೆನಪಿನ ಸೊಡರಿಗೆ ಎಣ್ಣೆ ಹೊಯ್ಯುವ ಕಾಯಕದಲ್ಲಿ ಸೊಸೆ ಶ್ರೀಮತಿ ಶೈಲ ಶ್ರದ್ಧೆಯಿಂದ ನಿರತರಾಗಿದ್ದಾರೆ.

* * *

'ಅಳಿಯುವುದು ಕಾಯ, ಉಳಿಯುವುದು ಕೀರ್ತಿ' ಎನ್ನುತ್ತಾರೆ. ಕೀರ್ತಿ ಉಳಿಯಬೇಕಿದ್ದರೆ ಕೃತಿ ಹುಲುಸಾಗಿರಬೇಕು, ಬದುಕು ಚೆನ್ನಾಗಿರಬೇಕು. ಜಿ. ಪಿ. ರಾಜರತ್ನಂ ಮಟ್ಟಿಗೆ ಆ ಮಾತು ನಿಜ. ೧೯೨೮ರಿಂದ ೧೯೭೮: ಐವತ್ತು ವರ್ಷಗಳ ತಮ್ಮ ಸಾಹಿತ್ತಿಕ ಜೀವನದಲ್ಲಿ ರಾಜರತ್ನಂ ನೂರಾರು ಕೃತಿರಚನೆ ಮಾಡಿದರು. ಎಲ್ಲವೂ ಅಲ್ಲವಾದರೂ ಅವುಗಳಲ್ಲಿ ಹತ್ತು ಹಲವಾದರೂ ಕನ್ನಡದ ಶಾಶ್ವತ ಸಾರಸ್ವತಸಂಪತ್ತು. ಸಾಹಿತ್ಯೋಪನ್ಯಾಸ, ಪುಸ್ತಕ ಪ್ರಕಟನೆ ಮತ್ತು ಅಧ್ಯಾಪನಗಳ ಮುಖೇನ ಅವರು ಮಾಡಿದ ಸಾಹಿತ್ಯ ಪರಿಚಾರಿಕೆಯಂತೂ ಕನ್ನಡದಲ್ಲಿ ಅನನ್ಯವಾದದ್ದು. ರಾಜರತ್ನಂ ಅವರ ಕೃತಿ ಮಾತ್ರವಲ್ಲ, ಅವರ ಆಕೃತಿಯೂ ಧೀರ ಗಂಭೀರವಾದದ್ದು; ವ್ಯಕ್ತಿತ್ವ ಶುಭ್ರಸುಂದರವಾದದ್ದು. ಅವರ ಹತ್ತಿರ ಹೋದವರು, ಅವರ ಒಳಗನ್ನು ಕಂಡವರು ಅಪವಾದವೇ ಇಲ್ಲವೆಂಬಂತೆ ಅವರ ಈ ಗುಣಗಳನ್ನು ಎತ್ತಿ ಹೇಳಿ, ಮನಮೆಚ್ಚಿ ಕೊಂಡಾಡಿದ್ದಾರೆ. ಅಂತಹವುಗಳಲ್ಲಿ ಎರಡನ್ನು ಉದ್ಧರಿಸಿ ಈ ಸಂಸ್ಮರಣ ಸಂಕಥನವನ್ನು ಮುಗಿಸಬಹುದು – ಒಂದು ಸರಳವಾದ ಪದ್ಯ, ಮತ್ತೊಂದು ಅಲಂಕೃತವಾದ ಗದ್ಯ. ಪದ್ಯವನ್ನು ಬರೆದವರು ಮಾಸ್ತಿ, ರಾಜರತ್ನಂ ಬದುಕಿದ್ದಾಗಲೇ ಅವರು ಅದನ್ನು ಬರೆದರು. ತಮ್ಮ 'ನವರಾತ್ರಿ'ಯಲ್ಲಿ ಪೋಣಿಸಿದರು. ಗದ್ಯ ಸೇಡಿಯಾಪು ಕೃಷ್ಣಭಟ್ಟರದು –ಅದು ರಾಜರತ್ನಂ ನಿಧನವಾರ್ತೆಯನ್ನು ಕೇಳಿದಾಗ ಅವರು ಎತ್ತಿದ ಉದ್ಗಾರ.

ನಮ್ಮ ರಾಜಣ್ಣ

ಇನ್ನು ರಾಜಣ್ಣ. ಈ ಉಳಿದವರ ರೀತಿಯಲಿ
ಇವರಾದರೂ ಪಂಡಿತರೆ. ಜೊತೆಗೆ ತಮ್ಮದೇ
ಒಂದೆರಡು ಬೇರೆ ಶಕ್ತಿಗಳ ಪಡೆದಿಹರಹುದು.
ಕಷ್ಟಗಳ ಕಂಡು ಅವುಗಳ ಕಾವಿನಲಿ ಕರಗಿ
ಕಡುಬಡವ ಕಡೆ ಕಡಮೆಯೆಂಬವರ ನೋವುಗಳು
ತಮ್ಮವೇ ಎಂಬಂತೆ ಅನುಭವಿಸಿ ಮರುಗುವರು.
ತಾವು ಕೆಚ್ಚೆದೆಯಿಂದ ಕಷ್ಟಗಳ ಕಡೆಹಾಯ್ದು
ಬಾಳಿದಂದವೆ ಬೇರೆಯವರು ಬಾಳಲಿ ಎಂಬ
ಆಶೆಯಲಿ ದುಡಿದಿಹರು. ಎಳೆತನದಿ ಮೈಸೂರ

ನಗರ ಜೀವನವ, ಅದರಲಿ ನಮ್ಮ ಹರಿಜನರ
ಬಾಳುವೆಯ ರೀತಿನೀತಿಯ, ತೆರೆದ ಕಣ್ಣಿಂದ
ನೋಡಿ ಮನಸಿಗೆ ತಂದುಕೊಂಡಿಹರು. ಇದರಿಂದ
ಆ ಜನರೊಳೊಬ್ಬ ಧೀರಾತ್ಮನನು ಬಣ್ಣಿಸುವ
ಕವಿತೆಯನು ರಚಿಸಿಹರು. ಇದರಂತೆ ಇನ್ನಿಲ್ಲ
ಎಂಬೊಂದು ಚಂದ ಮೂಡಿಹುದು ಆ ಕವಿತೆಯಲಿ.
ಎಲ್ಲಿಯೇ ಇರಲಿ ಸಲ್ಲದುದನೊಲ್ಲದೆ ಅದನು
ಹಿಡಿದೆತ್ತಿ ಜಗಕೆ ತೋರುವುದು; ಆ ಮನೋಧರ್ಮದಲಿ
ರಾಜಣ್ಣ ಬರೆದ ಕೃತಿ ಹಲವಿಹವು. ಅಲ್ಲದೆ
ರಾಜಣ್ಣ, ಬುದ್ಧ ಅಂತೇ ಜೈನಧರ್ಮಗಳ
ಶ್ರದ್ಧೆಯಿಂದಭ್ಯಾಸ ಮಾಡಿಹರು. ತಿಳಿವಂತೆ
ಇವರ ದುಡಿಮೆಯು ಕೂಡ ವಿಪುಲ. ಮೆಯ್ ದೃಢ, ಮನಸು
ದೃಢ, ದುಡಿವೆನೆಂಬ ನಿಶ್ಚಯ ಇವಕೆ ಸಮನಾಗಿ
ದೃಢವಾಗಿರುತ ನಮ್ಮ ರಾಜಣ್ಣ ಬರೆದಿರುವ
ಪುಸ್ತಕ ಅವೆಷ್ಟೊ! ಅವುಗಳ ಜಾತಿ ಇನ್ನೆಷ್ಟೊ!
ಇದಕು ಮಿಗಿಲಾಗಿ ಸಾಹಿತ್ಯದಲಿ ರಾಜಣ್ಣ
ಗೆಯ್ದಿರುವ ಸೇವೆಯೆನೆ ಜನ ತಾವೆ ಓದದೆಯೊ
ಓದಿಯೂ ಗ್ರಹಿಸದೆಯೊ ಕಡೆಗಣಿಸಬಹುದೆಂಬ
ಇತರ ಕವಿಗಳ ಕೃತಿಗಳನು ಸಭೆಗಳಲಿ ಓದಿ
ಅಭಿರುಚಿಯ ಬೆಳಸಿಹುದು. ಧರ್ಮ ಮಾಡುವುದೆಂತು
ಅಂತೆ ಅದನನುಪಾಲಿಸುವುದು ಪುಣ್ಯವ ತಹುದು
ಎಂಬರಲೆ! ಕಾವ್ಯವನು ರಚಿಸುವುದು ಎಂತಂತೆ
ಅದರರಿವ ಹರಡುವುದು ಇದೆ ರೀತಿ ಪುಣ್ಯಕರ.
ರಾಜಣ್ಣ ಈ ಪುಣ್ಯವನು ಪೂರ್ಣ ಗಳಿಸಿಹರು.

ರಾಜರತ್ನ

'ರಾಜರತ್ನ' ಎಂಥಾ ಹೆಸರು! –ಹೆಸರಿಗೆ ತಕ್ಕುದಾದ ನಿಷ್ಕಲಂಕ ಜೀವನ, ಅದಕ್ಕೆ ತಕ್ಕುದಾದ ಶ್ರದ್ಧೆ, ಶ್ರದ್ಧೆಗೆ ತಕ್ಕುದಾದ ಏಕನಿಷ್ಠೆ, ನಿಷ್ಠೆಗೆ ತಕ್ಕುದಾದ ಏಕಾಂಗಸಾಹಸ, ಸಾಹಸಕ್ಕೆ ತಕ್ಕುದಾದ ಸಿದ್ಧಿ, ಸಿದ್ಧಿಗೆ ಕಲಶವಿಟ್ಟ ನಿರ್ಯಾಣ! ಇದೆಲ್ಲ "ಪುಣ್ಯಂಗೆಯ್ಯದೆ ಪೂರ್ವದೊಳ್ ಬರಿದೆ ತಾನೀಗಳ್" ಬಂದುದಲ್ಲ. ಭಗವತ್ಕೃಪಾವಿಶೇಷವಿಲ್ಲದೆ ಬಂದುದೂ ಅಲ್ಲ.

'ರತ್ನ'ನ ಸಾಹಿತ್ಯರಚನೆ ಬಹುಮುಖ, ಬಹುಪ್ರಕಾರ, ಬಹುವಿಶಾಲ; ಆದರೂ ಅದೆಲ್ಲ "ಬಹುಜನ ಸುಖಾಯ, ಬಹುಜನ ಹಿತಾಯ".

ಈ ಶತಮಾನದಲ್ಲಿ ಕನ್ನಡ ಕವಿತಾ ಕಾಮಿನಿ ಕಟ್ಟಿದ ಪದ್ಯಗುಚ್ಛಗಳೊಳಗೆ ಮೂರು ಸರ್ವ ಜನಪ್ರಿಯ, ಸರ್ವಾಂಗಸುಂದರ, ಶಾಶ್ವತ. ಅವುಗಳಲ್ಲೊಂದು 'ರತ್ನನ ಪದಗಳು'.

ಈ ಶತಮಾನದಲ್ಲಿ ಮೆರೆದ ಕನ್ನಡ ಸಾಹಿತ್ಯಕಾರರೊಳಗೆ, ಪ್ರಾದೇಶಿಕವಾದ ಅಥವಾ ಮತೀಯವಾದ ಪಕ್ಷಪಾತ ಭಾವವಿಲ್ಲದಿದ್ದ ಬೆರಳೆಣಿಕೆಯ ವ್ಯಕ್ತಿಗಳಲ್ಲೊಬ್ಬರು ರಾಜರತ್ನಂ.

ಮಕ್ಕಳಿಗೆ ಮುದ್ದಾಗಿ ಬರೆದ, ಪ್ರಬುದ್ಧರಿಗೂ ಬುದ್ಧಿಪ್ರದವಾಗಿ ಬರೆದ ರಾಜರತ್ನಂ ವಾರ್ಧಕ್ಯದಲ್ಲಿಯೂ ಮುದ್ದುಮುದ್ದಾಗಿ ಆಡಿ ಬಾಳಿದ ಅಪೂರ್ವ ವ್ಯಕ್ತಿ; ಬಾಲ ಚಂದ್ರನಂತೆ ಚಿರಂತನ ಬಾಲಕ.

ಈಗ ಈ ಜೀವರತ್ನ ಈ ಲೋಕದಿಂದ ಮೇಲಿನ ಲೋಕಕ್ಕೆ ಲಂಘಿಸಿ, ಅಲ್ಲಿ ಲಕಲಕಿಸುತ್ತಿದೆ. ಅದನ್ನು–

'ನಿವಾರಿತ ನಿಮೇಷಾಭಿಃ ನೇತ್ರಪಂಕ್ತಿಭಿಃ ಉನ್ಮುಖಃ

ನವಾಂ ಇಂದುಕಲಾಂ ಲೋಕಃ ಕೇನ ಭಾವೇನ ಪಶ್ಯತಿ?'

–ಹಾಗೆಯೇ, ಅದೇ ಭಾವದಿಂದ ಕನ್ನಡಿಗರು ಇಂದು ನೋಡುತ್ತಿದ್ದಾರೆ, ಎಂದೆಂದೂ ನೋಡುತ್ತಾರೆ.

●

ಅನುಬಂಧ

೧. 'ರತ್ನನ ಪದಗಳು' ಮತ್ತು ಭಾರತೀಯ ವಾಙ್ಮಯ

ರಾಜರತ್ನಂ ಅವರು ಕಟ್ಟಿದ ಪುಸ್ತಕಹಾರದಲ್ಲಿ 'ರತ್ನನ ಪದಗಳು' ನಾಯಕರತ್ನ ಎಂಬುದು ನಿರ್ವಿವಾದ. ಕನ್ನಡದಲ್ಲಿ ಮಾತ್ರವಲ್ಲ, ಅಖಿಲ ಭಾರತೀಯ ವಾಙ್ಮಯದಲ್ಲೇ ಅದೊಂದು ಅನನ್ಯ ಕವನ ಸಂಕಲನ. ಸ್ವತಃ ರಾಜರತ್ನಂರೇ ಅಂತಹ ಇನ್ನೊಂದು ಕೃತಿಯನ್ನು ರಚಿಸಿಲ್ಲ. 'ರತ್ನನ ಪದಗಳ' ಭಾಷೆಯನ್ನೇ ಕೆಲ ಮಟ್ಟಿಗೆ ಅವರ 'ನಾಗನ ಪದಗಳ'ಲ್ಲೂ ಕಾಣಬಹುದಾದರೂ ಅಲ್ಲಿಯ ವಸ್ತು ಅದರ ವಿನ್ಯಾಸ ಮತ್ತು ಸಂವಿಧಾನಕ್ರಮಗಳ ಹುದುಗು ಬೇರೆ, ಹದವೂ ಬೇರೆ. ಹಾಗೆಯೇ ನರಕದ ನ್ಯಾಯ, ಹೆಂಡದ ಹೆಣ ಮೊದಲಾದ ನಾಟಕಗಳಲ್ಲೂ 'ರತ್ನನ ಪದಗಳ' ಗ್ರಾಮ್ಯ ಭಾಷೆಯನ್ನೇ ಕಾಣಬಹುದು. ಆದರೆ ಸಾಮ್ಯವಿರುವುದು ಭಾಷೆಯಲ್ಲಿ ಮಾತ್ರ; ವಸ್ತು ಸಾಮ್ಯವಿಲ್ಲ; ಭಾವಸಾಮೀಪ್ಯವೂ ಇಲ್ಲ.

'ರತ್ನನ ಪದಗಳು' ಪ್ರಕಟವಾದ ಸುಮಾರು ಐವತ್ತು ವರ್ಷಗಳ ಬಳಿಕ, ಅದು ಪರ್ಷಿಯನ್ ಕವಿ ಉಮರ್‌ಖಯ್ಯಾಮನ 'ರುಬಾಯತ್'ನ ಕನ್ನಡಾನುವಾದ 'ಉಮರನ ಒಸಗೆ'(ಡಿ.ವಿ.ಜಿ.)ಯ ಅಪಹರಣವೆಂಬ ಒಂದು ವಾದವೂ ರಾಜರತ್ನಂ ಕಣ್ಮರೆಯಾದ ಮೇಲೆ ಟಿ.ಪಿ. ಕೈಲಾಸಂರವರೇ ಆ ಪದಗಳ ಮೂಲಕರ್ತೃ –ಎಂದರೆ ರಾಜರತ್ನಂ ಕೃತಿಚೋರ– ಎಂಬ ಮತ್ತೊಂದು ಕುತರ್ಕವೂ ಕಾಣಿಸಿಕೊಂಡಿತೆಂಬುದನ್ನು ಹಿಂದೆಯೇ ಪ್ರಸ್ತಾವಿಸಿದೆ. 'ರತ್ನನ ಪದಗಳ'ನ್ನು ಬರೆಯುವುದಕ್ಕೆ ಮೊದಲೇ ತಾವು ಡಿ.ವಿ.ಜಿ.ಯವರು ಅನುವಾದಿಸಿದ್ದ ಉಮರನ ಒಸಗೆಯನ್ನು ಓದಿದ್ದರೂ, ತಮ್ಮ 'ರತ್ನ' ರುಬಾಯತಿನ ಅಚ್ಚಿನಿಂದ ಎದ್ದುಬಂದುದು ಅಲ್ಲವೇ ಅಲ್ಲ ಎಂಬುದನ್ನು ರಾಜರತ್ನಂ ಸ್ಪಷ್ಟವಾಗಿ ಹೇಳಿದ್ದಾರೆ. ಹಾಗೆಯೇ ಖಯ್ಯಾಮನನ್ನು ಅವತರಣಗೊಳಿಸಿದ 'ಒಸಗೆ'ಯ ಡಿ.ವಿ.ಜಿ.ಯವರಾಗಲೀ, 'ಗಿಳಿವಿಂಡಿ'ನ ಗೋವಿಂದಪೈಯವರಾಗಲೀ ರತ್ನಯ ಎಂಡದ ಬುಡ್ಡಿಯಲ್ಲಿ ಉಮರನ ಮಧುಚಷಕದ ಒಂದೇ ಒಂದು ಹನಿ ಬೆರೆತದ್ದನ್ನು ಕಂಡದ್ದಿಲ್ಲ. ಬದಲು ಗೋವಿಂದ ಪೈಯವರು 'ಪುರುಷಸರಸ್ವತಿ' (೧೯೪೦)ಗೆ ಬರೆದ ಮುನ್ನುಡಿಯಲ್ಲಿ ಫ್ರೆಂಚ್ ಭಾಷೆಯಲ್ಲಿ Flowers of Evil ('ಕೆಡುಕಿನ ಹೂವುಗಳು') ಎಂಬ ಕಾವ್ಯವನ್ನು ರಚಿಸಿದ ಬೋದಲೇರನೊಂದಿಗೆ ನಮ್ಮ ರಾಜರತ್ನಂರನ್ನು ಹೋಲಿಸಿದ್ದೂ ಇದೆ. ಅದಕ್ಕಿಂತ ಎರಡು ವರ್ಷ ಮೊದಲು (೧೯೩೮) Triveni ಎಂಬ ಆಂಗ್ಲ ತ್ರೈಮಾಸಿಕದಲ್ಲಿ 'ಶ್ಯಾಮ' ಎಂಬವರು "Ratnana Padagalu is Rajaratnam's unique contribution to Kannada Poetry and there is nothing in our literature to compare to it. It belongs to a class all by itself, known as 'Familiar verse' in English....." ಎಂದು ಬರೆದು, 'ರತ್ನನ ಪದಗಳು' ಇಂಗ್ಲಿಷಿನ ಲೊವೆಲ್, ಥಾಮಸ್

ಪುಡ್ ಮತ್ತು ಒಲಿವರ್ ವೆಂಡೆಲ್ ಹೋಮ್ಸ್‌ರ ಪದ್ಯಗಳನ್ನು ಹೋಲುತ್ತದೆ ಎಂದು ಹೇಳಿ, ಇಂಗ್ಲಿಷಿನಲ್ಲಿರುವ ಸರ್ ರೋಜರ್, ಬಿಕರ್ ಸ್ಟಾಫ್ ಮತ್ತು ಇತರ ಕಾಲ್ಪನಿಕ ಪಾತ್ರಗಳು ರತ್ನನಿಗೆ ಸಮಾನಾಂತರದಲ್ಲಿವೆ ಎಂದು ತಿಳಿಸಿ ಮತ್ತೆ "Yet, this dialect poetry of Rajaratnam is distinct from all and does not seem to be 'derivative'......" ಎಂಬ ಅಭಿಪ್ರಾಯ ಹೊಂದಿರುವುದನ್ನು ರಾಜರತ್ನಂ ತಮ್ಮ 'ನಿರ್ಭಯಾಗ್ರಫಿ'(ಏಳನೆಯ ಕಂತು: ೧೫ನೇ ಪುಟ)ಯಲ್ಲಿ ಉಲ್ಲೇಖಿಸಿದ್ದಾರೆ. ಹಾಗೆಯೇ ಅ.ನ.ಕೃ. ಅವರು ತಮ್ಮ 'ಕನ್ನಡ ಕುಲರಸಿಕರು' ಎಂಬ ಪುಸ್ತಕದಲ್ಲಿ, "ಅಮೇರಿಕೆಯ ಜನತೆಗೆ ವಾಲ್ಟ್ ವ್ಹಿಟ್‌ಮನ್, ಕಾರ್ಲ್ ಸ್ಯಾಂಡ್‌ಬರ್ಗ್ ಮತ್ತು ಕ್ಲಿಫರ್ಡ್ ಆಡೆಟ್ಸ್ ಕೊಟ್ಟ ಸಂದೇಶವನ್ನು ರಾಜರತ್ನಂ ಕನ್ನಡಿಗರಿಗಿತ್ತಿದ್ದಾರೆ" ಎಂದು ಶ್ಲಾಘಿಸಿರುವುದನ್ನು ರಾಜರತ್ನಂ ಜ್ಞಾಪಿಸಿದ್ದಾರೆ ('ನಿರ್ಭಯಾಗ್ರಫಿ' –೭ನೆಯ ಕಂತು, ಪು. ೧೯). ಕೀರ್ತಿನಾಥ ಕುರ್ತಕೋಟಿಯವರು 'ನಡೆದುಬಂದ ದಾರಿ'ಯ ಮೊದಲ ಸಂಪುಟಕ್ಕೆ ಬರೆದ ಪ್ರಸ್ತಾವನೆಯಲ್ಲಿ 'ರತ್ನನ ಪದಗಳ'ನ್ನು ಕುರಿತು "Housemanನ 'Shropsheri Lad' ಅಥವಾ ಉಮರ ಖಯ್ಯಾಮನ 'ರುಬಾಯಿಯಾತ್'ಗಳಂತೆ ಈ ಕವನಸಂಗ್ರಹವನ್ನು ನೋಡಬೇಕಾಗಿದೆ" ಎಂದು ಉಲ್ಲೇಖಿಸಿರುವುದನ್ನು ಉದ್ಧರಿಸಿದ್ದಾರೆ ('ನಿರ್ಭಯಾಗ್ರಫಿ' –೭ನೆಯ ಕಂತು, ಪು. ೧೬). ರಾಜರತ್ನಂ ನಿಧನಾನಂತರ 'ರತ್ನನ ಪದಗಳ' ಮೂಲಕರ್ತೃ ಟಿ.ಪಿ. ಕೈಲಾಸಂ ಎಂಬ ವಾದ ಎದ್ದಾಗ, ರಾಜರತ್ನಂ ಅವರ ನಡೆ–ನುಡಿ–ಬರವಣಿಗೆಗಳನ್ನು ನಿಡುಗಾಲ ದಿಂದ ತಿಳಿದಿದ್ದ ಹತ್ತಾರು ಮಂದಿ ಹಿರಿಯರು ಗಟ್ಟಿಮಾತಿನಲ್ಲಿ ಆ ವಾದವನ್ನು ಸಾರಾಸಗಟು ತಳ್ಳಿಹಾಕಿದರೆಂಬುದನ್ನು ಈ ಮೊದಲೇ ಹೇಳಿದ್ದಾಗಿದೆ.

ಈಗ ಅಪಹರಣ, ಅನುಸರಣ, ಸ್ವೀಕರಣ ಇತ್ಯಾದಿ ವಾದ–ವಿವಾದಗಳನ್ನು ಬದಿಗಿರಿಸಿ, ಕೇವಲ ಕುತೂಹಲ ದೃಷ್ಟಿಯಿಂದ 'ರುಬಾಯಿಯತ್' ಮತ್ತು 'ರತ್ನನ ಪದ ಗಳ'ಲ್ಲಿ ಸಾಮ್ಯ ಎಲ್ಲಿದೆ, ಎಷ್ಟಿದೆ ಎಂಬುದನ್ನು ನೋಡಬಹುದು. 'ರುಬಾಯಿಯತ್' ನಲ್ಲಿ ಕವಿ (ಖಯ್ಯಾಂ) ಸಾಖಿ (ಎಂದರೆ ಸಖ) ಮತ್ತು ಮದ್ಯ(ದ್ರಾಕ್ಷಾರಸ)ವೇ ಪ್ರಧಾನ. ಪಾನಪಾತ್ರಕ್ಕೆ ಸಾಖಿ ಎರೆಯುವ ಮದ್ಯವನ್ನು ಗುಟುಕರಿಸುತ್ತ ಕವಿ ಬದುಕಿನ ಬಗೆಗೆ ಆಡುತ್ತಾನೆ, ಹಾಡುತ್ತಾನೆ. 'ರತ್ನನ ಪದಗಳ'ಲ್ಲಿ ರತ್ನ, ಅವನ ಮಡದಿ ನಂಜಿ ಮತ್ತು ಪಡಖಾನೆ ಮುನಿಯರ ಮುಪ್ಪುರಿ. ಹಾಗೆಯೇ ರತ್ನ ಹಾಡಿದ್ದನ್ನು ಬರಕೊಳ್ಳುವ ಒಬ್ಬ ಬೇವಾರ್ಸಿ(ಎಂದರೆ ಲಿಪಿಕಾರ)ಯೂ ಇದ್ದಾನೆ. ಬೇರೆಯವರೂ ಅಲ್ಲಿ ಇಲ್ಲಿ ಕಾಣಿಸಿ ಕೊಳ್ಳುವುದಿದೆ. ಇಲ್ಲಿಯ ಪದಗಳಲ್ಲಿ ಜೀವನದ ಸುಖದುಃಖ, ಮನುಷ್ಯ ಸ್ವಭಾವದ ರೀತಿನೀತಿ, ಲೋಕವ್ಯವಹಾರದ ಚಿತ್ರ–ವೈಚಿತ್ರ್ಯಗಳೊಂದಿಗೆ ದಾಂಪತ್ಯ ಜೀವನದ ರಸ–ವಿರಸಗಳ ಚಿತ್ರಣಗಳೂ ಬರುತ್ತವೆ. ಖಯ್ಯಾಮನದರಲ್ಲಿ ಬಹಿರ್ಲೋಕದ ವರ್ಣನದೊಂದಿಗೆ ಅಧ್ಯಾತ್ಮದ ಅನುರಣನವೂ ಅಂತರ್ಗತವೆಂಬ ಒಂದು ಅಭಿಪ್ರಾಯವಿದೆ. ರತ್ನನದರಲ್ಲಿ ಜನನ–ಮರಣಗಳ ಪ್ರಸಕ್ತಿ ಪ್ರಾಸಂಗಿಕವಾಗಿದೆ ಅಷ್ಟೆ. ಉಮರನ ಒಸಗೆಯ ಚೌಪದಿಗಳನ್ನೂ ರತ್ನನ ಒಂದೆರಡು ಪದಗಳನ್ನೂ ತಕ್ಕಡಿಯ

ಎರಡು ತಟ್ಟೆಗಳಲ್ಲಿರಿಸಿ, ಅವುಗಳಲ್ಲಿ ಅರ್ಥ ಭಾವಗಳ ಸಾಮ್ಯವೇನಾದರೂ ಇದೆಯೋ ಎಂದು ತೂಗಿ, ಹೋಲಿಸಿ ನೋಡಬಹುದು:

ಹಾ! ತುಂಬು ಬಟ್ಟಲನು. ಕಾಲ ತಾಂ ಕೈಯಿಂಬೆ
ನುಣ್ಚೆ ಪರಿಯುವ ಪರಿಯ ವಿವರಿಸಿದೊಡಹುದೇಂ?
ನಿನ್ನೆ ಸತ್ತಿಹುದೀಗ, ನಾಳೆ ಹುಟ್ಟದೆಯಿಹುದು;
ಇಂದು ಸೊಗವಿರಲವನು ನೆನೆದಳವುದೇಕೆ?

(ಉಮರನ ಒಸಗೆ: ೩೮)

ಸುಂಕ್ ಅತ್ಕೊಂಡು ಏನ್ನತ್ತು? ಇಲ್ಲದ್ಕ್ ಅತ್ತ್ ಏನ್ಬತ್ತು?
ಕಟ್ಟೈತೆ ಕಸ್ಟ ಸುಕ ವುಟ್ದೇಟ್ಗೇನೆ!
ಕಟ್ಟಿದ್ದನ್ ಅಟ್ಟ್ ಉಂಡು ಅನಬಾಸೋಕ್ ಆಗದಿದ್ರೆ
ಪ್ರಾಣಾನ ಕಳಕೋಬೇಕ್ ಒಂದೇಟ್ಗೇನೆ!

(ರತ್ನನ ಪದಗಳು– ಸತ್ಮೇಲೆ ಏನೈತಣ್ಣ)

ಜಗದ ಕೊರಗಾಟಕ್ಕೆ ತೂಕವನು ಕಟ್ಟದಿರು
ಆಗಿಹುದನಾಗಲಿಹುದನು ಲೆಕ್ಕಿಸದಿರು;
ಒಂದೆರಡು ದಿನ ತಂಗಿದಿಲ್ಲಿ ಸವಿ ಮಧುರಸವ;
ಸಿರಿಯಿನೇಂ? ನಿನ್ನನನುಸರಿಸದೊಂದಣುವುಂ

(ಉಮರನ ಒಸಗೆ: ೧೧೮)

ಚಿಕ್ಕೋರು ಸಿಕ್ಕೌರಣ್ಣ ಎಲ್ಲಾರ್ ನೆಗಾಕೆ!
ದೊಡ್ಡೋರು ಎಂಗಾಡಿದ್ರ ಎಲ್ಲಾನ ಸೈ!
ಲೋಕಾನೆ ಇಂಗೈತೆ- ನಾನ್ ಯಾಕ್ ದುಕ್ಪಡಲಿ-
ಮುನಿಯನ್ಗು ಯೆಂಡಕ್ಕೂ ಬೋಲೋರೆ ಜೈ!

(ರತ್ನನ ಪದಗಳು: ಸಮಾಧಾನ)

–ಉದ್ಧೃತ ಪದ್ಯಗಳಲ್ಲಿರುವ ಸಾಮ್ಯ ಸಾಂದ್ರವಾದದ್ದೇನೂ ಅಲ್ಲ; ಉಮರನ ಚೌಪದಿಗಳಿಂದ ರತ್ನನ ಪದಗಳು ಪ್ರೇರಿತ, ಪ್ರಭಾವಿತ ಎಂದು ಹೇಳುವಂತೆಯೂ ಇಲ್ಲ.

ಕನ್ನಡ ಮತ್ತು ಕನ್ನಡೇತರವಾದ ಭಾರತೀಯ ವಾಙ್ಮಯಗಳಲ್ಲಿ ರತ್ನನ ಪದಗಳಂತಹ ಪದ್ಯಕಾವ್ಯಗಳು ಆ ಮೊದಲು ಇದ್ದುವೇ, ಆಮೇಲೆ ಬಂದದ್ದಿದೆಯೇ ಎಂದು ಕೇಳುವುದಿದೆ. ಪ್ರಾಚೀನ ಸಂಸ್ಕೃತ ಕನ್ನಡ ಕಾವ್ಯನಾಟಕಾದಿಗಳಲ್ಲಿ (ಹಳಗನ್ನಡದಲ್ಲಿ ಸ್ವತಂತ್ರ ನಾಟಕಗಳು ವಿರಳವಷ್ಟೆ?) ಮದ್ಯವ್ಯಸನಿಗಳ ಸುರಾಪಾನಗೋಷ್ಠಿಗಳ ವರ್ಣನೆಗಳು ಅಲ್ಲಲ್ಲಿ ಬಂದದ್ದಿವೆ. ಹೊಸಗನ್ನಡದ ಕತೆ–ಕಾದಂಬರಿ–ನಾಟಕಗಳಲ್ಲಿ ಹೆಂಡ ಕುಡಿದು ಬುದ್ಧಿ ಕೆಟ್ಟು, ಹೊಲಸು ಮಾತನಾಡುವ, ಬೀದಿ ಜಗಳ ಮಾಡುವ, ಮನೆಯಲ್ಲಿ ಮಡದಿ ಮಕ್ಕಳನ್ನು ಬೈದು ಭಂಗಿಸುವ ಸಂದರ್ಭ ಚಿತ್ರಣಗಳೂ ವಿಪುಲವಾಗಿವೆ. ಆದರೆ ೧೯೩೦ರ ದಶಕದ ವರೆಗೂ ರತ್ನನ ಪದಗಳಂತಹ ಕೃತಿ ಕನ್ನಡದಲ್ಲಿ

ಪ್ರಕಟವಾದದ್ದಿಲ್ಲ. ಸುಮಾರು ನಲ್ವತ್ತು ವರ್ಷಗಳ ಅನಂತರ –೧೯೭೭ರಲ್ಲಿ– ಎನ್. ಪ್ರಹ್ಲಾದರಾಯರು 'ಅಮಲಿನ ವಚನಗಳು' ಎಂಬ ಪುಸ್ತಕವನ್ನು ಪ್ರಕಟಿಸಿದರು. ಒಂದುನೂರ ತೊಂಬತ್ತೆಂಟು ವಚನಗಳು ಆ ಪುಸ್ತಕದಲ್ಲಿವೆ. ಹೊರನೋಟಕ್ಕೆ ಆ ವಚನಗಳು ಪ್ರಾಚೀನ ಶಿವಶರಣ–ಶರಣೆಯರ ವಚನಗಳಂತೆ ಕಂಡರೂ ಅವುಗಳಲ್ಲಿ ರೂಪಸಾಮ್ಯ ಇದೆಯಲ್ಲದೆ ಅರ್ಥಸಾಮ್ಯವಿಲ್ಲ. ಪ್ರಹ್ಲಾದರಾಯರ ಉದ್ದೇಶವೇ ಬೇರೆ. ಮದ್ಯಪಾನದ ಅಮಲನ್ನು ಆರೋಪಿಸಿಕೊಂಡು "ಐವತ್ತೆಂಟು ವರ್ಷಗಳ ಜೀವನ ವಿವೇಕದ" ಕೆಲವು ಅಂಶಗಳನ್ನು ತಮ್ಮ ವಚನಗಳಲ್ಲಿ ಭಟ್ಟಿ ಇಳಿಸುವ ಪ್ರಯತ್ನವನ್ನು ಅವರು ಮಾಡಿದ್ದಾರೆ. ಆ ಮಟ್ಟಿಗೆ 'ಅಮಲಿನ ವಚನಗಳಿ'ಗೆ ರತ್ನನ ಪದಗಳೊಂದಿಗೆ ಕೊಂಚ ಹೋಲಿಕೆ ಇದೆ; ಸ್ವಲ್ಪ ಭಿನ್ನತೆಯೂ ಉಂಟು. ಪ್ರಹ್ಲಾದರಾಯರ ಎಲ್ಲ ವಚನಗಳಲ್ಲೂ ಒಂದಿಲ್ಲೊಂದು ರೀತಿಯಲ್ಲಿ ಮದ್ಯದ ಪ್ರಸ್ತಾವ ಇದ್ದೇ ಇದೆ; ಆದರೆ 'ರತ್ನನ ಪದಗಳ'ಲ್ಲಿ ಹಾಗಿಲ್ಲ. ರಾಯರ ಕೆಲವು ವಚನಗಳ ಮೇಲೆ ರತ್ನನ ಕೆಲವು ಪದಗಳ ನೆರಳು ಅಲ್ಲಿ ಇಲ್ಲಿ ಬಿದ್ದದ್ದನ್ನೂ ಗುರುತಿಸಬಹುದು:

ಅಮೃತ ಅಮೃತ ಎಂದು ಹಂಬಲಿಸುವರು
   ಅಮೃತ ಅವರ ಪಾಲಿಗಿರಲಿ
ನನಗೆ ನೀ ಕುಡಿದ ವಿಷವೆ ಸಾಕು
   ಎನ್ನ ಪ್ರಭು

('ಅಮಲಿನ ವಚನಗಳು': ೧)

ಯೆಂಡಾನೆ ನಂ ದೇವ್ರು!
   ತಿರ್ ಮೂರ್ತಿ ಯೆಂಡ!
ನಮ್ಮುಟ್ಸಿ ಬದ್ಕ್ಸೋದು
   ಸಾಯ್ಸೋದು ಯೆಂಡ!
   ಯೆಂಡ ಬುಡ್ತಂದ್ರೆ
   ನಂ ಜೀವ್ಕೆ ತೊಂದ್ರೆ!

(ರತ್ನನ ಪದಗಳು– ೨೪)

*   *   *

ಪ್ರಭೂ!
   ಈ ಹುಣ್ಣಿಮೆ ರಾತ್ರಿಯಲಿ
   ಹಿಮಶೀತಲ ಜಲ ಬೆರಸಿದ ತಿಳಿ ಹ್ವಿಸ್ಕಿಯ ತೆರ
   ಸುರಿಯುತ್ತಿದೆ ಬೆಳ್ದಿಂಗಳ ಸ್ರೋತ
   ಅದ ಸವಿಯುತ ಉನ್ಮತ್ತನ ತೆರ
   ಸುತ್ತುತ್ತಲಿದೆ ಈ ಭೂತಲ ತನ್ನಯ
      ಅಕ್ಷದ ಸುತ್ತ!

(ಅ.ವ.: ೧೪)

ಬೆಳದಿಂಗಳ್ ರಾತ್ರೇಲಿ ಈ ಚೋರಿ ಬತ್ತಂದ್ರೆ
ಈಚ್ಲೆಂಡ ಚೆಲ್ಬಂಗೆ ನೆಪ್ಪಾಯ್ತದೆ.
ಆಕಾಸದ್ ಚಂದ್ರನ್ನ ಪಡಕಾನ ದೀಪಕ್ಕೆ
ವೋಲಿಸ್ದೆವೋಯ್ತಂದ್ರೆ ತಪ್ಪಾಗ್ರದೆ

(ರ.ಪ.: ೧೨)

* * *

ಅಗೋ ಅಗೊ ಕಿತ್ತಳೆ ನೇಸರ್ ಮುಳುಗುತಿದೆ
ಇಡಿ ಬಾನು ಪಡುಗಡಲು ಎರಡೂ ಕೆಂಬಣ್ಣದ
ಹೊಂಬಣ್ಣದ ಮಡುವಾಗುತ್ತಿದೆ, ಜಗದಗಲಕು
ಕಡುಗೆಂಪಿನ ರಮ್ಮಿನ ಹೊಳೆ ತುಳುಕಾಡುತಿದೆ
ಪ್ರಭೂ, ಇದೊಂದು ಅಮೃತಗಳಿಗೆ!

(ಅ.ವ.: ೪೩)

ತೂರಾಡ್ತ ಮೋರೀಗೆ ವೋಟ್ಯಾನೆ ಸೂರ್ಯಪ್ಪ-
ಕೆಸರೆಲ್ಲ ಥಿಲ್ಲಂತ ಮೇಲ್ ಆರ್ತದೆ
ಅದಕಂಡು 'ಕತ್ಲಾತು ಕತ್ಲಾತು' ಅನ್‌ಕೊಂಡಿ
ಚೆಪ್ತಕಡಿ ಲೋಕೆಲ್ಲ ಕೂಗ್ ಆಕ್ತದೆ!

(ರ.ಸ.: ೧೫)

ಹೀಗೆ ಪ್ರಹ್ಲಾದರಾಯರ ಪುಸ್ತಕದಲ್ಲಿ ಅಲ್ಲಲ್ಲಿ ರತ್ನಪ್ರಭೆ ಭಾವಗಮ್ಯ. ಈ ಮುಂದಿನ ವಚನದಲ್ಲಿ ಅದು ದೃಷ್ಟಿಗೋಚರವಾಗುತ್ತದೆ:

ಮುನ್ಸ್ಯ ಎಂಗವ್ನೆ ಅಂತ ಕೇಳ್ತೀರಾ ಬುದ್ಧಿ?
ಅವನ್ಗೇನಾಗ್ಯತೆ ಧಾಡಿ, ನಮ್ಗೆಲ್ಲ ನೀರು
ನವಾಸಾಗರ ಬೆರಸಿದ್ ಎಂಡ ಅಂಚವ್ನೆ
ತಾನು ಮಾತ್ರ ವೋಪಾಗಿ ಬಾರಿಗೆ ಬಂದು
ಇಸ್ಕಿಪುಸ್ಕಿ ಕುಡಿತವ್ನೆ
ಇದು ನಮ್ಮ ರತ್ನನ ಮಾತು ಪ್ರಭು!

ಇದಕ್ಕೆ ವಿವರಣೆ ಬೇಕಿಲ್ಲ. 'ರತ್ನನ ಪದಗಳ'ಲ್ಲಿ "ನಂ ಮುನಿಯಂದು ಜರ್ಬು" ಎಂಬ ಪದ್ಯ(೩೨)ವಿದೆ. ಅದನ್ನು ಈ ವಚನ ಜ್ಞಾಪಿಸುತ್ತದೆ.

ಪ್ರಹ್ಲಾದರಾಯರ ಅನಂತರ ಹೆಂಡದ ಪೀಪಾಯಿಯನ್ನು ಮುಂದಿಟ್ಟುಕೊಂಡು ಅದರ ಸುತ್ತ ಪದ್ಯಗದ್ಯಗಳ ರಂಗವಲ್ಲಿ ಬರೆದವರು ಬೇರೆ ಇಲ್ಲ ಎನ್ನಬಹುದು.

ಕನ್ನಡದಲ್ಲಿ ಮಾತ್ರವಲ್ಲ, ದಕ್ಷಿಣದ ತಮಿಳು-ತೆಲುಗು-ಮಲೆಯಾಳಗಳಲ್ಲೂ ರತ್ನನ ಪದಗಳ ರೂಪಧಾರಣೆ ಮಾಡಿ, ರಸಪ್ರತಿಪಾದ್ಯವಾದ ಕಾವ್ಯಗಳು ಬಂದಿಲ್ಲ ವೆಂಬುದು ಆಯಾ ಸಾಹಿತ್ಯ ಪ್ರಕಾರಗಳಲ್ಲಿ ಅಭಿಜ್ಞರಾದ, ಕನ್ನಡಾನುಭವವೂ

ಇರುವವರ ಅಭಿಮತ. ಮಹಾರಾಷ್ಟ್ರ ವಾಙ್ಮಯದಲ್ಲೂ ಮದ್ಯವಿಷಯಕವಾದ ಶುದ್ಧ ಸಾಹಿತ್ಯ ವಿರಳವೆಂದೇ ಹೇಳಲಾಗಿದೆ. ಉರ್ದುವಿನಲ್ಲಿ ಮದ್ಯ ನಿಮಿತ್ತವಾದ ಕೆಲವು ಶಾಯಿರಿ(ದ್ವಿಪದಿ)ಗಳಿವೆ. ಕೆಲವು ಉರ್ದು ಕವಿಗಳು ವ್ಯಕ್ತಿ ಮತ್ತು ಲೋಕಜೀವನಗಳ ನಿಗೂಢ ರಹಸ್ಯಗಳನ್ನು, ವೈವಿಧ್ಯ-ವೈಚಿತ್ರ್ಯಗಳನ್ನು ಕುರಿತಂತೆ ಗಝಲ್‌ಗಳನ್ನು ರಚಿಸಿದ್ದಿದೆ. ಮಧುಶಾಲೆ, ಮದ್ಯಸಾರ ಮತ್ತು ಪಾನಕೇಳಿಗಳ ಪ್ರಕ್ರಿಯೆ-ಪರಿಭಾಷೆ ಗಳಲ್ಲಿ ಪಾರಮಾರ್ಥಿಕ ಅರ್ಥಭಾವಗಳನ್ನು ಆ ಬಗೆಯ ಗಝಲ್‌ಗಳಲ್ಲಿ ಅನ್ವೇಷಿಸು ವುದೂ ಉಂಟು; ನಮ್ಮ ಕನ್ನಡದ ಶಾಂತರಸರು ಅಂತಹ ಕೆಲವು ಗಝಲ್‌ಗಳನ್ನು 'ಮದಿರೆ ಮತ್ತು ಯೌವನ' ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ('ಉರ್ದು ಕಾವ್ಯದಲ್ಲಿ ಮದಿರೆ ಮತ್ತು ಯೌವನ': ನೆಲಮನೆ ಪ್ರಕಾಶನ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ -೧೯೯೯). ಅಲ್ಲಿಯ ಕೆಲವು ಗಝಲ್ ಗಳಲ್ಲೂ ರತ್ನನ ಪದಗಳ ಕೆಲವು ಪಂಕ್ತಿಗಳಲ್ಲೂ ಅರ್ಥಸಾಮ್ಯವನ್ನು ಕಾಣಬಹು ದಾದರೂ ಅದು ಕೇವಲ ಆಕಸ್ಮಿಕ ವಿನಾ ಒಂದರಿಂದ ಒಂದು ಪ್ರೇರಿತ, ಪ್ರಭಾವಿತ ಎಂದು ಹೇಳುವಂತೆಯೇ ಇಲ್ಲ.

ಕನ್ನಡದ ರಾಜರತ್ನಂ ಜೊತೆಗೆ ಹೇಳಬಹುದಾದ ಒಂದು ಹೆಸರೆಂದರೆ ಪ್ರಾಯಃ ಹಿಂದೀ ಕವಿ ಹರಿವಂಶರಾಯ್ 'ಬಚ್ಚನ್' ಅವರದು. ಅವರು ಮಧುಶಾಲಾ, ಮಧು ಬಾಲಾ, ಮಧುಕಲಶ್ ಎಂಬ ಕಾವ್ಯತ್ರಯವನ್ನು ರಚಿಸಿದ್ದಾರೆ. ಆ ಕಾವ್ಯಗಳಿಂದಾಗಿ ಅವರು 'ಹಾಲಾವಾದಿ' (ಮದ್ಯಪ್ರತಿಪಾದಕ) ಕವಿಯೆಂದೂ ಪ್ರಸಿದ್ಧರಾಗಿದ್ದಾರೆ. ಬಚ್ಚನ್ ಅವರ 'ಮಧುಗೀತ'ಗಳಲ್ಲಿ ಉಮರ್‌ಖಯ್ಯಾಮನ 'ರುಬಾಯ್ಯಾತ್‌'ನ ಗಾಢ ಪ್ರಭಾವವನ್ನು ಕಾವ್ಯವಿಮರ್ಶಕರು ಎತ್ತಿ ಆಡಿದ್ದಾರೆ. ಉಮರ್‌ನಲ್ಲಿರುವಂತೆಯೇ ಬಚ್ಚನ್ ಗೀತಗಳ ಪದಗಳಲ್ಲಿ ಸಾಂಕೇತಿಕತೆ ಮತ್ತು ಅರ್ಥದಲ್ಲಿ ಆಧ್ಯಾತ್ಮಿಕತೆಯನ್ನು ಗುರುತಿಸಿದ್ದಾರೆ. ಬಚ್ಚನ್ ಅವರು ತಮ್ಮ ಕಾವ್ಯತ್ರಯವನ್ನು ಸುಮಾರು ೧೯೩೨ರಿಂದ ೧೯೩೭ರ ಅವಧಿಯಲ್ಲಿ ಬರೆದು ಪ್ರಕಟಿಸಿದರೆಂದು ಹೇಳಲಾಗಿದೆ. 'ಯೆಂಡ್ಕುಡ್ಕ ರತ್ನ' ಮತ್ತು 'ರತ್ನನ ಪದಗಳ' ರಚನಾಕಾಲವೂ ಅದೇ ಆಗಿದೆ.

ಬಚ್ಚನ್ ಅವರ ಮಧುಗೀತ ಮತ್ತು ರಾಜರತ್ನಂ ಅವರು 'ರತ್ನನ ಪದಗಳು' -ಎರಡಲ್ಲೂ ಮದ್ಯವೇ ಕಾವ್ಯರಂಗದ ಮಧ್ಯಬಿಂದುಗಳಾಗಿವೆ. ಆದರೆ ಅವುಗಳಲ್ಲಿ ಯಾವುದೇ ರೀತಿಯ -ಅರ್ಥ, ಭಾವ, ಸಾಂಕೇತಿಕತೆ ಮತ್ತು ಆಧ್ಯಾತ್ಮಿಕತೆಗಳ ಸಾಮ್ಯ ವನ್ನು ಹುಡುಕುವುದು ಕಷ್ಟ; ಕಷ್ಟವೆಂದಲ್ಲ, ಇಲ್ಲವೇ ಇಲ್ಲವೆಂದರೂ ಸಲ್ಲುತ್ತದೆ. ರಾಜರತ್ನಂ ತಮ್ಮ ಪದಗಳಲ್ಲಿ ಚಿತ್ರಿಸಿರುವುದು ಕಣ್ಣಿಗೆ ಕಾಣುವ ಇಷ್ಟಾನಿಷ್ಟಗಳ ವಾಸ್ತವಿಕ ಜಗತ್ತನ್ನಲ್ಲದೆ, 'ಬಚ್ಚನ್' ಅವರ ಅನುಭಾವ ಅಥವಾ ಆಧ್ಯಾತ್ಮಿಕ ಪ್ರಪಂಚ ವನ್ನಲ್ಲ. " 'ಯೆಂಡ ಕುಡುಕ ರತ್ನ'ದಲ್ಲಿ ಕೈಲಾಸದ ವರ್ಣನೆ ಇಲ್ಲ, ಪರಮಾರ್ಥದ ಸಂತಸವಿಲ್ಲ,..... ಇಲ್ಲಿಯ ವಸ್ತುವೆಂದರೆ ಸಮಾಜವನ್ನು ವಿರೋಧಿಸುವ ಒಬ್ಬ 'ಯೆಂಡ ಕುಡುಕ'ನ ಮನೋವಿಕಾರಗಳು. ಮನಸ್ಸು ಈ ಕಾವ್ಯವನ್ನೋದಿ ಸುಪ್ರಸನ್ನವಾಗುವುದು" ಎಂಬ ವಿಮರ್ಶನೋಕ್ತಿ ಯಥಾರ್ಥವಾದದ್ದು. ('ಹತ್ತು ವರುಷ': ಪು. ೯೫) ಬಚ್ಚನರ

ಮಧುಗೀತ ಮತ್ತು ರತ್ನನ ಪದಗಳಲ್ಲಿ ಸಾಮ್ಯವಲ್ಲ, ಸಾಮೀಪ್ಯವೇನಾದರೂ ಇದ್ದರೆ ಅದು ಮೇಲೆ ಹೇಳಿದಂತೆ, ಅವರಿಬ್ಬರು ಕಾವ್ಯಗಳನ್ನು ರಚಿಸಿದ ಅವಧಿಯಲ್ಲಿ: ಇಬ್ಬರೂ ೧೯೩೦ರ ದಶಕದಲ್ಲಿ ತಮ್ಮ ತಮ್ಮ ಕವಿತೆಗಳನ್ನು ಬರೆದರು. (ಯೆಂಡ್ಕುಡ್ಕ ರತ್ನ- ೧೯೩೨; ರತ್ನನ ಪದಗಳು -೧೯೩೪) ಬಚ್ಚನ್ ಅವರು ತಮ್ಮ ಕಾವ್ಯತ್ರಯವನ್ನು ಪ್ರಕಟಿಸಿದ ಅಲ್ಪಕಾಲದಲ್ಲೇ ಅವರಿಗೆ ಪ್ರಥಮಪತ್ನಿ ಶಾಮಾದೇವಿಯ ವಿಯೋಗ ವಾಯಿತು. ಆ ದುಃಖ ಅವರನ್ನು ತೀವ್ರವಾಗಿ ಬಾಧಿಸಿತು. ರಾಜರತ್ನಂ ರತ್ನನ ಪದ ಗಳನ್ನು ಪೋಣಿಸುತ್ತಿದ್ದಾಗ ಅವರ ಮೊದಲ ಹೆಂಡತಿ ಲಲಿತಮ್ಮ ರೋಗಗ್ರಸ್ತೆಯಾಗಿ ಸಾವು-ಬದುಕುಗಳ ನಡುವೆ ಹೊಯ್ದಾಡುತ್ತಿದ್ದರು. ಅದರಿಂದಾಗಿ ರತ್ನರ ಹೆಂಡದ ಹಾಡಿನ ಸೆಲೆಯೂ ಬತ್ತುತ್ತ ಬಂದು ಮುಂದೆ ಆರಿಯೇ ಹೋಯಿತು. ಕೆಲವೇ ತಿಂಗಳಲ್ಲಿ ರತ್ನನ 'ನಂಜಿ'ಯೂ ಕಣ್ಣುಮುಚ್ಚಿಕೊಂಡಳು ಎಂದು ರಾಜರತ್ನಂ ಅವರೇ ಬರೆದಿದ್ದಾರೆ. ('ಹತ್ತು ವರುಷ'- ಪು. ೧೦೬)

ಬಚ್ಚನ್ ಅವರ ಕಾವ್ಯತ್ರಯದಲ್ಲಿ ಮೊದಲನೆಯದಾದ 'ಮಧುಬಾಲಾ' (೧೯೩೨) ಮುಂದಿನ ಎಪ್ಪತ್ತು ವರ್ಷಗಳಲ್ಲಿ ನಲ್ವತ್ತೇಳು ಸಲ ಮುನರ್ಮುದ್ರಣವಾಗಿದೆಯಂತೆ! ಮಿಕ್ಕೆರಡೂ ಹಲವು ಆವೃತ್ತಿಗಳನ್ನು ಕಂಡಿವೆ. ರಾಜರತ್ನಂರ 'ರತ್ನನ ಪದಗಳು' ಅವುಗಳಂತೆ ಅಲ್ಲವಾದರೂ ಡಿ. ವಿ. ಜಿ.ಯವರ 'ಕಗ್ಗ', ಕೆ. ಎಸ್. ನ. ಅವರ 'ಮಲ್ಲಿಗೆ'ಯ ಬಳಿಕ ಅಧಿಕ ಸಂಖ್ಯೆಯಲ್ಲಿ ಅಚ್ಚಾಗುತ್ತಿರುವ, ಮಾರಾಟವಾಗುತ್ತಿರುವ ಕವನಸಂಗ್ರಹವೆಂಬ ಅಗ್ಗಳಿಕೆಯಂತೂ ಇದ್ದೇ ಇದೆ ಎಂಬುದನ್ನು ಈ ಹಿಂದೆ ಹೇಳಿದೆ. ಕನ್ನಡಿಗರಿಗೂ ಅದು ತಿಳಿದಿದೆ.

•

೨. ರಾಜರತ್ನಂ : ಮೂರು ಮಾದರಿಗಳು

ತುತ್ತೂರಿ

ಬಣ್ಣದ ತಗಡಿನ
ತುತ್ತೂರಿ
ಕಾಸಿಗೆ ಕೊಂಡನು
ಕಸ್ತೂರಿ
ಸರಿಗಮ ಪದನಿಸ
ಊದಿದನು
ಸನಿಧಪ ಮಗರಿಸ
ಊದಿದನು
ತನಗೇ ತುತ್ತುರಿ
ಇದೆಯೆಂದ
ಬೇರಾಗಿಗು ಅದು
ಇಲ್ಲೆಂದ
ಕಸ್ತುರಿ ನಡೆದನು
ಬೀದಿಯಲಿ
ಜಂಬದ ಕೋಳಿಯ
ರೀತಿಯಲಿ
ತುತ್ತುರಿಯೂದುತ
ಕೊಳದ ಬಳಿ
ನಡೆದನು ಕಸ್ತುರಿ
ಸಂಜೆಯಲಿ
ಜಾರಿತು ನೀರಿಗೆ
ತುತ್ತೂರಿ
ಗಂಟಲು ಕಟ್ಟಿತು
ನೀರೂರಿ
ಸರಿಗಮ ಊದಲು
ನೋಡಿದನು
ಗಗಗಗ ಸದ್ದನು
ಮಾಡಿದನು
ಬಣ್ಣವು ನೀರಿನ
ಪಾಲಾಯ್ತು

ಬಣ್ಣದ ತುತ್ತುರಿ
    ಬೋಳಾಯ್ತು
ಬಣ್ಣದ ತುತ್ತುರಿ
    ಹಾಳಾಯ್ತು
ಜಂಬದ ಕೋಳಿಗೆ
    ಗೋಳಾಯ್ತು.

ಕನ್ನಡ್ ಪದಗೊಳು

ಯೆಂಡ ಯೆಡ್ತಿ ಕನ್ನಡ್ ಪದಗೊಳ್
    ಅಂದ್ರೆ ರತ್ನಂಗ್ ಪ್ರಾಣ!
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ-
    ತಕ್ಕೊ! ಪದಗೊಳ್ ಬಾಣ! ॥ ೧ ॥

ಬಗವಂತ್ ಏನ್ರ ಬೂಮೀಗ್ ಇಳದು
    ನನ್‌ತಾಕ್ ಬಂದಾಂತ್ ಅನ್ನು;
ಪರ್‌ಗಿರೀಕ್ಸೆ ಮಾಡ್ತಾನ್ ಔನು-
    ಬಕ್ತನ್ ಮೇಲ್ ಔನ್ ಕಣ್ಣು! ॥ ೨ ॥

'ಯೆಂಡ ಕುಡಿಯಾದ್ ಬುಟ್‌ಬುಡ್ ರತ್ನ!'
    ಅಂತ್ ಔನ್ ಏನಾರ್ ಅಂದ್ರೆ-
ಮೂಗ್ ಮುರ್ ಚೂರಾಗ್ ಮುರಸ್ಕೋಂತೀನಿ
    ದೇವರ್ ಮಾತ್ಗ್ ಅಡ್ಬಂದ್ರೆ! ॥ ೩ ॥

'ಯೆಂಡ ಬುಟ್ಟೆ. ಯೆಡ್ತೀನ್ ಬುಟ್‌ಬುಡ್!'
    ಅಂತ್ ಔನ್ ಏನಾರ್ ಅಂದ್ರೆ-
ಕಳದೋಯ್ತ್ ಅಂತ ಕುಣದಾಡ್ತೀನಿ
    ದೊಡ್ಡ್ ಒಂದ್ ಕಾಟ! ತೊಂದ್ರೆ! ॥ ೪ ॥

'ಕನ್ನಡ್ ಪದಗೋಳ್ ಆಡೋದ್ನೆಲ್ಲ
    ನಿಲ್ಲಿಸ್ ಬುಡಬೇಕ್ ರತ್ನ!'
ಅಂತ್ ಔನ್ ಅಂದ್ರೆ -ದೇವ್ರ ಆದ್ರ ಏನು!
    ಮಾಡ್ತೀನ್ ಔನ್ಗೆ ಖತ್ನ! ॥ ೫ ॥

ಆಗ್ನೆ ಮಾಡೋ ಐಗೊಳ್ ಎಲ್ಲಾ
    ದೇವ್ರೆ ಆಗ್ಲಿ -ಎಲ್ಲ!

ಕನ್ನಡ್ ಸುದ್ದೀಗ್ ಏನ್ರ ಬಂದ್ರೆ
ಮಾನಾ ಉಳಸಾಕಿಲ್ಲ! ॥ ೬ ॥

ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ-
ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ನ್ ನೀ ಕಾಣೆ! ॥ ೭ ॥

ಯೆಂಡ ವೋಗ್ಲಿ! ಯೆಡ್ತಿ ವೋಗ್ಲಿ!
ಎಲ್ಲಾ ಕೊಚ್ಕೊಂಡ್ ವೋಗ್ಲಿ!
ಪರ್ಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೋಳ್ ನುಗ್ಲಿ!

ಧನ್ಯವಾದ

ನನ್ನ ಹೃದಯದಲ್ಲಿ ಅಂತಃಸಾಕ್ಷಿಯಾಗಿ ನೆಲಸಿರುವ ಹೇ ಹೃಷೀಕೇಶ! ನಿನಗೆ ನನ್ನ ತುಂಬು ಹೃದಯದ ಧನ್ಯವಾದಗಳು. 'ಇಷ್ಟು ದಿನ ಸಲಹಿರುವೆ ಮೂರ್ಖನನು, ಮುಂದೆಯೂ ಕೈ ಹಿಡಿದು ನಡಸದಿಹೆಯಾ?' ನಡಸಿಯೇ ನಡಸುತ್ತೀಯೆಂಬ ಭರವಸೆ ನನಗಿದೆ. ಏಕೆಂದರೆ ನೀನು 'ಕರುಣಾಳು ಬೆಳಕು'.

ಹತ್ತು ವರ್ಷದ ಹಿಂದೆ, ನನ್ನ ದೇಹ ಬುದ್ಧಿ ಸಾಲದೆ ನಿನ್ನ ಕಡೆಗೆ ಪಾದಯಾತ್ರೆ ಹೊರಟಾಗ, ಅದನ್ನು ಒದ್ದು ಹಿಂದಕ್ಕೆ ಕಳಿಸಿದೆ. 'ಯಾಕಿಷ್ಟು ಅವಸರ? ಬೇಕಾದಾಗ ನಾನೇ ಹೇಳಿ ಕಳಿಸುತ್ತೇನೆ. ಅಲ್ಲಿಯವರೆಗೂ ಹೇಳಿದ ಹಾಗೆ ಕೇಳಿಕೊಂಡು ಒಂದು ಕಡೆ ಬಿದ್ದಿರು' ಎಂದೆ. ನಾನು ಎಂದೂ ನಿನಗೆ ಎದುರು ಮಾತನಾಡಿದವನಲ್ಲ. ಹಿಂದಕ್ಕೆ ಬಂದೆ.

ಈ ಹತ್ತು ವರ್ಷದಲ್ಲಿ ನನ್ನನ್ನು ಅದೆಷ್ಟು ಬಗೆಯಾಗಿ ಆಡಿಸಿದ್ದೀಯೆ! ನನ್ನಿಂದ ಅದೆಷ್ಟು ಕೆಲಸಗಳನ್ನು ಮಾಡಿಸಿದ್ದೀಯೆ! ಹೃದಯದಲ್ಲಿ ಬಯಕೆಗಳನ್ನು ಹುಟ್ಟಿಸಿ, ಬುದ್ಧಿಯ ಮೂಲಕ ಅವುಗಳನ್ನು ರೂಪುಗೊಳಿಸಿ, ಅವು ಈಡೇರುವುದಕ್ಕೆ ಅವಶ್ಯವಾದ ಅವಕಾಶಗಳನ್ನು ಅನುಗ್ರಹಿಸಿ, ನನ್ನ ಬದುಕನ್ನು ಸಾರ್ಥಕಗೊಳಿಸಿರುವೆ.

ಬಲ್ಲವರು ನಿನ್ನನ್ನು 'ಭಯಕೃತ್, ಭಯನಾಶನಃ' ಎಂದು ಕೊಂಡಾಡಿದ್ದಾರೆ. ಅದು ದಿಟ ಎಂಬುದನ್ನು ಈ ಹತ್ತು ವರ್ಷಗಳ ಅವಧಿಯಲ್ಲಿ ಹತ್ತಾರು ಬಾರಿ ನನ್ನ ಅನುಭವಕ್ಕೆ ತಂದುಕೊಟ್ಟು ನನ್ನ ಶ್ರದ್ಧೆಯನ್ನು ಬಲಪಡಿಸಿದ್ದೀಯೆ.

ಹ್ಯಾನ್ಸ್ ಕ್ರಿಶ್ಚಿಯನ್ ಆ್ಯಂಡರ್ಸನ್ ಒಂದು ಕತೆಯಲ್ಲಿ ಹೇಳಿದ ಹಾಗೆ –ಪಿಟೀಲಿನ ಕಮಾನು ತಾನು ನುಡಿಸುತ್ತೇನೆ ಎಂದು ಅಹಂಕಾರ ಪಡುವುದು ಎಷ್ಟು ಅವಿವೇಕವೋ ಕಮಾನನ್ನು ಹಿಡಿದ ವ್ಯಕ್ತಿ ತಾನು ಪಿಟೀಲು ನುಡಿಸುತ್ತೇನೆ ಎನ್ನುವುದೂ

ಅಷ್ಟೇ ಅವಿವೇಕ. ನೀನು ಯಾವಾಗಲೋ ಏಕೋ ಹೇಗೋ ನನ್ನೊಳಗೆ ಬಂದು ಸೇರಿಕೊಂಡೆ. ಹೀಗೆ (ಅಂತಃಪ್ರವಿಶ್ಯ) ಒಳಗೆ ಸೇರಿಕೊಂಡು, (ಮಮ ವಾಚಂ ಇಮಾಂ ಪ್ರಸುಪ್ತಾಂ) ನಿದ್ರೆ ಮಾಡುತ್ತಿರುವ ನನ್ನ ನುಡಿಯನ್ನು (ಸಂಜೀವಯತಿ) ಎಚ್ಚರಗೊಳಿಸಿ ಜೀವಂತವನ್ನಾಗಿ ಮಾಡಿರುತ್ತೀಯೆ. ಅಂತೆಯೇ (ಅನ್ಯಾಂಶ್ಚ ಹಸ್ತ ಚರಣ ಶ್ರವಣ ತ್ವಕ್ ಆದೀನ್) ಇತರ ಅಂಗಗಳನ್ನೂ ನೀನು ಉಜ್ಜೀವನಗೊಳಿಸುತ್ತೀಯೆ.

ಇಂಥ ಪರಮೋಪಕಾರಿಯಾದ ನಿನ್ನನ್ನು ನಾನು ಕೇಳಿಕೊಳ್ಳುವುದು ಇಷ್ಟೆ: 'ಎಂದಿನ ವೊಲೇಗಳುಂ ಕೈ ಬಿಡದೆ ಕಾಪಾಡು, ಕೈಬಿಡದೆ ಕಾಪಾಡು.'

– ವಿಚಾರರಶ್ಮಿ (ಸಂಪುಟ: II)

●

೩. ಭಾಷಣಗಳು

ವಂದನಭಾಷಣ

ಶ್ರೀಗುರುಭ್ಯೋ ನಮಃ

ಮೈಸೂರು ವಿಶ್ವವಿದ್ಯಾನಿಲಯದ ಸನ್ಮಾನ್ಯ ಕುಲಪತಿಗಳೇ, ವಿದ್ವನ್ಮಣಿಗಳೇ,

ಮೈಸೂರು ವಿಶ್ವವಿದ್ಯಾನಿಲಯವು ನನಗೆ ವಿದ್ಯಾಬುದ್ಧಿಗಳನ್ನೂ ನೀತಿನಡತೆಗಳನ್ನೂ ಕಲಿಸಿಕೊಟ್ಟು, ನನ್ನನ್ನು ಒಬ್ಬ ಮನುಷ್ಯನನ್ನಾಗಿ ಮಾಡಿರುವ ಮಮತೆಯ ತಾಯಿ. ಈ ತಾಯಿ ತನ್ನ ವಜ್ರಮಹೋತ್ಸವದ ಸಂದರ್ಭದಲ್ಲಿ ನನಗೆ ಡಿ.ಲಿಟ್., ಪ್ರಶಸ್ತಿಯನ್ನು ಅನುಗ್ರಹಿಸಿದ್ದಾಳೆ. ಇದನ್ನು ತಾಯಿಯ ಆಶೀರ್ವಾದವೆಂದು ನಾನು ಕೃತಜ್ಞತೆಯಿಂದಲೂ ವಿನಯದಿಂದಲೂ ಪ್ರತಿಗ್ರಹಿಸುತ್ತಿದ್ದೇನೆ.

'ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ಪೇಳ್ ಬಡವಂ ಬಲ್ಲಿದನಾಗನೇ'? ಎಂದ, ಸೋಮೇಶ್ವರ ಕವಿ. 'ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು ಪರಿಣಾಮವಕ್ಕು ಪದವಕ್ಕು' ಎಂದರು ಬಸವಣ್ಣನವರು. ಈ ಮಾತುಗಳಲ್ಲಿ ನಾನು ಇರಿಸಿಕೊಂಡಿರುವ ನಂಬಿಕೆಯು ಇಂದಿನ ಡಿ.ಲಿಟ್., ಪ್ರಶಸ್ತಿಯಿಂದ ಇನ್ನಷ್ಟು ದೃಢವಾಗಿದೆ.

ಇವೊತ್ತಿನ ದಿವಸ ನನಗೂ ಪ್ರಶಸ್ತಿಯನ್ನು ಕೊಡುತ್ತಾರೆ ಎಂಬುದು ತಿಳಿದು ಬಂದಾಗ, ಪಂಪಭಾರತದ ಒಂದು ಪದ್ಯ ಜ್ಞಾಪಕ ಬಂತು. ಬಹುಕಾಲದ ಮೇಲೆ ಕುಂತಿ ಕರ್ಣನನ್ನು 'ನೀನು ನನ್ನ ಮಗ' ಎಂದು ಅಂಗೀಕಾರಮಾಡಿದಾಗ, ಕರ್ಣ ಹೇಳಿದ:

> **ಚಲಮುಂ ಚಾಗಮುಮಳವುಂ**
> **ಕಲಿತನಮುಂ ಕುಲಮುಮೀಗಳೆನ್ನಯ ಮೆಯ್ಯೊಳ್**
> **ನೆಲಸಿದುವು ನಿಮ್ಮ ಕರುಣಾ-**
> **ಬಲದಿಂ ನೀವೆನ್ನನಿಂದು ಮಗನೆಂದುದಱಿಂ**

ನಾನಾದರೂ ಅವನಂತೆಯೇ ಧನ್ಯತೆಯನ್ನು ಅನುಭವಿಸುತ್ತಿದ್ದೇನೆ, ನನ್ನ ತಾಯಿ ನನ್ನನ್ನು ಪುತ್ರ ಸಾರ್ಥಕನೆಂದು ಅಂಗೀಕಾರ ಮಾಡಿರುವ ಕಾರಣದಿಂದ. ಈ ದಿವಸವು ನನ್ನ ಜೀವಮಾನದಲ್ಲಿ ದಿಟವಾಗಿಯೂ ಚಿನ್ನದ ದಿವಸ.

ಮತ್ತೆ, ಕರ್ಣ ಇನ್ನೊಂದು ಮಾತು ಹೇಳಿದ: 'ಮೀಂಗುಲಿಗನೆನಾಗಿಯು ಮಣಮಾಂ ಗುಣಮನೆ ಬಿಸುಟೆನಿಲ್ಲ. ನಿಮಗಂ ಮಗನಾದಂಗೆನಗೆ ಬಿಸುಡಲಕ್ಕುಮೆ?' ನನ್ನಲ್ಲಿಯೂ ಈಗ ಅದೇ ಭಾವ ತುಂಬಿದೆ. ನಲ್ವತ್ತೈದು ವರ್ಷಗಳ ಹಿಂದೆ ನಾನು ಮೂರನೇ ದರ್ಜೆಯಲ್ಲಿ ಎಂ.ಎ., ಪದವಿಯನ್ನು ಪಡೆದವನು. ಆಗ ಪತ್ರಗಳನ್ನು

---

* ಮೈಸೂರು ವಿಶ್ವವಿದ್ಯಾನಿಲಯದ ಪ್ರಶಸ್ತಿಪ್ರದಾನೋತ್ಸವದಲ್ಲಿ (ತಾ। ೬-೨-೧೯೭೭) ಗುಂಡ್ಲು ಪಂಡಿತ ರಾಜರತ್ನಂ ಮಾಡಿದ ವಂದನಭಾಷಣ.

ಚೆನ್ನಾಗಿ ಓದದೆ ಇದ್ದದ್ದಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡ ಹಾಗೆ, ಕಳೆದ ನಲ್ವತ್ತೈದು ವರ್ಷಗಳಿಂದ ಇಂದಿನವರೆಗೂ ಶ್ರದ್ಧೆಯಿಂದ ಸಾಹಿತ್ಯ ಪರಿಚಾರಿಕೆಯನ್ನು ಮಾಡಿಕೊಂಡು ಬಂದಿದ್ದೇನೆ. 'ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ' ಎಂದು ಕಾಳಿದಾಸ ಹೇಳಿರುವ ಹಾಗೆ, ನಾನು ಕೈಕೊಂಡಿರುವ ಸಾಹಿತ್ಯಮಾರ್ಗದಲ್ಲಿ ನನಗಿರುವ ಭರವಸೆಯನ್ನು ಇಂದು ಲಭಿಸಿರುವ ಡಿ.ಲಿಟ್., ಪ್ರಶಸ್ತಿಯ ಆಯೋಗವು ಮತ್ತಷ್ಟು ಬಲಗೊಳಿಸಿದೆ.

ಈ ಸಂದರ್ಭದಲ್ಲಿ ನನಗೆ ಪರಮಪೂಜ್ಯ ಗುರುಗಳಾದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯ, ಪ್ರಾಧ್ಯಾಪಕ ಟಿ. ಎಸ್. ವೆಂಕಣ್ಣಯ್ಯ, ಪ್ರಾಧ್ಯಾಪಕ ಎ.ಆರ್. ಕೃಷ್ಣಶಾಸ್ತ್ರೀ ಇವರೇ ಮೊದಲಾದವರನ್ನು ಸ್ಮರಿಸದಿದ್ದರೆ ಅಕೃತಜ್ಞನಾದೇನು. ಮುಂದೆಯೂ ನನ್ನನ್ನು ಹೀಗೆಯೇ ಕೈಹಿಡಿದು ನಡಸುವ ಭಾರವನ್ನು ಅವರಿಗೆ ಒಪ್ಪಿಸಿ, ಇವೊತ್ತು ನನಗೆ ಡಿ.ಲಿಟ್., ಪ್ರಶಸ್ತಿಯನ್ನು ದಯಪಾಲಿಸಿದ ನನ್ನ ಮೈಸೂರು ವಿಶ್ವವಿದ್ಯಾನಿಲಯದ ತಾಯಿಗೆ ನನ್ನ ಧನ್ಯವಾದಗಳನ್ನು ಮತ್ತೊಮ್ಮೆ ಸಮರ್ಪಿಸುತ್ತೇನೆ.

ವಂದೇ ಗುರುಪರಂಪರಾಂ

•

ಸಾಹಿತ್ಯ ಪರಿಚಾರಿಕೆ*

ಪ್ರಸನ್ನತಾಂ ಯಾ ನ ಗತಾಭಿಷೇಕತಃ
ತಥಾ ನ ಮಮ್ಲೌ ವನವಾಸದುಃಖತಃ
ಮುಖಾಂಬುಜಶ್ರೀ ರಘುನಂದನಸ್ಯ ಮೇ
ಸದಾಸ್ತು ಸಾ ಮಂಜುಲಮಂಗಲಪ್ರದಾ

ನನ್ನ ಪ್ರಿಯ ಕನ್ನಡ ಬಂಧುಗಳೆ, ನನ್ನ ಪ್ರಿಯ ಕನ್ನಡೇತರ ಬಾಂಧವರೆ,

ಇದುವರೆಗೆ ಆಗಿಹೋಗಿರುವ ನಲ್ವತ್ತೊಂಬತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳಿಗೆ ಯಾರು ಯಾರು ಅಧ್ಯಕ್ಷರಾಗಿದ್ದರೋ ಅವರೆಲ್ಲರನ್ನೂ ಗೌರವದಿಂದ ಜ್ಞಾಪಿಸಿಕೊಂಡು, ಮುಂದೆ ಆಗುವ ನೂರಾರು ಸಮ್ಮೇಳನಗಳಿಗೆ ಅಧ್ಯಕ್ಷರಾಗುವವರನ್ನು ಆದರದಿಂದ ಭಾವಿಸಿ ಕೊಂಡು, ಇಂದಿನ ಐವತ್ತನೆಯ ಸಮ್ಮೇಳನಕ್ಕೆ ಅಧ್ಯಕ್ಷನಾಗಿ ಕೆಲವು ಮಾತು ಗಳನ್ನು ಆಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ನನ್ನ ಅಧ್ಯಕ್ಷತೆಯ ಗುಟ್ಟು

ಮೂರು ನಾಲ್ಕು ಸಲ ಇದಕ್ಕೆ ಮೊದಲು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಸ್ನೇಹಿತರು ನನ್ನ ಹೆಸರನ್ನು ಸೂಚಿಸಿದಾಗ ಅವರಿಗೆ ನಾನು –"ಯಾಕಪ್ಪಾ ಇಷ್ಟು ಅವಸರ? ಪಂಪಭಾರತದಲ್ಲಿ ಭೀಷ್ಮರು ಹೇಳಿದ ಹಾಗೆ– ಸೂಟ್ ಪಡೆಯಲಪ್ಪುದು ಕಾಣ!" ಎಂದು ಹೇಳಿದ್ದುಂಟು. ಈಗ ನನ್ನ ಸರದಿ ಬಂದಿದೆ. ಸಂತೋಷ.

ಪಂಪಕವಿಯ ಆದಿಪುರಾಣದಿಂದ ನಾನೊಂದು ಸಮ್ಯಕ್ದರ್ಶನವನ್ನು ಕಲಿತು ಕೊಂಡಿದ್ದೇನೆ. ಅದು ಏನೆಂದರೆ: 'ದೊರೆಕೊಳೆ ಕಾಲಲಬ್ಧಿ... ಭವ್ಯತೆ ಪುಣ್ಯಜೀವಮಂ ಸಹಜ ಸುಖಾಸ್ಪದಂಬರೆಗಮುಯ್ವಿನಮಲ್ಲಿ ತೊಡಂಕಲೀಗುಮೇ?' ಕಾಲಲಬ್ಧಿ ಕೂಡಿಬಂದಾಗ ಮುಕ್ತಿಯೇ ಕಾಲಕ್ರಮದಲ್ಲಿ ಕೈವಶವಾಗುತ್ತದೆ ಎಂದ ಮೇಲೆ, ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಪ್ರಾಪ್ತವಾಗುವುದರಲ್ಲಿ ಏನೂ ಆಶ್ಚರ್ಯವಿಲ್ಲ.

'ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು, ಪರಿಣಾಮವಕ್ಕು, ಪದವಕ್ಕು' ಎಂದರು ಬಸವಣ್ಣನವರು. 'ದೈವದೊಲ್ಮೆಯಿರಲಾ ಕಾಲಾನುಕಾಲಕ್ಕೆ ಪೇಳ್ ಬಡವಂ ಬಲ್ಲಿದನಾಗನೇ!' ಎಂದ, ನಮ್ಮ ಚೆನ್ನಸೋಮೇಶ್ವರ. ಸತ್ಕಾವ್ಯಗಳ ವ್ಯಾಸಂಗದಿಂಥ ಇಂಥ ನಂಬಿಕೆಗಳನ್ನು ಅವಲಂಬಿಸಿಕೊಂಡು ಬಂದಿರುವ ನನಗೆ ಇಂದಿನ ಅಧ್ಯಕ್ಷತೆ ನನ್ನ ಭರವಸೆಗಳನ್ನು ಭದ್ರಪಡಿಸಿಕೊಟ್ಟಿದೆ.

---

* ೧೯೭೮ ಏಪ್ರಿಲ್ ೨೩, ೨೪, ೨೫ರಂದು ನವದೆಹಲಿಯ ಪಂಪ ಮಹಾಕವಿ ಮಂಟಪದಲ್ಲಿ ಜರಗಿದ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿ. ಪಿ. ರಾಜರತ್ನಂ ಅವರು ಮಾಡಿದ ಅಧ್ಯಕ್ಷಭಾಷಣ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಾನು ಒಂದು ಕೊಂಚ ಸ್ವಂತ ಕೃಷಿ ಮಾಡಿದ್ದೇನೆ. ಅದರ ಜೊತೆಗೆ, ಅದಕ್ಕಿಂತ ಅಧಿಕವಾಗಿ, ಇತರ ಕಾಲ ದೇಶ ಭಾಷಾಸಾಹಿತ್ಯಗಳಿಂದ ವಿಧವಿಧವಾದ ಪಕ್ವಾನ್ನಗಳನ್ನು ತಂದು ನಮ್ಮ ಕನ್ನಡ ಜನಕ್ಕೆ ಕೈತುತ್ತು ಹಾಕಿದ್ದೇನೆ. ಐವತ್ತು ವರ್ಷಗಳಿಂದ ನಾನು ನಡೆಸುತ್ತಿರುವ ಈ ಸಾಹಿತ್ಯ ಪರಿಚಾರಿಕೆಯಿಂದ ಸುಪ್ರೀತರಾಗಿ, ನಮ್ಮ ಜನ ನನ್ನನ್ನು ಎತ್ತಿಕೊಂಡಿದ್ದಾರೆ, ದೈವ ಅದನ್ನು ಒಪ್ಪಿದೆ. ಹಾಗಾಗಿ ನಾನು ಇಲ್ಲಿ ಅಧ್ಯಕ್ಷನಾಗಿದ್ದೇನೆ. ನನ್ನ ಸಾಹಿತ್ಯಪರಿಚಾರಿಕೆಗೆ ನಮ್ಮ ಜನ ತಮ್ಮ ಅಂಗೀಕಾರ ಮುದ್ರೆಯನ್ನು ಈ ಅಧ್ಯಕ್ಷತೆಯ ಮೂಲಕ ಒತ್ತಿದ್ದಕ್ಕಾಗಿ ನಿಮಗೆಲ್ಲರಿಗೂ ನನ್ನ ಕೃತಜ್ಞತಾಪೂರ್ವಕವಾದ ವಂದನೆಗಳು.

೧೯೨೮ರಲ್ಲಿ ನಾನು ಮೊದಲು ಬರೆಯಲು ತೊಡಗಿದೆ. ಎಂದರೆ ಈ ೧೯೭೮ಕ್ಕೆ ನಾನು ಬರಹದ ಪ್ರಪಂಚದಲ್ಲಿ ಐವತ್ತು ವರ್ಷದವನು. ಇದಕ್ಕೂ ಐವತ್ತನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಿರುವುದಕ್ಕೂ ಏನಾದರೂ ಅವ್ಯಕ್ತವಾದ ಸಂಬಂಧ ವುಂಟೋ ನಾನರಿಯೆ. ಯಾರಾದರೂ ಇದನ್ನು ಕಾಕತಾಳೀಯವೆಂದಾರು. ಆದರೆ ನನ್ನ ಹೃದಯ ಅದನ್ನು ಹಾಗೆಂದು ಒಪ್ಪುತ್ತಿಲ್ಲ. ಇದು ಕನ್ನಡ ಸಾಹಿತ್ಯ ಸಮ್ಮೇಳನಗಳ ಸುವರ್ಣಮಹೋತ್ಸವವೂ ಹೌದು, ನನ್ನ ಬರವಣಿಗೆಗಳ ಚಿನ್ನದ ಹಬ್ಬವೂ ಹೌದು.

ಮತ್ತೆ, ಕರ್ಣಾಟಕದೊಳಗಿನ ಅಥವಾ ಭಾರತದೊಳಗಿನ ಬೇರೆ ಯಾವುದೇ ನಗರದಲ್ಲಿ ನಡೆದ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗದೆ, ಈ ದೆಹಲೀ ನಗರದಲ್ಲಿ ಆದದ್ದಕ್ಕೂ ಒಂದು ಆಂತರಿಕ ಕಾರಣವಿರಬೇಕೆಂದು ನನಗೆನ್ನಿಸುತ್ತಿದೆ. ಅದು ಏನೆಂದರೆ: ನಮ್ಮ ಕರ್ಣಾಟಕದ ಪುಣ್ಯಕ್ಷೇತ್ರಗಳಲ್ಲಿ ಮೇಲುಕೋಟೆ ಎನ್ನಿಸಿದ ಯದುಗಿರಿ ಒಂದು ಮಹಾಕ್ಷೇತ್ರ. ಶ್ರೀಚೆಲುವನಾರಾಯಣಸ್ವಾಮಿ ಈ ಕ್ಷೇತ್ರದ ಅಧಿದೇವತೆ. ಈ ದೇವರ ಉತ್ಸವಮೂರ್ತಿ ಶ್ರೀರಾಮಪ್ರಿಯ. ಈ ಉತ್ಸವಮೂರ್ತಿಯನ್ನು ಶ್ರೀಮದ್ರಾಮಾನುಜಾಚಾರ್ಯರು ದೆಹಲಿಯಿಂದ ಮೇಲುಕೋಟೆಗೆ ಬಿಜಯಮಾಡಿಸಿಕೊಂಡು ಬಂದರು. ನಾನು ಭಗವದ್ರಾಮಾನುಜರ ಪಾದಪದ್ಮೋಪಜೀವಿ. 'ರಾಮಾನುಜಸ್ಯ ಚರಣೌ ಶರಣಂ ಪ್ರಪದ್ಯೇ' ಎಂಬ ಮಂತ್ರವನ್ನು ನಾನು ಜಪಿಸುತ್ತಿರುವುದಕ್ಕೆ ದಯಪಾಲಿಸಿದ ವರವಾಗಿ ಶ್ರೀರಾಮಪ್ರಿಯಮೂರ್ತಿ ನನ್ನನ್ನು ದೆಹಲಿಗೆ ಕಳಿಸಿದ್ದಾರೆಂದು ನಾನು ನಂಬಿದ್ದೇನೆ.

ಇದು ದೆಹಲಿಯಲ್ಲಿ ನಡೆಯುತ್ತಿರುವ ಐವತ್ತನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಿರುವುದರ ಗುಟ್ಟು.

ಕನ್ನಡ ಸಾಹಿತ್ಯ ಪರಿಷತ್ತೂ ನಾನೂ

ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿಗೆ ನಾನು ಹೊರಗಿನವನಲ್ಲ. ೧೯೩೦ರಲ್ಲಿ ನಾನು ಮೊದಲನೇ ಎಂ.ಎ., ತರಗತಿಯಲ್ಲಿ ಓದುತ್ತಿದ್ದಾಗ ಪರಿಷತ್ತು ನಡೆಸಿದ ಹದಿನಾರನೇ ಸಾಹಿತ್ಯ ಸಮ್ಮೇಳನದಲ್ಲಿ ನನಗೂ ನಾಲ್ಕಾರು ರೀತಿಯ ಪರಿಚಾರಿಕೆಗಳನ್ನು ಮಾಡುವು

ದಕ್ಕೆ ಅವಕಾಶ ಲಭಿಸಿತ್ತು. ಅಂದಿನಿಂದ ಪರಿಷತ್ತಿಗೂ ನನಗೂ ಅವಿಚ್ಛಿನ್ನವಾದ ಅಂಟು, ಗಂಟು, ನಂಟು. ನಾನೂ ಹತ್ತಾರು ವರ್ಷ ಪರಿಷತ್ತಿನ ಒಳಗೆ ಇದ್ದು, ಅಲ್ಲಿ ನನ್ನ ಪಾಲಿಗೆ ಹಿರಿಯರು ವಹಿಸಿದ ಭಾರಗಳನ್ನು ನನ್ನ ಕೈಲಾದಷ್ಟು ನಿರ್ವಹಿಸಿದ್ದೇನೆ. ಮುಂದೆ ಇತರ ಕಾರ್ಯಗೌರವಗಳ ಒತ್ತಡದಿಂದ ಪರಿಷತ್ತಿಗೆ ಬಂದು ಹೋಗಲು ನನಗೆ ಬಿಡುವು ಆಗದಿದ್ದರೂ, ನಾನು ಇಂದಿನವರೆಗೂ ಪರಿಷತ್ತಿನೊಂದಿಗೆ ಇದ್ದೇನೆ. ನಮ್ಮ ನಾಡಿನ ಜನರ ಏಳಿಗೆಗಾಗಿ ಪರಿಷತ್ತು ಏನೇನು ಮಾಡುತ್ತಿದೆಯೋ ಅದಕ್ಕೆ ಪೂರಕವಾಗುವ ಹಾಗೆ ನಾನು ನನ್ನ ಕೈಲಾದಷ್ಟು ಪರಿಚಾರಿಕೆ ಮಾಡುತ್ತಿದ್ದೇನೆ. ನಮ್ಮ ಕನ್ನಡ ಸಾಹಿತ್ಯ ಪರಿಷತ್ತಿಗೆ ಐವತ್ತು ವರ್ಷ ತುಂಬಿದಾಗ ನಾನು ಬರೆದು ಪ್ರಕಟಿಸಿದ 'ಕನ್ನಡದ ಸೇತುವೆ' ಎಂಬ ಸಣ್ಣ ಹೊತ್ತಿಗೆಯಲ್ಲಿ ಪರಿಷತ್ತಿಗೂ ನನಗೂ ಬೆಸೆದು ಬಂದಿರುವ ಬಾಂಧವ್ಯವನ್ನು ಸೂಚಿಸಿದ್ದೇನೆ.

ಪರಿಷತ್ತಿನ ಗುರಿ

ಅರುವತ್ತನಾಲ್ಕು ವರ್ಷಗಳ ಹಿಂದೆ ನಮ್ಮ ನಾಡಿನ ಹಿರಿಯರು ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದಾಗ ತಮ್ಮ ಮುಂದೆ ಎರಡು ಗುರಿಗಳನ್ನು ಇಟ್ಟುಕೊಂಡಿದ್ದರು: ೧. ಕನ್ನಡ ನುಡಿ ಬೆಳೆಯಬೇಕು, ಕನ್ನಡ ಸಾಹಿತ್ಯ ಬೆಳೆಯಬೇಕು, ಕನ್ನಡ ನಾಡು ಒಂದಾಗಬೇಕು, ಕನ್ನಡ ಜನ ಮುಂದುವರಿಯಬೇಕು. ೨. ಭಾರತವು ಸ್ವತಂತ್ರವಾಗ ಬೇಕು. ಭಾರತವು ಸ್ವತಂತ್ರವಾದ ಹೊರತು ಕರ್ಣಾಟಕ ಏಕೀಕರಣ ಸಾಧ್ಯವಾಗದು ಎಂಬುದನ್ನು ಅಂದಿನ ಹಿರಿಯರು ತಿಳಿದಿದ್ದರು. ಆ ಸ್ವಾತಂತ್ರ್ಯ ಬರುವವರೆಗೂ ಏಕೀಕರಣದ ಪ್ರಯತ್ನಗಳನ್ನು ಮಾಡುತ್ತಲೇ ಇರಬೇಕೆಂದು, ಕನ್ನಡದ ಮೂಲಕವಾಗಿ ಎರಡನ್ನೂ ಏಕಕಾಲದಲ್ಲಿ ನಡಸಿಕೊಂಡು ಹೋದರು. ಅವರ ತಪಸ್ಸಿನ ಫಲವಾಗಿ, ಅವರಿಗೆ ವಿಧೇಯರಾಗಿ ನಡೆದವರ ಪ್ರಯತ್ನಗಳ ಪರಿಣಾಮವಾಗಿ, ೧೯೪೭ರಲ್ಲಿ ಭಾರತ ಸ್ವತಂತ್ರವಾಯಿತು, ಅದರ ತರುವಾಯ ಕರ್ಣಾಟಕ ಒಂದಾಯಿತು. ಆದರೆ, ದೇಶ ಸ್ವತಂತ್ರವಾದ್ದರಿಂದ ದೇಶದ ಜನರಿಗೆ ಏನು ಬಂತು? ಕನ್ನಡನಾಡು ಒಂದಾದ್ದರಿಂದ ಕನ್ನಡಿಗರಿಗೆ ಏನು ಬಂತು? ಇದು ನಾನು ಕೇಳುತ್ತಿರುವ ಪ್ರಶ್ನೆಯಲ್ಲ. ದೇಶಕ್ಕೆ ದೇಶವೇ ನಾಡಿಗೆ ನಾಡೇ ಈ ಪ್ರಶ್ನೆಯನ್ನು ಕೇಳುತ್ತಿದೆ. ಇದಕ್ಕೆ ಉತ್ತರವನ್ನು, ಇದಕ್ಕೆ ಪರಿಹಾರವನ್ನು ಹುಡುಕ ಬೇಕಾದ್ದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಅದರಲ್ಲೂ ಮಾತಿನ ಶಕ್ತಿಯನ್ನು ಬಲ್ಲವನಾದ ಸಾಹಿತಿಯ ಹೊಣೆಗಾರಿಕೆ ಈ ಸಂದರ್ಭದಲ್ಲಿ ಮಿಕ್ಕವರಿಗಿಂತ ಹೆಚ್ಚಾಗಿರುತ್ತದೆ.

'ನಮ್ಮ ನಮ್ಮ ಭಾಷಾಪ್ರಾಂತ ನಮನಮಗೆ ದೊಡ್ಡದು. ಆದರೆ ಭಾರತ ಅವುಗಳೆಲ್ಲಕ್ಕಿಂತ ದೊಡ್ಡದು' ಎಂಬುದು ನಮಗೆಲ್ಲರಿಗೂ ಇರಬೇಕಾದ ಮೂಲಪ್ರಜ್ಞೆ. ಇದನ್ನು ಭದ್ರಪಡಿಸಿಕೊಂಡರೆ ಭಾರತವೂ ಇರುತ್ತದೆ, ಅದಕ್ಕೆ ಹೊಂದಿಕೊಂಡು ನಾವೂ ಇರುತ್ತೇವೆ. ಇದನ್ನು ಮರೆತೆವೇ, ನಮಗೂ ಕಷ್ಟ, ಭಾರತಕ್ಕೂ ನಷ್ಟ.

ಕವಿರಾಜಮಾರ್ಗದ ಕಾಲದಿಂದ ನಾವು ಕನ್ನಡದವರು ಒಂದು ಮಂತ್ರ ಕಲಿತಿ ದ್ದೇವೆ. ಅದು ಏನೆಂದರೆ: ನಮ್ಮದು 'ಕನ್ನಡದೊಳ್ ಭಾವಿಸಿದ ಜನಪದಂ'; ನಮ್ಮದು

'ವಸುಧಾವಳಯ ವಿಲೀನ ವಿಶದ ವಿಷಯ ವಿಶೇಷಂ'. ನಮ್ಮವರು ಕನ್ನಡದ ಮೂಲಕವಾಗಿ ನಮಗೆ ಬದುಕುವ ದಾರಿಯನ್ನು ತೋರಿಸಿಕೊಟ್ಟರು. ಅದರಿಂದ ನಾವು ನಮ್ಮನ್ನು ಬೆಳೆಯಿಸಿಕೊಳ್ಳಲು ಸಾಧ್ಯವಾಯಿತು. ಇಂಥ ಕನ್ನಡದ ದೇಶವು ತನ್ನ ಸುತ್ತುಮುತ್ತಿನ ಭೂಮಿ ಭಾಗಗಳೊಂದಿಗೆ ಹೊಂದಿಕೊಂಡು ತಾನು ಅದರಲ್ಲಿ ಸೇರಿಹೋಗಿದ್ದರೂ, ಅದರೊಂದಿಗೆ ತನ್ನ ವಿಶಿಷ್ಟವಾದ ಲಕ್ಷಣಗಳನ್ನು ಕಳೆದುಕೊಳ್ಳದ ಹಾಗೆ ತನ್ನ ವೈಶಿಷ್ಟ್ಯವನ್ನು ಕಾಪಾಡಿಕೊಂಡಿರುವುದು ಈ ನಾಡಿನ ಒಂದು ವಿಶೇಷ ಗುಣ. ಇದು ಕನ್ನಡಿಗರು ಮಾತ್ರವಲ್ಲ, ಎಲ್ಲ ಭಾಷೆಗಳವರೂ ಮರೆಯದೆ ಬೆಳಸಿಕೊಳ್ಳಬೇಕಾದ ಗುಣ. ತಮ್ಮ ಸ್ವಂತ ಹಿತರಕ್ಷಣೆಗಾಗಿ, ಭಾರತದ ಯೋಗಕ್ಷೇಮಕ್ಕಾಗಿ.

ಭಾರತ ಸ್ವತಂತ್ರವಾಗುವುದಕ್ಕೆ ಮುಂಚೆ ತಾನೊಂದು ರಾಷ್ಟ್ರಧ್ವಜವನ್ನು ಕಲ್ಪಿಸಿಕೊಂಡಿತ್ತು. 'ವಂದೇ ಮಾತರಂ' ಅದರ ರಾಷ್ಟ್ರಗೀತೆಯಾಗಿತ್ತು, ಗಾಂಧಿಯವರು ಕಲಿಸಿಕೊಟ್ಟ ಸತ್ಯ ಅಹಿಂಸೆಗಳು ಅದರ ರಾಷ್ಟ್ರಮಂತ್ರವಾಗಿತ್ತು. ಈ ಮೂರೂ ರಾಷ್ಟ್ರ ಲಾಂಛನಗಳ ಆಶ್ರಯದಲ್ಲಿ ಹೋರಾಟ ನಡಸಿ ದೇಶ ಸ್ವತಂತ್ರವಾದಾಗ ಅಶೋಕ ಚಕ್ರವನ್ನು ಒಳಕೊಂಡ ತ್ರಿವರ್ಣಧ್ವಜ ನಮ್ಮದಾಯಿತು; 'ವಂದೇ ಮಾತರಂ' ಅನ್ನು ಪೂರ್ತಿ ಬಿಡದೆ ಹೋದರೂ 'ಜನಗಣಮನ' ನಮ್ಮ ರಾಷ್ಟ್ರಗೀತೆಯಾಯಿತು; 'ಸತ್ಯಮೇವ ಜಯತೇ' ನಮ್ಮ ರಾಷ್ಟ್ರದ ಮಂತ್ರವಾಯಿತು.

ಆಯಿತು. ಆದರೆ, ಯಾರಿಗಾಗಿ ಈ ಮೂರೂ ಲಾಂಛನಗಳು ಮೈತಾಳಿದುವೋ ಅವರಿಗೆ ಇವುಗಳ ಅರ್ಥ ಆಯಿತಾ? ಅರ್ಥ ಆಗದೆ ಇದ್ದ ಮೇಲೆ ಬರಿ ಗುರುತಿಗೆ ಏನು ಬೆಲೆ? ತಿಳಿಯದವರಿಗೆ ಇದರ ಅರ್ಥವನ್ನು ತಿಳಿಯಪಡಿಸುವುದು ಯಾರ ಹೊಣೆ? ತಿಳಿದವರು ಮೂವತ್ತು ಜನ ಇದ್ದು, ತಿಳಿಯದವರು ಮೂವತ್ತುಕೋಟಿ ಇರುವಾಗ, ತಿಳಿದಿರುವ ಅಲ್ಪಸಂಖ್ಯಾತರಿಂದ ದೇಶಕ್ಕೆ ಏನು ಪ್ರಯೋಜನ? ತಿಳಿಯದವರು ಈ ಪ್ರಶ್ನೆ ಕೇಳುತ್ತಿಲ್ಲ. ತಿಳಿದವರು ತಮ್ಮನ್ನು ತಾವೇ ಈ ಪ್ರಶ್ನೆ ಕೇಳಿಕೊಳ್ಳಬೇಕು.

ಒಳಗೆ ಅಡಿಗೆ ಮಾಡುವವರು ಹದಿನೈದು ಮಂದಿ. ಊಟಕ್ಕೆ ಕುಳಿತವರು ಸಾವಿರಾರು. ಬಡಿಸುವವರು ತಕ್ಕಷ್ಟು ಸಂಖ್ಯೆಯಲ್ಲಿ ಇಲ್ಲದೆ ಹೋದರೆ, ಮಾಡಿದ ಅಡುಗೆ ವ್ಯರ್ಥ, ಊಟಕ್ಕೆ ಕುಳಿತವರಿಗೆ ಅರೆಹೊಟ್ಟೆ.

ಕನ್ನಡ ಸಾಹಿತ್ಯ ಪರಿಷತ್ತನ್ನು ಆರಂಭಮಾಡಿದ ಕಾಲಕ್ಕೆ ನಮ್ಮ ಹಿರಿಯರು ಯಾವ ಎರಡು ಘನವಾದ ಉದ್ದೇಶಗಳನ್ನು ತಮ್ಮ ಮುಂದೆ ಇರಿಸಿಕೊಂಡು ತೊಡಗಿದರೋ ಅದು ಇನ್ನೂ ಸಮರ್ಪಕವಾಗಿ ಈಡೇರಿಲ್ಲ. ಅದು ನೆರವೇರುವವರೆಗೂ ನಾವು ಅಪ್ರಮತ್ತರಾಗಿ ಕರ್ತವ್ಯಪರರಾಗಿರಲೇ ಬೇಕು.

ಕನ್ನಡದ ಮುನ್ನಡೆ

ನಮ್ಮ ಪೂರ್ವಿಕರು ಕನ್ನಡದಲ್ಲಿ ಮಾತ್ರವಲ್ಲದೆ ಸಂಸ್ಕೃತದಲ್ಲಿಯೂ ಪ್ರಾಕೃತಗಳಲ್ಲಿಯೂ ಪಂಡಿತರಾಗಿದ್ದರು. ಕೆಲವರ ಕೈಯಲ್ಲಿ ಇದರಿಂದ ಕನ್ನಡಕ್ಕೆ ಕೊಂಚ

ಹಾನಿಯಾಗಿರಬಹುದಾದರೂ ಒಟ್ಟಿನ ಮೇಲೆ ಕನ್ನಡ ಪುಷ್ಟವಾಯಿತು. ಸಂಸ್ಕೃತವನ್ನು ಬಿಟ್ಟು ಕನ್ನಡದಲ್ಲೇ ನಿರ್ವಹಿಸುವ ಪ್ರಯತ್ನಗಳೂ ನಡೆದುವು. ಆಂಗ್ಲರ ಆಳ್ವಿಕೆ ಬಂದಮೇಲೆ ಕನ್ನಡಿಗರು ಇಂಗ್ಲಿಷ್ ಕಲಿತರು. ಅಲ್ಲಿ ಕಲಿತದ್ದರ ಫಲವನ್ನು ಇಲ್ಲಿಯೂ ತಂದರು. ಕನ್ನಡಿಗರಲ್ಲಿ ಕೆಲವರು ನೆರೆಹೊರೆಯಾದ ತಮಿಳು ತೆಲುಗುಗಳನ್ನು ತಮ್ಮದನ್ನಾಗಿ ಮಾಡಿಕೊಂಡರು. ದೇಶ ಸ್ವತಂತ್ರವಾಗಲು ಬಯಸಿದಾಗ, ಸ್ವದೇಶ ಪ್ರೇಮದಿಂದ ತುಂಬಿದ ಬಂಗಾಳಿಯನ್ನು ಕಲಿತರು, ಗಾಂಧೀಜಿಯವರು ಹೇಳಿದರೆಂದು ಹಿಂದಿಯನ್ನು ಕಲಿತರು. ಸಾಹಿತ್ಯರಸಿಕರು ಗ್ರೀಕ್, ಫ್ರೆಂಚ್ ಮುಂತಾದುವನ್ನು ಕಲಿತರು. ವಿಜ್ಞಾನದಲ್ಲಿ ಆಸಕ್ತಿಯುಳ್ಳವರು ಜರ್ಮನ್, ರಷ್ಯನ್ ಮೊದಲಾದುವನ್ನು ಕಲಿತರು. ಕನ್ನಡಿಗರ ಅನ್ಯಭಾಷಾ ಪ್ರೇಮಕ್ಕೆ ಇದೊಂದು ಸಣ್ಣ ನಿದರ್ಶನ.

ಕರ್ಣಾಟಕದಲ್ಲಿ ಕನ್ನಡವೊಂದನ್ನು ಮಾತ್ರ ತಿಳಿದವರೂ ಇದ್ದಾರೆ. ಮನೆಮಾತು ತಮಿಳೋ ತೆಲುಗೋ ಮಲೆಯಾಳವೋ ಮರಾಠಿಯೋ ತುಳುವೋ ಕೊಂಕಣಿಯೋ ಆದರೂ ಹೊರಗಿನ ವ್ಯವಹಾರಗಳನ್ನೆಲ್ಲ ಕನ್ನಡದ ಮೂಲಕವೇ ನಿಭಾಯಿಸುವವರೂ ಇದ್ದಾರೆ. ಇವರಲ್ಲಿ ಅನೇಕರು ಕನ್ನಡದಲ್ಲಿ ಸಾಹಿತ್ಯರಚನೆ ಮಾಡಿ ಕನ್ನಡವನ್ನು ಮುನ್ನಡಸುತ್ತಿದ್ದಾರೆ. ಇದು ಕನ್ನಡದ ಒಂದು ವಿಶಿಷ್ಟ ಲಕ್ಷಣ. ಇಂಥ ಅನ್ಯಭಾಷಾ ಪ್ರೀತಿಯನ್ನೂ ಬಹುಭಾಷಾ ಪಾಂಡಿತ್ಯವನ್ನೂ ಒಂದೇ ಸಮನಾಗಿ ಬೆಳಸಿಕೊಂಡು, ಅದರ ಫಲಗಳನ್ನು ಕನ್ನಡದಲ್ಲಿ ಕನ್ನಡದವರಿಗೆ ಧಾರೆಯೆರೆದವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಜೇಶ್ವರದ ಎಂ. ಗೋವಿಂದ ಪೈ ಅವರು ಅಗ್ರಗಣ್ಯರು. ಇವರೊಂದು ಕಡಲತೀರದ ದೀಪಸ್ತಂಭ. ಇವರ ಮಾರ್ಗ ಸರ್ವಥಾ ಅನುಕರಣಯೋಗ್ಯ.

'ಶಬ್ದಪಾರಮಾರ್ಗಮಶಕ್ಯಂ' ಎಂದು ಕೇಶಿರಾಜ ಹೇಳಿದ ಹಾಗೆ, ಎಲ್ಲರೂ ಎಲ್ಲಾ ಭಾಷೆಗಳನ್ನೂ ಕಲಿಯಬೇಕಾದ್ದಿಲ್ಲ. ಕಲಿತ ಕೆಲವರು ಪುಣ್ಯವಂತರು ತಾವು ಕಲಿತದ್ದನ್ನು ನಮಗೆ ಕನ್ನಡದಲ್ಲಿ ತಂದು ತಿಳಿಸಿದರೆ ನಾವು ಧನ್ಯರು.

ಈ ಕೆಲಸ ಸಾವಿರ ವರ್ಷಗಳ ಉದ್ದಕ್ಕೂ ನಮ್ಮಲ್ಲಿ ನಡೆಯುತ್ತಲೇ ಇದೆ. ಆದರೆ ಎಷ್ಟು ಮುಂದುವರಿದಿದ್ದೇವೆಯೋ ಅಷ್ಟೇ ಊರ್ಧ್ವಮುಖಿಗಳಾಗುತ್ತಿದ್ದೇವೆಯೆ ಎಂಬುದು ವಿಚಾರ ಮಾಡಬೇಕಾದ ವಿಷಯ. ಅದಕ್ಕೋಸ್ಕರವಾಗಿಯೇ ಸಮ್ಮೇಳನದ ಮೂರು ದಿವಸಗಳಲ್ಲಿ ಬೇರೆ ಬೇರೆ ಗೋಷ್ಠಿಗಳು ಸೇರಿ ಚರ್ಚೆ ಮಾಡುವುದರಿಂದ ಅದನ್ನು ಕುರಿತು ಮಾತನಾಡಲು ನನಗೆ ಇದು ಸ್ಥಳವೂ ಅಲ್ಲ, ನನಗೆ ಇಲ್ಲಿ ಸಮಯವೂ ಇಲ್ಲ.

ಕನ್ನಡವನ್ನು ಎತ್ತಿಹಿಡಿಯುವುದಕ್ಕಾಗಿ ಹಿಂದೆ ಸಾರ್ವಜನಿಕರು ಮಾತ್ರ ಹೆಣಗಾಡುತ್ತಿದ್ದರು. ಈಗ ಅವರ ಜನಬಲದ ಜೊತೆಗೆ ಸರಕಾರಗಳು ಬೇಕಾದ ಹಾಗೆ ಧನಬಲವನ್ನೂ ಒದಗಿಸುತ್ತಿವೆ. ಇದರಿಂದ ಕನ್ನಡ ನಾಡಿನ ಎಲ್ಲ ಕ್ಷೇತ್ರಗಳಲ್ಲೂ ವ್ಯವಹಾರಕ್ಕೆ ಬೇಕಾದ ಸಾಹಿತ್ಯ ಸೃಷ್ಟಿಯಾಗುತ್ತಿದೆ. ಇದು ಹೀಗೇ ಮುಂದುವರಿದರೆ, ಬೇರೆ ಭಾಷೆಗಳ ವ್ಯಾಮೋಹದಿಂದ ನಮ್ಮ ಏಕಾಗ್ರತೆ ಒಡೆಯದಿದ್ದರೆ, ಕನ್ನಡಕ್ಕೆ ಉಜ್ವಲವಾದ ಭವಿಷ್ಯವುಂಟು.

ಇಷ್ಟೆಲ್ಲ ಆದರೂ, ಇಷ್ಟು ಸಾಹಿತ್ಯ ರಚನೆಯಾಗಿ ಪ್ರಕಟವಾದರೂ ಇದರ ಲಾಭ ವನ್ನು ಪಡೆಯುವವರು ಒಂದು ಮುಷ್ಟಿಯಲ್ಲಿ ಹಿಡಿಯಲಾಗುವಷ್ಟು ಜನ ಮಾತ್ರ. ಏಕೆಂದರೆ, ನಮ್ಮ ದೇಶದ ಜನರಲ್ಲಿ ಎಲ್ಲರೂ ಓದಲು ಬಲ್ಲವರಲ್ಲ. ಓದಿಕೊಳ್ಳಬಲ್ಲ ವರಲ್ಲಿ ಹಲವರಿಗೆ ಓದಿದ್ದು ಅರ್ಥವಾಗುವುದಿಲ್ಲ; ಇನ್ನೊಮ್ಮೆ ಓದೋಣವೆಂದರೆ ಪುಸ್ತಕ ಹತ್ತಿರ ಇರುವುದಿಲ್ಲ; ಅದಕ್ಕೆ ಕಾರಣ: ಅವರಿಗೆ ಪುಸ್ತಕ ಕೊಳ್ಳುವ ಅಭ್ಯಾಸವಿಲ್ಲ; ಪುಸ್ತಕವನ್ನು ಕೊಂಡು, ಓದಿ, ಅರ್ಥಮಾಡಿಕೊಂಡವರಾದರೂ ತಾವು ತಿಳಿದದ್ದನ್ನು ತಮ್ಮಷ್ಟು ಭಾಗ್ಯವಿಲ್ಲದವರಿಗೆ ತಿಳಿಸಲು ಮುಂದೆ ಬರುತ್ತಿಲ್ಲ. ಈ ವಿಚಿತ್ರ ಪರಿಸ್ಥಿತಿ ಯಿಂದಾಗಿ, ಸೃಷ್ಟಿಯಾದ ಸಾಹಿತ್ಯ ಬಡಕಲು, ಅದರಿಂದ ಪ್ರಯೋಜನ ಪಡೆಯದೆ ಜನ ಬಡಕಲು. ರಾಘವಾಂಕ ಹೇಳಿದ ಹಾಗೆ– ಕೃತಿ ರಚನೆಯ ಮುಖ್ಯೋದ್ದೇಶ– 'ಜನ ಬದುಕಬೇಕೆಂದು'. ಸೃಷ್ಟಿಯಾದದ್ದು ಸಾರ್ಥಕವಾಗಬೇಕಾದರೆ, ಅದನ್ನು ಪ್ರಾಕೃತರ ಹತ್ತಿರಕ್ಕೆ ಕೊಂಡೊಯ್ದು ಬಡಿಸುವ ಸಾಹಿತ್ಯ ಪರಿಚಾರಕರು ಎಷ್ಟು ಸಾವಿರ ಸಂಖ್ಯೆಯಲ್ಲಿ ಬಂದರೂ ಸಾಲದು.

'ನೀ ಕಂಡ ಶಿವಪಥವ ಮಾನವರಿಗರುಹು'

'ಬೆಳೆಯೇನೋ ಬೇಕಾದ ಹಾಗಿದೆ, ಕುಯ್ಯುವವರು ಕಡಮೆ' ಎಂಬ ಮಾತು ಐವತ್ತು ವರ್ಷಗಳ ಹಿಂದಿನ ಸಾಹಿತ್ಯಕ್ಷೇತ್ರಕ್ಕೆ ಯುಕ್ತವಾಗಿತ್ತು. ಅಲ್ಲಿಂದ ಈಚೆಗೆ ಬೆಳೆ ಬೇಕಾದ ಹಾಗೆ ಬಂದಿದೆ, ಕುಯ್ಯುವವರೂ ಸಂಖ್ಯೆಯಲ್ಲಿ ಹೆಚ್ಚಿಕೊಂಡಿದ್ದಾರೆ, ಕುಯಿ ದದ್ದನ್ನು ಅಡುಗೆ ಮಾಡುವವರೂ ಅಧಿಕವಾಗಿದ್ದಾರೆ. ಆದರೆ ಊಟಮಾಡಬೇಕೆಂದು ಬಾಯಿಬಿಟ್ಟು ಕೊಂಡಿರುವವರ ಬಳಿಗೆ ಅದನ್ನು ತಂದು ಬಡಿಸುವವರು ಯಾರು? 'ದೀನ ಮನದವನಂತೆ ಕಂಡ ನಿಧಾನವನು ತಾನೊಬ್ಬನುಂಬನೆ ದಾನಿ? ನೀ ಕಂಡ ಶಿವಪಥವ ಮಾನವರಿಗರುಹು' ಎಂಬ ಅಲ್ಲಮಪ್ರಭುವಿನ ಸಲ್ಲಲಿತ ಸನ್ಮಾರ್ಗ ನಮ್ಮನ್ನು ಮುಂದೊಯ್ಯಬೇಕು. ಶಿವಶರಣರು ಹೀಗೆ ಮಾಡಿದರು, ಹರಿದಾಸರು ಹೀಗೆ ಮಾಡಿದರು, ಸರ್ವಜ್ಞ ಹೀಗೆ ಮಾಡಿದ. 'ಸಾಹಿತ್ಯವೆಲ್ಲರಿಗಲ್ಲ ಸರ್ವಜ್ಞ' ಎಂದು ಕೆಲವರು ಹೇಳುವುದುಂಟು. ಅದು 'ಸಾಹಿತ್ಯವೆಲ್ಲರಿಗಿಲ್ಲ' ಎಂದಿರಬೇಕು. 'ಇಲ್ಲ' ಎಂಬುದು 'ಇಲ್ಲವಲ್ಲಾ!' ಎಂಬ ಕೊರಗನ್ನು ಸೂಚಿಸುತ್ತದೆ. ಬೇಕಾದ ನೀರು ನಮಗೆ ಬಟ್ಟಲಿನಲ್ಲಿ ಒದಗದಿರುವವರೆಗೆ ಯಾವ ವಾಪೀ ಕೂಪ ತಟಾಕಗಳಲ್ಲಿ ಎಷ್ಟು ನೀರು ತುಂಬಿದ್ದರೂ ಏನು ಪ್ರಯೋಜನ?

ಭಾರತದ ಐಕ್ಯ

'ಮನುಷ್ಯಜಾತಿ ತಾನೊಂದೆ ವಲಂ' ಎಂದ, ನಮ್ಮ ಆದಿಕವಿ ಪಂಪ. ಆ ವಿಶ್ವನರಸೌಭ್ರಾತ್ರ, ಭೇದಾತೀತದೌದಾರ್ಯ ನಮ್ಮ ಹೃದಯದ ಗುಣವಾಗಬೇಕಾದರೆ, ಭಾರತದಿಂದ ಅದು ಮೊದಲಾಗಬೇಕು, ಅದಕ್ಕೂ ಮೊದಲು ಕರ್ಣಾಟಕದಿಂದ ಆರಂಭವಾಗಬೇಕು. ಅಪ್ಪನ್ನ ಅಪ್ಪ ಎನ್ನದವನು ಚಿಕ್ಕಪ್ಪನ್ನ ಅಪ್ಪ ಎನ್ನಲಾರ.

'ಸಾಮುದ್ರೋಹಿ ತರಂಗಃ, ಕ್ವಚ ನ ಸಮುದ್ರೋ ನ ತಾರಂಗಃ' ಎಂದರು, ಆಚಾರ್ಯರಾದ ಶ್ರೀಶಂಕರರು. ಅಲೆಗಳು ಸಮುದ್ರಕ್ಕೆ ಸೇರಿದುವೇ ಹೊರತು, ಸಮುದ್ರವು ಎಂದಿಗೂ ಅಲೆಗಳಿಗೆ ಸೇರಿದ್ದಾಗದು. ವಿಶ್ವ ಒಂದು ಸಮುದ್ರ, ಭಾರತ ಅದರ ಒಂದು ಅಲೆ; ಭಾರತ ಒಂದು ಏಕೈಕವಾದ ಸಮುದ್ರ, ಭಾರತದ ವಿವಿಧ ಭಾಷಾಪ್ರಾಂತ್ಯಗಳು ಆ ಸಮುದ್ರದ ಬೇರೆ ಬೇರೆ ಅಲೆಗಳು; ಮನುಷ್ಯನ ಜೀವನ ಒಂದು ಸಮುದ್ರ, ಆ ಜೀವನದಿಂದ ಮೂಡಿಬರುವ ಕಲೆಗಳೇ ಅದರ ಬೇರೆ ಬೇರೆ ಅಲೆಗಳು. 'ಕಲೆಗಳಲಿ ಪರಮಕಲೆ ಜೀವನದ ಲಲಿತಕಲೆ'. ಅಲೆಗಳೆಲ್ಲ ಇರುವುದು ಸಮುದ್ರವನ್ನು ತುಂಬಿ ಉಕ್ಕಿಸುವುದಕ್ಕಾಗಿ, ತಾವು ಎದ್ದು ಮೆರೆದು ಬಿದ್ದುಹೋಗು ವದಕ್ಕಲ್ಲ.

ಭಾರತದ ಭಾಷೆಗಳಲ್ಲಿ ಒಂದಾದ ಹಿಂದಿಯನ್ನು ದೇಶದ ಮೈಗೆಲ್ಲ ಬಳಿದು ಬಿಟ್ಟರೆ ದೇಶ ಒಂದಾಗುತ್ತದೆ ಎನ್ನುವುದು ಬರಿಯ ಭ್ರಮೆ. ಭಾರತದ ಐಕ್ಯವನ್ನು ಸಾಧಿಸುವುದಕ್ಕೆ ಇದಕ್ಕಿಂತ ಗಟ್ಟಿಯಾದ, ಸುಲಭವಾದ, ರಮ್ಯವಾದ, ಏನೇನೂ ಹಣದ ಖರ್ಚಿಲ್ಲದೆ ಎಲ್ಲರಿಗೂ ಒಪ್ಪಿಗೆಯಾಗುವಂತಹ ಮಾರ್ಗವೊಂದಿದೆ. ಅದು ಯಾವು ದೆಂದರೆ –ನಮ್ಮ ರಾಷ್ಟ್ರಧ್ವಜದ, ನಮ್ಮ ರಾಷ್ಟ್ರಗೀತೆಯ, ನಮ್ಮ ರಾಷ್ಟ್ರಮುದ್ರಿಕೆಯ ಅರ್ಥಗೌರವವನ್ನು ದೇಶದ ಎಲ್ಲಾ ಪ್ರಾಂತಗಳವರಿಗೂ ಅವರವರ ಭಾಷೆಯಲ್ಲಿ ಮನದಟ್ಟು ಮಾಡಿಕೊಡುವುದು. ಇದೊಂದನ್ನು ನಮ್ಮ ಶಾಲಾಬಾಲಕರ ಮಟ್ಟದಿಂದ ಸಕಲ ಸಾರ್ವಜನಿಕರ ವರೆಗೂ ತಂದು ಮುಟ್ಟಿಸಿದರೆ, ನಮ್ಮ ದೇಶದ ಪುರಾಣ, ಚರಿತ್ರೆ, ಸಂಸ್ಕೃತಿ, ನಂಬಿಕೆ, ಗೊತ್ತು, ಗುರಿ ಇವುಗಳ ಅರಿವು ಉಂಟಾಗುತ್ತದೆ. ನಾವು ಆಡುವ ಭಾಷೆ ಬೇರೆಬೇರೆಯಾದರೂ, ನಮ್ಮ ಬಟ್ಟೆಬರೆ ಆಚಾರ ವ್ಯವಹಾರ ಬೇರೆಯಾದರೂ ನಮ್ಮ ಅಂತರಂಗ ಒಂದೇ ಎಂಬ ಪ್ರಬೋಧಚಂದ್ರೋದಯ ವಾಗುತ್ತದೆ. ಅದರ ಸಂಗಡವೇ 'ನಾವು ಇರುವುದು ನಮ್ಮ ದೇಶಕ್ಕೋಸ್ಕರ' ಎಂಬ ಸಂಕಲ್ಪ ಸೂರ್ಯೋದಯವಾಗುತ್ತದೆ. ಸೂರ್ಯೋದಯದಿಂದ ಸಕಲ ಜೀವೋತ್ಕರ್ಷ.

ಉದಾಹರಣೆಗೆ– ನಮ್ಮ ರಾಷ್ಟ್ರಗೀತೆಯ ಮೊದಲನೇ ಚರಣವನ್ನು ಮಾತ್ರ ಮಕ್ಕಳ ಬಾಯಿಂದ ಹೇಳಿಸಿ, ಅಲ್ಲಿಗೆ ಬಿಡುತ್ತೇವೆ. ಅದರ ಜೊತೆಗೆ ಮುಂದಿನ ನಾಲ್ಕು ಚರಣಗಳನ್ನೂ ಹೇಳಿಕೊಟ್ಟು ನೋಡಿ. ಅದರ ಅರ್ಥವನ್ನು ವಿವರಿಸಿ ನೋಡಿ. ಮಕ್ಕಳ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದು ಅನುಭವವಾಗುತ್ತದೆ.

'ಸಮುದ್ರಕ್ಕೆ ನಂಟು, ಉಪ್ಪಿಗೆ ಬಡತನ' ಎನ್ನುವುದುಂಟು. ಭಾರತದ ಏಕತೆಗೆ ಅನುಕೂಲವಾಗುವ ಮೂರು ಮಹಾ ರಾಷ್ಟ್ರಲಾಂಛನಗಳನ್ನು ಹೊಂದಿಯೂ ಯಾವುದೋ ಬಿಸಿಲುಗುದುರೆಯ ಬೆನ್ನುಹತ್ತಿ ಬೇಟೆಯಾಡಲು ಹೊರಟಿದ್ದೇವಲ್ಲಾ! ಇದು ಏಕೆ?

ಹಿಂದಿಯ ಅಗತ್ಯವನ್ನು ಕುರಿತು

ಐದು ದಶಕಗಳ ಹಿಂದೆ, ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾಗ, ಹಿಂದಿಯನ್ನು ಕಲಿಯುವುದು ನಮ್ಮ ದೇಶಭಕ್ತಿಯ ಒಂದು ಅಂಗ ಎಂಬ ಶ್ರದ್ಧೆಯಿಂದ ನಾವೂ ಕಲಿತೆವು. ಹಿಂದಿಯಿಂದ ನಮಗೆ ಅಂಥ ಲಾಭವಾದ ಹಾಗೆ ಕಂಡು ಬರುವುದಿಲ್ಲವಾದರೂ, ಬೇರೆ ಇತರ ಕಾರಣಗಳಿಂದ ದೇಶ ಸ್ವತಂತ್ರವಾಯಿತು. ಆ ಸ್ವಾತಂತ್ರ್ಯದ ಆಶ್ರಯದಲ್ಲಿ ನಾವು ನಮ್ಮ ಕನ್ನಡವನ್ನು ಬೆಳಸಿಕೊಳ್ಳಲು ಹೆಣಗಾಡುತ್ತಿದ್ದೇವೆ. ಹಿಂದಿನಿಂದ ನಮ್ಮ ಮೇಲೆ ಹೇರಿಕೊಂಡ ಇಂಗ್ಲಿಷ್, ಈಗ ಅದರ ಬದಲಾಗಿ ಹೇರಿಕೊಳ್ಳಲು ಹವಣಿಸುತ್ತಿರುವ ಹಿಂದಿ – ಈ ಎರಡು ಭಾರಗಳ ಮಧ್ಯೆ ನಮ್ಮ ಕನ್ನಡವನ್ನು ನಮಗೆ ಬೇಕಾದ ಹಾಗೆ ಬೆಳಸಿ ಬಳಸಿಕೊಳ್ಳುವುದು ಕಷ್ಟವಾಗಿದೆ, ನಿಧಾನವಾಗಿದೆ. ಹಿಂದಿನ ತಲೆಮಾರಿಗೆ ಸೇರಿದ ನಾವು ಕೆಲವರು ನಮ್ಮ ಕನ್ನಡದ ಜೊತೆಗೆ ಸಂಸ್ಕೃತವನ್ನೂ ಇಂಗ್ಲಿಷನ್ನೂ ಅಷ್ಟೋ ಇಷ್ಟೋ ಹಿಂದಿಯನ್ನೂ ರೂಢಿಸಿಕೊಂಡು, ಬಹುಭಾಷಾಜ್ಞಾನದಿಂದ ಆಗುವ ಲಾಭವನ್ನು ಕಂಡುಕೊಂಡಿದ್ದೇವೆ. ಇದಕ್ಕೆ ಎಷ್ಟು ಪಾಡುಪಡಬೇಕಾಯಿತೆಂಬುದು ನಮಗೆ ಗೊತ್ತು. ಆದರೆ ಇದು ಎಲ್ಲರಿಗೂ ಸಾಧ್ಯವೆ? ಅಥವಾ ಎಲ್ಲರಿಗೂ ಅಗತ್ಯವೆ? ಸುಮಾರು ನಲವತ್ತೈದು ವರ್ಷಗಳಿಗೆ ಮೇಲ್ಪಟ್ಟು ನಾನು ನಮ್ಮ ವಿದ್ಯಾರ್ಥಿಗಳೊಡನೆ ಜನಸಾಮಾನ್ಯರೊಡನೆ ಸಂಪರ್ಕ ವಿರಿಸಿಕೊಂಡಿದ್ದೇನೆ. ಅವರ ಮನಸ್ಸು ಬುದ್ಧಿ ಹೃದಯಗಳನ್ನು ಮುಟ್ಟಲು ಕನ್ನಡಕ್ಕಿರುವ ಶಕ್ತಿ ಬೇರೆ ಯಾವ ಭಾಷೆಗೂ ಇಲ್ಲ ಎಂಬುದು ಹೇಗೆ ನಿಜವೋ ಇತರ ಭಾಷೆಗಳ ಬಗೆಗೂ ಈ ಮಾತು ನಿಜ. ಎಂದಮೇಲೆ 'ಭಾರತಕ್ಕೆಲ್ಲ ಒಂದೇ ರಾಷ್ಟ್ರಭಾಷೆ, ಅದು ಹಿಂದಿ' ಎಂಬ ಬಿಸಿಲುಕುದುರೆಯನ್ನು ಬೆನ್ನಟ್ಟಿ ಹೋದರೆ ಅದರಿಂದ ಯಾರ ಬಾಯಾರಿಕೆಯೂ ಆರುವುದಿಲ್ಲ. ಈಗ ತ್ರಿಶಂಕುವಿನಂತೆ ತೇಲಾಡುತ್ತಿರುವ ನಮ್ಮ ತ್ರಿಭಾಷಾಸೂತ್ರದ ಪರಿಣಾಮವಾಗಿ, ನಮ್ಮ ವಿದ್ಯಾರ್ಥಿಗಳಿಗೆ ಹಿಂದಿ ಬರಲಿಲ್ಲ, ಇಂಗ್ಲಿಷ್ ಹೋಯಿತು, ಕನ್ನಡ ಕುಂಟಾಯಿತು. ಇದು ಹೀಗೇ ಮುಂದುವರಿದರೆ, ಕನ್ನಡದ ಗತಿಯೇನು? ಕನ್ನಡವು ಮೂಕವಾದರೆ ಅದರಿಂದ ಭಾರತಕ್ಕೆ ಊನ. ಹಾಗಾಗದಂತೆ, ಕನ್ನಡಕ್ಕೂ ಭಾರತಕ್ಕೂ ಲಾಭವಾಗುವಂತೆ ನಾವು ಅನುಸರಿಸಬೇಕಾದ ನಯ ಒಂದೇ. ಅದು ಏನೆಂದರೆ –ಕರ್ಣಾಟಕದ ಜನಜೀವನದಲ್ಲಿ ಕೆಳಗಿನಿಂದ ಹಿಡಿದು ಮೇಲಿನವರೆಗೂ ಎಲ್ಲಾ ಕ್ಷೇತ್ರಗಳಲ್ಲಿಯೂ ಕನ್ನಡವನ್ನು ಮಾಧ್ಯಮವನ್ನಾಗಿ ಮಾಡಬೇಕು. ಅತ್ಯಂತ ಅಗತ್ಯವಾದ ಈ ಕಾರ್ಯ ಈಡೇರುವವರೆಗೂ ಇತರ ಭಾಷೆಗಳು ಯಾವುವೂ ಅದಕ್ಕೆ ಅಡ್ಡಿಯಾಗಬಾರದು. ಜೊತೆಗೆ ಇದ್ದರೆ ಏನೂ ಚಿಂತೆಯಿಲ್ಲ. ಆದರೆ ಮಾತ್ರ, ನಮ್ಮ ಕೈಕಾಲುಗಳಿಗೆ ಅವು ತೊಡರಾಗಬಾರದು. ಇನ್ನೂ ನಮ್ಮಲ್ಲಿ ಅಷ್ಟು ಬೇರುಬಿಡದ ಹಿಂದಿಯನ್ನು ಮತ್ತೆ ಮತ್ತೆ ಒತ್ತಾಯಪಡಿಸುವುದು ನಿಲ್ಲಲಿ. ಈಗಾಗಲೇ ನಮಗೆ ಮೆಯ್ಗೂಡಿರುವ ಇಂಗ್ಲಿಷನ್ನು ನಾವು ಕಳಕೊಳ್ಳುವುದು ಬೇಡ. ನಾವು ಕೆಲವರು ಯಾವ ಯಾವ ಭಾಷೆಗಳನ್ನು ಕಲಿತರೂ, ಅಲ್ಲಲ್ಲಿ ಕಲಿತದ್ದನ್ನು ನಮ್ಮ ಜನರಿಗೆ ಅವರಿಗೆ ಸುಲಭವಾಗಿ ಅರ್ಥವಾಗುವ ಕನ್ನಡದಲ್ಲಿ ತಿಳಿಸೋಣ. ಎಲ್ಲರೂ ಎಲ್ಲ

ಭಾಷೆಗಳನ್ನೂ ಕಲಿಯಬೇಕಾದ್ದಿಲ್ಲ. ಆದರೆ ಕರ್ಣಾಟಕದಲ್ಲಿ ಎಲ್ಲರಿಗೂ ಕನ್ನಡ ಬೇಕೇ ಬೇಕು. ಒಟ್ಟಿನಲ್ಲಿ ನನಗೆ ಹೀಗೆನಿಸುತ್ತದೆ:

೧. ಕರ್ಣಾಟಕದಲ್ಲಿ ಇರುವವರೆಲ್ಲರಿಗೂ ಕನ್ನಡದಲ್ಲಿ ಓದುವುದೂ ಬರೆಯುವುದೂ ಮಾತನಾಡುವುದೂ ಚೆನ್ನಾಗಿ ಬರಬೇಕು. ಇದು ಅತ್ಯಂತ ಅಗತ್ಯ.

೨. ಕನ್ನಡಕ್ಕೂ ಸಂಸ್ಕೃತಕ್ಕೂ ಇರುವ ನಿಕಟ ಬಾಂಧವ್ಯ ಕಾರಣವಾಗಿ, ಕನ್ನಡಿಗರಿಗೆ ಸಂಸ್ಕೃತ ಸ್ವಲ್ಪಮಟ್ಟಿಗಾದರೂ ಬಂದರೆ, ಅದರಿಂದ ಅವರ ಕನ್ನಡ ಕುದುರುತ್ತದೆ, ಬಲವಾಗುತ್ತದೆ.

೩. ಮೂರನೆಯದಾಗಿ, ಕನ್ನಡದಿಂದ ಹೊರಗಿನ ಜಗತ್ತನ್ನು ತಿಳಿಯಬೇಕೆನ್ನುವವರು, ಇಂದಿನ ಕಾಲ ದೇಶ ವರ್ತಮಾನಗಳನ್ನು ಗಮನಿಸಿದರೆ, ಇಂಗ್ಲಿಷನ್ನು ತಿಳಿದಿರುವುದು ವಾಸಿ.

೪. ಇದಾದ ಮೇಲೆ, ಭಾರತದ ಉತ್ತರ ಭಾಗಗಳವರೊಡನೆ ವ್ಯವಹಾರವಿರಿಸಿಕೊಳ್ಳಬೇಕಾದ ಅಗತ್ಯವಿರುವವರು ವ್ಯವಹಾರಕ್ಕೆ ಎಷ್ಟು ಬೇಕೋ ಅಷ್ಟು ಹಿಂದಿ ಕಲಿತರೆ ಸಾಕು.

ಬೇರೆ ಯಾವ ಭಾಷೆಗೂ ಹಾಕದಿರುವ ಮಣೆಯನ್ನು ಭಾರತದ ಉದ್ದಗಲಕ್ಕೂ ಹಿಂದಿಯೊಂದಕ್ಕೇ ಹಾಕಬೇಕೆಂಬ ವಾದ ನನಗೆ ಒಪ್ಪಿಗೆಯಾಗದು.

ನಮಗೆ ಶಬ್ದಾನುಶಾಸನವನ್ನು ಕೊಟ್ಟ ಭಟ್ಟಾಕಳಂಕ ಸ್ವಾಮಿ ಹೇಳಿರುವ ಹಾಗೆ– 'ಸರ್ವಭಾಷಾಮಯೀಭಾಷಾ' ಎಂಬ ಏಕೈಕವಾದ ಭಗವದ್ವಾಣಿಯ ಅನೇಕವಾದ ರೂಪಗಳೇ ನಮ್ಮ ಜಗತ್ತಿನ ವಿವಿಧ ಭಾಷೆಗಳು. ಇವುಗಳಲ್ಲಿ ಪ್ರತಿಯೊಂದಕ್ಕೂ ಅದರದರ ಸ್ಥಾನ ಉಂಟು, ಅದರದರ ಗೌರವವುಂಟು. ಇವುಗಳಲ್ಲಿ ಯಾವುದೂ ಒಂದಕ್ಕಿಂತ ಒಂದು ಸಣ್ಣದಲ್ಲ, ಒಂದಕ್ಕಿಂತ ಒಂದು ದೊಡ್ಡದಲ್ಲ. ಕೈಲಾಸಂ ಹೇಳುತ್ತಿದ್ದ ಹಾಗೆ– 'ಮರ್ಯಾದೆ ಕೊಟ್ಟು ಮರ್ಯಾದೆ ತೆಕ್ಕೊಳ್ಳೋದು ಮಹನೀಯರ ಮರ್ಮ.' ಮನೆಯ ಕನ್ನಡ ಮೊದಲು ಬೆಳೆಯಲಿ; ಅನಂತರ ಇತರ ಮನೆಯ ಮಕ್ಕಳನ್ನು ತಂದು ಸಾಕಿ ಬೆಳಸೋಣ.

ಏನಾದರೂ ಮಾಡಿ, ಭಾರತಕ್ಕೆಲ್ಲ ಹಿಂದಿಯನ್ನು ಏಕೈಕ ರಾಷ್ಟ್ರಭಾಷೆಯನ್ನಾಗಿ ಮಾಡಬೇಕೆಂದು ದುಡುಕುವವರು, ಭಾರವಿಯ ಕಿರಾತಾರ್ಜುನೀಯದಲ್ಲಿ ಧರ್ಮರಾಯನು ಭೀಮನಿಗೆ ಹೇಳಿರುವ ಬುದ್ಧಿಯ ಮಾತುಗಳನ್ನು ಗಮನಿಸುವುದು ಒಳ್ಳೆಯದು:

ಸಹಸಾ ವಿದಧೀತ ನ ಕ್ರಿಯಾಂ
ಅವಿವೇಕಃ ಪರಮಾಪದಾಂ ಪದಂ
ವೃಣತೇ ಹಿ ವಿಮೃಶ್ಯಕಾರಿಣಂ
ಗುಣಲುಬ್ಧಾಃ ಸ್ವಯಮೇವ ಸಂಪದಃ

ದುಡುಕಿ ಯಾವ ಕೆಲಸವನ್ನೂ ಮಾಡಬಾರದು. ವಿವೇಕವಿಲ್ಲದೆ ಹಾಗೆ ಮಾಡಿದರೆ, ಅದರಿಂದ ದೊಡ್ಡ ಅಪತ್ತು ಆಗುತ್ತದೆ. ವಿಮರ್ಶೆಯಿಂದ ಕೆಲಸ ಮಾಡುವವನನ್ನು

ಅವನ ಗುಣಗಳಿಗಾಗಿ ಆಸೆಪಟ್ಟು ಸಂಪತ್ತುಗಳು ತಾವಾಗಿಯೇ ಬಂದು ವರಿಸುತ್ತವೆ. ಆದ್ದರಿಂದ, ತಾಳಿದವನು ಬಾಳಿಯಾನು.

ಭಾರತೀಯ ಸೆಕ್ಯುಲರಿಸಂ

ನಮ್ಮ ಭಾರತವನ್ನು ಸೆಕ್ಯುಲರ್ ರಾಷ್ಟ್ರವೆಂದು ಕರೆದಿದ್ದಾರೆ. ಪರರ ಭಾವನಾ ಪ್ರಪಂಚಕ್ಕೆ ಸೇರಿದ ಈ ಪರದೇಶೀ ಪದಕ್ಕೆ ನಮ್ಮಲ್ಲಿ ಏನೇನೋ ತಪ್ಪು ಅರ್ಥ ಮಾಡಿಕೊಂಡಿದ್ದಾರೆ. ಅನೇಕರು ತಿಳಿದುಕೊಂಡಿರುವ ಹಾಗೆ ಯಾವ ಮತಕ್ಕೂ ಮನ್ನಣೆ ಕೊಡದೆ ಎಲ್ಲ ಮತಗಳಲ್ಲೂ ತಟಸ್ಥಭಾವದಿಂದಿರುವುದು ಸೆಕ್ಯುಲರ್ ಆದರೆ, ಅದಕ್ಕೂ ನಮಗೂ ಏನೂ ಸಂಬಂಧವಿಲ್ಲ. ಹಾಗಲ್ಲದೆ, ಸ್ವಂತಮತವನ್ನು ಆಳವಾಗಿ ತಿಳಿದು, ಪರಮತಗಳನ್ನು ಆದರದಿಂದ ಕಂಡು, ಎಲ್ಲ ಮತಗಳನ್ನೂ ಸಮರಸತೆಯಿಂದ ತನ್ನದನ್ನಾಗಿ ಮಾಡಿಕೊಳ್ಳುವುದು –ಇದು ಭಾರತೀಯ ಸೆಕ್ಯುಲಾರಿಸಂನ ಲಕ್ಷಣ.

ಇದು ನಮ್ಮ ದೇಶದಲ್ಲಿ ಹಿಂದೆ ಹೇಗಿತ್ತು ಎಂಬುದಕ್ಕೆ ನಿದರ್ಶನವಾಗಿ ದೇವಾನಾಂ ಪ್ರಿಯ ಪ್ರಿಯದರ್ಶಿ ರಾಜನ ಹನ್ನೆರಡನೇ ಶಿಲಾಶಾಸನವನ್ನು ನೋಡಬಹುದು. ಅಲ್ಲಿ ಅಶೋಕನು ತನ್ನ ಪ್ರಜೆಗಳಿಗೆ ಹಿತವಾಗಬೇಕೆಂದು 'ಸರ್ವಮತಗಳ ಸಾರವೃದ್ಧಿ'ಯ ಅಗತ್ಯವನ್ನು ಪ್ರಸ್ತಾಪಿಸುತ್ತಾನೆ; 'ಸಮವಾಯವೇ ಸಾಧು' ಎಂದು ಅದನ್ನು ಪ್ರಶಂಸಿಸುತ್ತಾನೆ; ಸಮವಾಯವನ್ನು ಸಾಧಿಸಲು ಬೇಕಾಗಿರುವ ಮೂಲಗುಣ 'ವಚನಗುಪ್ತಿ' ಎನ್ನುತ್ತಾನೆ; ವಚನಗುಪ್ತಿಯ ಲಕ್ಷಣಗಳನ್ನು ವಿವರಿಸುತ್ತಾ ವಿವಿಧ ಮತಗಳ ಮೈತ್ರಿಯನ್ನು ಹೇಗೆ ಸಾಧಿಸಬಹುದು ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ಅಶೋಕನ ಈ ಧರ್ಮಲಿಪಿಯು ಇಂದಿಗೂ ನಮಗೆ ದಾರಿದೀಪವಾಗಿ ಬೆಳಗುತ್ತಿದೆ. ನಾವು ಕಣ್ಣು ತೆರೆದು ನಡೆಯಬೇಕಷ್ಟೆ. ದಾರಿ ಸಿದ್ಧವಾಗಿದೆ, ದೀಪ ಸಿದ್ಧವಾಗಿದೆ.

ಇಂಥ ಧರ್ಮಪರಾಯಣನಾದ ಅಶೋಕನ ಪ್ರಭಾವಕ್ಕೆ ನಮ್ಮ ಕರ್ಣಾಟಕವು ಸಾವಿರಾರು ವರ್ಷಗಳಿಗೆ ಹಿಂದೆಯೇ ಒಳಗಾಗಿತ್ತು. ನಮ್ಮ ಕರ್ಣಾಟಕ ಮಾತೆಯು ಶ್ರೀ ಕುವೆಂಪು ಹಾಡಿರುವ ಹಾಗೆ 'ಭಾರತಜನನಿಯ ತನುಜಾತೆ'. ತಾಯಿಯಂತೆ ಮಗಳು ಎಂದು ಗಾದೆ. ನಮ್ಮ ಬೇಲೂರಿನ ಶಾಸನದಲ್ಲಿ ಪ್ರಸಿದ್ಧವಾಗಿರುವ–

ಯಂ ಶೈವಾಃ ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಽಯಂ ವೋ ವಿದಧಾತು ವಾಂಛಿತಫಲಂ ತ್ರೈಲೋಕ್ಯನಾಥೋ ವಿಭುಃ ॥

ಎಂಬ ಪದ್ಯವೂ, ಕೈದಾಳದ ಶಾಸನದಲ್ಲಿರುವ–

ಶಿವಾಯ ಧಾತ್ರೇ ಸುಗತಾಯ ವಿಷ್ಣವೇ
ಜಿನಾಯ ತಸ್ಮೈ ಸಕಲಾತ್ಮನೇ ನಮಃ

ಎಂಬ ಶ್ಲೋಕವೂ, ನಮ್ಮ ಮುಪ್ಪಿನ ಷಡಕ್ಷರಿ ಸ್ವಾಮಿಗಳ 'ಸಕಲಕೆಲ್ಲಕೆ ನೀನೆ' ಎಂಬ ಹಾಡೂ ನಮ್ಮ ಭಾರತದ, ಕರ್ಣಾಟಕದ ಸೆಕ್ಯುಲಾರಿಸಂಗೆ ಸ್ಪಷ್ಟವಾದ ಸಾಕ್ಷಿಗಳು.

ಸತ್ಯಂ ಸಾಸಿರಮಾರ್ಗಗಮ್ಯಮ್ ಅದರಿಂ ನಾನಾ ಮತೋಪಾಸ್ತಿಸಂ-
ಸ್ಕೃತ್ಯಾಚಾರಗಳಂ ಪರಸ್ಪರ ಸುಹೃದ್ವರ್ಗಂಬೊಲ್ ಎಂದೊಲ್ದೆ ನೀಂ
ಪ್ರೀತ್ಯರ್ಹಂ ಛವಿ ರೂಪ ಗಂಧ ವಿವಿಧಂ ಸ್ರಗ್ಗುಂಫದೊಳ್ ತದ್ವದಾ-
ಚಿತ್ಯಂ ನಿನ್ನ ಕುಲೌಘದೊಳ್ ಮುಕುಟರತ್ನಾನೈಕ್ಯಮೈಕ್ಯಾಂಗಕಂ ॥

ಎಂದಿದ್ದಾರೆ ಡಿ.ವಿ.ಜಿ. ಸತ್ಯವನ್ನು ಹೋಗಿ ಸೇರುವುದಕ್ಕೆ ಸಾವಿರ ದಾರಿಗಳು. ಅದರಿಂದಲೇ ಸಾವಿರಾರು ಮತಗಳು, ಸಂಸ್ಕೃತಿಗಳು, ಆಚಾರಗಳು. ಹೂವುಗಳ ರಾಶಿಯಲ್ಲಿ ತಮ್ಮ ವರ್ಣರೂಪಗಂಧಗಳಿಂದ ಅವು ವಿವಿಧವಾಗಿದ್ದರೂ ಸ್ನೇಹದಿಂದ ಹೊಂದಿಕೊಂಡು ಒಂದು ಮಾಲೆಯಾಗುವ ಹಾಗೆ ಭಾರತದಲ್ಲಿರುವ ವಿವಿಧ ಕುಲಗಳ ಸಮೂಹದಲ್ಲಿ ಮೇಲುನೋಟಕ್ಕೆ ಅನೈಕ್ಯ ತೋರಿಬಂದರೂ ಅಂತರಂಗದಲ್ಲಿ ಒಂದು ಏಕತೆಯಿರುವುದು ಉಚಿತವಾಗಿದೆ.

ನಮ್ಮ ರಾಷ್ಟ್ರಗೀತೆಯಾದ 'ಜನಗಣಮನ'ದೊಳಗಿನ ಎರಡನೇ ಚರಣದಲ್ಲಿ– 'ಹಿಂದು ಬೌದ್ಧ ಸಿಕ್ಖ ಪಾರಸಿಕ ಮುಸಲ್ಮಾನ ಕ್ರಿಸ್ತಾನೀ' ಆದ ಭಾರತೀಯರೆಲ್ಲರೂ ಇಲ್ಲಿ 'ಪ್ರೇಮಹಾರ'ವಾಗಿ ಇದ್ದಾರೆ ಎಂಬ ಕೊಂಡಾಟವಿದೆ. ಇಲ್ಲಿ 'ಭಾರತಭಾಗ್ಯ ವಿಧಾತ'ನನ್ನು 'ಜನಗಣ ಐಕ್ಯವಿಧಾಯಕ' ಎಂದು ಕರೆದಿದ್ದಾರೆ. ಇದು ನಾವು ಗಮನಿಸಲು ಅರ್ಹವಾದ ಪ್ರಯೋಗ. ಡಿವಿಜಿ ಅವರ ಮಾತಿನಲ್ಲಿ ಹೇಳುವುದಾದರೆ–

ಶ್ರೀರಾಮಾಂಘ್ರಿಸರೋಜಸಂಸ್ಪರ್ಶದಿಂದೆ
ಒಂದಾದುದೀ ಭಾರತಂ!
ಕಾರುಣ್ಯಾಪಗೆಯಿಂದಶೋಕಜನಪಂ ಕೆತ್ತಿರ್ದ ನೂರ್ಕಾಲ್ವೆಯಿಂ
ಒಂದಾದುದೀ ಭಾರತಂ!

ಆರುಂ ದಾರಿಯುಂ ಒಂದೆ ದೈವದೆಡೆಗೆ ಎಂದ
ಆಚಾರ್ಯನಾ ಯಾತ್ರೆಯಿಂದೊಂದಾದುದೀ ಭಾರತಂ!

ಮುಂದೆಯೂ ಭಾರತ ಒಂದಾಗಿ ಉಳಿಯಬೇಕಾದರೆ, ಅದಕ್ಕೆ ಈ ದಾರಿ ಹೊರತು ಬೇರೆಯಿಲ್ಲ.

ಕರ್ನಾಟಕ ಏಕೀಕರಣದ ಅವಶೇಷ

ಮೂವತ್ತು ವರ್ಷಗಳ ಹಿಂದೆ ಭಾರತ ಸ್ವತಂತ್ರವಾಯಿತು. ಸಂತೋಷ. ಆ ಸ್ವಾತಂತ್ರ್ಯವು ಸಾರ್ಥಕವಾದ ಹಾಗೆ, ಅದರ ತರುವಾಯ ಕರ್ನಾಟಕದ ಏಕೀಕರಣವೂ ಆಯಿತು. ಆದರೆ, ಇದರಿಂದಾಗಬೇಕಾದ ಸಂತೋಷದಲ್ಲಿ ಕೊಂಚ ಅರಕೆಯಾಗಿ ಹಾಗೇ ನಿಂತುಹೋಯಿತೆಂಬುದು ನಮ್ಮ ವಿಷಾದ. ಭವ್ಯವಾದ ಗಣಪತಿಯ ವಿಗ್ರಹವನ್ನು ಮಾಡಿ, ಅದರ ಜೊತೆಗೆ ಇರಬೇಕಾದ ಇಲಿಗೆ ಮೀಸೆಯೋ ಬಾಲವೋ ಮುಕ್ಕಾಗಿ ಹೋದರೆ ಹೇಗಾಗುತ್ತದೋ ಹಾಗಾಗಿದೆ ನಮ್ಮ ಏಕೀಕರಣ. ಬೆಳಗಾವಿಯ ಸಂಬಂಧವಾಗಿ ಸರಕಾರವು ಮಹಾಜನ ಆಯೋಗವನ್ನು ನೇಮಿಸಿ, ಅದರ ತೀರ್ಪಿಗೆ ನಾವು ಬದ್ಧರಾಗಿದ್ದೇವೆ ಎಂಬುದು ತಿಳಿದಿದ್ದರೂ ಆ ವಿಷಯ ಇನ್ನೂ ಇತ್ಯರ್ಥವಾಗದೆ

ತಾಟಸ್ಥ್ಯದ ತೊಟ್ಟಿಲಲ್ಲಿ ನಿಶ್ಚೇಷ್ಟಿತವಾಗಿ ಬಿದ್ದಿರುವುದು ತೀರ ಅನ್ಯಾಯವೆಂದು ಯಾರಿಗಾದರೂ ಕಾಣುತ್ತದೆ. ಇದಕ್ಕಿಂತ ಹೆಚ್ಚಿನ ಅನ್ಯಾಯವೆಂದರೆ -ಕನ್ನಡದ ಕಾಸರಗೋಡನ್ನು ಕೇರಳಕ್ಕೆ ಕೊಟ್ಟುಬಿಟ್ಟದ್ದು. ದಕ್ಷಿಣ ಕನ್ನಡದ ವಿಶಿಷ್ಟ ಕಲೆಯಾದ ಯಕ್ಷಗಾನದ ಮಾರ್ಗಕರ್ತರಲ್ಲಿ ಮುಖ್ಯನಾದ ಪಾರ್ತಿಸುಬ್ಬನ ನಾಡು ಕೇರಳ ಹೇಗಾದೀತು? ಕನ್ನಡದ ಸುಪ್ರಸಿದ್ಧ ಕವಿಗಳೂ ಸಂಶೋಧಕರೂ ಆಗಿದ್ದ ರಾಷ್ಟ್ರಕವಿ ಮಂಜೇಶ್ವರದ ಗೋವಿಂದ ಪೈ ಅವರ ಲೀಲಾಭೂಮಿಯಾಗಿದ್ದ ನಾಡು ಕೇರಳಕ್ಕೆ ಹೇಗೆ ಹೊಂದೀತು? ಹೇಗೆ ಸಂದೀತು? ಈ ಅನ್ಯಾಯದ ಪ್ರಕರಣವನ್ನು ನೆನೆದಾಗಲೆಲ್ಲ ನನಗೆ ಪಂಪಭಾರತದ ಪದ್ಯ ಜ್ಞಾಪಕವಾಗುತ್ತದೆ:

ಕುಡವೇಟ್ಟನ ಕುಡುವನ ಕುಡೆ
ಪಡೆವನ ಪೆಂಪೇಂ ನೆಗೞ್ತೆವಡೆಗುಮೊ ಪೇೞ್ವಿಂ
ಕುಡವೇೞ್ಗೆಮ ಕುಡುವಣ್ಣಂ
ಕುಡುಗೆಮ ಕುಡೆ ಕೊಳ್ವ ಕಲಿಯನಱಿಯಲ್ಕಕ್ಕುಂ ॥

ಹೀಗೆ ತಾತ್ಕಾಲಿಕವಾಗಿ ನಮಗೆ ಅನ್ಯಾಯವಾಗಿದ್ದರೂ, ನಾವು ನಮ್ಮ ರಾಷ್ಟ್ರದ ಮುದ್ರಿಕೆಯಲ್ಲಿರುವ ಉಪನಿಷದ್ವಾಕ್ಯದಲ್ಲಿ ವಿಶ್ವಾಸವುಳ್ಳವರಾಗಿದ್ದೇವೆ. ಸತ್ಯಕ್ಕೆ ಎಂದಿಗೂ ಚ್ಯುತಿಯಿಲ್ಲ. ಬೆಳಗಾವಿ ಇಂದಿಗೂ ನಮ್ಮದೇ, ಎಂದಿಗೂ ನಮ್ಮದೇ. ಕಾಸರಗೋಡನ್ನು ಕೇರಳ ತಾನಾಗಿಯೇ ಬಿಟ್ಟುಕೊಡುತ್ತದೆ. ಕನ್ನಡದ ಕಾಸರಗೋಡು ಪುನಃ ಕನ್ನಡಕ್ಕೇ ಕೂಡುತ್ತದೆ. 'ಸತ್ಯಮೇವ ಜಯತೇ ನಾನೃತಂ!' (ಸತ್ಯಕ್ಕೆ ಜಯವೇ ಹೊರತು ಅನೃತಕ್ಕಲ್ಲ) ಎಂದು ಘೋಷಿಸುವುದರ ಜೊತೆಗೆ ನಮ್ಮ ಸರಕಾರದವರು 'ಸತ್ಯಮೇವೋದ್ಧರಾಮ್ಯಹಂ' (ನಾನು ಸತ್ಯವನ್ನೇ ಎತ್ತಿ ಹಿಡಿಯುತ್ತೇನೆ) ಎಂದು ಶುದ್ಧ ಮನಸ್ಸಿನಿಂದ ಸಂಕಲ್ಪ ಮಾಡಬೇಕು.

ಭರತವಾಕ್ಯ

ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ಹಾಗೆ ಇನ್ನೂ ಹಲವು ವಿಷಯಗಳನ್ನು ಕುರಿತು ಪರ್ಯಾಲೋಚಿಸಬೇಕಾದ್ದಿವೆಯಾದರೂ, ಅದನ್ನು ಇಲ್ಲಿ ದೆಹಲಿಯಲ್ಲಿ ಎತ್ತಿಕೊಳ್ಳು ವುದಕ್ಕಿಂತಲೂ ಕರ್ಣಾಟಕದಲ್ಲಿ ಅದರ ಬಗ್ಗೆ ಮಾತನಾಡಿ, ಅದರ ವರದಿ 'ಕನ್ನಡ ನುಡಿ'ಯಲ್ಲಿ ಪ್ರಕಟವಾದರೆ, ಅದು ಹೆಚ್ಚು ಸೂಕ್ತವಾಗುತ್ತದೆ. ಅವುಗಳಲ್ಲಿ ಅತ್ಯಂತ ಮಹತ್ವದ ವಿಷಯವೆಂದರೆ -ಕನ್ನಡದಲ್ಲಿ ಬಾಲಸಾಹಿತ್ಯವನ್ನು ನರಳಿಸುತ್ತಿರುವ ಬಾಲಗ್ರಹ. ಸದ್ಯಕ್ಕೆ ಇಷ್ಟು ಹೇಳಿ-

ಹತ್ತೊಂಬತ್ತನೆಯ ಹಾಗೂ ಇಪ್ಪತ್ತನೆಯ ಶತಮಾನಗಳ ಸಂಧಿಕಾಲದಲ್ಲಿ ಹೊಸ ಕನ್ನಡ ಸಾಹಿತ್ಯಕ್ಕೆ ನಾಂದಿಯನ್ನು ಹಾಡಿದ ಮುದ್ದಣ ಕವಿಯ ಒಂದು ಕಂದಪದ್ಯದಿಂದ ನನ್ನ ಅಧ್ಯಕ್ಷ ಭಾಷಣಕ್ಕೆ ಭರತವಾಕ್ಯ ಹೇಳಿ ಮುಗಿಸುತ್ತೇನೆ.

ಧರೆಯುೞಿಯೆ ಜೀವರಾಶಿಗೆ
ಪಿರಿಯಂ ನರನಾದಮಾದನಾತ್ಮಂ ತನ್ನೊಳ್

ದೊರೆಕೊಂಡಿರ್ಪಿನಮಂತದು
ಪರಿನಿರ್ಮಲಮಾಗೆ ಪೆರ್ಮೆಯಿರ್ಮೆಯ್ವುಡೆಗುಂ ॥

ಸೃಷ್ಟಿಯಲ್ಲಿರುವ ಪ್ರಾಣಿಗಳಲ್ಲೆಲ್ಲ ಮನುಷ್ಯನು ಶ್ರೇಷ್ಠನೆಂಬುದು ಲೋಕಕ್ಕೆ ಗೊತ್ತು. ಮನುಷ್ಯನ ಈ ಶ್ರೇಷ್ಠತೆಗೆ ಮುಖ್ಯ ಕಾರಣವೇನೆಂದರೆ -ಆತನು ಸಂಪೂರ್ಣವಾಗಿ ಆತ್ಮವಂತನಾಗಿರುವುದೇ. ಮಿಕ್ಕ ಪ್ರಾಣಿಗಳಲ್ಲಿಯೂ ಆತ್ಮ ಇರುವುದಾದರೂ, ಅದರ ಬಗ್ಗೆ ಇವನಿಗಿರುವ ಪರಿಜ್ಞಾನ ಅವುಗಳಿಗಿಲ್ಲ. ಯಥಾರ್ಥವು ಹೀಗಿರುವಾಗ, ಮನುಷ್ಯನು ತನ್ನ ಆತ್ಮವನ್ನು ಪರಿನಿರ್ಮಲವನ್ನಾಗಿ ಮಾಡಿಕೊಂಡರೆ, ಸೃಷ್ಟಿಯಲ್ಲಿ ಅವನು ಶ್ರೇಷ್ಠ ಎಂಬ ಅವನ ಹಿರಿಮೆ ಎರಡರಷ್ಟು ಅಧಿಕವಾಗುತ್ತದೆ. ಮೂವತ್ತು ವರ್ಷಗಳ ಹಿಂದೆ ನಮ್ಮ ದೇಶ ಸ್ವತಂತ್ರವಾದಾಗ ಶ್ರೀಮಾನ್ ಡಿವಿಜಿ ಅವರು ಹೇಳಿದ ಹಾಗೆ–

ಜನತಾರಾಜ್ಯಮಭೂತಪೂರ್ವಸುಕೃತಂ ತಾನಿಂದು ಸಂದಿರ್ಪುದೌ;
ಜನನೀ ನೀನದು ನಿಲ್ವವೊಲ್ ಕರುಣಿಸೌ ಚೈತನ್ಯನೈರ್ಮಲ್ಯಮಂ.
ಅದು ನಿಲ್ವವೊಲ್ ಕರುಣಿಸೌ ಚೈತನ್ಯನೈರ್ಮಲ್ಯಮಂ.

ಕನ್ನಡದ ಹಿತಚಿಂತನೆ*

ಶಿವಾಯ ಧಾತ್ರೇ ಸುಗತಾಯ ವಿಷ್ಣವೇ ।
ಜಿನಾಯ ತಸ್ಮೈ ಸಕಲಾತ್ಮನೇ ನಮಃ ॥

ಕಳೆದ ವರ್ಷ ದೆಹಲಿಯಲ್ಲಿ ನಡೆದ ಐವತ್ತನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಯಾವ ದೈವ ನನ್ನನ್ನು ಅಧ್ಯಕ್ಷನಾಗೆಂದು ಕಳಿಸಿತೋ ಅದೇ ದೈವ ನನ್ನನ್ನು ಈ ವರ್ಷ ಶ್ರೀಕ್ಷೇತ್ರ ಧರ್ಮಸ್ಥಳಕ್ಕೆ ಕರೆತಂದಿದೆ. ಧರ್ಮಸ್ಥಳಕ್ಕೆ ನಾನು ಹೊಸಬನಲ್ಲ. ೧೯೩೩ರಲ್ಲಿ ಶ್ರೀ ಕಾರಂತರು ಬೆಳ್ತಂಗಡಿಯಲ್ಲಿ ನಡೆಸಿದ ಮಕ್ಕಳ ಕೂಟಕ್ಕೆ ಬಂದ ಅಂದಿನಿಂದ ನನಗೂ ಧರ್ಮಸ್ಥಳಕ್ಕೂ ನಂಟು. ಶ್ರೀ ಮಂಜಯ್ಯ ಹೆಗ್ಗಡೆಯವರ ಕಾಲದಿಂದ ಇಂದಿನ ವರೆಗೂ ಇಲ್ಲಿ ನಡೆದಿರುವ ಸರ್ವಧರ್ಮ ಸಮ್ಮೇಳನಗಳಲ್ಲೂ ಸಾಹಿತ್ಯ ಸಮ್ಮೇಳನ ಗಳಲ್ಲೂ ನಾನು ಭಾಗಿಯಾಗಿದ್ದೇನೆ. ಇಂದಿನ ಸಮ್ಮೇಳನದಲ್ಲಿಯೂ ನನಗೆ ಅವಕಾಶ ದೊರಕಿರುವುದು ಅವೆಲ್ಲಕ್ಕೂ ಕಳಶದಂತಾಗಿದೆ ಎಂದು ಭಾವಿಸುತ್ತೇನೆ.

ನಮ್ಮ ಭಾರತದಲ್ಲಿ ಹೇಗೋ ಹಾಗೇ ಕನ್ನಡದಲ್ಲಿಯೂ ಧರ್ಮ ಮತ್ತು ಸಾಹಿತ್ಯ ಎರಡೂ ಅವಿನಾಭಾವದಿಂದ 'ಜನ ಬದುಕಬೇಕೆಂದು' ಹೊಂದಿಕೊಂಡು ಕೆಲಸಮಾಡಿವೆ. ಇತ್ತೀಚೆಗೆ ಈ ಅನ್ಯೋನ್ಯ ಸಂಬಂಧ ಶಿಥಿಲವಾಗುತ್ತಿರುವುದಾದರೂ, ಇವು ಎರಡೂ 'ಕರಾವಿವ ಶರೀರಸ್ಯ' (ದೇಹಕ್ಕೆ ಎರಡು ಕೈ ಇದ್ದ ಹಾಗೆ), 'ನೇತ್ರಯೋರಿವ ಪಕ್ಷ್ಮಣೀ' (ಎರಡೂ ಕಣ್ಣುಗಳಿಗೆ ಎರಡು ರೆಪ್ಪೆ ಇದ್ದ ಹಾಗೆ) ಅಪ್ರೇರಿತವಾಗಿ ಲೋಕಹಿತವನ್ನು ಸಾಧಿಸುತ್ತವೆ. ಇದನ್ನು ನಮಗೆ ನೆನಪಿಸುವುದ ಕ್ಕಾಗಿಯೇ ಈ ಸಮ್ಮೇಳನ ಧರ್ಮಸ್ಥಳದಲ್ಲಿ ನಡೆಯುತ್ತಿದೆಯೋ ಏನೋ.

ಕಳೆದ ವರ್ಷ ನಾವು 'ಪಂಪಮಹಾಕವಿ ಮಂಟಪ'ದಲ್ಲಿ ಸಭೆ ಸೇರಿದ್ದೆವು. ಪಂಪನು ಅಭಿಜನವತ್ಸಲನೆಂದೂ ಅಭಿಮಾನಮೂರ್ತಿಯೆಂದೂ ಸುಕವಿಯಶೋ ನಿರ್ಮತ್ಸರನೆಂದೂ ಉದಾರನೆಂದೂ ತನ್ನ ಕಾಲದ ಬುಧಸಮೂಹದಿಂದ ಕೀರ್ತಿತ ನಾದವನು. ಈ ವರ್ಷ, ಪಂಪನಿಗೆ ಪ್ರಿಯನಾದ ಬಾಹುಬಲಿಯ ನೆರಳಿನಲ್ಲಿ ಸಭೆ ಸೇರಿದ್ದೇವೆ. ಅತ್ಯುದ್ಧಮಾನೋನ್ನತನಾದ ಬಾಹುಬಲಿಯು ಬಾಹುಬಲಕ್ಕಿಂತ ಆತ್ಮ ಬಲವು ಮೇಲಾದುದೆಂದು ಲೋಕಕ್ಕೆ ಸಾರಿದನು. ಈ ಇಬ್ಬರು ಮಹಾಪುರುಷರ ಅತ್ಯಭಿಮಾನದ ಆದರ್ಶ ನಮಗೆ ಎಂದಿಗೂ ದಾರಿದೀಪವಾಗಿರಲಿ. ಕನ್ನಡಿಗರಲ್ಲಿ 'ಅಭಿಮಾನ ಸ್ಥಿರಭಾವ'ವು ಅಧಿಕವಾಗಿ ಬೆಳೆಯಲಿ.

ಆರು ದಶಕಗಳ ಹಿಂದೆ ನಮ್ಮ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಹಿರಿಯರು ಕನ್ನಡದ ಹಿತವನ್ನು ತಮ್ಮ ಪ್ರಧಾನವಾದ ಗುರಿಯಾಗಿ ಇರಿಸಿಕೊಂಡಿದ್ದರು.

---

* ೧೯೭೯ ಮಾರ್ಚ್ ೯ರಿಂದ ೧೧ರ ವರೆಗೆ ಶ್ರೀಧರ್ಮಸ್ಥಳದಲ್ಲಿ ನೆರವೇರಿದ ಐವತ್ತೊಂದನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಪದವಿಯನ್ನು ಎಂ. ಗೋಪಾಲಕೃಷ್ಣ ಅಡಿಗರಿಗೆ ಹಸ್ತಾಂತರಿಸುವ ಸಂದರ್ಭದಲ್ಲಿ ರಾಜರತ್ನಂ ಮಾಡಿದ ಭಾಷಣ.

ಕನ್ನಡ ತಲೆಯೆತ್ತುವ ಬಗೆ, ಕನ್ನಡಕ್ಕೆ ಒಂದು ಕಟ್ಟು, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕರ್ಣಾಟಕದ ಏಕೀಕರಣ ಮೊದಲಾದವುಗಳನ್ನು ಕುರಿತು ಚಿಂತನೆ ಮಾಡಿದರು. ವರ್ಷದ ಉದ್ದಕ್ಕೂ ತಾವು ಮಾಡಿದ್ದರ ಫಲವನ್ನು ಅಳೆದು, ಮುಂದಿನ ಕಾರ್ಯ ಕ್ರಮಗಳನ್ನು ನಿರ್ಧರಿಸಲು ವಾರ್ಷಿಕ ಸಮ್ಮೇಳನಗಳು ಏರ್ಪಾಡಾದುವು. ಕಾಲ ಕಳೆದ ಹಾಗೆಲ್ಲಾ ಕನ್ನಡದ ಮುನ್ನಡೆಯ ದಾರಿಯಲ್ಲಿ ಹೊಸ ಹೊಸ ಕಂಟಕಗಳು ತಲೆ ಯೆತ್ತುತ್ತಿವೆ. ಅವುಗಳನ್ನು ನಿವಾರಿಸಲು ಅಥವಾ ಅರಗಿಸಿಕೊಳ್ಳಲು ಯತ್ನಿಸ ಬೇಕಾದ್ದು ನಮ್ಮ ಕರ್ತವ್ಯ. ಹೊಸದು ಏನೇ ಬಂದರೂ ಅದನ್ನು ಹಳೆಯದರೊಂದಿಗೆ ಹೊಂದಿಸಿ ಕೊಳ್ಳುವ ವಿವೇಕ ನಮ್ಮಲ್ಲಿ ಬೆಳೆದರೆ ಪರಿಷತ್ತು ಬಲಗೊಳ್ಳುತ್ತದೆ. ಅದು ಆಗದೆ ಹೋದರೆ, ನಷ್ಟ ಮತ್ತಾರಿಗೂ ಅಲ್ಲ, ನಮಗೇ.

ಕಳೆದ ವರ್ಷ, ದೆಹಲಿಯಲ್ಲಿ, ನಮಗೆ ಈಗ ಅತ್ಯಂತ ಅಗತ್ಯವಾಗಿರುವ 'ಸಾಹಿತ್ಯ ಪರಿಚಾರಿಕೆ'ಯನ್ನು ಕುರಿತು ಮಾತನಾಡಿದ್ದೆ. ಅಲ್ಲಿ ಹೇಳಲು ವೇಳಾವಕಾಶ ವಾಗದೆ ಉಳಿದಿದ್ದ ವಿಷಯಗಳನ್ನು ಕುರಿತು ಯಥಾವಕಾಶವಾಗಿ ಕಳೆದ ಒಂಬತ್ತು ತಿಂಗಳಿಂದಲೂ ಪರಿಷತ್ತಿನಲ್ಲಿ ತಿಂಗಳಿಗೊಂದರಂತೆ ಮಾತನಾಡಿದ್ದೇನೆ. ಅಲ್ಲಿ ನಾನು ಏನು ಹೇಳಿದೆನೋ ಅದನ್ನು ಕನ್ನಡದ ಇತರ ಸಭೆಗಳಲ್ಲಿ ಮಾಡಿ ತೋರಿಸಿದ್ದೇನೆ. ಈ ಸೇವೆಯ ಅವಕಾಶವನ್ನು ನನಗೆ ಒದಗಿಸಿಕೊಟ್ಟ ಪರಿಷತ್ತಿಗೂ ಕನ್ನಡದ ಇತರ ಸಂಘ ಸಂಸ್ಥೆಗಳಿಗೂ ನಾನು ಕೃತಜ್ಞನಾಗಿದ್ದೇನೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಬರೆಯುವವರ ಸಂಖ್ಯೆ ಹೆಚ್ಚಿಕೊಂಡಿದೆ. ಬರೆದದ್ದು ಪ್ರಕಟವಾಗಲು ಅವಕಾಶಗಳೂ ಹೆಚ್ಚಿವೆ. ಆದರೆ ಅದಕ್ಕೆ ಅನುಗುಣವಾಗಿ ಬರೆದದ್ದನ್ನು ಜನಕ್ಕೆ ಮುಟ್ಟಿಸುವ ಏರ್ಪಾಡು ತೀರ ಅಸಮರ್ಪಕವಾಗಿದೆ. ನಮ್ಮಲ್ಲಿ ಬಹುಜನರಿಗೆ ಓದುಬರಹ ಬಾರದು. ಬಂದವರಲ್ಲಿಯೂ ಕನ್ನಡ ಪುಸ್ತಕ ಕೊಂಡು ಕೊಳ್ಳುವವರು ಕಡಮೆ. ನಾವು ಏನು ಸಾಧಿಸಬೇಕಾದರೂ ಇನ್ನೂ ಶ್ರವಣವನ್ನೇ ಅವಲಂಬಿಸಬೇಕಾಗಿದೆ. ಹಾಗಾಗಿ, ನಾವು ಬರೆದದ್ದರಲ್ಲಿ ಬಹುಪಾಲು ಬಂಜರು ಭೂಮಿಯ ಬೆಳೆಯಾಗಿ, ಜನ ಬಡಕಲಾಗಿದ್ದಾರೆ. ಈ ದುಃಸ್ಥಿತಿ ಹೋಗಬೇಕಾದರೆ, ಬರೆದವರಿಗೂ ಇತರರಿಗೂ ನಡುವೆ ಸಂಪರ್ಕಸೇತುವೆಯಾಗಿ ಸಾಹಿತ್ಯ ಪರಿಚಾರಕರ ಪಡೆಯೊಂದು ಸಜ್ಜಾಗಬೇಕು. ಇಂಥವರನ್ನು ಸಜ್ಜುಗೊಳಿಸುವುದು ಪರಿಷತ್ತಿನ ಕರ್ತವ್ಯ ವಾಗಬೇಕು.

ಉದಾಹರಣೆಗೆ: ಎರಡು ತಿಂಗಳ ಹಿಂದೆ 'ಕಡೇಕಾರು ರಾಜಗೋಪಾಲ ಕೃಷ್ಣ ರಾಯರು – ಬದುಕು: ಬರಹ' ಎಂಬ ಪುಸ್ತಕ ಪ್ರಕಟವಾಯಿತು. ಶ್ರೀ ಹಾ. ತಿ. ಕೃಷ್ಣೇ ಗೌಡರು ಇದರ ಸಂಪಾದಕರು, ಮೈಸೂರಿನ ಪುಸ್ತಕ ಚಿಲುಮೆ ಇದರ ಪ್ರಕಾಶಕರು. ಇದಕ್ಕೂ ಮೊದಲು, ಎರಡು ವರ್ಷ ಹಿಂದೆ 'ಐರೋಡಿ ಶಿವರಾಮಯ್ಯ – ಬದುಕು ಮತ್ತು ಬರಹ' ಎಂಬುದನ್ನು ಡಾ। ಶಿವರಾಮ ಕಾರಂತರು ಸಂಪಾದಿಸಿ, ಮೈಸೂರಿನ ಗೀತಾ ಬುಕ್ ಹೌಸಿನವರು ಪ್ರಕಟಿಸಿದರು. ಇದಕ್ಕೂ ಇಪ್ಪತ್ತೈ ವರ್ಷಗಳ ಮೊದಲು ಕಾರಂತರು 'ಶ್ರೀ ಪಂಜೆಯವರ ನೆನಪಿಗಾಗಿ' ಎಂಬ ಸ್ಮಾರಕ ಗ್ರಂಥವನ್ನು ಸಂಪಾದಿಸಿ ತಾವೇ ಪ್ರಕಟಪಡಿಸಿದರು. ಇವುಗಳ ಹೆಸರನ್ನು ಕೂಡ ಕೇಳಿರದ ವಿದ್ಯಾವಂತರೂ

ನಮ್ಮಲ್ಲಿ ಇದ್ದಾರೆ. ಹೀಗೆ, ಕನ್ನಡ ಸಾಹಿತ್ಯದ ಒಂದೊಂದು ಪ್ರಕಾರದಲ್ಲೂ ನಮ್ಮ ಗಮನಕ್ಕೆ ಬಾರದೆ ಹೋಗಿರುವ ಪುಸ್ತಕಗಳು ಎಷ್ಟೋ ಇವೆ. ಇವುಗಳ ಕಡೆಗೆ ನಮ್ಮ ಕಣ್ಣು ತೆರೆಯಿಸುವುದಕ್ಕೆ ಸಾಹಿತ್ಯ ಪರಿಚಾರಕರು ಎಷ್ಟಾದರೂ ನಮಗೆ ಸಾಲದು.

ಕೊನೆಯದಾಗಿ: ದೆಹಲಿಯಲ್ಲಿ ಹೇಳಿದ ಇನ್ನೊಂದು ವಿಷಯವನ್ನು ಇಲ್ಲಿ ಇನ್ನೊಮ್ಮೆ ಎತ್ತಿ, ಒತ್ತಿ ಹೇಳಲು ಬಯಸುತ್ತೇನೆ. ಅದೆಂದರೆ ನಾವು ಅನುಸರಿಸಬೇಕಾದ ಭಾಷಾಮೈತ್ರಿಗೆ ಸಂಬಂಧಪಟ್ಟದ್ದು. ಕನ್ನಡದ ಜೊತೆಗೆ ಯಾವ ಭಾಷೆ ಇದ್ದರೂ ಅದು ಅದಕ್ಕೆ ತೊಡವು ಆಗಬೇಕೇ ವಿನಾ ತೊಡರು ಆಗಬಾರದು. ಈ ತೊಡಕನ್ನು ಬಿಡಿಸುವುದರಲ್ಲಿ ಕಂಡುಬರಬೇಕು ನಮ್ಮವರ ಜಾಣತನ. ನಮ್ಮ ಭಾರತದ ಏಕತೆಗೆ ಹಿಂದಿಯಿಂದ ಎಷ್ಟು ಅನನುಕೂಲವಾಗುತ್ತಿದೆ ಎಂಬುದನ್ನು ದಿನ ಬೆಳಗಾದರೆ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಹಿಂದಿ ನಮ್ಮ ಪಾಲಿಗೆ ಬೇತಾಳವಾಗಿದೆ. 'ಬೇ-ತಾಳ' ವಾದರೆ, ಎಂದರೆ ತಾಳ ಹೊಂದದೆ ಹೋದರೆ, ಮೇಳ ಆಗುವುದು ಹೇಗೆ ಸಾಧ್ಯ? ಇದನ್ನು ನಮ್ಮ ನಾಯಕರು ಆಳವಾಗಿ ಚಿಂತಿಸಿದಂತಿಲ್ಲ. ಅವರ ವರ್ತನೆಯನ್ನು ನೋಡಿದಾಗ, ನನಗೆ ಬಸವಣ್ಣನವರ ಒಂದು ವಚನ ನೆನಪಾಗುತ್ತದೆ:

"ಭಕ್ತರ ಕಂಡರೆ ಬೋಳರಪ್ಪಿರಯ್ಯ!
ಸವಣರ ಕಂಡರೆ ಬತ್ತಲೆಯಪ್ಪಿರಯ್ಯ!
ಹಾರುವರ ಕಂಡರೆ ಹರಿನಾಮವೆಂಬಿರಯ್ಯ!
ಅವರವರ ಕಂಡರೆ ಅವರವರಂತೆ.
ಕೂಡಲಸಂಗಮದೇವರ ಪೂಜಿಸಿ ಅನ್ಯದೈವಂಗಳಿಗೆರಗಿ ಭಕ್ತರೆನಿಸಿಕೊಂಬ
ಅಜ್ಞಾನಿಗಳನೇನೆಂಬೆನಯ್ಯ?"

ಕನ್ನಡಿಗರ ಸಭೆಯಲ್ಲಿ 'ಕನ್ನಡದಿಂದಲೇ ನಮಗೆ ಮುಕ್ತಿ' ಎನ್ನುತ್ತಾರೆ; ಅವರೇ ಇನ್ನೊಂದು ಸಭೆಯಲ್ಲಿ, ಇಂಗ್ಲಿಷ್ ಪ್ರೇಮಿಗಳ ನಡುವೆ, 'ಇಂಗ್ಲಿಷನ್ನು ನಾವು ಕಳೆದುಕೊಂಡರೆ, ಜಗತ್ತಿನ ಸಂಪರ್ಕ ಕಳೆದುಕೊಳ್ಳುತ್ತೇವೆ, ಶಿಲಾಯುಗದವರಾಗುತ್ತೇವೆ' ಎನ್ನುತ್ತಾರೆ; ಮತ್ತೆಯೂ ಅವರೇ ಹಿಂದೀ ಸಭೆಗಳಲ್ಲಿ 'ಹಿಂದಿಯೇ ನಮ್ಮ ರಾಷ್ಟ್ರಭಾಷೆ' ಎಂದು ವಿಜೃಂಭಿಸುತ್ತಾರೆ. 'ಕನ್ನಡಿಗರಿಗೆ ಕನ್ನಡವೇ ಕೂಡಲಸಂಗ' ಎಂಬ ಸುಬುದ್ಧಿ ನಮಗೆ ಬಂದಾಗ ಕನ್ನಡ ಉದ್ಧಾರವಾಗುತ್ತದೆ.

ಇಂದು ಪರಿಷತ್ತಿಗೆ ಒಂದು ಪರ್ವದಿನ. ಐವತ್ತೊಂದನೇ ಸಾಹಿತ್ಯಸಮ್ಮೇಳನಕ್ಕೆ ಖ್ಯಾತ ಕವಿ ಶ್ರೀ ಗೋಪಾಲಕೃಷ್ಣ ಅಡಿಗರು ಅಧ್ಯಕ್ಷರಾಗಿದ್ದಾರೆ. 'ಕಟ್ಟುವೆವು ನಾವು' ಎಂದು ಕಂಕಣ ಕಟ್ಟಿಕೊಂಡು ಕಾರ್ಯಪರರಾಗಿರುವ ಇವರ ಸೇರ್ಪಡೆಯಿಂದ ನಮ್ಮ ಪರಿಷತ್ತು ಪ್ರಗತಿ ಮಾರ್ಗದಲ್ಲಿ ಇನ್ನೂ ಮುಂದೆ ಹೋಗಲಿ ಎಂದು ಹಾರೈಸುತ್ತೇನೆ. ಶ್ರೀ ಅಡಿಗರನ್ನು ಸಮ್ಮೇಳನಾಧ್ಯಕ್ಷ ಸ್ಥಾನಕ್ಕೆ ಸ್ವಾಗತಿಸಿ, ವಿರಮಿಸುತ್ತೇನೆ.

ಶಿವಮಸ್ತು ಸರ್ವಜಗತಾಂ
ಪರಹಿತನಿರತಾ ಭವನ್ತು ಭೂತಗಣಾಃ
ದೋಷಾಃ ಪ್ರಯಾನ್ತು ಶಾಂತಿಂ
ಸರ್ವತ್ರ ಸುಖೀ ಭವತು ಲೋಕಃ

●

೪. ಜಿ. ಪಿ. ರಾಜರತ್ನಂ : ಜೀವನ ವಿವರ

೫-೧೨-೧೯೦೮ – ಜನನ. ಸೌರಮಾನ ಕಾರ್ತಿಕಪೂರ್ಣಿಮೆ (ಆನೆಹಬ್ಬ) ರಾಜರತ್ನಂ ಹುಟ್ಟಿದ್ದು (ಇಂದಿನ ರಾಮನಗರ) ಕ್ಲೋಸ್ ಪೇಟೆಯಲ್ಲಿ.

– ತಂದೆ ಜಿ. ಪಿ. ಗೋಪಾಲಕೃಷ್ಣ ಅಯ್ಯಂಗಾರ್

೧೯೨೮ – ಬಿ. ಎ. ಪದವಿ, ಲೇಖನಾರಂಭ, ವಿವಾಹ

೧೯೩೧ – 'ತಾರೆ' ಕವನಕ್ಕೆ ಬಿ.ಎಂ.ಶ್ರೀ. ಪದಕ –ಎಂ.ಎ. ಪದವಿ– 'ಸೋಲಿಗರ ಸಿದ್ಧ ಮತ್ತು ನೆನಪು' ಕೃತಿ ಪ್ರಕಟನೆ

೧೯೩೨ – ಮಾಸ್ತಿ ಪ್ರೋತ್ಸಾಹದಿಂದ ಪ್ರಥಮ ಪುಸ್ತಕವೆನ್ನಬಹುದಾದ 'ಚೀನಾ ದೇಶದ ಬೌದ್ಧ ಯಾತ್ರಿಕರು' ಪುಸ್ತಕ ಪ್ರಕಟನೆ. ಮಡಿಕೇರಿ ಸಾಹಿತ್ಯ ಸಮ್ಮೇಳನದಲ್ಲಿ ಭಾಗಿ.

೧೯೩೩ – ತಂದೆಯ ಮರಣ. 'ಚೀನಾ ದೇಶದ ಬೌದ್ಧ ಯಾತ್ರಿಕರು' ಕೃತಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ.

೧೯೩೪ – ಪತ್ನಿ ಲಲಿತಮ್ಮನವರ ಅಕಾಲಿಕಮರಣ. ಸೀತಮ್ಮನವರೊಂದಿಗೆ ಪುನರ್ವಿವಾಹ.

೧೯೩೫ – 'ರತ್ನನ ಪದಗಳು' –ಕವನಸಂಕಲನಕ್ಕೆ ದೇವರಾಜ ಬಹಾದ್ದೂರ್ ಪಾರಿತೋಷಕ.

೧೯೩೭ – 'ಬುದ್ಧವಚನ ಪರಿಚಯ' ಗ್ರಂಥ– ದೇವರಾಜ ಬಹಾದ್ದೂರ್ ಬಹುಮಾನ.

೧೯೩೮ – ಮೈಸೂರು ವಿ. ವಿ. ನಿಲಯದಲ್ಲಿ ಅಧ್ಯಾಪಕ. ಬಳ್ಳಾರಿ ಸಾಹಿತ್ಯ ಸಮ್ಮೇಳನ – ಲೇಖಕ ಗೋಷ್ಠಿ ಅಧ್ಯಕ್ಷತೆ.

೧೯೩೯ – 'ಹತ್ತು ವರುಷ' ಆತ್ಮಕಥನ – ದಶಕದ ಸಾಹಿತ್ಯಿಕ ಕೃಷಿಯನ್ನು ಕುರಿತದ್ದು.

– 'ನಮ್ಮನಮ್ಮವರು' ವಿದ್ಯಾರ್ಥಿಗಳಿಂದ ಬರೆಸಿದ್ದು.

೧೯೪೦ – 'ಮಹಾಕವಿ ಪುರುಷಸರಸ್ವತಿ' ವಿಡಂಬನ ಗ್ರಂಥ ಪ್ರಕಟನೆ

೧೯೪೨ – ಮಲ್ಲೇಶ್ವರಂ ಗಾಂಧೀ ಸಾಹಿತ್ಯ ಸಂಘ ಸ್ಥಾಪನೆಯಲ್ಲಿ ಸಿದ್ಧವನಹಳ್ಳಿ ಕೃಷ್ಣ ಶರ್ಮರೊಂದಿಗೆ ಸಕ್ರಿಯ ಸಹಭಾಗಿತ್ವ.

೧೯೪೫ – ರಬಕವಿ ಸಾಹಿತ್ಯ ಸಮ್ಮೇಳನ: ಲೇಖಕಗೋಷ್ಠಿ ಅಧ್ಯಕ್ಷ.

೧೯೫೨-೬೪ – 'ನಾಗನ ಪದ' ಪ್ರಕಟನೆ, ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಸೂತ್ರಧಾರಿತ್ವ.

೧೯೫೭ – 'ರಾಜರತ್ನಂ': ವಿದ್ಯಾರ್ಥಿವೃಂದದ ಅಭಿನಂದನ ಗ್ರಂಥ.

೧೯೬೪ – ಸೆಂಟ್ರಲ್ ಕಾಲೇಜಿನಲ್ಲಿ ರೀಡರ್ ಆಗಿ ನಿವೃತ್ತಿ, ಯು.ಜಿ.ಸಿ. ಅಧ್ಯಾಪಕತ್ವ.

೧೯೬೭ – ಪತ್ನಿ ಸೀತಮ್ಮನವರ ಮರಣ.

೧೯೬೮ – ಅರುವತ್ತನೆಯ ಹುಟ್ಟುಹಬ್ಬ.

೧೯೬೯ – ತೀವ್ರ ಅನಾರೋಗ್ಯ. ದೈವಾನುಗ್ರಹದಿಂದ ಚೇತರಿಕೆ.

೧೯೭೦ – ರಾಜ್ಯೋತ್ಸವ ಪ್ರಶಸ್ತಿ

೧೯೭೧ – ದ.ಕ.ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ (ಕಾರ್ಕಳ) ಅಧ್ಯಕ್ಷತೆ. ಜೈನ ಕ್ಷೇತ್ರ ಹೊಂಬುಜದಲ್ಲಿ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ.

೧೯೭೩ – 'ವಿಚಾರರಶ್ಮಿ': ಸುಧಾ ಸಾಪ್ತಾಹಿಕ ಅಂಕಣ ಲೇಖನಗಳ ಪ್ರಥಮ ಸಂಪುಟ ಪ್ರಕಟನೆ.

೧೯೭೫–೭೭ – 'ನಿರ್ಭಯಾಗ್ರಹಿ' ೯ ಕಂತುಗಳಲ್ಲಿ ಪ್ರಕಟನೆ.

೧೯೭೭ – ಮೈಸೂರು ವಿಶ್ವವಿದ್ಯಾನಿಲಯದ ಡಿ.ಲಿಟ್. ಪ್ರಶಸ್ತಿ.

೧೯೭೮ – ದೆಹಲಿಯಲ್ಲಿ ನೆರವೇರಿದ ಅಖಿಲ ಭಾರತ ಐವತ್ತನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. 'ಕಂದನ ಕಾವ್ಯಮಾಲೆ' ಪ್ರಕಟನೆ.

೧೯೭೯ – ಧರ್ಮಸ್ಥಳದ ಸಾಹಿತ್ಯ ಸಮ್ಮೇಳನ, ಅಡಿಗರಿಗೆ ಅಧಿಕಾರ ಹಸ್ತಾಂತರ. ಶಿಶು ಸಾಹಿತ್ಯಗೋಷ್ಠಿಯ ಅಧ್ಯಕ್ಷತೆ.

೧೩–೩–೭೯ – ಫಾಲ್ಗುಣ ಶುದ್ಧ ಬುದ್ಧಪೂರ್ಣಿಮೆ : ದೇಹಾಂತ್ಯ

●

೫. ಜಿ.ಪಿ. ರಾಜರತ್ನಂ : ವಾಙ್ಮಯ ರಾಶಿ

ಅ. ಪ್ರೌಢಸಾಹಿತ್ಯ

೧. ಕವನ

ಶಾಂತಿ
ರತ್ನನ ಪದಗಳು
ಕರ್ಣಾಟಕ ಪುರಾಣ
ಹಾರ್ಮೋನಿಯಂ ಹರಣ
ನೂರು ಪುಟಾಣಿ (ಸಂ. ಅನು)
ನಾಗನ ಪದಗಳು
ಜಪಾನಿನ ಹಿಮಗಿರಿ

೨. ಕಥೆ

ಹನಿಗಳು
ಕರಿಯ ಕಂಬಳಿ
ಕಲ್ಲಿನ ಕಾಮಣ್ಣ
ಕ್ಯಾಂಡಿಡ್ (ಅನು)
ನೆನಪು ನಂಜುಂಡ

೩. ರೂಪಕ/ನಾಟಕ

ಸೋಲಿಗರ ಸಿದ್ಧ
ನೆನಪು
ಗಂಡುಗೊಡಲಿ
ನರಕದ ನ್ಯಾಯ
ಕಂಬಳಿ ಸೇವೆ
ಸಂಭವಾಮಿ ಯುಗೇ ಯುಗೇ
ಶಕಾರನ ಶಾರೋಟು
ಮಹಾಕವಿ ಮೇಳ
ಹೆಂಡದ ಹೆಣ
ಶ್ರೀ ನಂದಳಿಕೆ ನಾಟಕ
ಬಾಹುಬಲಿ ವಿಜಯ
ಮಹಾಮೂರ್ತಿ
ಶ್ರೀ ಬಾಹುಬಲಿ ವಿಜಯಂ
ಶ್ರೀ ಗೊಮ್ಮಟ ಶಿಲ್ಪ

೪. ವಿಡಂಬನೆ

ಪುರುಷ ಸರಸ್ವತಿ
ಅವಕಥಾವಲ್ಲರಿ
ಪರಗತಿ ಪಕ್ಷಿ
ರಾಘವಾಂಕನ ಹಲ್ಲು
ನಿರ್ಭಯಾಗ್ರಫಿ

* ಚಕ್ರವರ್ತಿ ವಜ್ರ
* ಕೊರವಂಜಿಯ ದಾರಿಯಲ್ಲಿ
* ಹಾಸ್ಯದ ಬಡಿಗೆ
* ವಜ್ರವಾದ ರತ್ನ
* ಅ.ನ.ಕೃ. ಮತ್ತು ನಾನು
* ಶಿಶುಪಾಲ ವಧ
* ಶನಿಕಾಟ
* ಸರ್ ರಾಜರತ್ನಂ
* ಶ್ವೇತಾತ ಪತ್ರ

–ಎಂಬ ಒಂಬತ್ತು ಕಂತುಗಳಲ್ಲಿ

೫. ಭಾಷಣಗಳು, ಲೇಖನಗಳು

ಮಹಾತ್ಮರ ಮರಣ ಮತ್ತು ಇತರ ಉಪನ್ಯಾಸಗಳು
ರಾಮರಾಜ್ಯ
ಮಾನಮರ್‍ಯಾದೆ
ಒಬ್ಬನೇ ದೇವರು – ಒಂದೇ ಜನ
ವಿದ್ಯಾರ್ಥಿಯೋಗ
ನಮ್ಮ ಮಕ್ಕಳ ಯೋಗಕ್ಷೇಮ

* ಓದದ ಬಾಯಿ
* ಸತ್ತವರಿಗೆ ಪಾದಪೂಜೆ
* ಸಪ್ತಾಕ್ಷರೀ ಮಂತ್ರ
* ಸಮ್ಯಕ್ ಸಾಹಿತ್ಯ
* ನಿರುಪಮಾ
* ಕಾಮಸಾಮ್ರಾಜ್ಯ

(*ಇವು 'ಸ್ನೇಹದೀಪ' ಸಂಪುಟದಲ್ಲಿವೆ)

ಪ್ರೊ। ವೆಂಕಣ್ಣಯ್ಯ ಸ್ಮಾರಕೋಪನ್ಯಾಸಗಳು

೬. ಆತ್ಮಕಥೆ, ಸ್ಮೃತಿಸಂಚಯ, ಅನುಭವಕಥನ

ಹತ್ತುವರುಷ
ನೂರುವರುಷದ ಅಚ್ಚುಮೆಚ್ಚು
ನನ್ನ ಅಂತರ್ಯ
ನನ್ನ ನೆನಪಿನ ಬೀರು

ಆ. ಬಾಲಸಾಹಿತ್ಯ

೧. ಕವನ

ತುತ್ತೂರಿ
ಕಡಲೆಪುರಿ
ಚುಟಕ
ಕಂದನ ಕಾವ್ಯಮಾಲೆ (ಸಂ)
ಕಲ್ಲುಸಕ್ಕರೆ
ರಸಕವಳ
ಕೆನೆಹಾಲು (ಸಂ)
ವಂದೇ ಗಾಂಧೀಜಿ
ಮುದ್ದುಕೃಷ್ಣ
ತುಂಟ ಗಣಪತಿ
ತಾರೆ

೨. ಕತೆ

ಬಾ ಕರೂ ಬಾ
ಗೋಳೂರಿನ ಗಾಯಕರು
ಗುಲಗಂಜಿ
ಕೋಳಿಕಳ್ಳ
ಬೆಪ್ಪುತಕ್ಕಡಿ ಐವಾನ್ (ಅನು)
ಆಲಿವರ್ ಟ್ವಿಸ್ಟ್ (ಅನು)
ರಾಬಿನ್ ಹುಡ್ (ಅನು)
ಚಿಕ್ಕ ಮಕ್ಕಳ ಏಸಾಪ್ (ಅನು)
ನರಿಯ ಬಾಲ
ರಾಯನರಿ
ಅಣ್ಣ–ತಮ್ಮ
ವೈಣಿಕನ ವೀಣೆ
ಪಂಡಿತನ ನೆರಳು
ಮಕ್ಕಳ ಮುಂಛೌಸನ್ (ಅನು)
ಲೋಹ ವರಾಹ
ಸರಬುರುಡೆ
ತೆನಾಲಿರಾಮ
ಕಾಶ್ಮೀರದ ಹಳ್ಳಿಯ ಕಥೆಗಳು (ಅನು)
ಕಥೆಗೆ ಬದಲು ಕಥೆ
ಪುಟಾಣಿ ಪಂಚತಂತ್ರ
ಭಾಸನ ಭಾರತ
ನಾಳೀಜಂಘ
ಸೈಂಧವಕುದುರೆ
ಆರು ಕೊಂಬಿನ ಆನೆ
ಬೆಂಕಿಯ ಬಣ್ಣದ ಸಿಂಹ
ಮಕ್ಕಳಿಗೆ ಮಣಿದೀಪ
ಹತ್ತು ದಿಕ್ಕಿನ ಬೆಳಕು
ಮಣಿಕಂಠ
ಗುಟ್ಟಿಲ
ಸ್ನೇಹದ ಕತೆಗಳು
ಗಿರಿಧಾರಿ
ಜಯವಿಜಯರ ಕತೆಗಳು
ಕತೆಗಳ ಬುಟ್ಟಿ
ಶೀಲಶ್ರೀ
ಗರುಡನ ಬಳಗ
ಗುಲಿಸ್ತಾನ್ ಕತೆಗಳು
ಆಳ್ವಾರರ ಕತೆಗಳು
ಶ್ರೀಪಾರ್ಶ್ವನಾಥರ ಕತೆಗಳು
ಪೋಲಿಕಿಟ್ಟಿ ಕತೆಗಳು
ಪಂಚರಾತ್ರದ ಕತೆಗಳು
ಏಕಲವ್ಯನ ಕತೆಗಳು
ಕೈಲಾಘನ ಕತೆಗಳು
ನಯಸೇನನ ನೀತಿಕತೆಗಳು
ನಮ್ಮ ಒಡೆಯರ ಕತೆಗಳು
ವತ್ಸರಾಜನ ಕತೆಗಳು (ಅಪ್ರಕಟಿತ)

ಬುದ್ಧನು ಹೇಳಿದ ಕತೆಗಳು
ಸೂರ್ಯಮಿತ್ರ
ಪುಟಾಣಿ ದೀಪಾವಳಿ
ಮೆರವಣಿಗೆ
ಕಥಾಕೋಶ
ನನ್ನ ಮುದ್ದುಲಾಯಿಕ (ಸಂ)

೩. ಜೀವನ

ಗೌತಮಬುದ್ಧ
ಅಶೋಕ ಮೌರ್ಯ
ಶ್ರೀರಾಮಚಂದ್ರ
ಶ್ರೀಹರ್ಷ
ಯೇಸುಕ್ರಿಸ್ತ
ಅಲ್ಲಮಪ್ರಭು ಅವರ ಕಥೆ
ಮಕ್ಕಳ ಗಾಂಧಿ
ಗಿಳಿಮರಿಗಳ ಗಾಂಧಿ
ದರ್ಶನದಾತ
ಕಣ್ಣಿಗೆ ಹಬ್ಬ
ಗಾಂಧೀಜಿ ಅವರ ಕಥೆ (ಅನು)
ನಮ್ಮ ವಿಶ್ವೇಶ್ವರಯ್ಯನವರು

೪. ರೂಪಕ

ಬೆಳೆಯುವ ಪಯಿರು
ಧ್ವಜವಂದನೆ
ದೇವಧರ್ಮ
ಮಹಾಸಾರ
ಗ್ರಾಮಣಿ ಚಂಡ
ಪಂಚಾಯುಧ
ಬೆರಳಿನ ಗುರುತು

೫. ಇತರ

ಗಾಂಧೀ ವಿದ್ಯೆ
ನಮ್ಮ ಬಾವುಟ
ಪುಟಾಣಿ ಪ್ರಾರ್ಥನೆಗಳು
Introducing our Flag

ಇ. ಬೌದ್ಧ ಸಾಹಿತ್ಯ

ಚೀನಾದೇಶದ ಬೌದ್ಧ ಯಾತ್ರಿಕರು
ಧರ್ಮದಾನಿ ಬುದ್ಧ
ಭಗವಾನ್ ಬುದ್ಧ
ಮೂರು ಪಾಲಿಸೂತ್ರಗಳು
ಬುದ್ಧವಚನ ಪರಿಚಯ
ಮಿಲಿಂದ ಪ್ರಶ್ನೆ
ಪಾಲಿ ಪಜ್ಜ ಪುಷ್ಪಾಂಜಲಿ
ಬುದ್ಧನ ಕತೆಗಳು
ಜಾತಕ ಕತೆಗಳು
ಧರ್ಮಪದ
ಬುದ್ಧನ ವರ್ಣವಾದ
ಧರ್ಮಪದ ಪ್ರವೇಶಿಕಾ
ಶಾಕ್ಯಸಾಹಿತ್ಯ ಮಂಟಪದ ಪ್ರಕರಣ
ಧರ್ಮ–ಸಾಹಿತ್ಯ–ದೃಷ್ಟಿ
ತೀರ್ಥಕರೂ ತೀರ್ಥಂಕರರೂ
ವೈಶಾಖಶುಕ್ಲ ಪೂರ್ಣಿಮಾ
ಪಟಾಚಾರಾ
ಹತ್ತು ಮಕ್ಕಳ ತಾಯಿ
ಕರ್ಮ (ಅನು)
ಮಹಾಕಾರುಣಿಕ ಬುದ್ಧ
ಬೋಧಿಸತ್ವನ ಕತೆಗಳು

ಈ. ಜೈನಸಾಹಿತ್ಯ

ಮಹಾವೀರನ ಮಾತುಕತೆ
ಭಗವಾನ್ ಮಹಾವೀರಸ್ವಾಮಿ
ಶ್ರೀ ಗೋಮಟೇಶ್ವರ
ಶ್ರೀ ಪಾರ್ಶ್ವನಾಥ ಚಂಪೂ
ಕಾರ್ಕಳದ ಗೊಮಟೇಶ್ವರಸ್ವಾಮಿ

ಉ. ಹಳೆಗನ್ನಡಕ್ಕೆ ಸಹಾಯ

ಶ್ರೀ ಕವಿರತ್ನ
ಪಂಪಕವಿಯ ಕರ್ಣರಸಾಯನ
ಸಪ್ತಪದಿ ಅಥವಾ ವಿವಾಹಮಂಗಲ
ಶ್ರೀ ಕವಿ ಪಂಪ

ಶ್ರೀ ಪಾರ್ಶ್ವನಾಥ ಚಂಪೂ
ರನ್ನನ ರಸಘಟ್ಟ
ಪಂಪಭಾರತಸಾರ
ಹೊಸಗನ್ನಡ ಯಶೋಧರ ಚರಿತೆ
ಆಶ್ಚರ್ಯ ಪರಂಪರೆ
ನಕ್ಕಳಾ ತಾಯಿ
ನಮ್ಮ ನಗೆಗಾರರು
ಮಾತಿನ ಮಲ್ಲಿ
ನೀತಿರತ್ನ ಕರಂಡ
ಹಳೆಗನ್ನಡ ಪದ್ಯಾಂಜಲಿ
ಕರ್ಣನ ಕೀರ್ತಿಸ್ತಂಭ
ಸಂಚಿಯ ಹೊನ್ನಮ್ಮ
ಪಂಪಕವಿಯ ಶ್ರೀ ಜನಿಸ್ತುತಿ

[ಜೈನ ಮತಧರ್ಮಸಾಹಿತ್ಯಗಳನ್ನು ಕುರಿತಂತೆ ರಾಜರತ್ನಂ ಬರೆದ ಲೇಖನ ಹಾಗೂ ಪುಸ್ತಕಗಳು ಎರಡು ಬೃಹತ್ ಸಂಪುಟಗಳಲ್ಲಿ ಪ್ರತ್ಯೇಕವಾಗಿ ಪ್ರಕಟ ವಾಗಿವೆ.]

ಊ. ವಿಷ್ಣುಭಕ್ತಿ ಸಾಹಿತ್ಯ

ಮುಕುಂದಮಾಲಾ
ಶ್ರೀರಾಮನಾಮ
ಕಸ್ತೂರಿತಿಲಕಂ
ಜಯಮಂಗಳಂ
ಪ್ರಾಣೇಶ್ವರ ಪ್ರಾಪ್ತಿ
ಶ್ರೀವಿಷ್ಣು ಚಿತ್ತ
ತಿರುಪ್ಪಾವೈ
ಶ್ರೀಕೃಷ್ಣಸೇವಾವ್ರತಂ
ಮಾಧವಪದ ಮಾಧುರ್ಯ
ಶ್ರೀ ಚಿಕದೇವರಾಜ ಬಿನ್ನಪ
ಮಾಣಿಕ್ಕಂ ಗಟ್ಟಿ
ಅಮಲನಾದಿ ಪಿರಾನ್
ದಿವ್ಯದಂಪತಿಗಳಿಗೆ ವಂದನ
ಗೀತಗೋಪಾಲಂ
ವೈರಾಗ್ಯ ಪಂಚಕ
ತಿರುಪ್ಪಾಣಾಳ್ವಾರ್ ವೈಭವಂ
ನಮ್ಮಾಳ್ವಾರ್ ವೈಭವಂ
ವಾರಣಮಾಯಿರಂ
ಕಣ್ಣಿನುಣ್ ಶಿರತ್ತಾಂಬು
ತಿರುಪ್ಪಳ್ಳಿಯೆಳುಚ್ಚಿ
ನನ್ನ ಶ್ರೀವೈಷ್ಣವ ಕೈಂಕರ್ಯ

ಎ. ಗಾಂಧೀ ಸಾಹಿತ್ಯ

ಗಾಂಧೀ ಜಯಂತಿಯ ಕಾಣಿಕೆ
ದೇವರ ಸಾಕ್ಷಿ: ಗಾಂಧೀಜಿ
ಗಾಂಧೀಶಕ್ತಿಯ ಮೂಲ
ಗಾಂಧೀ ಜ್ಞಾಪಕ ದೀಪ
ಗಾಂಧೀ ಗಾಯತ್ರಿ
ಗಾಂಧೀ ರಾಜ್ಯಭಾರ

ಏ. ಧರ್ಮ–ನೀತಿ

ಆದಿತ್ಯಹೃದಯಂ
ಬೆಳಕಿನ ದಾರಿ
ಇಸ್ಲಾಂ ಧರ್ಮದ ಪರಿಮಳ
ಪುರುಷೋತ್ತಮ ಯೋಗ
ಮಾ ಕ್ಲೈಬ್ಯಂ
ಸನಾತನ ಧರ್ಮ ಬೋಧೆ
ಜ್ಞಾನಸೂರ್ಯ
ಆತ್ಮರಥಿ–ದೇಹರಥ

ಐ. ಸತ್ಯಸಾಯಿ ಸಾಹಿತ್ಯ

ಶ್ರೀ ಸಾಯಿ ಚಿಂತನ
ಶ್ರೀ ಸಾಯಿ ಸರಸ್ವತಿ
ಗುರುಪೂರ್ಣಿಮಾ
ಸರ್ವದೇವನಮಸ್ಕಾರ
ಕಪಿಧ್ವಜ ಎಂಬ ಕೆಲವು ಸತ್ಯಸಾಯಿ ಕತೆಗಳು
ಸಾಯಿ ವಚನಮಧು
ಸಾಯಿ ಸುಧಾಬಿಂದು
ಸಾಯಿ ಸಲ್ಲಾಪ

ಶ್ರೀ ಸಾಯಿ ಮಾರ್ಗ
ಸಾಯಿ ದಾಸೋಹ
ಸಾಯಿ ಮಹಾಪರ್ವ

ಒ. ಇತರ ವಿಚಾರ

ಸುಪ್ರಭಾತಮ್ (ಸಂ)
ಶ್ರೀ ಬಸವೇಶ್ವರರೂ ಅವರ ಸಮಕಾಲದವರೂ (ಅನು)
ಸ್ವತಂತ್ರ ಭಾರತದ ಅಶೋಕಚಕ್ರಧ್ವಜ
ಚೀನಾದೇಶದ ಗಾಂಧಿ
ಸಭಾ ವಿನಯ
ವಿಚಾರ ತರಂಗ
ಕಿರಣಾನುಭವ
ವಿಚಾರ ರಶ್ಮಿ
ಸ್ವಾರಸ್ಯ
ದೊಡ್ಡವರ ದಾರಿ
ಭ್ರಮರನ ರೆಕ್ಕೆ (ಸಂ)
ಕನ್ನಡದ ಸೇತುವೆ
ಅಗ್ರಹಾರಗಳು

ಓ. ಆಧುನಿಕ ಕವಿಕಾವ್ಯ ಪರಿಚಯ

ಕವಿ ಗೋವಿಂದ ಪೈ
ಸಂಸ ಕವಿ (ಸಂ)
ನಮ್ಮ ತಾಯಿಗೆ ನೂರು ವರುಷ
ಶ್ರೀ 'ಕೃಷ್ಣ'ಸೂಕ್ತಿ (ಸಂ)
(ಎ. ಆರ್. ಕೃ. ಕುರಿತದ್ದು)
ಗೋವಿಂದ ಪೈ ಪತ್ರಗಳು
ಭಾರತ ಭೂ ವಂದನಂ (ಡಿ. ವಿ. ಜಿ.)
ಶ್ರೀಮದಾಂಜನೇಯ ಸ್ವಾಮಿ

ಔ. ಕೈಲಾಸಂ ಕುರಿತು

ಕೈಲಾಸಂ ಅವರ ಏಕಲವ್ಯ
ಕೈಲಾಸಂ ಕಥನ
ಕೈ........ Calling
ಗುಂಡೂ ಪಂಡಿತನ ಕನಸು
ಕೀಚಕ (ಅನು)
ಕೈಲಾಸಂ ನೆನಪು
ಕೈಲಾಸಂ ಬಾಲಬೋಧೆ
ಕೈಲಾಸಂ ವಚನಮಧು
ಕೈಲಾಸಂ ಜೋಕುಗಳು
ಕೈಲಾಸಂ ಖಂಡಗಳು
ಸತ್ತರೂ ಸಾಯದ ಕೈಲಾಸಂ
ಒಂದು ಹಿಡಿ ಕೈಲಾಸಂ
ತಿಳಿದವರಿಗೆ ತಾರೀಫು
ಕೆಲವು ಕೈಲಾಸಂ ಕತೆಗಳು

●

೬. ಸೆಂಟ್ರಲ್ ಕಾಲೇಜ್, ಬೆಂಗಳೂರು
ಕರ್ಣಾಟಕ ಸಂಘದ ಪ್ರಕಟನೆಗಳು

(೧೯೫೨ರಿಂದ ೧೯೬೮ರ ವರೆಗೆ)

(i) 'ಕಾಲೇಜ್ ಬರವಣಿಗೆ':

೧. ಬಾಲ ಸರಸ್ವತಿ
೨. ನಮ್ಮ ನಮ್ಮವರು
೩. ವಿದ್ಯಾರ್ಥಿ ವಿಚಾರ ವಿಲಾಸ
೪. ಚಿನ್ನದ ದೋಸೆ
೫. ಮಕ್ಕಳ ಮಾತು
೬. ಪಚ್ಚೆಯ ತೆನೆ
೭. ಗಂಧದ ಹುಡಿ
೮. ದುರಾಸೆಯ ದಂಡ
೯. ಜನಪ್ರಿಯ ವಿಜ್ಞಾನ
೧೦. ಪದ್ಯಾಂಜಲಿ
೧೧. ಆರೆಮೂಕ
೧೨. ನಮ್ಮ ಬೇಂದ್ರೆಯವರು
೧೩. ಹೂವಿನ ಪೂಜೆ
೧೪. ಚಿತ್ರದುರ್ಗದ ಬೆಟ್ಟ
೧೫. ಬರೆದರೆ ಹೀಗಿರಬೇಕು.

(ii) 'ಜ್ಞಾಪಕ ರೂಪಕ':

೧. ಶ್ರೀರಾಮಚಂದ್ರಪ್ರಭು – ಡಿ. ವಿ. ಜಿ.
೨. ಕ್ಷಮಾಮೂರ್ತಿಧರ್ಮರಾಜ – ಭಾರವಿ
೩. ಇಬ್ಬರು ದಳವಾಯಿಗಳು – ಸಂಸ
೪. ಬಾ ಇಂದ್ರಕೀಲಕ್ಕೆ – ಭಾರವಿ
೫. ವಿಭೂತಿ ಪೂಜೆಗೆ ನಕ್ಷೆ – ಕುವೆಂಪು
೬. ಬಿದನೂರಿನ ರಾಣಿ ವೀರಮ್ಮಾಜಿ – 'ಶ್ರೀನಿವಾಸ'
೭. ಹುಲಿಗಳ ಹೆಜ್ಜೆ – ಕುವೆಂಪು, ಭಾಸ, ಮುದ್ದಣ, 'ಶ್ರೀ', ಶರತ್‌ಚಂದ್ರ, ಎಂ. ಆರ್. ಶ್ರೀ.
೮. ವೇಣೀ ಸಂಹಾರ – ಭಟ್ಟನಾರಾಯಣ
೯. ವಿಗಡವಿಕ್ರಮಚರಿತ
೧೦. ಚಿತ್ರಾಂಗದಾ ಚಿತ್ರಕೂಟ

೧೧. ಸೀತಾಪರಿತ್ಯಾಗ ಮತ್ತು ಪಂಚಾರತ್ರ ಪ್ರಪಂಚ
೧೨. ಏಕಲವ್ಯ ಪಂಕ್ತಿ

(iii) ಉಳಿದ ಪ್ರಕಟನೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ – ಕೆ. ವಿ. ಅಯ್ಯರ್
೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ – ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿ
೩. ಮೊನ್ನ ವನ್ನ – ಎಸ್. ಜಿ. ಶಾಸ್ತ್ರಿ
೪, ನಾಗರ ಪದಗಳು – ಜಿ. ಪಿ. ರಾಜರತ್ನಂ
೫.. ಶಕ್ತಿ – ಆರ್. ಎಲ್. ನರಸಿಂಹಯ್ಯ
೬. ಬಾಹುಬಲಿ ವಿಜಯಂ – ಜಿ. ಪಿ. ರಾಜರತ್ನಂ
೭. ಸುಪ್ರಭಾತಮ್ – ವಿವಿಧ ಲೇಖಕರು
೮. ಕಾರ್ಕಳದ ಗೊಮ್ಮಟಸ್ವಾಮಿ – ಜಿ. ಪಿ. ರಾಜರತ್ನಂ
೯. ಸೋಕ್ರಟೀಸನ ಮರಣ – ಎಸ್. ಜಿ. ಶಾಸ್ತ್ರಿ
೧೦. ಲಿಯೊನಾರ್ಡ್ – ಎಸ್. ಜಿ. ಶಾಸ್ತ್ರಿ
೧೧. ಒಂದು ಶಾಂತಿಮಂತ್ರ – ಎಸ್. ಜಿ. ಶಾಸ್ತ್ರಿ
೧೨. ಧರ್ಮಪದ ಪ್ರವೇಶಿಕಾ – ವಿವಿಧ ಲೇಖಕರು
೧೩. ಸಂಸಕವಿ – ವಿವಿಧ ಲೇಖಕರು
೧೪. ನಾಲ್ಕಂಕದ ನಾನ್‌ಸೆನ್ಸ್ – ಬಿ. ವಿ. ಪಾಟಣಕರ್
೧೫. ಹೆಜ್ಜೆಪಾಡು – ವಿ. ಸೀತಾರಾಮಯ್ಯ
೧೬. ಗಿಳಿವಿಂಡು – ಮಂಜೇಶ್ವರ ಗೋವಿಂದ ಪೈ
೧೭. ದೀಪಗಳು – ವಿ. ಸೀತಾರಾಮಯ್ಯ
೧೮. ಅಭಿಜ್ಞಾನ ಶಾಕುಂತಲ ನಾಟಕ (ಪರಿಚಯ) – ವಿ. ಸೀತಾರಾಮಯ್ಯ
೧೯. ಶ್ರೀ ವಿಶ್ವೇಶ್ವರ ವಂದನ – ಸಂಕಲನ
೨೦. ನಮ್ಮ ತಾಯಿಗೆ ನೂರು ವರ್ಷ – ಜಿ. ಪಿ. ರಾಜರತ್ನಂ
೨೧. ಮಕ್ಕಳಿಗೆ ಮಣಿದೀಪ – ಜಿ. ಪಿ. ರಾಜರತ್ನಂ
೨೨. ಹತ್ತು ದಿಕ್ಕಿನ ಬೆಳಕು – ಜಿ. ಪಿ. ರಾಜರತ್ನಂ
೨೩. ಮಧ್ಯಮ ವ್ಯಾಯೋಗದ ಕಥೆ – ಜಿ. ಪಿ. ರಾಜರತ್ನಂ
೨೪. ದೂತವಾಕ್ಯ ದೂತ ಘಟೋತ್ಕಚಗಳ ಕಥೆ – ಜಿ. ಪಿ. ರಾಜರತ್ನಂ
೨೫. ಕರ್ಣಭಾರ ಊರುಭಂಗಗಳ ಕಥೆ – ಜಿ. ಪಿ. ರಾಜರತ್ನಂ
೨೬. ಸೊಹ್ರಾಬ್ – ರುಸ್ತುಂ – ವಿ. ಸೀತಾರಾಮಯ್ಯ
೨೭. ಪಂಚಕಲಶ ಗೋಪುರ – ಬಿ. ಜಿ. ಎಲ್. ಸ್ವಾಮಿ
೨೮. ಚಿನ್ನದ ಗೆರೆ – ಸಂಕಲನ

೭. ಸಾಹಿತ್ಯ ಪ್ರಚಾರ, ಪ್ರತಿಭಾ ಪುರಸ್ಕಾರ

[ರಾಜರತ್ನಂ ಸ್ಥಾಪಿಸಿರುವ ದತ್ತಿಗಳು]

ಅ) ಬೆಂಗಳೂರು ವಿಶ್ವವಿದ್ಯಾನಿಲಯ

೧. ಪ್ರೊ। ಎ. ಆರ್. ಕೃಷ್ಣ ಶಾಸ್ತ್ರಿ ಸ್ವರ್ಣಪದಕ (ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘದ ಪರವಾಗಿ)
೨. ಶ್ರೀ ಟಿ. ಪಿ. ಕೈಲಾಸಂ ಸ್ವರ್ಣಪದಕ
೩. ಶ್ರೀಮತಿ ಲಲಿತಮ್ಮ ರಾಜರತ್ನಂ ಸ್ವರ್ಣಪದಕ
೪. ಶ್ರೀಮತಿ ಸೀತಮ್ಮ ರಾಜರತ್ನಂ ಸ್ವರ್ಣಪದಕ.

ಆ) ಬೆಂಗಳೂರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

೧. ಪ್ರೊ। ಟಿ. ಎಸ್. ವೆಂಕಣ್ಣಯ್ಯ ಸ್ಮಾರಕ ದತ್ತಿ
೨. ಶ್ರೀ ಎಂ. ಗೋವಿಂದ ಪೈ ಸ್ಮಾರಕ ದತ್ತಿ
೩. ಡಾ। ಅ. ನ. ಕೃಷ್ಣರಾಯ ಸ್ಮಾರಕ ದತ್ತಿ.

ಇ) ವೈಟ್‌ಫೀಲ್ಡ್, ಬೃಂದಾವನದ ಸತ್ಯಸಾಯಿ ಕಾಲೇಜು

೧. ಶ್ರೀಮತಿ ಲಲಿತಮ್ಮ ರಾಜರತ್ನಂ ಪಾರಿತೋಷಕ
೨. ಶ್ರೀಮತಿ ಸೀತಮ್ಮ ರಾಜರತ್ನಂ ಪಾರಿತೋಷಕ

ಈ) ಬೆಂಗಳೂರು ಹೆಬ್ಬಾರ್ ಶ್ರೀ ವೈಷ್ಣವ ಸಭಾ

೧. ಶ್ರೀಮತಿ ಲಲಿತಮ್ಮ ರಾಜರತ್ನಂ ವಿದ್ಯಾರ್ಥಿವೇತನ
೨. ಶ್ರೀಮತಿ ಸೀತಮ್ಮ ರಾಜರತ್ನಂ ವಿದ್ಯಾರ್ಥಿವೇತನ

೮. ಜಿ. ಪಿ. ರಾಜರತ್ನಂ ಕುರಿತು ಪುಸ್ತಿಕೆ, ಪುಸ್ತಕ ಮತ್ತು ಗ್ರಂಥಗಳು

೧. ರಾಜರತ್ನಂ (ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು)
೨. ರತ್ನನ ಪದಗಳ ಕುರಿತು (ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು)
೩. ನಮ್ಮ ರಾಜರತ್ನಂ (ಜಿ. ಪಿ. ರಾಜರತ್ನಂ ಸಮ್ಮಾನ ಸಮಿತಿ, ಬೆಂಗಳೂರು)
೪. ಸಾಹಿತ್ಯ ಪರಿಚಾರಕ – ಎಸ್. ಚನ್ನಪ್ಪ
೫. ಜಿ. ಪಿ. ರಾಜರತ್ನಂ – ರಾ. ಶಿ.
೬. ರತ್ನಸೂಕ್ತಿ – ಸಂ : ಕೆ. ಎನ್. ಶ್ರೀಹರಿ
೭. ರಾಜರತ್ನಂ ಕೃತಿಗಳು ಕರ್ನಾಟಕ ಸಂಘ, ಪುತ್ತೂರು
೮. ಜಿ. ಪಿ. ರಾಜರತ್ನಂ – ನೀಲತ್ತಹಳ್ಳಿ ಕಸ್ತೂರಿ (ಭಾರತ ಭಾರತಿ ಪುಸ್ತಕ ಸಂಪದ, ಬೆಂಗಳೂರು
೯. ಜಿ. ಪಿ. ರಾಜರತ್ನಂ – ಡಾ| ಎನ್. ಕೆ. ರಾಮಶೇಷನ್ (ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ)
೧೦. ರತ್ನದೀಪ (ಶ್ರೀ ಜಿ. ಪಿ. ರಾಜರತ್ನಂ ಸಂಸ್ಮರಣ ಸಮಿತಿ, ದಕ್ಷಿಣ ಕನ್ನಡ)
೧೧. ರಾಜಮಾರ್ಗ (ಡಾ| ಜಿ. ಪಿ. ರಾಜರತ್ನಂ ಸ್ಮಾರಕ ಸಮಿತಿ, ಬೆಂಗಳೂರು)
೧೨. ರಾಜರತ್ನಂ ರತ್ನನ ಪದಗಳು (ಕರ್ನಾಟಕ ಸಂಘ, ಎನ್. ಎಂ. ಕೆ. ಆರ್. ವಿ. ಕಾಲೇಜ್, ಬೆಂಗಳೂರು)

•

ವಾಚಕರಲ್ಲಿ ವಿನಂತಿ

ಪುಸ್ತಕದ ಎರಡು ಮೂರು ಶಕೆ ಕಾಲಸೂಚಿಯಲ್ಲಿ ತಪ್ಪುಗಳಾಗಿದ್ದು ಅವುಗಳನ್ನು ಹೀಗೆ ತಿದ್ದಿ ಓದಿಕೊಳ್ಳಬೇಕಾಗಿ ವಿನಂತಿ.

ಪುಟ	ಪಂಕ್ತಿ	ತಪ್ಪು	ಸರಿ
ಉದ್ಘಾತ - ೧	೨೫	ಎಂಬತ್ತೊಂದನೆಯ	ಎಪ್ಪತ್ತೊಂದನೆಯ
ಉಪಸಂಹಾರ - ೬೮	೧೫	೧೯೮೯	೧೯೭೯
ಜೀವನ ವಿವರ - ೧೦೫	ಅಂತ್ಯ	ಬುದ್ಧಪೂರ್ಣಿಮೆ	ಪೂರ್ಣಿಮೆ





ಕನ್ನಡದ ಚಿರಸ್ಮರಣೀಯ ಲೇಖಕರಲ್ಲಿ ಒಬ್ಬರಾದ ಪ್ರಾಧ್ಯಾಪಕ **ಜಿ.ಪಿ. ರಾಜರತ್ನಂ (1908-1979)** 'ರತ್ನ' ನೆಂದೇ ಪ್ರಸಿದ್ಧಿ ಪಡೆದವರು. ಅವರ *ರತ್ನನ ಪದಗಳು* ಆಧುನಿಕ ಕನ್ನಡದ ಒಂದು ಅನನ್ಯ ಕವಿತಾ ಸಂಕಲನ. ಕವಿತ್ವ ಪಾಂಡಿತ್ಯ, ವಾಗ್ವಿಲಾಸಗಳು ಮುಪ್ಪುರಿಗೊಂಡು ರೂಪುಗೊಂಡ ವಿಶಿಷ್ಟ ವ್ಯಕ್ತಿತ್ವವೇ ಜಿ.ಪಿ. ರಾಜರತ್ನಂ. ಬೆಂಗಳೂರಿನ ಸೆಂಟ್ರಲ್ ಕಾಲೇಜು ಅವರ ಆಡುಂಬೊಲವಾಗಿತ್ತು. ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನಸುಧೆಯನ್ನು ಉಣಬಡಿಸಿ, ಹಲವಾರು ಶ್ರೇಷ್ಠ ವ್ಯಕ್ತಿತ್ವಗಳ ನಿರ್ಮಾಣಕ್ಕೆ ಕಾರಣ ಪುರುಷರಾದ ಅವರು ಮಕ್ಕಳಿಗೂ ಪ್ರಿಯವಾದ ಸಾಹಿತ್ಯವನ್ನು ರಚಿಸಿ ಕೀರ್ತಿಭಾಜನರಾಗಿದ್ದಾರೆ.

ಇಂತಹ ಪ್ರಸಿದ್ಧ ಕನ್ನಡದ ಕಟ್ಟಾಳು, ಧೀಮಂತ ವ್ಯಕ್ತಿಯನ್ನು ಸುಲಲಿತವಾಗಿ ಪರಿಚಯಿಸಿಕೊಟ್ಟವರು ಪ್ರಾಧ್ಯಾಪಕ ಎಮ್. ರಾಮಚಂದ್ರ. ಲೇಖಕರಾಗಿ ಪ್ರಸಿದ್ಧರಾಗಿರುವ ಅವರು ಆಕಾದೆಮಿಯ ಭಾರತೀಯ ಸಾಹಿತ್ಯ ನಿರ್ಮಾಪಕರು ಮಾಲಿಕೆಗಾಗಿ ಬರೆದುಕೊಟ್ಟ *ಸೇಡಿಯಾಪು ಕೃಷ್ಣಭಟ್ಟ* ಕೃತಿ ಸಾಹಿತ್ಯಾಸಕ್ತರ ಮೆಚ್ಚುಗೆಗೆ ಪಾತ್ರವಾಗಿದೆ.

G.P. Rajaratnam (Kannada) Rs. 25

ISBN : 81-260-2228-0